ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೆಲುವಿನ ಸಂಭ್ರಮ

ಪ್ಯಾರಿಸ್‌ನಲ್ಲಿ ನಡೆದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಇಟಲಿಯ ಜಾಸ್ಮಿನ್ ಪಾವ್ಲಿನಿ ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದ ಪೋಲೆಂಡ್‌ನ ಇಗಾ ಶ್ವಾಂಟೆಕ್ ಸಂಭ್ರಮ

ವಿಷನ್ ನೀಟ್ ಅಕಾಡೆಮಿ

Vision NEET Academy
Bengaluru

ಕರ್ನಾಟಕದಲ್ಲಿ ವೈದ್ಯಕೀಯ ಲಾಂಗ್ ಟರ್ಮ್ ಕೋಚಿಂಗ್ ಪರಿಚಯಿಸಿದ ಮೊಟ್ಟ ಮೊದಲ ಕೋಚಿಂಗ್ ಸಂಸ್ಥೆ

Congratulations

ನಮ್ಮ ನೀಟ್ ಟಾಪರ್‌ಗಳಿಗೆ ತುಂಬು ಹೃದಯದ ಶುಭಾಷಯಗಳು

2024 ರ ನೀಟ್ ಫಲಿತಾಂಶದಲ್ಲಿ ವಿಷನ್ ನೀಟ್ ಅಕಾಡೆಮಿಯ ಅಭೂತಪೂರ್ವ ಸಾಧನೆ.
ಇದು ಯಾವುದೋ ಕೋಟಾ ಅಥವಾ ಹೈದ್ರಾಬಾದ್ ತರಬೇತಿ ಕೇಂದ್ರಗಳದ್ದಲ್ಲ.
ನಮ್ಮ ಹೆಮ್ಮೆಯ ಕರ್ನಾಟಕದ ವಿದ್ಯಾರ್ಥಿಗಳು ಸಾಧನೆ ಮಾಡಿದ ಗರಿಮೆ ನಮ್ಮ ಸಂಸ್ಥೆಯದ್ದು.



ಸ್ಥಳಾವಕಾಶದ ಮಿತಿಗಳ ಕಾರಣದಿಂದಾಗಿ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯನ್ನು ಸೇರಿಸಲು ನಮಗೆ ಸಾಧ್ಯವಾಗಿಲ್ಲ

650 Marks & Above	600 Marks & Above	575 Marks & Above	550 Marks & Above	500 Marks & Above
33 Students	126 Students	175 Students	209 Students	299 Students

ಇದುವರೆಗೂ **4350** ಕ್ಕೂ ಅಧಿಕ ಸರ್ಕಾರಿ (ಉಚಿತ) ಮೆಡಿಕಲ್ ಸೀಟ್ ಕೊಟ್ಟ ಹೆಮ್ಮೆ ನಮ್ಮ ಸಂಸ್ಥೆಯದ್ದಾಗಿದೆ.

ಈ ವರ್ಷವೂ **300** ಕ್ಕೂ ಅಧಿಕ ವಿದ್ಯಾರ್ಥಿಗಳು ಸರ್ಕಾರಿ (ಉಚಿತ) ಮೆಡಿಕಲ್ ಸೀಟ್ ಪಡೆಯುವ ನಿರೀಕ್ಷೆಯಿದೆ

NEET SCORE

Students Name	Before joining vision in 2023	After joining vision in 2024
CHETAN S Y	275	690
SANTOSH N K	312	675
SHRIDHAR M HANNIKERI	314	655
VAISHAKH B HATTARAKI	284	631
RANJITH P	244	624
AKILESH HIREMATH	125	622
VIKAS KADAM	99	618
NAVEEN KUMAR	240	618
NAVEEN KUMAR	240	618
KULDEEP SINGH	281	617
MANOJ S M	229	595
DEEPTHI S	247	591
VIKAS P	88	566
CHANDAN H R	162	566
RAKESH	175	559
AKSHAY VITHAL N	116	556
RAKSHITHA M	150	547
S NAVYA	87	544
SOUMYA GANIGER	157	528
NAVEEN PATIL	125	526
SHIVANAND S SANGOLLI	137	521
DARSHAN J SAMBARGI	136	516
PRAMODA	168	504
B AKSHATA	128	501
A SAMAN	64	496
PRATHIBHA V	144	488
J HARSHA VARDHAN	154	487
SUFIYA SIDDIQ	131	475
PAVAN	93	469
VILASKUMAR SOMPUR	84	466
SOUNDARYA	50	459
MADHU PRASAD R	74	454
REVATHI K	0	447
B UMESH	97	445
BHEEMANNA	69	430
HARISHGOUDA M S	83	427
JEEVITHA M	79	424
VIKAS IRANNA CHINCHALI	87	421

ನಿಮ್ಮ ನೀಟ್-2024 ಅಂಕಗಳ ಮೇಲೆ ಟ್ಯೂಷನ್ ಫೀ ನಲ್ಲಿ ಶೇ.100% ವರೆಗೂ ಸ್ಕಾಲರ್‌ಶಿಪ್ ಪಡೆಯಬಹುದು

20% Scholarship* ▸ 300-349 Marks | 30% Scholarship* ▸ 350-399 Marks | 40% Scholarship* ▸ 400-449 Marks | 60% Scholarship* ▸ 450-499 Marks | 75% Scholarship* ▸ 500-549 Marks | 100% Scholarship* ▸ 550+ Marks

ಪ್ರತಿ ವರ್ಗದಲ್ಲಿ ಮೊದಲು ಬಂದ 50 ವಿದ್ಯಾರ್ಥಿಗಳಿಗೆ ಮಾತ್ರ ಈ ಸ್ಕಾಲರ್‌ಶಿಪ್ ಸಿಗುತ್ತದೆ

* ಷರತ್ತುಗಳು ಅನ್ವಯಿಸುತ್ತವೆ

OPPORTUNITY NEVER BEFORE ▸ 550+ Marks 100% Scholarship including Hostel

NEET

REGISTRATIONS OPEN

NEET LONG TERM COACHING

ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕ್ಯಾಂಪಸ್ ಮತ್ತು ಹಾಸ್ಟಲ್ ವ್ಯವಸ್ಥೆಯಿದೆ

2nd Batch Starts from **16th June, 2024**

For Registration Call **080 47185111**

ಗರ್ಲ್ಸ್ ಕ್ಯಾಂಪಸ್
98862 18399
73497 44105
73497 44119

ಬಾಯ್ಸ್ ಕ್ಯಾಂಪಸ್
74112 68907
73497 44107
74112 68903

Visioner's Academy LLP- ವಿಳಾಸ: ನಂ.4, 9ನೇ ಬಿ ಮೇನ್, ಮುನಿರೆಡ್ಡಿ ಲೇಔಟ್, ಬಾಣಸವಾಡಿ, ಬೆಂಗಳೂರು - 560043 www.neet.visionedu.in

ads.in

ಬೆಂಗಳೂರು, ಬಳ್ಳಾರಿ ಪ್ರಮುಖರಿಗೆ ಹಣ

ವಾಲ್ಮೀಕಿ ನಿಗಮದ ಪ್ರಕರಣ: ಮೊಬೈಲ್ ಸಾಕ್ಷ್ಯ ನಾಶಪಡಿಸಿದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ನಿಗಮದ ಹಣ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಬೆಂಗಳೂರು ಹಾಗೂ ಬಳ್ಳಾರಿಯ 'ಕೆಲವು ಪ್ರಮುಖರಿಗೆ' ನಗದು ರೂಪದಲ್ಲಿ ದೊಡ್ಡ ಮೊತ್ತ ಸಂದಾಯ ಆಗಿರುವುದನ್ನು ಪತ್ತೆಹಚ್ಚಿದೆ.

ಹೈದರಾಬಾದ್‌ನ 'ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ'ಯ (ಎಫ್‌ಎಫ್‌ಸಿಸಿಎಸ್‌ಎಲ್) 18 ಖಾತೆಗಳಿಗೆ ವಾಲ್ಮೀಕಿ ನಿಗಮದ ಖಾತೆಯಿಂದ ₹94.73 ಕೋಟಿ ಹಣ ವರ್ಗಾವಣೆ ಆಗಿತ್ತು. ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ರಾಜ್ಯ ಸರ್ಕಾರವು ಎಸ್‌ಐಟಿಗೆ ವಹಿಸಿತ್ತು.

'18 ಖಾತೆಗಳ ಪೈಕಿ ಒಂದು ಖಾತೆಯಿಂದ ನಿಗಮದ ಖಾತೆಗೆ ₹5 ಕೋಟಿ ಹಣ ವಾಪಸ್ ಬಂದಿದೆ. ಆದರೆ, ಉಳಿದ 17 ಖಾತೆಗಳಿದ್ದ ₹89.73 ಕೋಟಿ ಡ್ರಾ ಆಗಿರುವುದು ಪತ್ತೆಯಾಗಿದೆ. ಈ ಹಣವು ಬೆಂಗಳೂರು ಹಾಗೂ ಬಳ್ಳಾರಿಯ ಪ್ರಮುಖರ ಕೈಸೇರಿದೆ. ಯಾರಿಗೆ ಹಣ ಸಂದಾಯವಾಗಿದೆ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಹಣ ವರ್ಗಾವಣೆಯಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತ ನೆಕ್ಕುಂಟಿ ನಾಗರಾಜ್ ಹಾಗೂ ಆತನ ಸಂಬಂಧಿ ನಾಗೇಶ್ವರ ರಾವ್ ಅವರು ಪ್ರಮುಖ ಪಾತ್ರ ವಹಿಸಿದ್ದರು. ಅವರ ವಿಚಾರಣೆ ನಡೆಸಲಾಗುತ್ತಿದೆ. ಎಫ್‌ಎಫ್‌ಸಿಸಿಎಸ್‌ಎಲ್ ಅಧ್ಯಕ್ಷ ಸತ್ಯನಾರಾಯಣ ಅವರು ಕಸ್ಟಡಿಯಲಿದ್ದು, 17 ನಕಲಿ ಖಾತೆಗಳನ್ನು ತೆರೆದವರಿಗಾಗಿ ಪತ್ತೆ ಕಾರ್ಯ ನಡೆಯುತ್ತಿದೆ' ಎಂದು ಹೇಳಿವೆ.

ಮೊಬೈಲ್ ನಾಶಪಡಿಸಿದ ಎಂಡಿ?: 'ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜೆ.ಪದ್ಮನಾಭ್ ತನ್ನ ಮೊಬೈಲ್ ನಾಶಪಡಿಸಿದ್ದಾನೆ. ಪದ್ಮನಾಭ್ ಸ್ನೇಹಿತ ಎಸ್.ಎಂ.ದಿವಾಕರ್ ಎಂಬವರನ್ನು ವಿಚಾರಣೆ ನಡೆಸಲಾಗಿದೆ. ಅಕ್ರಮಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳು ಲಭಿಸಿವೆ' ಎಂದು ಗೊತ್ತಾಗಿದೆ.

'ನಿಗಮದ ಅಧಿಕಾರಿಗಳ ವಿಚಾರಣೆ ಮುಂದುವರಿದಿದ್ದು ಕೆಲವು ಗೊಂದಲದ ಹೇಳಿಕೆ ನೀಡುತ್ತಿದ್ದಾರೆ. ನಾಗರಾಜ್, ನಾಗೇಶ್ವರ ರಾವ್ ಹಾಗೂ ನಿಗಮದ ಬಂಧಿತ ಅಧಿಕಾರಿಗಳನ್ನು ಮುಖಾಮುಖಿ ವಿಚಾರಣೆ ನಡೆಸಲಾಗಿದೆ. ನಾಗರಾಜ್ ಸೂಚನೆ ಮೇರೆಗೆ ಹಣ ವರ್ಗಾವಣೆ ಮಾಡಿಸಲಾಗಿದೆ. ಹೆಚ್ಚಿನ ಮಾಹಿತಿ ಇಲ್ಲ. ನಿಗಮದ ನಕಲಿ ಸೀಲುಗಳು ಹಾಗೂ ದಾಖಲೆಗಳನ್ನು ನಾಗರಾಜ್, ನಾಗೇಶ್ವರ ರಾವ್ ಅವರೇ ಸೃಷ್ಟಿಸಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ' ಎಂದು ಗೊತ್ತಾಗಿದೆ.

'ಅಕ್ರಮ ನಡೆದಿದ್ದರೆ ತನಿಖೆ ನಡೆಸಲಿ'

ಬೆಂಗಳೂರು: 'ನಾನು ಸಮಾಜ ಕಲ್ಯಾಣ ಸಚಿವನಾಗಿದ್ದ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆಸಿದ್ದರೆ ರಾಜ್ಯ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಲಿ. ರಾಜಕೀಯಕ್ಕಾಗಿ ಆಧಾರರಹಿತ ಆರೋಪ ಮಾಡುವುದು ಬೇಡ' ಎಂದು ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

'ಕೋಟ ಶ್ರೀನಿವಾಸ ಪೂಜಾರಿ ಅವರು ಸಮಾಜ ಕಲ್ಯಾಣ ಸಚಿವರಾಗಿದ್ದ ಅವಧಿಯಲ್ಲಿ ಬೋವಿ ಅಭಿವೃದ್ಧಿ ನಿಗಮದಲ್ಲಿ ₹ 100 ಕೋಟಿ ಅಕ್ರಮ ನಡೆದಿದೆ' ಎಂಬ ಮಾಜಿ ಸಚಿವ ಗೂಳಿಹಟ್ಟಿ ಶೇಖರ್ ಆರೋಪದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ನಾನು ಯಾವುದೇ ಭ್ರಷ್ಟಾಚಾರ ನಡೆಸಿಲ್ಲ. ಆರೋಪ ಮಾಡುವವರ ಬಳಿ ಆಧಾರಗಳು ಇದ್ದರೆ ಸಮಗ್ರವಾಗಿ ತನಿಖೆ ನಡೆಸಲು ಅನುಕೂಲವಾಗುವಂತೆ ದಾಖಲೆಗಳನ್ನು ಸರ್ಕಾರಕ್ಕೆ ಕೊಡಲಿ' ಎಂದರು.

'ಸಮಾಜ ಕಲ್ಯಾಣ ಸಚಿವನಾದ ತಕ್ಷಣವೇ ಇಲಾಖೆ ವ್ಯಾಪ್ತಿಯ ನಿಗಮದಲ್ಲಿ ಅವ್ಯವಹಾರ ನಡೆದಿರುವ ಮಾಹಿತಿ ದೊರಕಿತು. ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿದ್ದೆ. ಬಿಜೆಪಿ ಅಧಿಕಾರದಿಂದ ಇಳಿದು ಒಂದು ವರ್ಷವಾಯಿತು. ಈವರೆಗೂ ತನಿಖೆ ಏನಾಗಿದೆ ಎಂಬುದು ಗೊತ್ತಿಲ್ಲ.



ಕೋಟ ಶ್ರೀನಿವಾಸ ಪೂಜಾರಿ

ಅಕ್ರಮದಲ್ಲಿ ನನ್ನ ಪಾತ್ರ ಇರುವುದು ಕಂಡುಬಂದರೆ ನನ್ನನ್ನೂ ತನಿಖೆಗೆ ಒಳಪಡಿಸಲಿ' ಎಂದು ಹೇಳಿದರು.

'ಗೂಳಿಹಟ್ಟಿ ಶೇಖರ್ ಯಾವ ಕಾರಣಕ್ಕೆ ಆರೋಪ ಮಾಡಿದ್ದಾರೊ ಗೊತ್ತಿಲ್ಲ. ಈಗ ಅವರು ನಿರಾಧಾರ ಆರೋಪ ಮಾಡಿರುವುದಕ್ಕೆ ಕ್ಷಮೆಯನ್ನೂ ಕೇಳಿದ್ದಾರೆ. ಆದರೆ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣದ ಅಕ್ರಮ ವರ್ಗಾವಣೆ ಹಗರಣದಲ್ಲಿ ಬಿ. ನಾಗೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಂದರ್ಭದಲ್ಲಿ ನನ್ನ ಹೆಸರನ್ನು ಎಳೆದು ತಂದು ದಿಕ್ಕು ತಪ್ಪಿಸಲು ಕಾಂಗ್ರೆಸ್ ನಾಯಕರು ಯತ್ನಿಸಿದ್ದಾರೆ' ಎಂದರು.

'ಹಿಂದೆಯೂ ಇದೇ ರೀತಿ ನನ್ನ ತೇಜೋವಧೆ ಯತ್ನ ನಡೆದಿತ್ತು. ₹63 ಕೋಟಿ ಮೌಲ್ಯದ ಆಸ್ತಿ ಸಂಪಾದಿಸಿದ್ದೇನೆ ಎಂಬ ಸುಳ್ಳು ಆರೋಪ ಮಾಡಿದ್ದರು. ನಾನೇ ಲೋಕಾಯುಕ್ತರಿಗೆ ಪತ್ರ ಬರೆದು ತನಿಖೆಗೆ ಆಗ್ರಹಿಸಿದ್ದೆ. ತನಿಖೆ ನಡೆಸಿದ ಲೋಕಾಯುಕ್ತರು, ನನ್ನ ಬಳಿ ಇರುವುದು ₹3.5 ಕೋಟಿ ಮೌಲ್ಯದ ಆಸ್ತಿ ಮಾತ್ರ ಎಂಬ ಪ್ರಮಾಣಪತ್ರ ನೀಡಿದ್ದರು. ಅದು ಈಗಲೂ ನನ್ನ ಬಳಿ ಇದೆ ಎಂದರು.

ದದ್ದಲ್, ಶರಣಪ್ರಕಾಶ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಹಗರಣದಲ್ಲಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರ ರಾಜೀನಾಮೆ ಪಡೆಯಬೇಕು' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆಗ್ರಹಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳ ನಾಶಕ್ಕೆ ನಿಗಮದ ಅಧ್ಯಕ್ಷರು ವೈದ್ಯಕೀಯ ಶಿಕ್ಷಣ ಸಚಿವರ ಕಚೇರಿಯಲ್ಲೇ ಸಭೆ ನಡೆಸಿದ್ದರು ಎಂದು ಪ್ರಕರಣದ ಆರೋಪಿ ಪರಶುರಾಮ್ ದುರ್ಗಣ್ಣನವರ್ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಸಚಿವರಾಗಿದ್ದ ಬಿ. ನಾಗೇಂದ್ರ ಇದೇ ಹಗರಣದಲ್ಲಿ ಶಾಮೀಲಾಗಿರುವ ಆರೋಪದಡಿ ರಾಜೀನಾಮೆ ನೀಡಿದ್ದಾರೆ. ಬಸನಗೌಡ ದದ್ದಲ್ ಮತ್ತು ಶರಣಪ್ರಕಾಶ ಪಾಟೀಲರಿಂದಲೂ ರಾಜೀನಾಮೆ ಪಡೆಯಬೇಕು' ಎಂದು ಒತ್ತಾಯಿಸಿದರು.



ಎನ್. ರವಿಕುಮಾರ್

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದದ್ದಲ್ ಮತ್ತು ಶರಣ ಪ್ರಕಾಶ ಅವರನ್ನು ರಕ್ಷಿಸುತ್ತಿದ್ದಾರೆ. ಮುಖ್ಯಮಂತ್ರಿಯವರು ಈಗ ಭ್ರಷ್ಟರ ರಕ್ಷಣಾ ಖಾತೆಯ ಸಚಿವರಂತೆ ಕೆಲಸ ಮಾಡುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇಕಡ 40ರಷ್ಟು ಲಂಚದ ಆರೋಪ ಮಾಡುತ್ತಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಈಗ ಏನು ಹೇಳುತ್ತಾರೆ' ಎಂದು ಕೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಲೂಟಿ ಒಂದು ಸಂಘಟಿತ ಅಪರಾಧ ಕೃತ್ಯ. ಕಾಂಗ್ರೆಸ್ ನಾಯಕರು ಸಂಚು ನಡೆಸಿ ತೆಲಂಗಾಣಕ್ಕೆ ಹಣ ರವಾನಿಸಿದ್ದಾರೆ. ಪ್ರಕರಣದ ಸಮಗ್ರ ತನಿಖೆ ನಡೆದರೆ ಎಲ್ಲವೂ ಬಯಲಾಗುತ್ತದೆ ಎಂದರು.

'ಯಾವುದೇ ತನಿಖೆಗೂ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಾಕ್ಷ್ಯ ನಾಶಗೊಳಿಸಲು ನನ್ನ ಕಚೇರಿಯಲ್ಲಿ ಯಾವುದಾದರೂ ವ್ಯಕ್ತಿಗಳ ಜೊತೆ ನಾನು ಸಭೆ ನಡೆಸಿದ್ದರೆ ಮುಕ್ತ ಮತ್ತು ನ್ಯಾಯ ಸಮ್ಮತ ತನಿಖೆಗೆ ಸಿದ್ಧ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಸವಾಲು ಹಾಕಿದರು.



ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಮೇ 24ರಂದು ವಿಕಾಸಸೌಧದ ನನ್ನ ಕಚೇರಿಯಲ್ಲಿ ನಿಗಮದ ಅಧ್ಯಕ್ಷ ಬಸವರಾಜ ದದ್ದಲ್ ಸೇರಿ ಕೆಲವರ ಜೊತೆ ನಾನು ಸಭೆ ನಡೆಸಿ ಸಾಕ್ಷ್ಯ ನಾಶ ಮಾಡಿದ್ದೇನೆಂಬ ಆರೋಪ ಮಾಡಲಾಗಿದೆ. ಆದರೆ, ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ನಾನು ಆ ದಿನ ಕಚೇರಿಗೆ ಭೇಟಿ ನೀಡಿರಲಿಲ್ಲ' ಎಂದರು.

'ಸುಳ್ಳು ಆರೋಪಗಳ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಅಷ್ಟಕ್ಕೂ ವಿಕಾಸಸೌಧದ ಕೊಠಡಿಯು ನನಗೆ ಸರ್ಕಾರ ನೀಡಿರುವ ಕಚೇರಿ. ಅದು ನನ್ನ ಸ್ವಂತ ಮನೆಯೇನೂ ಅಲ್ಲ. ಸಚಿವನಾಗಿರುವುದರಿಂದ ನನ್ನನ್ನು ನೋಡಲು ರಾಜ್ಯದ ವಿವಿಧ ಕಡೆಗಳಿಂದ ನೂರಾರು ಜನ ಬಂದು ಹೋಗುತ್ತಾರೆ. ಆ ಎಲ್ಲರ ವಿವರಗಳನ್ನು ಕಲೆ ಹಾಕಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಎಸ್‌ಐಟಿ ವಶದಲ್ಲಿರುವ ವ್ಯಕ್ತಿಗಳ ಮುಖವನ್ನು ನಾನು ನೋಡಿಲ್ಲ. ನನಗೂ, ಅವರಿಗೂ ಯಾವುದೇ ಸಂಬಂಧವೂ ಇಲ್ಲ. ಎಸ್‌ಐಟಿ ಅಧಿಕಾರಿಗಳ ಮುಂದೆ ಪ್ರಕರಣದ ಆರೋಪಿ ಏನು ಹೇಳಿದ್ದಾನೆಂಬುದು ನನಗೂ ಗೊತ್ತಿಲ್ಲ. ವೈದ್ಯಕೀಯ ಶಿಕ್ಷಣ ಸಚಿವರು ಎಂದು ಎಲ್ಲಾದರೂ ಹೇಳಿರುವ ಬಗ್ಗೆ ವರದಿಯಾಗಿದೆಯೇ? ಊಹಾಪೋಹಗಳಿಗೆ ನಾನೇಕೆ ಉತ್ತರಿಸಲಿ' ಎಂದು ಹೇಳಿದರು.

'ನನ್ನ ಕಚೇರಿಯಲ್ಲಿ ಸಭೆ ನಡೆಸಿದ್ದೇನೆಯೇ ಎಂದು ತಿಳಿಯಲು ಸಿ.ಸಿ.ಟಿ.ವಿ ಕ್ಯಾಮೆರಾದ ತುಣುಕುಗಳನ್ನು ತೆಗೆದು ಪರಿಶೀಲಿಸಲಿ. ಈ ಕುರಿತು ಸರ್ಕಾರ ತನಿಖೆ ನಡೆಸಿದರೂ ನನ್ನ ಅಭ್ಯಂತರವಿಲ್ಲ. ತನಿಖೆಯಲ್ಲಿ ಸತ್ಯಾಸತ್ಯತೆ ಹೊರಬರಲಿದೆ' ಎಂದರು.

ಬಿಜೆಪಿಯವರು ರಾಜೀನಾಮೆ ಕೇಳುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಯಾವ ಆಧಾರದ ಮೇಲೆ ಅವರು ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ ಎಂಬುದೇ ಗೊತ್ತಿಲ್ಲ. ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ ಎಂದ ಮೇಲೆ ರಾಜೀನಾಮೆ ನೀಡುವ ಔಚಿತ್ಯವಾದರೂ ಏನು' ಎಂದೂ ಪ್ರಶ್ನಿಸಿದರು.

ಮುರಿದುಬಿದ್ದ 'ವಿವಾಹ ವಯೋಮಿತಿ ಮಸೂದೆ'

ನವದೆಹಲಿ (ಪಿಟಿಐ): ಪುರುಷ ಮತ್ತು ಮಹಿಳೆಯರ ವಿವಾಹದ ವಯಸ್ಸಿನಲ್ಲಿ ಏಕರೂಪತೆ ತರುವ ಉದ್ದೇಶದಿಂದ ಮಂಡಿಸಲಾಗಿದ್ದ ಮಸೂದೆಯು 17ನೇ ಲೋಕಸಭೆ ವಿಸರ್ಜನೆಯೊಂದಿಗೆ, ಅಂಗೀಕಾರ ಪಡೆಯದೇ ಬಿದ್ದುಹೋಗಿದೆ.

'ಬಾಲ್ಯ ವಿವಾಹ ನಿಷೇಧ (ತಿದ್ದುಪಡಿ) ಮಸೂದೆ 2021' ಅನ್ನು 2021ರ ಡಿಸೆಂಬರ್‌ನಲ್ಲಿ ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಬಳಿಕ ಪರಿಶೀಲನೆಗಾಗಿ ಮಸೂದೆಯನ್ನು ಮಹಿಳೆ, ಮಕ್ಕಳು, ಯುವಜನ ಮತ್ತು ಕ್ರೀಡಾ ವ್ಯವಹಾರ ಕುರಿತ ಸ್ಥಾಯಿ ಸಮಿತಿಗೆ ಕಳುಹಿಸಲಾಗಿತ್ತು. ಈ ಸ್ಥಾಯಿ ಸಮಿತಿಯ ಕಾಲಾವಧಿಯನ್ನು ಕೆಲವು ಬಾರಿ ವಿಸ್ತರಿಸಲಾಗಿತ್ತು.

'ಇದೀಗ 17ನೇ ಲೋಕಸಭೆ ವಿಸರ್ಜನೆ ಆಗಿದೆ. ಈ ಅವಧಿಯಲ್ಲಿ ಅಂಗೀಕಾರ ಪಡೆಯಲಾಗದ ಕಾರಣಕ್ಕೆ ಈ ಮಸೂದೆಯೂ ಬಿದ್ದುಹೋದಂತಾಗಿದೆ' ಎಂದು ಸಂವಿಧಾನ ತಜ್ಞರೂ ಆದ ಲೋಕಸಭಾ ಸಚಿವಾಲಯದ ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ.ಆಚಾರ್ಯ ತಿಳಿಸಿದ್ದಾರೆ.

ಹೆಣ್ಣುಮಕ್ಕಳ ವಿವಾಹದ ಕನಿಷ್ಠ ವಯಸ್ಸನ್ನು 21 ವರ್ಷಕ್ಕೆ ಏರಿಸಲು ಬಾಲ್ಯ ವಿವಾಹ ನಿಷೇಧ ಕಾಯ್ದೆ–2006ರಕ್ಕೆ ತಿದ್ದುಪಡಿ ಮಾಡುವ ಉದ್ದೇಶವನ್ನು ಈ ಮಸೂದೆ ಹೊಂದಿತ್ತು.

'ವಿವೇಚನಾ ಕೋಟಾ ದುರ್ಬಳಕೆ'

ಪ್ರಜಾವಾಣಿ ವಾರ್ತೆ

ಹೊಸದುರ್ಗ (ಚಿತ್ರದುರ್ಗ): 'ವಿವೇಚನಾ ಕೋಟಾದ ಹೆಸರಿನಲ್ಲಿ ಬೋವಿ ಅಭಿವೃದ್ಧಿ ನಿಗಮದ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಇದು ಯಾವ ಸಚಿವರ ಅವಧಿಯಲ್ಲಿ ಆಗಿದೆ ಎಂಬುದರ ಬಗ್ಗೆ ತನಿಖೆಯಾಗಬೇಕು' ಎಂದು ಮಾಜಿ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಮತ್ತೆ ಆರೋಪಿಸಿದ್ದಾರೆ.

'ಬೋವಿ ನಿಗಮಕ್ಕೆ 2018-19ರಲ್ಲಿ ₹127 ಕೋಟಿ, 2019-20ರಲ್ಲಿ ₹119 ಕೋಟಿ ಅನುದಾನ ಬಂದಿತ್ತು. 2020-21ನೇ ಸಾಲಿನಲ್ಲಿ ₹106 ಕೋಟಿ, 2021-22ರಲ್ಲಿ ₹40 ಕೋಟಿ, 2022-23ರಲ್ಲಿ ₹107 ಕೋಟಿ ಸೇರಿ ಈವರೆಗೆ ಒಟ್ಟು ₹499 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ ವಿವೇಚನಾ ಕೋಟಾದ ಹೆಸರಿನಲ್ಲಿ ನಿಯಮ ಮೀರಿ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ' ಎಂದು ಆಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗೂಳಿಹಟ್ಟಿ ಶೇಖರ್

'ನಿಗಮದ ಅನುದಾನದಲ್ಲಿ ವಾಹನ, ವ್ಯಾಪಾರ, ಉದ್ಯೋಗಕ್ಕಾಗಿ ಸಾಲ, ಗಂಗಾಕಲ್ಯಾಣ, ಭೂ ಒಡೆತನ ಯೋಜನೆ ಸೇರಿದಂತೆ ಹಲವು ಯೋಜನೆಗಳಿಗಾಗಿ ಹಣ ಮೀಸಲಿಡಲಾಗುತ್ತದೆ. ಆದರೆ, ಅನಿಕಾ ಎಂಟರ್ ಪ್ರೈಸಸ್‌ಗೆ ₹1.94 ಕೋಟಿ ಹಾಗೂ ಸಾಯಿ ಥೆರಪಿಸ್ಟ್ ಸಂಸ್ಥೆಗೆ ₹1.78 ಕೋಟಿ ಹಣ ನೀಡಲಾಗಿದೆ. ಈ ಸಂಸ್ಥೆಗಳ ವಿವರ ಹಾಗೂ ಯಾವ ಉದ್ದೇಶಕ್ಕೆ ಅನುದಾನ ನೀಡಲಾಯಿತು ಎಂಬುದಕ್ಕೆ ಉತ್ತರ ಸಿಗಬೇಕಿದೆ' ಎಂದು ಆಗ್ರಹಿಸಿದ್ದಾರೆ.

'ಪೂಜಾರಿ ಮೇಲೆ ಗೌರವ ಇದೆ': 'ನಾನು ಹಿಟ್ ಅಂಡ್ ರನ್ ಮಾಡುವವನಲ್ಲ. ಯಾರ ಮೇಲೂ ಆರೋಪ ಮಾಡುವುದಿಲ್ಲ. ಸಂಸದ ಕೋಟ ಶ್ರೀನಿವಾಸ ಪೂಜಾರಿ ಮೇಲೆ ಅಪಾರ ಗೌರವ ಇದೆ' ಎಂದು ಗೂಳಿಹಟ್ಟಿ ಶೇಖರ್ ಹೇಳಿದ್ದಾರೆ.

'ಯಾರನ್ನೂ ಅವಮಾನಿಸುವ ರೀತಿಯಲ್ಲಿ ನಾನು ಮಾತನಾಡಿಲ್ಲ. ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ಬಹಿರಂಗ ಕ್ಷಮೆ ಕೇಳುವೆ' ಎಂದು ತಿಳಿಸಿದ್ದಾರೆ.

ಯೂರೋಫೈಟರ್ ವಿಮಾನದಲ್ಲಿ ಐಎಎಫ್ ಮುಖ್ಯಸ್ಥರ ಹಾರಾಟ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆ (ಐಎಎಫ್) ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿಆರ್ ಚೌಧರಿ ಅವರು ಶುಕ್ರವಾರ ಜರ್ಮನಿಯ ವಾಯುನೆಲೆಯಲ್ಲಿ ಯುರೋಫೈಟರ್ ವಿಮಾನದಲ್ಲಿ ಹಾರಾಟ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏರ್ ಚೀಫ್ ಮಾರ್ಷಲ್ ಚೌಧರಿ ಪ್ರಸ್ತುತ ಜರ್ಮನಿ ಪ್ರವಾಸದಲ್ಲಿದ್ದು, ಐಎಎಫ್ ಅವರ ಅಧಿಕೃತ ಭೇಟಿಯ ಕೆಲವು ಚಿತ್ರಗಳನ್ನು ಸಹ ಪೋಸ್ಟ್ ಮಾಡಿದೆ.

ಸಿಎಎಸ್ ಏರ್ ಚೀಫ್ ಮಾರ್ಷಲ್ ವಿಆರ್ ಚೌಧರಿ ಅವರು ಜರ್ಮನ್ ವಾಯು ಪಡೆಯ ಆಹ್ವಾನದ ಮೇರೆಗೆ ಜರ್ಮನಿಗೆ ಅಧಿಕೃತ ಭೇಟಿಯಲ್ಲಿದ್ದಾರೆ. ಪ್ರವಾಸದ ಸಮಯದಲ್ಲಿ ಸಿಎಎಸ್, ಐಎಲ್‌ಎ 2024ಗೆ ಭೇಟಿ ನೀಡಿತು ಮತ್ತು ಜರ್ಮನ್ ವಾಯುನೆಲೆಯಲ್ಲಿ ಯೂರೋಫೈಟರ್ ಟೈಫೂನ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದರು ಎಂದು ಐಎಎಫ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಭಾರತೀಯರ ಮೃತದೇಹ ಪತ್ತೆ

ಜಲಗಾಂವ್ (ಪಿಟಿಐ): ರಷ್ಯಾದ ವೊಲ್ಖೋವ್ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದ ಭಾರತದ ನಾಲ್ವರು ವೈದ್ಯಕೀಯ ವಿದ್ಯಾರ್ಥಿಗಳ ಮೃತದೇಹಗಳನ್ನು ಪತ್ತೆ ಹಚ್ಚಲಾಗಿದ್ದು, ದೇಶಕ್ಕೆ ತರಲಾಗುತ್ತಿದೆ ಎಂದು ಮಹಾರಾಷ್ಟ್ರದ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

'ದುರ್ಘಟನೆ ನಡೆದ ಎರಡು ದಿನಗಳಲ್ಲಿಯೇ ಎರಡು ಮೃತದೇಹಗಳನ್ನು ಪತ್ತೆ ಹಚ್ಚಲಾಗಿತ್ತು. ಉಳಿದ ಇಬ್ಬರ ಮೃತದೇಹಗಳನ್ನು ಶನಿವಾರ ಬೆಳಗ್ಗೆ ಹೊರತೆಗೆಯಲಾಯಿತು' ಎಂದು ಜಲಗಾಂವ್ ಜಿಲ್ಲಾಧಿಕಾರಿ ಆಯುಷ್ ಪ್ರಸಾದ್ ತಿಳಿಸಿದ್ದಾರೆ. ಎಲ್ಲರೂ 18–20ರ ವಯಸ್ಸಿನವರು ಎಂದು ತಿಳಿಸಿದ್ದಾರೆ.

'ಎಲ್ಲ ನಾಲ್ವರೂ ಮಹಾರಾಷ್ಟ್ರ ಮೂಲದವರಾಗಿದ್ದು, ಮೊದಲು ಅವರ ಮೃತದೇಹಗಳನ್ನು ಮುಂಬೈಗೆ ತರಲಾಗುವುದು. ನಂತರ ಸ್ವಂತ ಊರುಗಳಿಗೆ ಸಾಗಿಸಲಾಗುವುದು' ಎಂದು ಹೇಳಿದರು.

ಎಲ್ಲರೂ ನೊವ್ಗೊರೊಡ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದರು.

ಹಲವು ಕ್ಷೇತ್ರದಲ್ಲಿ ಕೈಪಳಗಿಸಿಕೊಂಡಿದ್ದ ಬಹುಮುಖ ಪ್ರತಿಭೆ

ಮಾಧ್ಯಮ ದಿಗ್ಗಜ 'ರಾಮೋಜಿ' ನಿಧನ

ಹೈದರಾಬಾದ್ (ಪಿಟಿಐ): ರಾಮೋಜಿರಾವ್ ಸಮೂಹ ಸಂಸ್ಥೆಗಳ ಅಧ್ಯಕ್ಷ, ಮಾಧ್ಯಮ ಕ್ಷೇತ್ರದ ದಿಗ್ಗಜ ಚೆರುಕೂರಿ ರಾಮೋಜಿ ರಾವ್ (88) ಅವರು ಶನಿವಾರ ಮುಂಜಾನೆ ನಿಧನರಾದರು.



ಕೆಲದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಶನಿವಾರ ಮುಂಜಾನೆ 4.50ಕ್ಕೆ ಕೊನೆಯುಸಿರೆಳೆದರು. ಬಳಿಕ ಅವರ ಪಾರ್ಥಿವ ಶರೀರವನ್ನು ನಗರದ ಹೊರವಲಯದಲ್ಲಿರುವ ರಾಮೋಜಿ ಫಿಲ್ಮ್ ಸಿಟಿಯಲ್ಲಿರುವ ಅವರ ನಿವಾಸಕ್ಕೆ ಕರೆದೊಯ್ಯಲಾಯಿತು.

ಬಹುಮುಖ ಪ್ರತಿಭೆಯಾಗಿದ್ದ ರಾಮೋಜಿ ರಾವ್ ಅವರು ಮಾಧ್ಯಮ, ಆತಿಥ್ಯ, ಎನ್‌ಬಿಎಫ್‌ಸಿ, ಆಹಾರ ಮತ್ತು ಚಿಲ್ಲರೆ ಅಂಗಡಿ ಸರಪಳಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು.

1936ರ ನವೆಂಬರ್ 16ರಂದು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿ ಜನಿಸಿದ ಅವರು, 1962ರಲ್ಲಿ ಮಾರ್ಗದರ್ಶಿ ಚಿಟ್‌ಫಂಡ್ ಆರಂಭಿಸಿದರು. 1969ರಲ್ಲಿ ರೈತರಿಗಾಗಿ 'ಅನ್ನದಾತ' ನಿಯತಕಾಲಿಕೆ ಪ್ರಾರಂಭಿಸುವ ಮೂಲಕ ಮಾಧ್ಯಮ ಕ್ಷೇತ್ರಕ್ಕೆ ಕಾಲಿಟ್ಟರು. 1974ರಲ್ಲಿ ಅವರು ವಿಶಾಖಪಟ್ಟಣದಲ್ಲಿ ದೈನಿಕ 'ಈನಾಡು' ಪತ್ರಿಕೆ ಆರಂಭಿಸಿದರು. ನಂತರ ಅವರು ಮಾಧ್ಯಮದ ಉದ್ಯಮಿಯಾಗಿ ಬೆಳೆದರು.

'ಈಟಿವಿ' ವಾಹಿನಿಗಳ ಸಮೂಹ, ವಿಶ್ವದ ಅತಿದೊಡ್ಡ ಚಲನಚಿತ್ರ ನಗರಿಯಾದ ರಾಮೋಜಿ ಫಿಲ್ಮ್ ಸಿಟಿ, ಡಾಲ್ಫಿನ್ ಗ್ರೂಪ್ ಆಫ್ ಹೋಟೆಲ್‌ಗಳು, ಚಲನಚಿತ್ರ ನಿರ್ಮಾಣ ಸಂಸ್ಥೆ ಉಷಾಕಿರಣ್ ಮೂವೀಸ್, ಪ್ರಿಯಾ ಫುಡ್ಸ್ ಕಂಪನಿಗಳ ಮೂಲಕ ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದ್ದರು.

ಪ್ರಿಯಾ ಬ್ರ್ಯಾಂಡ್‌ನ ಉಪ್ಪಿನಕಾಯಿ ತಯಾರಿಕೆಯ ಕಂಪನಿ ಸ್ಥಾಪಿಸಿದ್ದರಿಂದಲೂ ಅವರು ಮನೆಮಾತಾಗಿದ್ದರು.

ದೂರದರ್ಶನದ್ದೇ ಏಕಸ್ವಾಮ್ಯ ಇದ್ದಂತಹ ಕಾಲಘಟ್ಟದಲ್ಲಿ ಮೊದಲ ಸ್ಯಾಟಲೈಟ್ ವಾಹಿನಿಯಾಗಿ 'ಈಟಿವಿ' ಪ್ರಾರಂಭಿಸಿದ್ದು ಹೆಗ್ಗಳಿಕೆ. ಆ ವಾಹಿನಿಯಲ್ಲಿ ಹಿನ್ನೆಲೆ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ನಡೆಸಿಕೊಡುತ್ತಿದ್ದ 'ಪಾಡುತಾ ತಿಯಗಾ' ಸಂಗೀತದ ರಿಯಾಲಿಟಿ ಶೋ ಎರಡು ದಶಕಗಳ ಪ್ರಸಾರವಾಗಿ ಜನಮನ್ನಣೆ ಗಳಿಸಿತು.

ವಿಶ್ವದ ಅತಿ ದೊಡ್ಡ 'ಫಿಲ್ಮ್ ಸಿಟಿ' ಎಂಬ ಕಾರಣಕ್ಕೆ ರಾಮೋಜಿ ಚಿತ್ರನಗರಿ ಗಿನ್ನಿಸ್ ವಿಶ್ವ ದಾಖಲೆ ಪುಸ್ತಕದಲ್ಲೂ ಹೆಸರಾಗಿದೆ. ಸಿನಿಮಾ ಕುರಿತು ಅದಮ್ಯ ಆಸಕ್ತಿ ಇಟ್ಟುಕೊಂಡಿದ್ದ ರಾಮೋಜಿ ರಾವ್ ಅವರು ಕಡಿಮೆ ಬಜೆಟ್‌ನಲ್ಲಿ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸಿದ್ದರು. ಸ್ವರ ಸಂಯೋಜಕ ಎಂ.ಎಂ. ಕೀರವಾಣಿ ಹಾಗೂ ನಟ ಜೂನಿಯರ್ ಎನ್‌.ಟಿ.ಆರ್ ಅವರಂತಹ ಪ್ರತಿಭಾನ್ವಿತರನ್ನು ರಾಮೋಜಿ ಒಂದೊ ತಮ್ಮ ನಿರ್ಮಾಣದ ಸಿನಿಮಾಗಳಿಂದ ಪರಿಚಯಿಸಿದ್ದಾರೆ ಅಥವಾ ಅವರ ವೃತ್ತಿಬದುಕಿಗೆ ಅಗತ್ಯವಿರುವ 'ಬ್ರೇಕ್' ನೀಡಿದ್ದಾರೆ.

ರಾಮೋಜಿ ರಾವ್ ಅವರು 'ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ'ದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಕೇಂದ್ರ ಸರ್ಕಾರ ರಾಮೋಜಿ ರಾವ್ ಅವರಿಗೆ 2016ರಲ್ಲಿ 'ಪದ್ಮವಿಭೂಷಣ' ಪ್ರಶಸ್ತಿ ನೀಡಿ ಗೌರವಿಸಿತ್ತು.

ಮುಖ್ಯಾಂಶಗಳು

- ವಿಶ್ವದ ಅತಿ ದೊಡ್ಡ 'ಫಿಲ್ಮ್ ಸಿಟಿ'ಯ ರೂವಾರಿ
- 'ಈಟಿವಿ' ಮೂಲಕ ದೂರದರ್ಶನದ ಏಕತಾನತೆ ಮುರಿದಿದ್ದ ದಿಗ್ಗಜ
- ಪ್ರಿಯಾ ಉಪ್ಪಿನಕಾಯಿ ಬ್ರ್ಯಾಂಡ್ ಮೂಲಕವೂ ಮನೆಮಾತು

ಪ್ರಜಾತಂತ್ರಕ್ಕಾಗಿ ಅಭಿಯಾನ

1984ರಲ್ಲಿ ಎನ್‌.ಟಿ. ರಾಮರಾವ್ ಅವರ ಸರ್ಕಾರ ಉರುಳುವಂತೆ ಮಾಡಿದಾಗ, ಪ್ರಜಾತಂತ್ರವನ್ನು ಉಳಿಸಬೇಕು ಎಂದು 'ಈನಾಡು' ಪತ್ರಿಕೆಯು ಸರಣಿ ವರದಿಗಳನ್ನು ಪ್ರಕಟಿಸಿತ್ತು. ಆ ನಂತರ ಎನ್‌.ಟಿ.ಆರ್ ಮತ್ತೆ ಸರ್ಕಾರ ರಚಿಸುವಲ್ಲಿ ಪತ್ರಿಕೆಯ ಆ ಅಭಿಯಾನದ ಪಾತ್ರ ಮಹತ್ವದ್ದಾಗಿದ್ದು ಎಂದು ವಿಶ್ಲೇಷಿಸಲಾಗಿತ್ತು. ಆ ಸಂದರ್ಭವನ್ನು ರಾಮೋಜಿ ರಾವ್ ಅವರ ಬದುಕಿನ ಪ್ರಮುಖ ಘಟ್ಟ ಎಂದೇ ಹೇಳಲಾಗುತ್ತದೆ.

ಎನ್‌ಡಿಎ ಸರ್ಕಾರ ದುರ್ಬಲ: ಮಮತಾ ಬ್ಯಾನರ್ಜಿ

'ಮುಂದೆ 'ಇಂಡಿಯಾ' ಸರ್ಕಾರ'

ಪ್ರಜಾವಾಣಿ ವಾರ್ತೆ

ಕೋಲ್ಕತ್ತ (ಪಿಟಿಐ): ಕೇಂದ್ರದ ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಟಿಎಂಸಿ ಪಕ್ಷವು ಕಾದುನೋಡುವ ತಂತ್ರ ಅನುಸರಿಸಲಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಿಳಿಸಿದರು.

ಅಲ್ಲದೆ, ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಕೇಂದ್ರದಲ್ಲಿ ಸರ್ಕಾರ ರಚಿಸಲು ಈಗ ಹಕ್ಕು ಮಂಡಿಸುತ್ತಿಲ್ಲದಿದ್ದರೂ, ಮುಂದೆಯೂ ಹಕ್ಕು ಮಂಡಿಸುವುದಿಲ್ಲ ಎಂದು ಭಾವಿಸಬೇಕಿಲ್ಲ ಎಂದರು. ಮುಂದಿನ ದಿನಗಳಲ್ಲಿ 'ಇಂಡಿಯಾ' ಮೈತ್ರಿಕೂಟವು ಸರ್ಕಾರ ರಚಿಸಲಿದೆ ಎಂದು ಕೂಡ ಹೇಳಿದರು.

ದುರ್ಬಲವೂ ಅಸ್ಥಿರವೂ ಆಗಿರುವ ಎನ್‌ಡಿಎ ನೇತೃತ್ವದ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆದರೆ ತಮಗೆ ಸಂತಸವಾಗುತ್ತದೆ ಎಂದು ಅವರು ಹೇಳಿದರು. ಟಿಎಂಸಿ ಸಂಸದರು ಹಾಗೂ ಮುಖಂಡರ ಜೊತೆ ಸಭೆ ನಡೆಸಿದ ನಂತರ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಬಿಜೆಪಿಯು ಅಪ್ರಜಾಸತ್ತಾತ್ಮಕವಾಗಿ ಹಾಗೂ ಕಾನೂನುಬಾಹಿರವಾಗಿ ಸರ್ಕಾರ ರಚಿಸುತ್ತಿದೆ' ಎಂದು ಅವರು ದೂರಿದರು.

ಟಿಎಂಸಿ ಪಕ್ಷವು 'ಇಂಡಿಯಾ' ಮೈತ್ರಿಕೂಟವನ್ನು ಪಶ್ಚಿಮ ಬಂಗಾಳದಲ್ಲಿ ಜನವರಿಯಲ್ಲಿ ತೊರೆದಿದೆ. ಆದರೆ ಕೇಂದ್ರದಲ್ಲಿ ಅದು ಈ ಮೈತ್ರಿಕೂಟದ ಭಾಗವಾಗಿ ಮುಂದುವರಿಯುತ್ತದೆ ಎಂದು ಮಮತಾ ತಿಳಿಸಿದರು.

'ಎನ್‌ಡಿಎ ಸರ್ಕಾರವು ತನ್ನ ಅವಧಿಯನ್ನು ಪೂರ್ಣಗೊಳಿಸುವುದಿಲ್ಲ' ಎಂದು ಮಮತಾ ಅವರು ಸಭೆಯಲ್ಲಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

'ರಚನೆ ಆಗಲಿರುವ ಎನ್‌ಡಿಎ ಸರ್ಕಾರವು ಅಸ್ಥಿರವಾಗಿರಲಿದೆ. ಬಿಜೆಪಿಯು ಬಹುಮತ ಪಡೆದಿಲ್ಲ. ಅವರು ಮಿತ್ರಪಕ್ಷಗಳನ್ನು ಅವಲಂಬಿಸಿದ್ದಾರೆ. ಮಿತ್ರಪಕ್ಷಗಳ ಜೊತೆ ಅವರು ಎಷ್ಟು ಕಾಲ ಸಾಗಬಲ್ಲರು ಎಂಬುದನ್ನು ನೋಡೋಣ' ಎಂದು ಮಮತಾ ಹೇಳಿದರು.

ಪ್ರಧಾನಿ ಹಾಗೂ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಟಿಎಂಸಿ ನಾಯಕರು ಭಾಗಿಯಾಗುವುದಿಲ್ಲ ಎಂದರು.

'ಈ ಬಾರಿಯ ಲೋಕಸಭೆಯು ಹಿಂದಿನ ಎರಡು ಲೋಕಸಭೆಗಳಂತೆ ಇರುವುದಿಲ್ಲ. ಹಿಂದೆ ಅವರಿಗೆ ಭಾರಿ ಬಹುಮತ ಇದ್ದ ಕಾರಣ, ಅವರು ಮಸೂದೆಗಳಿಗೆ ಅಂಗೀಕಾರ ಪಡೆದುಕೊಳ್ಳುತ್ತಿದ್ದರು. ಈಗ ನಮ್ಮ ಸಂಸದರು ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯುವಂತೆ ಆಗ್ರಹಿಸಲಿದ್ದಾರೆ. ಎನ್‌ಆರ್‌ಸಿ ಅಥವಾ ಏಕರೂಪ ನಾಗರಿಕ ಸಂಹಿತೆ ನಮಗೆ ಬೇಕಾಗಿಲ್ಲ' ಎಂದರು.

> ಜನಾದೇಶವು ನರೇಂದ್ರ ಮೋದಿ ಅವರ ವಿರುದ್ಧ ಇರುವ ಕಾರಣ ಅವರು ರಾಜೀನಾಮೆ ಸಲ್ಲಿಸಿ, ಇನ್ನೊಬ್ಬರಿಗೆ ಅವಕಾಶ ಕಲ್ಪಿಸಬೇಕಿತ್ತು.
> **ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ಅಖಿಲೇಶ್, ಎಸ್‌ಪಿ ಸಂಸದೀಯ ನಾಯಕ

ಲಖನೌ (ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಲೋಕಸಭೆಯಲ್ಲಿ ಎಸ್‌ಪಿ ನಾಯಕರಾಗಲಿದ್ದಾರೆ. ಯಾದವ್ ಅವರು ಪ್ರಸ್ತುತ ಉತ್ತರ ಪ್ರದೇಶದ ವಿರೋಧ ಪಕ್ಷದ ನಾಯಕರಾಗಿದ್ದು, ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ.

'ಸಂಸದೀಯ ಪಕ್ಷದ ನಾಯಕನ ಆಯ್ಕೆಯು ಔಪಚಾರಿಕವಾಗಿ ದೆಹಲಿಯಲ್ಲಿ ನಡೆಯಲಿದೆ. ಪ್ರಧಾನಿ ಪ್ರಮಾಣ ವಚನ ಮತ್ತು ಲೋಕಸಭೆಯ ಹಂಗಾಮಿ ಸ್ಪೀಕರ್ ಆಯ್ಕೆಯ ಬಳಿಕ ಈ ಕಾರ್ಯ ಪೂರ್ಣಗೊಳ್ಳಲಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯ ವಕ್ತಾರ ರಾಜೇಂದ್ರ ಚೌಧರಿ ಹೇಳಿದ್ದಾರೆ.

ಉತ್ತರ ಪ್ರದೇಶದ ಕನೌಜ್ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಅಖಿಲೇಶ್ ಅವರು, ತಾವು ಪ್ರತಿನಿಧಿಸುತ್ತಿರುವ ಕರ್ಹಾಲ್ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲಿದ್ದಾರೆ ಎಂದು ಚೌಧರಿ ತಿಳಿಸಿದ್ದಾರೆ.

ಔಷಧಕ್ಕಾಗಿ ಜನಜಾತ್ರೆ

ಕೊಪ್ಪಳ ತಾಲ್ಲೂಕಿನ ಕುಟುಗನಹಳ್ಳಿ ಗ್ರಾಮದಲ್ಲಿ ಪ್ರತಿ ವರ್ಷ ಮೃಗಶಿರ ಮಳೆ ನಕ್ಷತ್ರ ಕೂಡುವ ವೇಳೆ ಆಸ್ತಮಾ ರೋಗಿಗಳಿಗೆ ಉಚಿತವಾಗಿ ನೀಡುವ ಮನೆ ಔಷಧ ಪಡೆಯಲು ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಜನ

ಮಣಿಪುರದಲ್ಲಿ ಮತ್ತೆ ಹಿಂಸಾಚಾರ

ಇಂಫಾಲ್ (ಪಿಟಿಐ): ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಶಂಕಿತ ಬಂಡುಕೋರರು ಎರಡು ಪೊಲೀಸ್ ಉಪಠಾಣೆಗಳು, ಒಂದು ಅರಣ್ಯ ಇಲಾಖೆ ಕಚೇರಿ ಮತ್ತು 70 ಮನೆಗಳಿಗೆ ಬೆಂಕಿ ಹಚ್ಚಿರುವ ಪ್ರಕರಣ ಶನಿವಾರ ನಡೆದಿದೆ. ಪ್ರಕರಣದ ಹಿನ್ನೆಲೆಯಲ್ಲಿ ಜಿಲ್ಲೆಯ ವರಿಷ್ಠಾಧಿಕಾರಿಯನ್ನು ವರ್ಗಾಯಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬರಾಕ್ ನದಿ ತಟದಲ್ಲಿರುವ ಚೋಟೊಬೆಕ್ರಾ ಪ್ರದೇಶದ ಉಪಠಾಣೆಗೆ ಬಂಡುಕೋರರು ಮಧ್ಯರಾತ್ರಿ 12.30ಕ್ಕೆ ಬೆಂಕಿ ಹಚ್ಚಿದರು. ಆ ಬಳಿಕ ಮೊಧುಪುರ್ ಪ್ರದೇಶದ ಲಮ್‌ತಾಯಿ ಖುನೌ ಮತ್ತು ಅಕ್ಕಪಕ್ಕದ ಹಳ್ಳಿಗಳಲ್ಲಿ ದಾಳಿ ನಡೆಸಿದರು. ಜಿರಿ ಮುಖ್ ಪೊಲೀಸ್ ಉಪಠಾಣೆಗೂ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿರಿಬಾಮ್‌ನಲ್ಲಿ ನಿಯೋಜಿತರಾಗಿರುವ ಭದ್ರತಾ ಸಿಬ್ಬಂದಿಗೆ ಸಹಾಯ ಮಾಡಲು 70 ಸದಸ್ಯರ ಮಣಿಪುರ ಪೊಲೀಸರ ತುಕಡಿಯೊಂದನ್ನು ಶನಿವಾರ ಬೆಳಿಗ್ಗೆ ಹೆಲಿಕಾಪ್ಟರ್ ಮೂಲಕ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಜಿರಿಬಾಮ್ ಜಿಲ್ಲೆಯಲ್ಲಿ ಜನರ ಜೀವ ಮತ್ತು ಸ್ವತ್ತುಗಳನ್ನು ಕಾಪಾಡುವಂತೆ ರಾಜ್ಯ ಸರ್ಕಾರವನ್ನು ಹೊಸದಾಗಿ ಚುನಾಯಿತರಾಗಿರುವ ಕಾಂಗ್ರೆಸ್ ಸಂಸದ ಅಂಗೋಮ್ಚ ಬಿಮೋಲ್ ಅಕೋಯಿಜಮ್ ಒತ್ತಾಯಿಸಿದ್ದಾರೆ.

'ಜಿಲ್ಲೆಯ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದೆ. ಪಟ್ಟಣ ಪ್ರದೇಶದಲ್ಲಿ ಭದ್ರತೆ ಒದಗಿಸಲಾಗಿದೆ. ಹೊರವಲಯಗಳಲ್ಲಿ ಇನ್ನೂ ಭದ್ರತೆ ಒದಗಿಸಲಾಗಿಲ್ಲ' ಎಂದು ಹೇಳಿದರು.

ಜೂನ್ 6ರಂದು ಜಿರಿಬಾಮ್ ಜಿಲ್ಲೆಯಲ್ಲಿ ಬಂಡುಕೋರರು 59 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರನ್ನು ಹತ್ಯೆಗೈದಿದ್ದರು. ಆ ಬಳಿಕ ಅಲ್ಲಿ ಹಿಂಸಾಚಾರ ನಡೆದಿತ್ತು. ಈ ಹಿನ್ನೆಲೆಯಲ್ಲಿ 239 ಜನರನ್ನು ಗ್ರಾಮಗಳಿಂದ ಸ್ಥಳಾಂತರಿಸಿ ಜಿರಿ ಪಟ್ಟಣದ ಕ್ರೀಡಾ ಸಂಕೀರ್ಣದಲ್ಲಿ ಇರಿಸಲಾಗಿದೆ. ಅದಾದ ಎರಡೇ ದಿನಗಳಲ್ಲಿ ಈ ಘಟನೆ ನಡೆದಿದೆ.

ಪುರಿ ದೇಗುಲ: ಫೋಕಸ್ ಲೈಟ್ ನಾಪತ್ತೆ

ಭುವನೇಶ್ವರ (ಪಿಟಿಐ): ಶ್ರೀ ಜಗನ್ನಾಥ ದೇವಾಲಯದ ಸೌಂದರ್ಯೀಕರಣ ಯೋಜನೆಯ ಭಾಗವಾಗಿ ಅಳವಡಿಸಲಾಗಿದ್ದ, ಫೋಕಸ್ ಲೈಟ್‌ಗಳನ್ನು ಚುನಾವಣಾ ಫಲಿತಾಂಶದ ಎಣಿಕೆಯ ಸಂಜೆ ಮತ್ತು ಚುನಾವಣೆಯಲ್ಲಿ ಬಿಜೆಡಿ ಸೋಲಿನ ನಂತರ ತೆಗೆದುಹಾಕಲಾಯಿತು.

ಈ ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಒಡಿಶಾದ ಮುಖ್ಯ ಕಾರ್ಯದರ್ಶಿ ಪಿ.ಕೆ. ಜೆನಾ ಅವರು ಪುರಿ ಜಿಲ್ಲಾಡಳಿತಕ್ಕೆ ಆದೇಶಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

'ದೇವಾಲಯದ ಮೇಲಿನ ಫೋಕಸ್ ಲೈಟ್‌ಗಳನ್ನು ತೆಗೆದುಹಾಕಿರುವ ಕುರಿತು ಮುಖ್ಯ ಕಾರ್ಯದರ್ಶಿಯಿಂದ ಸೂಚನೆಯನ್ನು ಸ್ವೀಕರಿಸಲಾಗಿದೆ. ಘಟನೆಯ ಬಗೆಗೆ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ, ಜಿಲ್ಲಾಡಳಿತಕ್ಕೆ ಮಾಹಿತಿ ನೀಡದೆ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ಲೈಟ್‌ಗಳನ್ನು ತೆಗೆದಿದೆ' ಎಂದು ಪುರಿ ಜಿಲ್ಲಾಧಿಕಾರಿ ಸಿದ್ಧಾರ್ಥ್ ಶಂಕರ್ ಸ್ವೈನ್ ಹೇಳಿದ್ದಾರೆ.

ಕಳೆದ 2-3 ದಿನಗಳಿಂದ ಜಗನ್ನಾಥ ದೇವಾಲಯದ ಮೇಲೆ ಕೇಂದ್ರೀಕರಿಸಲು ಅಳವಡಿಸಲಾದ ಫೋಕಸ್ ಲೈಟ್‌ಗಳನ್ನು ತೆಗೆದಿರುವುದರಿಂದ ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

622 ಹುದ್ದೆಗಳ ನೇಮಕಾತಿ ಪ್ರಕ್ರಿಯೆ • ಅಧಿಸೂಚನೆಗೆ ವಿರುದ್ಧವಾಗಿ ಋಣಾತ್ಮಕ ಅಂಕ

ಕೆಪಿಸಿಎಲ್: ಮತ್ತೆ ನೇಮಕಾತಿ ವಿವಾದ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) ಸಹಾಯಕ ಎಂಜಿನಿಯರ್ ಸೇರಿದಂತೆ 622 ಹುದ್ದೆಗಳಿಗೆ ನಡೆಸಿದ್ದ ಮರು ಪರೀಕ್ಷೆಯೂ ವಿವಾದಕ್ಕೆ ಒಳಗಾಗಿದೆ.

ನೇಮಕಾತಿ ಅಧಿಸೂಚನೆಗೆ ವಿರುದ್ಧವಾಗಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಋಣಾತ್ಮಕ ಅಂಕಗಳ ಪದ್ಧತಿ ಅನುಸರಿಸಿರುವುದಕ್ಕೆ ಲಕ್ಷಾಂತರ ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಭ್ಯರ್ಥಿಯು ಸರಿ ಉತ್ತರಗಳಿಂದ ಪಡೆದ ಒಟ್ಟು ಅಂಕಗಳಲ್ಲಿ ಆತ ಮಾಡಿದ ತಪ್ಪು ಉತ್ತರಗಳನ್ನು ಲೆಕ್ಕಹಾಕಿ ಪ್ರತಿ ಮೂರು ತಪ್ಪು ಉತ್ತರಕ್ಕೆ ಒಂದು ಅಂಕದಂತೆ ಕಡಿತ ಮಾಡಲಾಗುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕಳೆದ ಫೆಬ್ರುವರಿಯಲ್ಲಿ 100 ಅಂಕಗಳಿಗೆ ನಡೆಸಿದ್ದ ಮರು ಪರೀಕ್ಷೆಯಲ್ಲಿ ಇದೇ ವಿಧಾನ ಅನುಸರಿಸಲಾಗಿದೆ. ಇದರಿಂದ ಅನ್ಯಾಯವಾಗಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ.

ಕೆಪಿಸಿಎಲ್‌ನಲ್ಲಿ ಖಾಲಿ ಇದ್ದ ಸಿವಿಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೊ ಮೊಬೈಲ್, ಮೆಕ್ಯಾನಿಕಲ್ ವಿಭಾಗಗಳ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಹಾಗೂ ರಸಾಯನಶಾಸ್ತ್ರಜ್ಞ, ರಾಸಾಯನಿಕ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ ಜುಲೈ 2017ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳ ಪಟ್ಟಿ ನೀಡುವ ಹೊಣೆಗಾರಿಕೆಯನ್ನು ಕೆಇಎಗೆ ನೀಡಲಾಗಿತ್ತು.

ಕೆಇಎ 2018ರ ಜನವರಿಯಲ್ಲಿ ಬೆಂಗಳೂರು, ಬಳ್ಳಾರಿ, ಬೆಳಗಾವಿ, ಕಲಬುರಗಿ, ಮೈಸೂರು ಹಾಗೂ ಶಿವಮೊಗ್ಗದ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆಸಿತ್ತು. ಪ್ರಶ್ನೆ ಪತ್ರಿಕೆಗಳ ಸೋರಿಕೆ, ಕೆಲ ಕೇಂದ್ರಗಳಲ್ಲಿ ಸಾಮೂಹಿಕ ನಕಲು ಮತ್ತಿತರ ಪರೀಕ್ಷಾ ಅಕ್ರಮ ಪ್ರಶ್ನಿಸಿ ಕೆಲ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಕೋರ್ಟ್ 2018ರಲ್ಲಿ ನಡೆಸಿದ್ದ ಪರೀಕ್ಷೆ ರದ್ದು ಮಾಡಿ, ಮರು ಪರೀಕ್ಷೆ ನಡೆಸುವಂತೆ ಆದೇಶಿಸಿತ್ತು. ನಾಲ್ಕು ತಿಂಗಳ ಹಿಂದಷ್ಟೇ ಮರುಪರೀಕ್ಷೆ ನಡೆಸಲಾಗಿತ್ತು.

'ಕೆಪಿಸಿಎಲ್ ಹೊರಡಿಸಿದ್ದ ನೇಮಕಾತಿ ಅಧಿಸೂಚನೆ, ಸುತ್ತೋಲೆ, ಕೆಇಎ ಮಾರ್ಗಸೂಚಿ ಸೇರಿದಂತೆ ಎಲ್ಲೂ ಋಣಾತ್ಮಕ ಅಂಕ ಪದ್ಧತಿ ಅನುಸರಿಸುವ ಕುರಿತು ಮಾಹಿತಿ ನೀಡಿಲ್ಲ. 2018ರಲ್ಲಿ ನಡೆದಿದ್ದ ಪರೀಕ್ಷೆಯ ಒಎಂಆರ್ ಶೀಟ್, ಪ್ರವೇಶ ಪತ್ರದ ಸೂಚನೆಯಲ್ಲಿ ಋಣಾತ್ಮಕ ಅಂಕ ಪದ್ಧತಿ ಕುರಿತು ಮಾಹಿತಿ ನೀಡಲಾಗಿತ್ತು. ಅಧಿಸೂಚನೆಯ ಪ್ರಕಾರ ನಡೆಸಿಲ್ಲ ಎಂದು ಆಕ್ಷೇಪ ವ್ಯಕ್ತವಾಗಿತ್ತು. ಕೊನೆಗೆ ಪರೀಕ್ಷೆಯನ್ನೇ ಕೋರ್ಟ್ ರದ್ದು ಮಾಡಿದ್ದರಿಂದ ಸುಮ್ಮನಾದೆವು. ಮರು ಪರೀಕ್ಷೆಗೆ ಹೊರಡಿಸಿದ ಅಧಿಸೂಚನೆ, ಒಎಂಆರ್ ಶೀಟ್, ಪ್ರವೇಶ ಪತ್ರ, ಮಾರ್ಗಸೂಚಿಯಲ್ಲೂ ಮಾಹಿತಿ ನೀಡಿಲ್ಲ. ಪರೀಕ್ಷೆ ಬರೆದ ಅಭ್ಯರ್ಥಿಗಳ ಅಂಕಗಳ ಪಟ್ಟಿ ಪ್ರಕಟಿಸಿದಾಗಲೇ ಎಲ್ಲರಿಗೂ ಗೊತ್ತಾಯಿತು' ಎನ್ನುತ್ತಾರೆ ಅಭ್ಯರ್ಥಿ ಶರಣ ಬಸು ಸೊನ್ನ.

'ನೇಮಕಾತಿಗೆ 2017ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಋಣಾತ್ಮಕ ಅಂಕ ಪದ್ಧತಿ ಅನುಸರಿಸುವ ಕುರಿತು ಮಧ್ಯಂತರ ಆದೇಶ ಹೊರಡಿಸಲಾಗಿತ್ತು. ಆದರೆ, ಮರು ಪರೀಕ್ಷೆಯಲ್ಲಿ ಈ ಕುರಿತು ಸ್ಪಷ್ಟನೆ ನೀಡಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಕಾನೂನು ಇಲಾಖೆಯಿಂದ ಸ್ಪಷ್ಟೀಕರಣ ಕೋರಿದ್ದೇವೆ. ಪ್ರತಿಕ್ರಿಯೆ ಬಂದ ನಂತರ ಮುಂದಿನ ಕ್ರಮಕ್ಕೆ ಕೆಇಎಗೆ ಪತ್ರ ಬರೆಯಲಾಗುವುದು' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಇಚ್ಛಿಸದ ಕೆಪಿಸಿಎಲ್ ಹಿರಿಯ ಅಧಿಕಾರಿ.

ಏಳು ವರ್ಷ ವಿಳಂಬ: ಕೆಪಿಸಿಎಲ್‌ನ ಖಾಲಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಬಿದ್ದು ಏಳು ವರ್ಷಗಳು ಕಳೆದರೂ ಪ್ರಕ್ರಿಯೆ ಮಾತ್ರ ಪೂರ್ಣಗೊಂಡಿಲ್ಲ.

'ಪರೀಕ್ಷಾ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಮೊದಲಾದ ವಿಚಾರಕ್ಕೆ ಕೋರ್ಟ್ ಮೊದಲು ನಡೆದಿದ್ದ ಪರೀಕ್ಷೆಯನ್ನು ರದ್ದು ಮಾಡಿದರೂ, ಮರು ಪರೀಕ್ಷೆಯಲ್ಲೂ ನಿರ್ಲಕ್ಷ್ಯ ಧೋರಣೆ ಮುಂದುವರಿದಿದೆ. ಋಣಾತ್ಮಕ ಅಂಕಗಳ ವಿವಾದ ಮತ್ತೆ ಕೋರ್ಟ್ ಮೆಟ್ಟಿಲೇರಿದರೆ ಉದ್ಯೋಗದ ನಿರೀಕ್ಷೆಯಲ್ಲಿರುವ ಹಲವರು ಹುದ್ದೆ ಸಿಗದೆ ನಿವೃತ್ತಿಯ ಸನಿಹ ತಲುಪಿರುತ್ತಾರೆ' ಎಂದು ಅಭ್ಯರ್ಥಿ ಶಿವಕುಮಾರ್ ಹೇಳಿದರು.

> ಋಣಾತ್ಮಕ ಅಂಕಗಳಿಗೆ ಪರ–ವಿರೋಧ ವ್ಯಕ್ತವಾಗಿದೆ. ಕೆಪಿಸಿಎಲ್‌ಗೆ ಪತ್ರ ಬರೆದಿದ್ದು, ಉತ್ತರ ಬಂದ ನಂತರ ನಿರ್ಧಾರ ಕೈಗೊಳ್ಳುತ್ತೇವೆ
> **–ಎಚ್.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ.

> ಪ್ರಮಾದ ತಮ್ಮದಲ್ಲ ಎಂದು ಕೆಇಎ–ಕೆಪಿಸಿಎಲ್ ನುಣುಚಿಕೊಳ್ಳುತ್ತಿವೆ. ಸರ್ಕಾರ ಮಧ್ಯ ಪ್ರವೇಶಿಸಬೇಕು. ಅಭ್ಯರ್ಥಿಗಳಿಗೆ ನ್ಯಾಯಕೊಡಿಸಬೇಕು
> **–ಗೋವಿಂದ ರಾಥೋಡ್,** ಅಭ್ಯರ್ಥಿ

ಭಾನುವಾರ, ಜೂನ್ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 160 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ವಿಶಿಷ್ಟವಾದ ಸುವಾಸನೆ ಮತ್ತು ಸ್ವಾದಕ್ಕೆ ಹೆಸರುವಾಸಿಯಾದ ಇರಾನಿ ಚಾಯ್ ಕಾಲ ಬದಲಾದಂತೆ ಖದರ್ ಕಳೆದುಕೊಳ್ಳುತ್ತಿದೆ

ಗಣಿಗಾರಿಕೆ ಪ್ರಸ್ತಾವ ತಿರಸ್ಕರಿಸಲು ಪರಿಸರವಾದಿಗಳ ಆಗ್ರಹ
'ವಿಐಎಸ್‌ಎಲ್'ಗಾಗಿ 29400 ಮರಗಳ ಹನನ? 5
ವರ್ಷಧಾರೆ: ಜಲಮೂಲಗಳಿಗೆ ಜೀವಕಳೆ 6
ಕಚೇರಿಯಲ್ಲೇ ಹೊಡೆದಾಡಿದ ಕಾಂಗ್ರೆಸ್ಸಿಗರು 7

ನೀಟ್, ಸಿಇಟಿ, ಜೆಇಇ: ತಾರತಮ್ಯ, ಸ್ಪರ್ಧಾತ್ಮಕ ಜಗತ್ತಿನ ಕರಾಳಮುಖ

ಪಿಯು ಕೋಚಿಂಗ್ ಎಂಬ ಮಾಯೆ!

• ಸಿದ್ದಯ್ಯ ಹಿರೇಮಠ

ದಾವಣಗೆರೆ: 'ಮಗನನ್ನು ಪ್ರಥಮ ಪಿಯುಸಿಗೆ ಸೇರಿಸಿದ್ದೆವು. ಎಷ್ಟೇ ಹೇಳಿದರೂ ಆತ ಎರಡನೇ ವರ್ಷ ಇಲ್ಲಿಯೇ ಮುಂದುವರಿಯಲು ಇಷ್ಟ-ಪಡುತ್ತಿಲ್ಲ. ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಓದುತ್ತಾರೆ. ಅವರಲ್ಲಿ ಹತ್ತಾರು ವಿದ್ಯಾರ್ಥಿಗಳು ಎಂಬಿಬಿಎಸ್, ಎಂಜಿನಿಯರಿಂಗ್‌ನ ಸರ್ಕಾರಿ ಸೀಟು ಪಡೆಯುತ್ತಾರೆ. ಅವರಂತೆಯೇ ನಮ್ಮ ಮಗನೂ ಆಗಲಿ ಎಂಬ ಕನಸು ಕಂಡಿದ್ದೆವು. ಆದರೆ ಆತ ಇಲ್ಲಿ ತನಗೆ ಓದಲಾಗದು ಎಂದು ತಿಳಿಸಿದ. ಕೊನೆಗೆ ಅವರ ಅಮ್ಮ ಪುಸಲಾಯಿಸಿ ಕೇಳಿದಾಗ ನಿರಾಕರಣೆಯ ಕಾರಣ ತಿಳಿಸಿದ...'

'ಶೇ 90ರಷ್ಟು ಅಂಕ ಗಳಿಸುತ್ತಿದ್ದರೂ ಸೆಕ್ಷನ್ ರೀ ಶಫಲ್ (ಪುನರ್ರಚನೆ) ವೇಳೆ ಆತನಿಗೆ ಹಿಂಬಡ್ತಿ ನೀಡಲಾಗಿತ್ತು. ಇದರಿಂದ ಖಿನ್ನತೆಗೆ ಒಳಗಾಗಿದ್ದ ಮಗ, ಈಗ ಸತ್ಯವನ್ನು ಬಾಯಿಬಿಟ್ಟಿದ್ದಾನೆ. ಅದಕ್ಕೇ ವಾಪಸ್ ಊರಿಗೆ ಕರೆದೊಯ್ದು, ಹುಬ್ಬಳ್ಳಿಯ ಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸಲು ನಿರ್ಧರಿಸಿದ್ದೇವೆ. ಸಮಯಕ್ಕೆ ಸರಿಯಾಗಿ ವಿಷಯ ತಿಳಿಯಿತು. ಇಲ್ಲವೆಂದರೆ ಇದ್ದೊಬ್ಬ ಮಗ ನಮ್ಮ ಕೈಬಿಟ್ಟು ಹೋಗುತ್ತಿದ್ದ'

ಕೆಲವು ವರ್ಷಗಳ ಹಿಂದೆ ಆರಂಭವಾಗಿ, ಸಾಕಷ್ಟು ಹೆಸರು ಮಾಡಿರುವ ಇಲ್ಲಿನ ಕಾಲೇಜೊಂದರಿಂದ ಮಗನನ್ನು ವಾಪಸ್ ಕರೆದೊಯ್ದ ಪಾಲಕರು, ಆ ಕಾಲೇಜಿನವರು ಅನುಸರಿಸುವ ತಾರತಮ್ಯ ನೀತಿಯನ್ನು ಬಹಿರಂಗಪಡಿಸಿದ್ದು ಹೀಗೆ.

ಅದು ಬೆಂಗಳೂರಿನ 'ಪ್ರತಿಷ್ಠಿತ' ಪಿಯುಸಿ ಕಾಲೇಜು. ಅಲ್ಲಿ ಓದಿದ ಬಹುಪಾಲು ವಿದ್ಯಾರ್ಥಿಗಳು 'ಟಾಪರ್ಸ್'ಗಳಾಗಿ ಹೊರಹೊಮ್ಮುತ್ತಾರೆ ಎಂಬ ನಂಬಿಕೆ. ಮಗಳನ್ನು ಅಲ್ಲಿ ಓದಿಸಿದರೆ ಆಕೆಯ ಬದುಕು 'ಬಂಗಾರ'ವಾಗ-ಬಹುದೆಂಬ ಕನಸು ಮನದೊಳಗೆ ಮೊಳೆತಿತ್ತು. ಪತ್ನಿ ಹಾಗೂ ಮಗಳ ಜೊತೆ ಕಾಲೇಜಿಗೆ ಹೋದಾಗ ಅಲ್ಲಿನ ಕ್ಯಾಂಪಸ್ ಕಂಡು ಅತೀವ ಸಂತಸವಾಯಿತು. ಸಾಲವಾದರೂ ಪರವಾಗಿಲ್ಲ. ಮಗಳನ್ನು ಇಲ್ಲೇ ಓದಿಸಬೇಕೆಂದು ಆ ಕ್ಷಣವೇ ನಿರ್ಧರಿಸಿಬಿಟ್ಟರು. ದುಬಾರಿ ಶುಲ್ಕ ನೀಡಿ ಪ್ರವೇಶ ಪಡೆದರು. ಕಾಲೇಜು ಶುರುವಾದ ಹೊಸತರಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಕೆಲ ತಿಂಗಳ ಬಳಿಕ ಆಕೆಯನ್ನು ಪ್ರಧಾನ ಕ್ಯಾಂಪಸ್‌ನಿಂದ ಆ ಸಂಸ್ಥೆಯ ಮತ್ತೊಂದು ಶಾಖೆಗೆ ಸ್ಥಳಾಂತರಿಸಿಬಿಟ್ಟರು.

ಸ್ಥಳಾಂತರಗೊಂಡ ಕಟ್ಟಡದಲ್ಲಿನ ಕೊಠಡಿಗಳಲ್ಲಿ ಬೆಳಕು, ಮತ್ತು ನೈಸರ್ಗಿಕ ಗಾಳಿಯೂ ಇರಲಿಲ್ಲ. ಕಾಲೇಜಿಗೆ ಹೋಗಿ ಆಡಳಿತ ಮಂಡಳಿಯನ್ನು ಪ್ರಶ್ನಿಸಿದರೆ, 'ಮೊದಲೆರಡು ತಿಂಗಳಲ್ಲಿ ನಡೆಸಿದ ಕಿರು ಪರೀಕ್ಷೆಗಳಲ್ಲಿ ನಿಮ್ಮ ಮಗಳು ಕಡಿಮೆ ಅಂಕ ಪಡೆದಿದ್ದಾಳೆ. ಶೇ 95ಕ್ಕೂ ಹೆಚ್ಚು ಅಂಕ ಪಡೆದವರಿಗಷ್ಟೇ ಪ್ರಧಾನ ಕ್ಯಾಂಪಸ್‌ನಲ್ಲಿ ಪಾಠ. ಉಳಿದವರೆಲ್ಲಾ ಸಂಸ್ಥೆಯ ಇತರ ಶಾಖೆಗಳಲ್ಲೇ ಓದಬೇಕು. ಅಲ್ಲಿಯೂ ಇಲ್ಲಿನ ಉಪನ್ಯಾಸಕರೇ ಸರದಿಯಲ್ಲಿ ಪಾಠ ಮಾಡುತ್ತಾರೆ ಎಂದು ಹೇಳಿದರು. ಅವರ ಮಾತಿನಿಂದ ಬೇಸರವಾಗಿ ದಾರಿ ಕಾಣದೆ ದ್ವಿತೀಯ ಪಿಯುಗೆ ಇನ್ನೊಂದು ಕಾಲೇಜಿಗೆ ಸೇರಿಸಿದೆ'.

ಅಂಕಗಳ ಆಧಾರದಲ್ಲಿ ಇಬ್ಬಗೆಯ ನೀತಿ ಅನುಸರಿಸುವ, 'ಪ್ರತಿಷ್ಠಿತ' ಎಂಬ ಹಣೆಪಟ್ಟಿ ಹೊತ್ತು ಪಾಲಕರಿಂದ ಲಕ್ಷಾಂತರ ರೂಪಾಯಿ ವಸೂಲಿ ಮಾಡುವ ಖಾಸಗಿ ಪಿಯು ಕಾಲೇಜುಗಳ 'ಬಂಡವಾಳ'ವನ್ನು ಪಾಲಕ ಬಸವನಗೌಡ ಬಿಚ್ಚಿಟ್ಟ ಬಗೆ ಇದು.

4ನೇ ಪುಟ ನೋಡಿ

ಒಳನೋಟ

ಅಂಕಿಅಂಶಗಳು

1,231 ರಾಜ್ಯದಲ್ಲಿರುವ ಸರ್ಕಾರಿ ಪಿಯು ಕಾಲೇಜುಗಳು

825 ಅನುದಾನಿತ ಕಾಲೇಜುಗಳು

3,567 ಖಾಸಗಿ ಪಿಯು ಕಾಲೇಜುಗಳು

ಚಿತ್ರ ಭಾವು ಪತ್ತಾರ್

ನಿಯಮ ಉಲ್ಲಂಘಿಸಿದ ದೂರುಗಳು ಬಂದಾಗ ಇಲಾಖೆ ಕ್ರಮಕೈಗೊಂಡಿದೆ. ಕಾಲೇಜಿಗೆ ಅನುಮತಿ ಪಡೆದವರು ಇಲಾಖೆ ನಿಗದಿಪಡಿಸಿದ ಬೋಧನಾ ಅವಧಿ ಮುಗಿದ ನಂತರ ಸಿಇಟಿ, ನೀಟ್ ತರಬೇತಿ ನೀಡಲು ಅಭ್ಯಂತರವಿಲ್ಲ. ಖಾಸಗಿ ಕಾಲೇಜುಗಳು ತರಬೇತಿ ನೀಡಲು ಪ್ರತ್ಯೇಕ ನೋಂದಣಿ ಮಾಡಿಕೊಂಡಿವೆ. ಅಧಿಕ ಶುಲ್ಕ ಪಡೆದ ದೂರು ಬಂದರೆ ಕ್ರಮ ಜರುಗಿಸಲಾಗುವುದು.
ಸಿಂಧು ರೂಪೇಶ್, ನಿರ್ದೇಶಕಿ, ಪಿಯು ನಿರ್ದೇಶನಾಲಯ.

ದೂರಿದರೂ ಕ್ರಮವಿಲ್ಲ

ಸರ್ಕಾರ ಕಾಲಕಾಲಕ್ಕೆ ನಿಗದಿ ಮಾಡುವ ಶುಲ್ಕ ಖಾಸಗಿ ಪಿಯು ಕಾಲೇಜುಗಳಿಗೂ ಅನ್ವಯ-ವಾಗುತ್ತದೆ. ಪ್ರಯೋಗಾಲಯ ಶುಲ್ಕ ₹336, ಪ್ರಾಯೋಗಿಕ ಪರೀಕ್ಷೆ ಶುಲ್ಕ ₹330 ಸೇರಿ ಖಾಸಗಿ ಕಾಲೇಜುಗಳು ಪ್ರತಿ ವಿದ್ಯಾರ್ಥಿಯಿಂದ ಪ್ರಥಮ ಹಾಗೂ ದ್ವಿತೀಯ ಪಿಯುಗೆ ಕ್ರಮವಾಗಿ ₹2,126 ಹಾಗೂ ₹3,132 ಪಡೆಯಬೇಕು. ಅದರಲ್ಲೂ ವಿದ್ಯಾರ್ಥಿ ಗಳಿಂದ ಸಂಗ್ರಹಿಸುವ ₹1,330 ಬೋಧನಾ ಶುಲ್ಕದಲ್ಲಿ ಅರ್ಧದಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಬೇಕು.

4ನೇ ಪುಟ ನೋಡಿ

ಮೊದಲ ಹಂತದಲ್ಲಿಯೇ ಮಿತ್ರರಿಗೆ ಸಮಪಾಲು?

ಮೋದಿ ಪ್ರಮಾಣ ಇಂದು • ಸಂಪುಟ ಅಂತಿಮಕ್ಕೆ ಕಸರತ್ತು

• ಮಂಜುನಾಥ ಹೆಬ್ಬಾರ್

ನವದೆಹಲಿ: ರಾಷ್ಟ್ರಪತಿ ಭವನದಲ್ಲಿ ಭಾನುವಾರ ರಾತ್ರಿ 7.15ಕ್ಕೆ ನಡೆಯುವ ಸಮಾರಂಭದಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಎನ್‌ಡಿಎ ಮೈತ್ರಿ ಸರ್ಕಾರದ ಸಂಪುಟಕ್ಕೆ ಸುಮಾರು 30 ಮಂದಿ ಸೇರ್ಪಡೆಯಾಗಲಿದ್ದಾರೆ. ಮೊದಲ ಹಂತದಲ್ಲಿ ಮಿತ್ರ ಪಕ್ಷಗಳ 12ರಿಂದ 15 ಸದಸ್ಯರು ಸಂಪುಟಕ್ಕೆ ಸೇರುವ ಸಂಭವ ಇದೆ.

ಸಂಪುಟಕ್ಕೆ ಸೇರುವವರ ಹೆಸರನ್ನು ಅಂತಿಮಗೊಳಿಸಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಪಕ್ಷದ ನಾಯಕ ಅಮಿತ್ ಶಾ ಅವರು ಶನಿವಾರ ಸರಣಿ ಸಭೆಗಳನ್ನು ನಡೆಸಿದರು. ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರೊಂದಿಗೆ ಸಮಾಲೋಚನೆ ನಡೆಸಿ ಸಚಿವರ ಪಟ್ಟಿಗೆ ಅಂತಿಮ ರೂಪ ನೀಡುವ ಕಸರತ್ತು ನಡೆಸಿದರು. ಬಳಿಕ ಸಂಭಾವ್ಯ ಸಚಿವರ ಪಟ್ಟಿಯನ್ನು ನಿಯೋಜಿತ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲ್ಲಿಸಿದರು. ಮೋದಿ ಅವರು ಈ ಪಟ್ಟಿಯನ್ನು ಭಾನುವಾರ ಬೆಳಿಗ್ಗೆ ರಾಷ್ಟ್ರಪತಿ ಭವನಕ್ಕೆ ಕಳುಹಿಸಲಿದ್ದಾರೆ.

ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅವಧಿ ಜೂನ್ ಅಂತ್ಯಕ್ಕೆ ಕೊನೆಗೊಳ್ಳಲಿದೆ. ಅವರು ಕೇಂದ್ರದ ಸಂಪುಟಕ್ಕೆ ಸೇರುವ ಸಾಧ್ಯತೆ ದಟ್ಟವಾಗಿದೆ. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಶಿವರಾಜ್ ಸಿಂಗ್ ಚೌಹಾಣ್ ಹೆಸರು ಮುಂಚೂಣಿಯಲ್ಲಿದೆ.

ತೆಲುಗು ದೇಶಂ ಪಕ್ಷವು 16 ಹಾಗೂ ಜೆಡಿಯು 12 ಸ್ಥಾನಗಳಲ್ಲಿ ಗೆದ್ದು ಕಿಂಗ್ ಮೇಕರ್‌ಗಳಾಗಿ ಹೊರ ಹೊಮ್ಮಿವೆ. ಟಿಡಿಪಿ ಹಾಗೂ ಜೆಡಿಯುಗೆ ತಲಾ ಒಂದು ಸಂಪುಟ ದರ್ಜೆ ಸೇರಿದಂತೆ ತಲಾ ಮೂರು ಖಾತೆಗಳನ್ನು ನೀಡಲು ಬಿಜೆಪಿ ವರಿಷ್ಠರು ಒಲವು ತೋರಿದ್ದಾರೆ. ಶಿವಸೇನೆಯು (ಏಕನಾಥ ಶಿಂದೆ ಬಣ) ಏಳು ಸ್ಥಾನಗಳಲ್ಲಿ ಜಯ ಸಾಧಿಸಿದೆ. ಈ ಪಕ್ಷಕ್ಕೆ ಒಂದು ಸಂಪುಟ ದರ್ಜೆ ಹಾಗೂ ಒಂದು ರಾಜ್ಯ ಖಾತೆ ನೀಡುವ ಸಾಧ್ಯತೆ ಇದೆ. ಚಿರಾಗ್ ಪಾಸ್ವಾನ್ ನೇತೃತ್ವದ ಎಲ್‌ಜೆಪಿ ಸಹ ಎರಡು ಖಾತೆಗಳನ್ನು ಪಡೆಯಲಿದೆ. ಜೆಡಿಎಸ್, ಅಪ್ನಾ ದಳ, ಆರ್‌ಎಲ್‌ಡಿ, ಎಚ್‌ಎಎಂ, ಜನಸೇನಾ ಪಕ್ಷಗಳಿಗೆ ತಲಾ ಒಂದು ಖಾತೆ ಸಿಗಲಿದೆ.


ಅಮಿತ್ ಶಾ

ರಾಜನಾಥ್ ಸಿಂಗ್

ನಿತಿನ್ ಗಡ್ಕರಿ

ಸಂಭವನೀಯ ಸಚಿವರು

- ಅಮಿತ್ ಶಾ
- ರಾಜನಾಥ್ ಸಿಂಗ್
- ನಿತಿನ್ ಗಡ್ಕರಿ
- ನಿರ್ಮಲಾ ಸೀತಾರಾಮನ್
- ಪಿಯೂಷ್ ಗೋಯಲ್
- ಶಿವರಾಜ್ ಸಿಂಗ್ ಚೌಹಾಣ್ ಅಥವಾ ಜೆ.ಪಿ.ನಡ್ಡಾ
- ಜ್ಯೋತಿರಾದಿತ್ಯ ಸಿಂಧಿಯಾ
- ಧರ್ಮೇಂದ್ರ ಪ್ರಧಾನ್
- ಗಜೇಂದ್ರ ಸಿಂಗ್ ಶೆಖಾವತ್
- ಜಿತಿನ್ ಪ್ರಸಾದ್
- ಡಿ.ಪುರಂದೇಶ್ವರಿ
- ಕಿರಣ್ ರಿಜಿಜು
- ಸುರೇಶ್ ಗೋಪಿ
- ಸಂಜಯ್ ಜೈಸ್ವಾಲ್
- ಜಿ.ಕಿಶನ್ ರೆಡ್ಡಿ ಅಥವಾ ಬಂಡಿ ಸಂಜಯ್
- ಶಂತನು ಠಾಕೂರ್

(ಮೇಲಿನ ಎಲ್ಲರೂ ಬಿಜೆಪಿ)

- ಅನುಪ್ರಿಯಾ ಪಟೇಲ್ (ಅಪ್ನಾದಳ)
- ಜಯಂತ್ ಚೌಧರಿ (ಆರ್‌ಎಲ್‌ಡಿ)
- ಚಿರಾಗ್ ಪಾಸ್ವಾನ್ (ಎಲ್‌ಜೆಪಿ)
- ಲಲನ್ ಸಿಂಗ್ (ಜೆಡಿಯು)
- ಸಂಜಯ್ ಕುಮಾರ್ ಝಾ (ಜೆಡಿಯು)
- ರಾಮನಾಥ್ ಠಾಕೂರ್ (ಜೆಡಿಯು)
- ಜಿತನ್ ರಾಮ್ ಮಾಂಝಿ (ಎಚ್‌ಎಎಂ)
- ಕೆ.ರಾಮ್ ಮೋಹನ್ ನಾಯ್ಡು (ಟಿಡಿಪಿ)

ರಾಜ್ಯದ ಸಂಭಾವ್ಯರು

- ಎಚ್.ಡಿ.ಕುಮಾರಸ್ವಾಮಿ – ಒಕ್ಕಲಿಗ (ಜೆಡಿಎಸ್)
- ಬಸವರಾಜ ಬೊಮ್ಮಾಯಿ ಅಥವಾ ವಿ.ಸೋಮಣ್ಣ – ಲಿಂಗಾಯತ
- ಪ್ರಲ್ಹಾದ ಜೋಶಿ – ಬ್ರಾಹ್ಮಣ
- ಗೋವಿಂದ ಕಾರಜೋಳ – ಪರಿಶಿಷ್ಟ ಜಾತಿ (ಎಡಗೈ)

(ಮೇಲಿನ ಎಲ್ಲರೂ ಬಿಜೆಪಿ)

ಬಿಜೆಪಿ ಬಳಿಯಲ್ಲಿಯೇ ಪ್ರಮುಖ ಖಾತೆಗಳು?

ರೈಲ್ವೆ, ಮಾಹಿತಿ ತಂತ್ರಜ್ಞಾನ ಸೇರಿದಂತೆ ಪ್ರಮುಖ ಖಾತೆಗಳನ್ನು ತಮ್ಮ ಪಕ್ಷಕ್ಕೆ ಬಿಟ್ಟುಕೊಡುವಂತೆ ಟಿಡಿಪಿ ಹಾಗೂ ಜೆಡಿಯು ಪಟ್ಟು ಹಿಡಿದಿವೆ. ಆದರೆ, ಪ್ರಮುಖ ಖಾತೆಗಳನ್ನು ಬಿಜೆಪಿಯೇ ಉಳಿಸಿಕೊಳ್ಳಲಿದೆ.

ಗೃಹ, ಹಣಕಾಸು, ವಿದೇಶಾಂಗ ವ್ಯವಹಾರ, ರಕ್ಷಣೆ, ರಸ್ತೆ ಹಾಗೂ ಹೆದ್ದಾರಿ ವ್ಯವಹಾರ, ರೈಲ್ವೆ, ಮಾಹಿತಿ ತಂತ್ರಜ್ಞಾನ, ಶಿಕ್ಷಣ ಖಾತೆಗಳನ್ನು ಬಿಜೆಪಿ ಬಿಟ್ಟುಕೊಡುವ ಸಾಧ್ಯತೆ ಕಡಿಮೆ. ರೈಲ್ವೆ ಖಾತೆ ಮೇಲೆ ಜೆಡಿಯು ಹಾಗೂ ಮಾಹಿತಿ ತಂತ್ರಜ್ಞಾನ ಖಾತೆ ಮೇಲೆ ಟಿಡಿಪಿ ಕಣ್ಣಿಟ್ಟಿದೆ. ಗ್ರಾಮೀಣಾಭಿವೃದ್ಧಿ ಖಾತೆಯನ್ನು ಜೆಡಿಯುವಿಗೆ ನೀಡುವ ಸಂಭವ ಇದೆ. ಲೋಕಸಭಾಧ್ಯಕ್ಷ ಸ್ಥಾನವನ್ನು ತಮ್ಮ ಪಕ್ಷಕ್ಕೆ ನೀಡುವಂತೆ ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು ಒತ್ತಡ ಹೇರಿದ್ದಾರೆ. ಇದಕ್ಕೆ ಬಿಜೆಪಿ ವರಿಷ್ಠರು ಒಪ್ಪಿಲ್ಲ. ಕೃಷಿ ಖಾತೆ ಮೇಲೆ ಜೆಡಿಎಸ್ ಸಂಸದ ಎಚ್.ಡಿ.ಕುಮಾರಸ್ವಾಮಿ ಕಣ್ಣಿಟ್ಟಿದ್ದಾರೆ. ಈ ಖಾತೆ ಪಡೆಯಲು ಜೆಡಿಯು ಸಹ ಪ್ರಯತ್ನ ನಡೆಸಿದೆ.

ಮಂಜುನಾಥ್‌ಗೆ ಖಾತೆ ಕುಮಾರಸ್ವಾಮಿ ಹಟ

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಜೆಡಿಎಸ್ ಸಂಸದ ಎಚ್.ಡಿ.ಕುಮಾರಸ್ವಾಮಿ ಪಟ್ಟು ಹಿಡಿದಿದ್ದಾರೆ. ಎಚ್.ಡಿ.ದೇವೇಗೌಡರ ಕುಟುಂಬದ ಇಬ್ಬರಿಗೆ ಸಚಿವ ಸ್ಥಾನ ನೀಡಲು ಬಿಜೆಪಿ ವರಿಷ್ಠರು ಒಪ್ಪಿಲ್ಲ.

ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರ ಹೈವೋಲ್ಟೇಜ್ ಕ್ಷೇತ್ರವಾಗಿ ಪರಿವರ್ತನೆ ಹೊಂದಿತ್ತು. ಮಂಜುನಾಥ್ ಅವರು ಡಿ.ಕೆ. ಸುರೇಶ್ ಅವರನ್ನು 2.60 ಲಕ್ಷಗಳ ಭಾರಿ ಅಂತರದಿಂದ ಸೋಲಿಸಿದ್ದರು.

ಮಂಜುನಾಥ್ ಗೆದ್ದರೆ ಕೇಂದ್ರ ಸಚಿವರಾಗುತ್ತಾರೆ ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಪ್ರಚಾರ ನಡೆಸಿದ್ದರು.

ಬೂಸಾ: ದಲಿತ ಚಳವಳಿಗೆ ಸ್ಪಷ್ಟ ರೂಪ 5
ಕಾರ್ಮಿಕರ ಚಿಲ್ಲರೆ ಹಣದುಬ್ಬರ ಇಳಿಕೆ 12

ಚಿನಕುರುಳಿ
ಪ್ರಕಾಶ್ ಶೆಟ್ಟಿ

ರಾಹುಲ್ ವಿರೋಧಪಕ್ಷದ ನಾಯಕ?

ಪ್ರಜಾವಾಣಿ ವಾರ್ತೆ



ನವದೆಹಲಿ: ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ರಾಹುಲ್ ಗಾಂಧಿ ಅವರು ವಹಿಸಿಕೊಳ್ಳಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಶನಿವಾರ ನಿರ್ಣಯ ಅಂಗೀಕರಿಸಿದೆ.

2014ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು 44 ಹಾಗೂ 2019ರಲ್ಲಿ 52 ಸ್ಥಾನಗಳನ್ನು ಗೆದ್ದಿತ್ತು. ಇದರಿಂದಾಗಿ, ಪಕ್ಷಕ್ಕೆ ಅಧಿಕೃತ ವಿರೋಧ ಪಕ್ಷದ ಸ್ಥಾನಮಾನ ಸಿಕ್ಕಿರಲಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾರಣಕ್ಕೆ ಲೋಕಸಭೆಯಲ್ಲಿ ಪಕ್ಷದ ನಾಯಕನಾಗಲು ರಾಹುಲ್ ಒಪ್ಪಿರಲಿಲ್ಲ. ಈ ಸಲ ಪಕ್ಷವು 99 ಸ್ಥಾನಗಳಲ್ಲಿ ಜಯ ಗಳಿಸಿದೆ.

5ನೇ ಪುಟ ನೋಡಿ

ರಾಜ್ಯದಲ್ಲಿ 'ಕೈ' ಹಿನ್ನಡೆ: ಖರ್ಗೆ ಗರಂ

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ನಿರೀಕ್ಷಿತ ಸ್ಥಾನಗಳನ್ನು ಗಳಿಸದೆ ಇರುವುದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಸಾಧನೆ ಪರಾಮರ್ಶೆ ಸಂಬಂಧ ಶನಿವಾರ ಇಲ್ಲಿ ನಡೆದ ಪಕ್ಷದ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿನ ಪಕ್ಷದ ಸಾಧನೆ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಪಕ್ಷವು ಕನಿಷ್ಠ 15ರಿಂದ 16 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ, 9 ಸ್ಥಾನಗಳನ್ನಷ್ಟೇ ಗೆದ್ದಿದೆ. ತೆಲಂಗಾಣದಲ್ಲಿ ಎಂಟು ಕ್ಷೇತ್ರಗಳಲ್ಲಿ ಗೆದ್ದಿದೆ. 'ಹಿಮಾಚಲ ಪ್ರದೇಶದಲ್ಲಿ ಒಂದು ಕ್ಷೇತ್ರದಲ್ಲೂ ಜಯ ಗಳಿಸಲು ಸಾಧ್ಯವಾಗಿಲ್ಲ. ಪಕ್ಷವು ಪುನರುಜ್ಜೀವನದ ಹಾದಿಯಲ್ಲಿದೆ. ಆದರೆ, ಕೆಲವು ರಾಜ್ಯಗಳಲ್ಲಿ ನಮ್ಮ ಸಾಮರ್ಥ್ಯ ಹಾಗೂ ನಿರೀಕ್ಷೆಗೆ ತಕ್ಕಂತೆ ಕಾರ್ಯ-ನಿರ್ವಹಿಸಿಲ್ಲ. ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಿದೆ ಎಂದು ಹೇಳಿದರು.

5ನೇ ಪುಟ ನೋಡಿ

ಸಂಸದೀಯ ಪಕ್ಷಕ್ಕೆ ಸೋನಿಯಾ ಅಧ್ಯಕ್ಷೆ

ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಪಕ್ಷದ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅವಿರೋಧವಾಗಿ ಮರು ಆಯ್ಕೆಯಾಗಿದ್ದಾರೆ.

ಸಂಸತ್‌ನಲ್ಲಿ ಶನಿವಾರ ನಡೆದ ಪಕ್ಷದ ಸಂಸದರ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸದೀಯ ಪಕ್ಷದ ಅಧ್ಯಕ್ಷರಾಗಿ ಸೋನಿಯಾ ಗಾಂಧಿ ಅವರ ಹೆಸರನ್ನು ಪ್ರಸ್ತಾಪಿಸಿದರು. ಈ ಪ್ರಸ್ತಾವವನ್ನು ಗೌರವ್ ಗೊಗೊಯ್, ಕೆ. ಸುಧಾಕರನ್ ಮತ್ತು ತಾರಿಕ್ ಅನ್ವರ್ ಅನುಮೋದಿಸಿದರು.

77 ವರ್ಷದ ಸೋನಿಯಾ ಅವರು ಫೆಬ್ರುವರಿಯಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ.

ನೀಟ್‌ನಲ್ಲಿ 'ಕೃಪಾಂಕ' ಪರಿಶೀಲನೆಗೆ ಸಮಿತಿ

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಪ್ರಸಕ್ತ ವರ್ಷ ನಡೆದಿದ್ದ 'ನೀಟ್' (ಯುಜಿ) ಪರೀಕ್ಷೆಯಲ್ಲಿ 1,500ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೀಡಲಾಗಿರುವ ಕೃಪಾಂಕಗಳನ್ನು ಪರಿಶೀಲಿಸಲು ಶಿಕ್ಷಣ ಸಚಿವಾಲಯ ನಾಲ್ಕು ಸದಸ್ಯರ ಸಮಿತಿ ರಚಿಸಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಶನಿವಾರ ತಿಳಿಸಿದೆ.

ಈ ಬಾರಿಯ ಪರೀಕ್ಷೆಯಲ್ಲಿ ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ ಒಟ್ಟು 67 ಅಭ್ಯರ್ಥಿಗಳು ಮೊದಲ ರ್‍ಯಾಂಕ್ ಪಡೆದಿದ್ದಾರೆ. ಇವರೂ ಸೇರಿದಂತೆ ಕೆಲ ಅಭ್ಯರ್ಥಿಗಳಿಗೆ ಹೆಚ್ಚು ಅಂಕಗಳು ಬಂದಿರುವುದಕ್ಕೆ ನೀಟ್ ಆಕಾಂಕ್ಷಿಗಳು ಅನುಮಾನ ವ್ಯಕ್ತಪಡಿಸಿ, ಆರೋಪಗಳನ್ನು ಮಾಡಿದ ಬೆನ್ನಲ್ಲೇ ಶಿಕ್ಷಣ ಸಚಿವಾಲಯ ಈ ಕ್ರಮ ತೆಗೆದುಕೊಂಡಿದೆ.

ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಮಾಜಿ ಅಧ್ಯಕ್ಷರ ನೇತೃತ್ವದ ಸಮಿತಿಯು ಆರೋಪಗಳನ್ನು ಪರಿಶೀಲಿಸಿ, ವಾರದೊಳಗೆ ತನ್ನ ಶಿಫಾರಸುಗಳ ವರದಿಯನ್ನು ಸಲ್ಲಿಸಲಿದೆ. ಆ ಬಳಿಕ ಅಭ್ಯರ್ಥಿಗಳ ಫಲಿತಾಂಶ ಪರಿಷ್ಕರಿಸಬಹುದು ಎಂದು ಎನ್‌ಟಿಎ ಮಹಾನಿರ್ದೇಶಕ ಸುಬೋಧ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಕೃಪಾಂಕ ನೀಡುವಿಕೆಯು ಪರೀಕ್ಷಾ ಅರ್ಹತಾ ಮಾನದಂಡಗಳ ಮೇಲಾಗಲಿ, ಪ್ರವೇಶ ಪ್ರಕ್ರಿಯೆಯ ಮೇಲಾಗಲಿ ಪರಿಣಾಮ ಬೀರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಆದಾಗ್ಯೂ, ಈ ಸಂಬಂಧ ಯಾವುದೇ ಅಕ್ರಮಗಳು ನಡೆದಿಲ್ಲ ಎಂದು ಪ್ರತಿಕ್ರಿಯಿಸಿದ ಅವರು, ಎನ್‌ಸಿಇಆರ್‌ಟಿ ಪಠ್ಯ ಪುಸ್ತಕಗಳಲ್ಲಿ ಆದ ಬದಲಾವಣೆ ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಸಮಯ ನಷ್ಟವಾದ ಅಭ್ಯರ್ಥಿಗಳಿಗೆ ಕೃಪಾಂಕಗಳನ್ನು ನೀಡಲಾಗಿದೆ. ಈ ಕಾರಣದಿಂದ ಕೆಲವರಿಗೆ ಹೆಚ್ಚಿನ ಅಂಕಗಳು ದೊರೆತಿವೆ ಎಂದು ವಿವರಿಸಿದರು. ಪ್ರಶ್ನೆ-ಪತ್ರಿಕೆ ಸೋರಿಕೆಯ ಆರೋಪಗಳನ್ನೂ ಅವರು ನಿರಾಕರಿಸಿದರು.

6ನೇ ಪುಟ ನೋಡಿ

ಪ್ರಜ್ವಲ್ ಸ್ನೇಹಿತೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಸ್ನೇಹಿತೆಯೊಬ್ಬರಿಗೆ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ನೋಟಿಸ್ ಜಾರಿಮಾಡಿದೆ.

ತಮ್ಮ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗುತ್ತಿದ್ದಂತೆಯೇ ಪ್ರಜ್ವಲ್ ಅವರು ಜರ್ಮನಿಗೆ ತೆರಳಿ ತಲೆಮರೆಸಿಕೊಂಡಿದ್ದರು. ವಿದೇಶದಲ್ಲಿ 34 ದಿನ ವಾಸ್ತವ್ಯ ಮಾಡಿದ್ದರು. ಜರ್ಮನಿಯಲ್ಲಿ ಪ್ರಜ್ವಲ್‌ಗೆ ವಾಸ್ತವ್ಯ ಹಾಗೂ ಓಡಾಟಕ್ಕೆ ಸ್ನೇಹಿತೆಯೊಬ್ಬರು ಆರ್ಥಿಕ ನೆರವು ನೀಡಿದ್ದರು ಎನ್ನಲಾಗಿದೆ. ಆಕೆಗೆ ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

'ವಿದೇಶದಲ್ಲಿದ್ದಾಗ ಪ್ರಜ್ವಲ್ ಅವರ ಎಲ್ಲ ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತ ಮಾಡಲಾಗಿತ್ತು. ಈ ವೇಳೆ ವಿದೇಶದಲ್ಲಿದ್ದ ಸ್ನೇಹಿತೆಯೊಬ್ಬರು ನೆರವು ನೀಡಿದ್ದಕ್ಕೆ ದಾಖಲೆಗಳು ಸಿಕ್ಕಿವೆ. ಅದನ್ನು ಆಧರಿಸಿ, ನೋಟಿಸ್ ಜಾರಿ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

EAST POINT GROUP OF INSTITUTIONS BANGALORE



66+ Programs offered | 10000+ Students | 35000+ Alumni Across the Globe | 100% Placement Assistance

ENGINEERING
CSE | AI & DS | CSE (IOT & CYBER SECURITY)
CSE (AI & ML) | ISE | ECE | MECH | CIVIL | M.TECH
HEALTH SCIENCES
MBBS | MD & MS | B.Sc Nursing | GNM | BPT | B.Pharm
Pharm.D | D.Pharm | M.Pharm | B.Sc - Cardiac Care | MIT
AT & OTT | MLT | BOT | Perfusion | Emergency & Trauma
HIGHER EDUCATION
BBA | BCA | B.COM | BBA - Aviation | MBA | MCA | M.COM
RANKING & RECOGNITIONS
THE TIMES OF INDIA RANKING SURVEY 2021: 7TH TOP PRIVATE ENGINEERING INSTITUTES KARNATAKA | 8TH TOP ENGINEERING INSTITUTES KARNATAKA | 36TH TOP PRIVATE ENGINEERING INSTITUTES ALL INDIA | 46TH TOP ENGINEERING INSTITUTES ALL INDIA | 60TH TOP PLACEMENT INSTITUTES ALL INDIA
AFFILIATIONS & ACCREDITATIONS
Reach us @ +91 720 422 9999
www.eastpoint.ac.in
EAST POINT CAMPUS
Jnanaprabha, Virgo Nagar Post, Avalahalli, Bengaluru - 560 049, Karnataka, India.

40+ PROGRAMS TO CHOOSE FROM..
Study @ PES University, Bengaluru
ADMISSIONS 2024 CLOSING SOON
A+ NAAC ACCREDITED WITH GRADE

COMMERCE
- B.Com (Day / Evening)
- B.Com (Hons.) With ACCA
- B.Com (Hons.) With CMA

MANAGEMENT
- MBA/BBA (Hons.) in Business Analytics
- BBA - General / Sports Management / Hospitality & Event Management

PSYCHOLOGY
- B.Sc. (Hons.)
- M.Sc.

ECONOMICS
- B.Sc. (Hons.)

LAW
- BBA-LLB (Hons.)
- BA-LLB(Hons.)

- Commerce education with industry driven curriculum and student engagement through experiential learning. Options include general Hons degree with emphasis on CA training,ACCA embedded program consisting of 9 paper exemptions and CMA embedded program.
- Management education with wide array of options to choose from with specific emphasis on case-based study, corporate readiness, internships and placements.
- Psychology specializations in forensic psychology, psychotherapy, educational psychology, clinical psychology, counseling psychology and more.
- Focus on econometrics and hands-on experience of software such as EViews, Python, STATA, R, etc... with live cases from industry, leading to practical experience.
- Practical exposure to moot courts, lab sessions, national conferences, simulation and negotiation exercises, seminar courses, compulsory clinical courses, visits to High Court, mediation centres and law firms.
- PESU Scholarships – Rs. 30+ Crore Merit Scholarships given till date. know more from pes.edu/scholarships
- Some leading companies our students are placed at include: Adobe, Amazon, Apple, Netflix, Facebook, Google, Goldman Sachs, Mercedes Benz, Microsoft, Morgan Stanley...

COMMERCE
MANAGEMENT
PSYCHOLOGY
ECONOMICS
LAW
ARCHITECTURE
PERFORMING ARTS
PHARMACY
DESIGN
RESEARCH
ENGINEERING
COMPUTER APPLICATIONS
EXECUTIVE EDUCATION
NURSING
ALLIED HEALTH SCIENCES
PHYSIOTHERAPY

#1 UNIVERSITY IN KARNATAKA
New Universities Under 5 Years, KSURF 2019

8010 297 297 admissions@pes.edu
100 Feet Ring Road, BSK III Stage
Bengaluru 560085
PES UNIVERSITY

ಭಾನುವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಮುನ್ನೋಟ: ಸೋಮವಾರ 30° 20° | ಮಂಗಳವಾರ 30° 21° | ಬುಧವಾರ 30° 21°

ಸೂರ್ಯೋದಯ: 5:52 ಸೂರ್ಯಾಸ್ತ : 6:44 ಚಂದ್ರೋದಯ: ಬೆ. 7:17 ಚಂದ್ರಾಸ್ತ: ರಾ. 8:43 ಶನಿವಾರದ ಹವಾಮಾನ : ಗರಿಷ್ಠ 31° ಕನಿಷ್ಠ 21°

ಪ್ರಜಾವಾಣಿ

ನಗರದಲ್ಲಿ ಶನಿವಾರ ನಡೆದ 'ಪಿಎಂ ಸೂರ್ಯ ಘರ್' ಯೋಜನೆ ಕುರಿತ ಕಾರ್ಯಾಗಾರದಲ್ಲಿ ಬೆಸ್ಕಾಂ ಎಂ.ಡಿ ಮಹಾಂತೇಶ್ ಬೀಳಗಿ ಮಾತನಾಡಿದರು. ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಎಂಎನ್‌ಆರ್‌ಇ ಜಂಟಿ ಕಾರ್ಯದರ್ಶಿ ದಿನೇಶ್ ಜಗದಾಳೆ, ಅಧಿಕಾರಿ ವಲ್ಲಿ ನಟರಾಜ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಸೂರ್ಯ ರಥ ಯಾತ್ರೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಂ ಸೂರ್ಯ ಘರ್' ಯೋಜನೆಗೆ ರಾಜ್ಯದಲ್ಲಿ ಉತ್ತಮ ಸ್ಪಂದನೆ ದೊರೆತಿದ್ದು, 10 ಸಾವಿರ ಅರ್ಜಿಗಳು ಬಂದಿವೆ' ಎಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ತಿಳಿಸಿದರು.

'ಪಿಎಂ ಸೂರ್ಯ್ ಘರ್' ಯೋಜನೆ ಪ್ರಚಾರಕ್ಕಾಗಿ ನಗರದಲ್ಲಿ ಶನಿವಾರ 'ಸೂರ್ಯ ರಥ ಯಾತ್ರೆ'ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರದ pmsuryaghar.gov.in ವೆಬ್‌ಸೈಟ್‌ನಲ್ಲಿ 'ರೂಫ್ ಟಾಪ್ ಸೋಲಾರ್' ವ್ಯವಸ್ಥೆಗೆ ಗೃಹ ಬಳಕೆದಾರರು ಅರ್ಜಿ ಸಲ್ಲಿಸಬಹುದು. ಯೋಜನೆ ಅನುಷ್ಠಾನಕ್ಕೆ ರಾಜ್ಯದಲ್ಲಿ 229 ಖಾಸಗಿ ಪೂರೈಕೆದಾರರು ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಕೇಂದ್ರ ಸರ್ಕಾರದ ಎಂಎನ್‌ಆರ್‌ಇ ಜಂಟಿ ಕಾರ್ಯದರ್ಶಿ ದಿನೇಶ್ ಜಗದಾಳೆ ಮಾತನಾಡಿ, 'ಮನೆಯ ಚಾವಣಿ ಸೋಲಾರ್ ವ್ಯವಸ್ಥೆಯನ್ನು ಗ್ರಿಡ್ ಜೊತೆಗೆ ಸಂಪರ್ಕಿಸಿದರೆ 25 ವರ್ಷ ವಿದ್ಯುತ್ ಬಿಲ್ ಪಾವತಿಸಬೇಕಿಲ್ಲ. ಚಾವಣಿಗೆ ಸೋಲಾರ್ ವ್ಯವಸ್ಥೆ ಅಳವಡಿಸುವುದರಿಂದ ಹೆಚ್ಚುವರಿ ಜಾಗದ ಅಗತ್ಯವಿಲ್ಲ. ನಿರ್ವಹಣೆ ವೆಚ್ಚ ತೀರಾ ಕಡಿಮೆ' ಎಂದು ತಿಳಿಸಿದರು.

ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ, ಬೆಸ್ಕಾಂ ನಿರ್ದೇಶಕ (ಹಣಕಾಸು) ದರ್ಶನ್ ಜೆ. ಇದ್ದರು.

ವಿವಿಧ ಸೋಲಾರ್ ಕಂಪನಿಗಳ ಪ್ರತಿನಿಧಿಗಳೊಂದಿಗೆ 'ಪಿಎಂ ಸೂರ್ಯ ಘರ್' ಯೋಜನೆಯ ಅನುಷ್ಠಾನ ಮತ್ತು ಅದರಲ್ಲಿಯ ತೊಡಕುಗಳ ಬಗ್ಗೆ ಅಧಿಕಾರಿಗಳು ಕಾರ್ಯಾಗಾರ ನಡೆಸಿ ಚರ್ಚಿಸಿದರು.

ಐದು ದಶಕಗಳ ಪುಸ್ತಕ ಕಾಯಕಕ್ಕೆ ಪೂರ್ಣವಿರಾಮ

'ನಾಗಶ್ರೀ ಬುಕ್ ಹೌಸ್' ಇತಿಹಾಸಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ಐದು ದಶಕಗಳಿಂದ ಬೆಂಗಳೂರು ದಕ್ಷಿಣದಲ್ಲಿ ಅಕ್ಷರ ಹಾಗೂ ಜ್ಞಾನದ ಹಸಿವನ್ನು ತಣಿಸಿದ 'ನಾಗಶ್ರೀ ಬುಕ್ ಹೌಸ್' ಇತಿಹಾಸದ ಪುಟ ಸೇರಿದೆ.

ಜಯನಗರದ ನಾಲ್ಕನೇ ಬ್ಲಾಕ್‌ನಲ್ಲಿರುವ ವಾಣಿಜ್ಯ ಸಂಕೀರ್ಣದಲ್ಲಿ 1976ರಲ್ಲಿ ಆರಂಭಗೊಂಡ ಈ ಮಳಿಗೆಯಲ್ಲಿ ಶನಿವಾರ ಕೊನೆಯ ದಿನದ ವ್ಯಾಪಾರ ನಡೆಯಿತು.

ಸಾಹಿತ್ಯಾಸಕ್ತರು ಹಾಗೂ ಪುಸ್ತಕ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು, ಪುಸ್ತಕಗಳನ್ನು ಖರೀದಿಸಿದರು. ಈ ವೇಳೆ ಹಲವರು ಭಾವುಕರಾಗಿದ್ದರು. ಪುಸ್ತಕಗಳ ದಾಸ್ತಾನು ಖಾಲಿ ಮಾಡಲು ಇಂಗ್ಲಿಷ್ ಪುಸ್ತಕಗಳ ಮೇಲೆ ಶೇ 50 ರಷ್ಟು ಹಾಗೂ ಕನ್ನಡ ಪುಸ್ತಕಗಳ ಮೇಲೆ ಶೇ 30 ರಷ್ಟು ರಿಯಾಯಿತಿ ನೀಡಲಾಗಿತ್ತು. ಇದರಿಂದಾಗಿ ಕೊನೆಯ ದಿನ ಹೆಚ್ಚಿನ ವಹಿವಾಟು ನಡೆಯಿತು. 48 ವರ್ಷಗಳ ಮಳಿಗೆಗೆ ಬೀಗ ಹಾಕುವ ಕ್ಷಣಕ್ಕೆ ಹಲವರು ಸಾಕ್ಷಿಯಾಗಿದ್ದರು. ಭಾನುವಾರದಿಂದ ಈ ಮಳಿಗೆ ಕಾರ್ಯ ನಿರ್ವಹಿಸದಿರುವುದು ಸಾಹಿತ್ಯಾಸಕ್ತರ ಬೇಸರಕ್ಕೂ ಕಾರಣವಾಯಿತು.

ಈ ಮಳಿಗೆಯನ್ನು ವೆಂಕಟೇಶ್ ಅವರು ಮುನ್ನಡೆಸಿಕೊಂಡು ಬಂದಿದ್ದರು. ಅವರ ಜತೆಗೆ ಸಹೋದರ ಗುರುಪ್ರಸಾದ್ ಹಾಗೂ ಸೋದರ ಮಾವ ಶ್ರೀಕಂಠಯ್ಯ ಸೇರಿ ಈ ಮಳಿಗೆ ಪ್ರಾರಂಭಿಸಿದ್ದರು. ಇವರಲ್ಲಿ ಶ್ರೀಕಂಠಯ್ಯ ಒಂದೆರಡು ವರ್ಷ ಕೆಲಸ ಮಾಡಿ, ಈ ಸಹೋದರರಿಗೆ ಬಿಟ್ಟುಕೊಟ್ಟು ಪೀಣ್ಯದಲ್ಲಿರುವ ಮುದ್ರಣಾಲಯಕ್ಕೆ ತೆರಳಿದ್ದರು. ಕೆಲ ವರ್ಷಗಳ ಹಿಂದೆ ಗುರುಪ್ರಸಾದ್ ಅವರು ಈ ಉದ್ಯಮದಿಂದ ನಿವೃತ್ತಿ ಪಡೆದಿದ್ದರು. ಈಗ ಅವರ ಸಹೋದರ ವೆಂಕಟೇಶ್ ಅವರಿಗೆ 70 ವರ್ಷವಾಗಿದ್ದು, ಅವರು ಸಹ ನಿವೃತ್ತಿ ಪಡೆಯಲು ನಿರ್ಧರಿಸಿದ್ದಾರೆ. ಕುಟುಂಬದ ಬೇರೆ ಸದಸ್ಯರಿಗೆ ಈ ಉದ್ಯಮದಲ್ಲಿ ಆಸಕ್ತಿ ಇರದಿರುವುದರಿಂದ ಈ ಮಳಿಗೆ ಮುಚ್ಚಲಾಗಿದೆ.

ಈ ಮಳಿಗೆಯು ಜಯನಗರದ ಪ್ರಮುಖ ಸ್ಥಳವಾಗಿ ಗುರುತಿಸಿಕೊಂಡಿತ್ತು. ನಾಡಿನ ಹಲವು ಸಾಹಿತಿಗಳು ಹಾಗೂ ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಈ ಮಳಿಗೆಗೆ ಭೇಟಿ ನೀಡಿದ್ದರು. ಮಳಿಗೆಗೆ ಶನಿವಾರ ಬಂದಿದ್ದವರಲ್ಲಿ ಹಲವರು ತಮ್ಮ ಹಿಂದಿನ ಭೇಟಿಗಳನ್ನು ಸ್ಮರಿಸಿಕೊಂಡರು.

ನಾಗಶ್ರೀ ಬುಕ್ ಹೌಸ್‌ನ ಕೊನೆಯ ದಿನವಾದ ಶನಿವಾರ ಪುಸ್ತಕಗಳನ್ನು ಖರೀದಿಸಿದ ಸಾಹಿತ್ಯಾಸಕ್ತರು ಮಳಿಗೆ ಮಾಲೀಕ ವೆಂಕಟೇಶ್ ಅವರಿಂದ ಹಸ್ತಾಕ್ಷರ ಪಡೆದುಕೊಂಡರು –ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ದಾಸ್ತಾನು ಬಹುತೇಕ ಖಾಲಿ

'ಈ ಉದ್ಯಮ ಈಗ ಸಾಕು ಅನಿಸಿದೆ. ಇನ್ನು ಎಷ್ಟು ದಿನ ದುಡಿಯುವುದು ಎಂಬ ಕಾರಣಕ್ಕೆ ಈ ನಿರ್ಧಾರಕ್ಕೆ ಬಂದು, ನಿವೃತ್ತಿ ಪಡೆಯುತ್ತಿದ್ದೇನೆ. ಒಂದೂವರೆ ವರ್ಷದ ಹಿಂದೆಯೇ ಈ ಬಗ್ಗೆ ಚಿಂತಿಸಲಾಗಿತ್ತು. ಕಾರಣಾಂತರಗಳಿಂದ ಬೇರೆಯವರಿಗೂ ಈ ಮಳಿಗೆಯನ್ನು ನೀಡಲು ಸಾಧ್ಯವಾಗಲಿಲ್ಲ' ಎಂದು ವೆಂಕಟೇಶ್ ತಿಳಿಸಿದರು.

'48 ವರ್ಷಗಳ ವ್ಯಾಪಾರದಿಂದ ದೊಡ್ಡ ಗ್ರಾಹಕ ಕೂಟವನ್ನು ಹೊಂದಲಾಗಿತ್ತು. ರಿಯಾಯಿತಿ ದರದ ಮಾರಾಟದಿಂದ ದಾಸ್ತಾನು ಬಹುತೇಕ ಖಾಲಿಯಾಗಿದೆ. ಉಳಿದ ಪುಸ್ತಕಗಳನ್ನು ಏನು ಮಾಡಬೇಕೆಂದು ಯೋಚನೆ ಮಾಡಬೇಕಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ನಟ ಹೊನ್ನವಳ್ಳಿ ಕೃಷ್ಣಗೆ 'ಡಾ. ರಾಜ್‌ಕುಮಾರ್' ಪ್ರಶಸ್ತಿ

ಬೆಂಗಳೂರು: ಕುವೆಂಪು ಕಲಾನಿಕೇತನ ನೀಡುವ 'ನಟ ಸಾರ್ವಭೌಮ ಡಾ. ರಾಜ್‌ಕುಮಾರ್ ಪ್ರಶಸ್ತಿ'ಗೆ ಚಲನಚಿತ್ರ ಹಾಸ್ಯ ನಟ ಹೊನ್ನವಳ್ಳಿ ಕೃಷ್ಣ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹10 ಸಾವಿರ ನಗದು, ಬೆಳ್ಳಿ ಪದಕ ಒಳಗೊಂಡಿದೆ. 'ನಗರದ ಜೆ.ಸಿ. ರಸ್ತೆಯ ಕನ್ನಡ ಭವನದ ನಯನ ಸಭಾಂಗಣದಲ್ಲಿ ಜೂನ್ 18ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಕುವೆಂಪು ಕಲಾನಿಕೇತನದ ಅಧ್ಯಕ್ಷ ಕುವೆಂಪು ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಮಕ್ಕಳಿಗೆ ಸಂಸ್ಕೃತಿ, ಇತಿಹಾಸದ ಅರಿವು ಮೂಡಿಸಿ'

ಯಲಹಂಕ: ಸಮಾಜದಲ್ಲಿ ಆದರ್ಶ ಮತ್ತು ಮೌಲ್ಯಗಳು ಅಳಿವಿನ ಅಂಚಿಗೆ ತಲುಪುತ್ತಿರುವ ಇಂತಹ ಕಾಲಘಟ್ಟದಲ್ಲಿ ಮಕ್ಕಳಲ್ಲಿ ನಮ್ಮ ಸಂಸ್ಕೃತಿ, ಇತಿಹಾಸ ಹಾಗೂ ಪರಂಪರೆಯ ಬಗ್ಗೆ ಅರಿವು ಮೂಡಿಸಬೇಕಾದುದು ಅಗತ್ಯ ಎಂದು ಅದಮ್ಯ ಚೇತನ ಫೌಂಡೇಷನ್ ಸಹ ಸಂಸ್ಥಾಪಕಿ ತೇಜಸ್ವಿನಿ ಅನಂತಕುಮಾರ್ ಅವರು ಅಭಿಪ್ರಾಯಪಟ್ಟರು.

'ಮನೆಮನೆಗೂ ರಾಮಾಯಣ–ಪ್ರತಿ ಮಗುವಿಗೂ ರಾಮಾಯಣ' ಶೀರ್ಷಿಕೆಯಡಿ ಹೊನ್ನೇನಹಳ್ಳಿಯ ವಿಶ್ವವಿದ್ಯಾಪೀಠ ಶಾಲೆಯಲ್ಲಿ ಆಯೋಜಿಸಿದ್ದ 'ರಾಮಾಯಣ ದರ್ಶನ–ಪ್ರವಚನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ವೇಳೆ ಶಾಲೆಯ ನಿರ್ದೇಶಕಿ ಸುಶೀಲಾ ಸಂತೋಷ್, ಚಾಣಕ್ಯ ವಿವಿಯ ಸಹ ಪ್ರಾಧ್ಯಾಪಕ ನವೀನ್ ಭಟ್ ಗಂಗೋತ್ರಿ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Mysore Road

MYSORE ROAD AVILABLE SPACIOUS 3BHK FLAT FOR LEASE RS. 32 LACS WITH CARPARKING NEGOTIABLE: 9738223432

Mysore

LUXURIOUS 2 BHK FURNISHED APARTMENT 1270 SQFT WITH COVERED PATIO AND 2 CAR PARKING SPACES FOR SALE IN PRIME YADAVGIRI, MYSORE. CONTACT: 9845578081 7907061006

Rajarajeshwari Nagar

SALE 2BHK 1170Sft, in Deccan Heights Ideal Homes Rajarajeshwarinagar Rs.55Lakhs: 9448508410

Varthur

VARTHUR: 2 BHK 984 Sqft Flat for sale @ Rs 55 Lakhs P Square Relais Aptmt Near Federal Bank Muthsandra Main Road. 7090396915

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote-Chintamani-Malur surroundings, minimum Road width 40 feet plus. Flexible Payment. 9916592400

Out-Station

LAND FOR SALE Bangalore to Hassan Highway Kunigal 1.5 Acre Nagamangala 5 Acre Roysrealty 9980072843

Agricultural Land

Doddaballapura

8.5 ACRES Agriculture Land 75kms from Hebbal Beyond Doddaballapura with Yielding Mango, Arecanut, Coconut, Teak and Neem Trees. General Property with Clear Titles: 9008943416

Commercial Building

J C Road

COMMERCIAL BUILDING For SALE: 700Sftx 3 Floors 2100 Sft, Off Lalbagh Road, Bangalore-27. Call: 98865-87648

Commercial Land

Banashankari

"40X60 COMMERCIAL property for sale Hosakerehalli 100 feet Ring Road Banashankari 3rd Stage. 9845500019/ 7019314962"

Out-Station

HOSUR TOWN TamilNadu- Prime Commercial One Acre Land For Sale near Lavanya Wedding Hall, Mathigiri Circle, 80FeetRoad, Facing North 16lakh Per.cent Cheque Payment only. Contact 9845036826 Bangalore.

Commerical

Bannerghatta Road

SALE EXCELLENT Commercial East Facing Site 50x85 Panduranga Nagar, 60' Road, 10,80,00,000/-, Suraj Realtors- 9845232711

Hassan

COMMERCIAL ALIENATION Land For Sale Hassan - Beluru NH-373 Huvinahalli Kaval 90,000 Sft Contact: 9448040927

Hebbal

ON BELLARY Main-Road Commercial Property East 25,000sft Converted Near Nandi Upchar Hotel Clear Titles, 9738111222 9341260828

Jayanagar

SALE COMMERCIAL 100x100 Jayanagar 2nd Block on 100feet Road With old-House Excellent Location Call:9844135068 9066399102

JAYANAGARA 5TH Block, Commercial Site Sale, 80x120,North Facing, 100 Feet Road, 38 Crores: 9845212877

Vidyaranyapura

SITE BBMP A Katha 40x30, 20X30 SEMI COMMERCIAL SF 9200/- THINDLU LAKE SHOW GARDEN: 8296895858

Kempegowda Layout

SEMI-COMMERCIAL SITE SALE, NADAPRABHU KEMPEGOWDA LAYOUT 8th Block 'D' SECTOR 165X100, W/F, ₹.4500/-. Contact: 9686469799

Home Finance

General

INVESTORS REQUIRED with 2- 4 Cr for 15 Acre Layout Development Residentially Converted Land. Good Returns 12 Months Period: 9902604714

Residential/ Commercial

R T Nagar

APARTMENT SALE R.T.NAGAR 16 FLATS (5000 Sq.ft PLOT) A-KHATHA, LIFT AND PARKING AVAILABLE CONTACT-9742256737

REAL ESTATE BUYING

Joint Development

Joint Venture

JOINT DEVELOPMENT:BUILDERS AND INVESTORS GROUP WITH MORE THAN 25 YEARS EXPERIENCE LOOKING FOR SITES FROM 2400 SFT TO 25000 SFT IN JAYANAGAR AND BSK 2ND STAGE FOR RESIDENTIAL/COMMERCIAL APARTMENT PROJECT. CALL:+917411382184

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout, Kempegowda Layout & any BDA Katha Sites, immediate settlement. Genuine Sellers Contact: 9972223222, 9606632777

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th Stage, Balaj`Layout, Agent Excuse Contact: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

WANTED SITES 30X40 40X60 50X80 NAGARBHAVI RAJAJINAGAR HOUSING Co. OPERATIVE SOCIETY VISHWESHWARAIAH LAYOUT NGEF:8105688602

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVILWORKS. 9448572697

RENTAL PROPERTIES

Accommodation Available

Commercial

CHAMARAJPET, AV Towers, Mysore Road Ground, Third`Floors Occupied. First For Commercial Operations. Second with`Office Setup. Contact 9341260793.

INDEPENDENT FURNISHED building having basement fully equipped with kitchen, utensils, store, dining hall, Ground and First floors having 22 rooms & staff quarters provided with attached bath room lift located in Gurukula Vidya Kendra compound (near Stonehill International School) Papanahalli Bangalore North Taluk. a serene atmosphere surrounded by lush greenery suitable for running PG, Old Age Home, Hostel, Guesthouse, etc. available for lease on monthly rental basis. Interested parties may contact No. 9845013408. Dr. N. Ramaiah for inspection and other details.

RENT: OFFICE, Industrial Warehouse, Institutions and Garment Kanakapura road near Metro Cash & carry, Ground+4 floors, Each floor-3500 ft. Ph: 9844060642/ 9480333257.

1ST FLOOR Commercial office Dr.Rajkumar Road 3000sqft Fully Furnished with all Good Facilities Ph:9353242472, 9845052222

House

KORAMANGALA GROUND Floor- 2 Bedrooms, First Floor- Party Hall, Independent House. Rent: 80,000/- Vegetarian Family. 9845855663.

RENT: GIRINAGAR 2BHK DH FF Corporation Water semifurnished and 2BHK GF Hanumanthnagar. Owner: 78925-30410/ 9448809902

Accommodation Wanted

Flat

REQUIRED ONE/TWO BHK units full building in North/West Bengaluru for premium service apartments on Long Lease. Contact 8762380701.

EDUCATIONAL

General

FOR STUDENTS: Small Lectures Dairy/ Poultry/ Sheep/ Dogs. Away from Academics. Doctor Swamy, Veterinarian, Vamshadhara Skills:- 9342247637.

JOB OPPORTUNITIES

Accounts & Finance

AASHIRVAD Develop | Build | Sale
WANTED ACCOUNTANT (Female)
Minimum 2-3 Years Experience
Attractive Salary
Contact : Kengeri Satellite Town, Bengaluru - 560 060
95385 45101

WANTED ACCOUNTANT B.Com with minimum 03 Years experience,working knowledge of Tally and MS Office for immediate appointment at The Auro School (Managed by Sri Aurobindo Complex Trust), Kanakapura Main Road. Contact:The Secretary, Mob: 9880295312, or send your resume to E-mail: sactmsf@gmail.com

"REQUIRED 2-3YEARS Experienced ACCOUNTANT" for`Shekar Hospital`-Bull temple`Road, Bangalore-19. Attractive Salary`offered. 080-22421144/ 9901927970/ 9740095750, Email: shekharhospitalbtr@gmail.com

Engg/ Production Technical

REQUIRED ANY Graduate for Marketing. Diploma in Electricals for Technical Support. Contact: The Industrial & Laboratory Equipment Co., 9448039931 or ilebgl123@gmail.com

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Teachers/ Professors

URGENTLY REQUIRED: Experienced TEACHERS who handle multiple subjects Science/Maths, Pre-Primary teachers and Physical Trainers (Male/Female) for WISDOM INTERNATIONAL SCHOOL, Shanthinagar, Bangalore. Walk-in interview on Monday 10th.June 2024. Contact-9243104680.

FEMALE SCIENCE TEACHER Wanted for a Primary English School in Vyalikaval, Bangalore. 8884128882 (WhatsApp only)

IMPACT INSTITUTIONS
WANTED LECTURERS
With BE in Electrical Engineering
WALK IN INTERVIEW
On Monday 10th June 2024
VENUE: IMPACT Campus, Kodigehalli, Sahakaranagar, Bengaluru - 560092
Call: 94487 48297
IMP-24504

WANTED ENGLISH MEDIUM TRAINED GRADUATES to teach English/ Social Science for Primary P.E.T/ N.T.T. trained/ Computer Science graduates. Lady graduates interested in teaching can also apply. Age limit- not above 40 years. Salary with P.F & E.S.I Facilities. Contact in Person (10.00 a.m -3.00 p.m on all working days). Secretary, Deccan Educational Society, No. 95, 3rd cross, Srirampuram, Bengaluru- 560021 (near sampige Theatre, Malleswaram). Mob: 7094390262.

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

JNANAVAHINI PUBLIC school Opp Dr. Rajkumar Punya Bhoomi Nandini Layout, Wanted Teachers Trained and Qualified Primary English Teacher Required Handsome Salary is Offered Contact: 6364241555/ 9611061071

WANTED TEACHERS: MATHS, SOCIAL, KANNADA, COMPUTERS. ABDUL BARI'S ENGLISH HIGH SCHOOL, Haines Road, Near Coles-Park. WhatsApp:9353111888

St Joseph's University
#36, Lalbagh Road, Bengaluru - 560 027
invites applications for likely positions for the academic year 2024-25:
Associate/ Assistant Professors in:
*Electronics
Qualifications: PhD / NET or KSET with relevant teaching experience preferred.
Apply with all your research details.
To apply, use the Google Form on the University website: www.sju.edu.in (in the 'Announcements' section) on or before Sunday, 16th June 2024.

WANTED ENGLISH MEDIUM Experienced Masters to teach English/ Social Science for VIII & IX Standards. Timings: 6.00 p.m to 9.00 p.m. Part-time Yoga/ Carnatic instrumental music/ Dance. Age limit: 30-35 years. Contact in person between 5.00 p.m to 6.00 p.m (Monday to Friday)- Secretary, Deccan Educational Society, No. 95, 3rd Cross, Srirampuram, Bengaluru- 560021 (near sampige Theatre, Malleswaram). Mob: 7094390262.

BRIGHT WAY SCHOOL TEACHERS REQUIRED ENGLISH, HINDI, COMPUTER DANCE. B.A/M.A, B.Ed. BCA/MCA Walk-in interview Retired teachers can also apply. On or before 12-06-2024 between 10.00 To 3.00 p.m 080-263926720/ 9241204762

REQUIRES LADY Teacher For High School & Primary English, P.E (Male)& Computer. Hebbal, Kempapura Contact: 9008981637

TEACHERS WANTED: Wanted Experined, Qualified and Trained Teachers to Teach High School and PU College for Computers, Mathematics and Social Science. Contact:- S.D.A. High School & PU College. Phone:- 9845606243. Email:- sdapucollege@gmail.com

HERITAGE PUBLIC SCHOOL Srinidhi Layout, J.P.Nagar`8th Phase, Konanakunte Bengaluru-62. Requires Kindergarten Co-Ordinator and Social Science Teacher immediately. Attractive Salary. Call: 080- 26322111, 9901733776.

SVN ENGLISH High School, Thanisandra Main Road, Nagawara, Bangalore-77, (opposite elements mall). Requires Qualified TEACHERS Maths & Social for High School Call: 9611807494/ 080-25446756 Mail: svnschool@gmail.com

SRI-AYYAPPAN EDUCATIONAL INSTITUTIONS JAYAMAHAL- BANGALORE-46 (Phone: 23433008) WANTED TRAINED GRADUATE TEACHERS: For KANNADA, SOCIAL-SCIENCE, "IMMEDIATE APPOINTMENT"

DR BANWARI Lal Sharma Gurukul (CBSE, English Medium) is looking for teachers of pre-primary , Primary Hindi, TGT English, TGT Computer , PTI. Please send your cv to blsgurukul@gmail.com, care@morselindia.org or WhatsApp 7379266808 or 7390049778

Wanted

REQUIRED SHOWROOM and Field MALE SALES EXECUTIVE. Age Limit 25-45 Years. For Swastik Ceramics Co. Jayanagar 5th Block. Contact: 9741040290

MORE Classifieds Ads on Subsequent Pages

MATRIMONIAL

Grooms Wanted

Punjabi

PUNJABI/HINDU, 29, 165 cms, B.Design, working as a Senior Experience Consultant (USA based MNC), currently based in Bangalore. Parents seeks professionally educated Groom from well settled Punjabi/Hindu family. WhatsApp 8779533962.

Brahmin

Seeking a Highly Educated and Professional Groom for Telugu Brahmin Bride
We are looking for a highly smart and working groom from the Brahmin community (Telugu, Kannada) from India/ abroad, aged between 27-30 years, with an educational qualification of MS or MBA (from India or abroad). The bride is a 26-year-old Telugu Smartha Brahmin, 5'7", smart, tall, fair, and beautiful. She has completed her Masters from a university of repute in USA. The girl's father is an executive at an MNC, and her mother, who was also an executive at an MNC, is now a homemaker. Interested and eligible grooms, please write to **shnago2024@gmail.com** for further details.

BUSINESS

Business to Business

Finance

QUICK FINANCE Arranged from NBFCs/ Private. Reasonable interest. No advance payments. Vamshadhara Project Services:- 9342247637.

PERSONAL

Change of Name

I, KUSUMA. K.K w/o. Shivanand. R residing at No.24/3, Shivakrupa, 4th cross, Papanna Block, Bangalore- 560032 have changed my name to KUSUMA. K vide affidavit 06.06.2024 notary G.B. Turamari, Bengaluru. Henceforth I shall be called as KUSUMA. K only.

DH DECCAN HERALD Classifieds More value, more impact
NAME CHANGE ಪ್ರಜಾವಾಣಿ
@50/-* PER WORDS
Book your Name Change Ad in DH All Karnataka + Prajavani Bengaluru City All Days
www.dhclassifieds.com BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

ಅರ್ಜಿ ಸಲ್ಲಿಸಿ ಒಂದೂವರೆ ವರ್ಷವಾದರೂ ಆರಂಭವಾಗದ ಪ್ರಕ್ರಿಯೆ

ವರ್ಗಾವಣೆ: ಪೊಲೀಸರಿಗೆ ಕಷ್ಟ

• ಆದಿತ್ಯ ಕೆ.ಎ.

ಬೆಂಗಳೂರು: ಅಂತರ ಜಿಲ್ಲಾ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿ ಒಂದೂವರೆ ವರ್ಷ ಕಳೆದಿದ್ದರೂ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ವರ್ಗಾವಣೆ ಭಾಗ್ಯ ದೊರೆತಿಲ್ಲ.

ವಯಸ್ಸಾದ ಪೋಷಕರ ಯೋಗಕ್ಷೇಮ ನೋಡಿಕೊಂಡು ಸ್ವಂತ ಊರುಗಳಲ್ಲಿಯೇ ಕೆಲಸ ಮಾಡಲು ಬಯಸಿ ಅರ್ಜಿ ಸಲ್ಲಿಸಿದ್ದ ನೂರಾರು ಕಾನ್‌ಸ್ಟೆಬಲ್‌ಗಳು (ಪಿ.ಸಿ ಸಾಮಾನ್ಯ) ವರ್ಗಾವಣೆಗಾಗಿ ಕಾದಿದ್ದಾರೆ. ಪೊಲೀಸ್ ಇಲಾಖೆ ಆರಂಭಿಸಿದ ಆನ್‌ಲೈನ್ ಪೋರ್ಟಲ್‌ನಲ್ಲಿ ರಾಜ್ಯದ 3,286 ಮಂದಿ ಪರಸ್ಪರ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಯಾರಿಗೂ ವರ್ಗಾವಣೆ ಪತ್ರ ಕೈಸೇರಿಲ್ಲ.

'ಅರ್ಜಿಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕಳೆದ ಮೇ 31ರಂದು ಪೊಲೀಸ್ ಮಹಾನಿರ್ದೇಶಕರಿಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಪತ್ರ ಬರೆದಿದ್ದರು. ಆದರೂ, ಯಾವುದೇ ಪ್ರಕ್ರಿಯೆ ಆರಂಭವಾಗಿಲ್ಲ' ಎಂದು ಸಿಬ್ಬಂದಿಯೊಬ್ಬರು ಹೇಳಿದರು.

'ಪತಿ– ಪತ್ನಿ ಪ್ರಕರಣದಲ್ಲಿ ಮೂರು ತಿಂಗಳ ಹಿಂದೆಯೇ ರಾಜ್ಯದ 87 ಮಂದಿ ಪರಸ್ಪರ ವರ್ಗಾವಣೆ ಆಗಿದ್ದಾರೆ. ಸಾಮಾನ್ಯ ಕಾನ್‌ಸ್ಟೆಬಲ್ ಮಾತ್ರ ವೇದನೆ ಅನುಭವಿಸುವಂತಾಗಿದೆ' ಎಂದು ಅಳಲು ತೋಡಿಕೊಂಡಿದ್ದಾರೆ.

ರದ್ದುಗೊಂಡಿದ್ದ ಅಂತರ ಜಿಲ್ಲಾ ವರ್ಗಾವಣೆಗೆ 2022ರಲ್ಲಿ ಮತ್ತೆ ಸರ್ಕಾರ ಅವಕಾಶ ನೀಡಿತ್ತು. ಹಿಂದಿನ ಪೊಲೀಸ್ ಮಹಾನಿರ್ದೇಶಕರು (2023ರ ಮಾರ್ಚ್ 3) ಕೆಎಸ್‌ಪಿ ಪೋರ್ಟಲ್ ತೆರೆದು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದರು. 7 ವರ್ಷ ಪೂರೈಸಿದ ಸಾಮಾನ್ಯ ವರ್ಗದ ಸಿಬ್ಬಂದಿ ಹಾಗೂ 3 ವರ್ಷ ಪೂರೈಸಿದ ಮಾಜಿ ಸೈನಿಕ ಪೊಲೀಸ್ ಸಿಬ್ಬಂದಿ ಅರ್ಜಿ ಸಲ್ಲಿಸಿದ್ದರು. ಮೂರು ತಿಂಗಳಿಗೊಮ್ಮೆ, ಮೊದಲು ಅರ್ಜಿ ಸಲ್ಲಿಸಿದವರಿಗೆ ಅವಕಾಶ ನೀಡಲಾಗುವುದು ಎಂದು ಷರತ್ತು ವಿಧಿಸಲಾಗಿತ್ತು. ಆದರೆ, ಯಾವುದೇ ಪ್ರಕ್ರಿಯೆ ನಡೆದಿಲ್ಲ ಎಂದು ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

'ರಜೆಯೂ ಸಿಗುತ್ತಿಲ್ಲ': 'ಬೇರೆ ಬೇರೆ ಕಾರಣಕ್ಕೆ ಕುಟುಂಬದವರನ್ನು ನಾವು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಕರೆತಂದಿಲ್ಲ. ವಯಸ್ಸಾದ ತಂದೆ –ತಾಯಿ ಮನೆಯಲ್ಲಿದ್ದಾರೆ. ಅವರಿಗೆ ಚಿಕಿತ್ಸೆ ಕೊಡಿಸಬೇಕು. ಒತ್ತಡದ ಕರ್ತವ್ಯದಿಂದ ಅಗತ್ಯ ಸಂದರ್ಭಗಳಲ್ಲಿ ರಜೆಯೂ ಸಿಗುತ್ತಿಲ್ಲ. ನಾವು ಬಯಸಿದ ಜಿಲ್ಲೆಗಳಿಗೆ ವರ್ಗಾವಣೆ ಮಾಡಿಕೊಡಿ' ಎಂದು ಸಿಬ್ಬಂದಿ ಪಟ್ಟು ಹಿಡಿದಿದ್ದಾರೆ.

'ಹೊಸದಾಗಿ ಸೇವಾ ಜ್ಯೇಷ್ಠತೆ'

'ಒಂದು ಪೊಲೀಸ್ ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆಯಾದರೆ ಅಂತಹ ಸಿಬ್ಬಂದಿ, ತಮ್ಮ ಸೇವಾ ಜ್ಯೇಷ್ಠತೆ ಬಿಟ್ಟುಕೊಡಬೇಕು. ಆ ಘಟಕದ ಸೇವಾ ಹಿರಿತನಕ್ಕೆ ಅನುಗುಣವಾಗಿ ಸೇವಾ ಜ್ಯೇಷ್ಠತೆ ಹೊಂದಲು ಬದ್ಧರಾಗಿರಬೇಕು' ಎಂಬ ಷರತ್ತು ಸಹ ವಿಧಿಸಲಾಗಿತ್ತು.

ಅದಕ್ಕೂ ನಾವು ಒಪ್ಪಿ ಅರ್ಜಿ ಸಲ್ಲಿಸಿದ್ದೇವೆ. ನಗರ ಪ್ರದೇಶಗಳಲ್ಲಿ ಎಂಟು ಅಥವಾ ಹತ್ತು ವರ್ಷವಾದ ಮೇಲೆ ಸಹಜವಾಗಿಯೇ ಬಡ್ತಿ (ಹೆಡ್ ಕಾನ್‌ಸ್ಟೆಬಲ್) ದೊರೆಯುತ್ತದೆ. ಸ್ವಂತ ಊರಿಗೆ ತೆರಳಲು ಬಡ್ತಿಯನ್ನೇ ತ್ಯಾಗ ಮಾಡುತ್ತಿದ್ದೇವೆ. ಆದರೂ, ಇಲಾಖೆ ಪ್ರಕ್ರಿಯೆ ಆರಂಭಿಸಿಲ್ಲ' ಎಂದು ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

> **ಹಂತ ಹಂತವಾಗಿ ವರ್ಗಾವಣೆ ಮಾಡಿದರೆ ಬಂದೋಬಸ್ತ್ ಕೆಲಸಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ಪತಿ–ಪತ್ನಿ ಪ್ರಕರಣದಲ್ಲಿ ವರ್ಗಾವಣೆ ಮಾಡಿ, ನಮಗೆ ಅನ್ಯಾಯ ಮಾಡಲಾಗುತ್ತಿದೆ**
> ಹೆಸರು ಹೇಳಲು ಇಚ್ಛಿಸದ ಕಾನ್‌ಸ್ಟೆಬಲ್

ವರ್ಗಾವಣೆ ಕೋರಿರುವ ಅರ್ಜಿಗಳ ವಿವರ

ಜಿಲ್ಲೆ	ಹೊರಕ್ಕೆ	ಒಳಕ್ಕೆ
ಬೆಂಗಳೂರು ನಗರ	1,589	50
ಮಂಗಳೂರು ನಗರ	212	1
ಹುಬ್ಬಳ್ಳಿ-ಧಾರವಾಡ ನಗರ	44	123
ಮೈಸೂರು ನಗರ	37	169
ಕಲಬುರಗಿ ನಗರ	5	116
ಬೆಳಗಾವಿ ನಗರ	46	202
ಬೆಂಗಳೂರು ಜಿಲ್ಲೆ	73	8
ರಾಮನಗರ	72	8
ತುಮಕೂರು	103	24
ಮೈಸೂರು ಜಿಲ್ಲೆ	39	18
ಹಾಸನ	7	129
ಕೊಡಗು	58	4
ಮಂಡ್ಯ	73	7
ದಕ್ಷಿಣ ಕನ್ನಡ ಜಿಲ್ಲೆ	175	3
ಉಡುಪಿ	82	3
ಉತ್ತರ ಕನ್ನಡ	122	40
ಶಿವಮೊಗ್ಗ	112	83
ಕಲಬುರಗಿ	45	138
ಬೀದರ್	45	22
ಎಸ್‌ಪಿ ರೈಲ್ವೆ	56	1

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿರುವ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಸರ್ಕಾರಿ ಶಾಲಾ– ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ಶೇ 95ಕ್ಕಿಂತ ಹೆಚ್ಚು ಅಂಕಗಳಿಸಿದ ಮತ್ತು ಸರ್ಕಾರೇತರ ಶಾಲಾ– ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ಶೇ 98 ಅಂಕ ಗಳಿಸಿದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ವಿದ್ಯಾರ್ಥಿಗಳು ಸ್ವ-ವಿವರ, ಶಾಲಾ ಕಾಲೇಜಿನ ವಿವರ, ಅಂಕಪಟ್ಟಿ, ಜಾತಿ ಪ್ರಮಾಣ ಪತ್ರಗಳೊಂದಿಗೆ ಅರ್ಜಿಯನ್ನು ಪ್ರತಿಭಾ ಪುರಸ್ಕಾರ ವಿಭಾಗ, ನಾಡಪ್ರಭು ಕೆಂಪೇಗೌಡ ಭವನ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ.ಪುರ, ಬೆಂಗಳೂರು-4 ವಿಳಾಸಕ್ಕೆ ಜೂನ್ 15ರ ಒಳಗೆ ಸಲ್ಲಿಸಿ, ಸ್ವೀಕೃತಿ ಪಡೆದುಕೊಳ್ಳಬೇಕು.

ಪ್ರತಿಭಾ ಪುರಸ್ಕಾರದ ಅರ್ಜಿಗಳನ್ನು ಸಂಘದ ಕೇಂದ್ರ ಕಚೇರಿಯ ಪ್ರತಿಭಾ ಪುರಸ್ಕಾರ ವಿಭಾಗದಲ್ಲಿ ಪಡೆದುಕೊಳ್ಳಬಹುದು. ರಾಜ್ಯ ಒಕ್ಕಲಿಗರ ಸಂಘದ ವೆಬ್‌ಸೈಟ್ www.rvsangha.org ನಲ್ಲಿಯೂ ಪಡೆಯಬಹುದು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ.ಹನುಮಂತಯ್ಯ, ಪ್ರಧಾನ ಕಾರ್ಯದರ್ಶಿ ಎಚ್.ಸಿ. ಜಯಮುತ್ತು ತಿಳಿಸಿದ್ದಾರೆ.

ಕುಂಟೆಗೆ ಉರುಳಿದ ಕಾರು: ನಾಲ್ವರಿಗೆ ಗಾಯ

ಚನ್ನಪಟ್ಟಣ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ವೇಗವಾಗಿ ಚಲಿಸುತ್ತಿದ್ದ ಕಾರೊಂದು ಆಯತಪ್ಪಿ ರಸ್ತೆ ಬದಿಯಲ್ಲಿದ್ದ ಕುಂಟೆಗೆ ಉರುಳಿದೆ. ತಾಲ್ಲೂಕಿನ ಸಂಕಲಗೆರೆ ಗೇಟ್ ಬಳಿ ಶನಿವಾರ ಬೆಳಿಗ್ಗೆ ಈ ಘಟನೆ ನಡೆದಿದ್ದು, ಕಾರಿನಲ್ಲಿದ್ದ ನಾಲ್ವರು ಗಾಯಗೊಂಡಿದ್ದಾರೆ. ಬೆಂಗಳೂರು ಕಡೆಯಿಂದ ಮೈಸೂರು ಕಡೆಗೆ ಚಲಿಸುತ್ತಿದ್ದ ಕಾರು ಚಾಲಕನ ನಿಯಂತ್ರಣಕ್ಕೆ ಸಿಗದೆ ಸರ್ವಿಸ್ ರಸ್ತೆಗೆ ಉರುಳಿ ಕುಂಟೆಗೆ ಬಿದ್ದಿದೆ.

MBBS

Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India

UNIVERSITY - 104 years old University, Smolensk is 380 km west of Moscow, Very high standards of education, strict disciplinary system. **2050** Indian students (**900** Girls) studying, **330** getting degree in **2024.** Duration 6 years including internship and License. English Medium in all years, Closed type campus system, **8** attached hospitals (**9000** Beds).
MCI SCREENING TEST – Our graduates of **2008** to **2023** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).
SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,94,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students. Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info
DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Hubli-Dharwad & Belgavi: Dr. Suchita Halli - 9916187559
Bellary: Mr. N. Thirumala Reddy – 9441071440

ಅನಧಿಕೃತ ಲೇಔಟ್: ಕಟ್ಟಡ ತೆರವು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ಬಡಾವಣೆಗಳಲ್ಲಿ ನಿರ್ಮಾಣ ಮಾಡಿರುವ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯವನ್ನು ಬಿಡಿಎ ಆರಂಭಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸ್ವಾಧೀನ ಪಡಿಸಿಕೊಂಡಿರುವ ಪ್ರದೇಶ, ಸಮಗ್ರ ಅಭಿವೃದ್ಧಿ ಯೋಜನಾ ಪ್ರದೇಶ (ಸಿಡಿಪಿ), ಶಿವರಾಮ ಕಾರಂತ ಬಡಾವಣೆ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣ ಆಗುತ್ತಿರುವುದು ಗಮನಕ್ಕೆ ಬಂದಿದ್ದು, ನಿರ್ಮಾಣಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಖಾಸಗಿ ಬಡಾವಣೆ ನಿರ್ಮಾಣಕ್ಕೆ ಬಿಡಿಎಯಿಂದ ಬಡಾವಣೆ ನಕ್ಷೆಯ ಅನುಮೋದನೆಯನ್ನು ಪಡೆದುಕೊಳ್ಳಬೇಕು. ನಂತರ ಬಡಾವಣೆಯನ್ನು ರಚಿಸಿ, ನಿವೇಶನವನ್ನು ಹಂಚಿಕೆ ಮಾಡಬೇಕು. ಪ್ರಾಧಿಕಾರದಿಂದ ಬಡಾವಣೆಯ ನಕ್ಷೆಯನ್ನು ಅನುಮೋದನೆ ಪಡೆಯದೇ ಬಡಾವಣೆಯನ್ನು ನಿರ್ಮಿಸಿ, ನಿವೇಶನಗಳನ್ನು ಮಾರಾಟ ಮಾಡಲಾಗುತ್ತಿದೆ. ಈ ವಿಷಯವು ಪ್ರಾಧಿಕಾರದ ಗಮನಕ್ಕೆ ಬಂದಿದ್ದು, ಆಯುಕ್ತರ ಆದೇಶದಂತೆ ಜೂನ್ 7ರಿಂದ ತೆರವು ಕಾರ್ಯ ಆರಂಭಿಸಲಾಗಿದೆ. ಜೆ.ಬಿ. ಕಾವಲ್ ಗ್ರಾಮದಲ್ಲಿ ಸುಮಾರು ಐದು ಎಕರೆ ಪ್ರದೇಶದಲ್ಲಿ ಅನಧಿಕೃತ ಬಡಾವಣೆಯ ನಿರ್ಮಾಣ ಕಾಮಗಾರಿಯನ್ನು ತೆರವುಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.

ಜೆ.ಬಿ. ಕಾವಲ್‌ನಲ್ಲಿರುವ ಅನಧಿಕೃತ ಬಡಾವಣೆಯಲ್ಲಿನ ಕಟ್ಟಡಗಳನ್ನು ಶನಿವಾರ ತೆರವುಗೊಳಿಸಲಾಯಿತು

ಅನಧಿಕೃತ ಬಡಾವಣೆ ನಿರ್ಮಾಣ, ನಿವೇಶನಗಳ ಮಾರಾಟ ಮಾಡುವವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಬಿಡಿಎ ಎಚ್ಚರಿಸಿದೆ.

279 ಅನಧಿಕೃತ ಬಡಾವಣೆ: ನಗರದಲ್ಲಿ 279 ಅನಧಿಕೃತ ಬಡಾವಣೆಗಳಿರುವುದನ್ನು ಬಿಡಿಎ ಗುರುತಿಸಿದೆ. ಪರಿಷ್ಕೃತ ಮಾಸ್ಟರ್ ಪ್ಲಾನ್ ಪ್ರಕಾರ (ಆರ್‌ಎಂಪಿ–2015), ಭೂ ಉಪಯೋಗದ ಉದ್ದೇಶವನ್ನು 'ಬಡಾವಣೆ ನಿರ್ಮಾಣ' ಎಂದು ಪರಿವರ್ತನೆ ಮಾಡಿಸಿಕೊಳ್ಳದೆ ಬೃಹತ್ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದೆ. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ 'ನಗರದಲ್ಲಿ 279 ಅನಧಿಕೃತ ಬಡಾವಣೆ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

ಮಂಜೂರಾಗಿದ್ದ ನಿವೇಶನದ ಮಾಹಿತಿಯೇ ಇಲ್ಲ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮಂಜೂರು ಮಾಡಿದ್ದ ನಿವೇಶನ ಯಾವ ಸ್ಥಳದಲ್ಲಿದೆ ಎಂಬ ಮಾಹಿತಿಯೇ ತನ್ನ ಬಳಿ ಇಲ್ಲ ಎಂದು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಹೇಳಿದೆ.

ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಇಲಾಖೆ 2003–04ರಲ್ಲಿ ಬಿಡಿಎಗೆ ಅರ್ಜಿ ಸಲ್ಲಿಸಿತ್ತು. ಅದೇ ವರ್ಷ ನಿವೇಶನವೂ ಮಂಜೂರಾಗಿತ್ತು. ನಿವೇಶನದ ಸಂಪೂರ್ಣ ಮೊತ್ತವನ್ನು ಬಿಡಿಎಗೆ ಪಾವತಿಸಲಾಗಿತ್ತು. ಆದರೆ, ಇದುವರೆಗೂ ಆ ಸ್ಥಳದಲ್ಲಿ ಕಟ್ಟಡ ನಿರ್ಮಾಣವಾಗಿಲ್ಲ. ಮಂಜೂರಾದ ನಿವೇಶನದ ಯಾವ ದಾಖಲೆಗಳೂ ಇಲಾಖೆ ಬಳಿ ಇಲ್ಲ. ನಿವೇಶನ ಎಲ್ಲಿದೆ ಎಂಬ ಮಾಹಿತಿಯೂ ಲಭ್ಯವಿಲ್ಲ.


ಚಂದ್ರಶೇಖರ ಪುಟ್ಟಪ್ಪ

'ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ' ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ಅವರು ಈ ಕುರಿತು ಮಾಹಿತಿ ಹಕ್ಕಿನ ಅಡಿ ಸಲ್ಲಿಸಿದ್ದ ಅರ್ಜಿಗೆ ಇಲಾಖೆ 15 ದಿನಗಳ ಕಾಲಾವಕಾಶ ಕೇಳಿತ್ತು. ಮೇಲ್ಮನವಿ ಸಲ್ಲಿಸಿದ ನಂತರ 'ನಿವೇಶನದ ದಾಖಲೆಗಳು ಲಭ್ಯವಿಲ್ಲ' ಎಂದು ಹಿಂಬರಹ ನೀಡಿದೆ.

'ಸ್ವಂತಕಟ್ಟಡ ನಿರ್ಮಿಸಲು ಹಣ ಪಾವತಿಸಿ ಪಡೆದ ನಿವೇಶನದ ದಾಖಲೆ, ಮಾಹಿತಿ ಗೊತ್ತಿಲ್ಲ ಎನ್ನುವುದು ಇಲಾಖೆಯ ಕಾರ್ಯನಿರ್ವಹಣೆಗೆ ಕನ್ನಡಿಯಾಗಿದೆ. ಕೂಡಲೇ ನಿವೇಶನ ಹಾಗೂ ನಿವೇಶನದ ದಾಖಲೆಗಳನ್ನು ಹುಡುಕಿಸಬೇಕು. ಅಂಗವಿಕಲರ ಹಣ ವ್ಯರ್ಥವಾಗದಂತೆ ಯೋಜನೆ ರೂಪಿಸಬೇಕು' ಎಂದು ಚಂದ್ರಶೇಖರ ಪುಟ್ಟಪ್ಪ ಒತ್ತಾಯಿಸಿದ್ದಾರೆ.

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌದರಿ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್‌ನಲ್ಲಿ ನೌಕರರೊಂದಿಗೆ ಚರ್ಚಿಸಿದರು

ಮಹಿಳಾ ನೌಕರರ ಭದ್ರತೆ ಪರಿಶೀಲಿಸಿದ ಆಯೋಗ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ರಾಜ್ಯದಲ್ಲಿ ಮಹಿಳೆಯರ ರಕ್ಷಣೆಗೆ ಸರ್ಕಾರ ಹಾಗೂ ಆಯೋಗ ಸದಾ ಸಿದ್ಧವಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌದರಿ ತಿಳಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್‌ಗೆ ಭೇಟಿ ನೀಡಿ, ಮಹಿಳಾ ನೌಕರರಿಗೆ ಕಾರ್ಖಾನೆಗಳಲ್ಲಿ ಭದ್ರತೆ ಪರೀಶಿಲಿಸಿದರು.

'ಲೈಂಗಿಕ ದೌರ್ಜನ್ಯಕ್ಕೊಳಗಾದರೆ ಸಂತ್ರಸ್ತೆಯರು ಯಾವುದೇ ಭಯವಿಲ್ಲದೇ ಮುಂದೆ ಬಂದು ಹೇಳಿಕೆ ನೀಡಬೇಕು. ನಿಮಗೆ ಯಾವುದೇ ರೀತಿಯ ತೊಂದರೆಯಾಗದಂತೆ ಮಹಿಳಾ ಆಯೋಗ ನಿಮ್ಮ ಸಹಾಯಕ್ಕೆ ನಿಲ್ಲಲಿದೆ' ಎಂದು ಧೈರ್ಯ ತುಂಬಿದರು.

ಕಾರ್ಮಿಕ ಇಲಾಖೆಯ ಅಧಿಕಾರಿಗಳು, ರಾಜಗೋಪಾಲ ನಗರ ಹಾಗೂ ಬಾಗಲಗುಂಟೆ ಪೊಲೀಸರು, ಕಾಂಗ್ರೆಸ್ ಮುಖಂಡರಾದ ಹರೀಶ್ ಪಾರ್ಥ, ಬಿ.ಎಂ. ಜಗದೀಶ್, ರಾಮಾಂಜಿ ಭಾಗವಹಿಸಿದ್ದರು.

'ದೇವೇಗೌಡರನ್ನು ಸೋಲಿಸಿದ್ದು ನಾನೇ'

ಸಕಲೇಶಪುರ (ಹಾಸನ): '2019 ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಲ್ಲಿ ದೇವೇಗೌಡರನ್ನು ಸೋಲಿಸಿದ್ದು ನಾನೇ, ಅದರಲ್ಲಿ ಅನುಮಾನ ಏನೂ ಇಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮಧುಗಿರಿ ಕ್ಷೇತ್ರದಲ್ಲಿ ಬಿಜೆಪಿಗೆ ಎರಡು ಸಾವಿರ ವೋಟೂ ಇರಲಿಲ್ಲ. ನಾನು ಅವರಿಗೆ 80 ಸಾವಿರ ಓಟು ಕೊಡಿಸಿದ್ದೆ. ಅದರಿಂದ ದೇವೇಗೌಡರು ಸೋತರು. ತುಮಕೂರಿನಲ್ಲಿ ನಡೆದ ಅನೇಕ ಸಭೆಗಳಲ್ಲಿ ಇದನ್ನೂ ಹೇಳಿದ್ದೇನೆ' ಎಂದರು.

ಪಿಯು ಕೋಚಿಂಗ್ ಎಂಬ ಮಾಯೆ!

ಕೋಚಿಂಗ್ ಇಲ್ಲದೇ ಪಿಯುಸಿ ಶಿಕ್ಷಣ ಪಡೆದೂ ಪ್ರಯೋಜನವಿಲ್ಲ. ವೈದ್ಯಕೀಯ ಕೋರ್ಸ್, ಐಐಟಿ ಸಂಸ್ಥೆಗಳಿಗೆ ಸೇರಲು ವಸತಿ ಸಹಿತ ಕೋಚಿಂಗ್ ಬೇಕೇಬೇಕು ಎಂಬ ಭಾವನೆಯನ್ನು ಎಲ್ಲೆಡೆ ಬಿತ್ತಲಾಗಿದೆ. ಇದು ತರಬೇತಿ ಸಂಸ್ಥೆ, ಕಾಲೇಜು ಹಾಗೂ ಕೆಲವೊಮ್ಮೆ ಪಾಲಕರಿಗೂ ಹಿತ ನೀಡುವ ಉದ್ಯಮವಾಗಿ ಬೆಳೆದಿದೆ

ಸುಭಾಷ್ ಬೆಟ್ಟದಪುರ, ಎಐಡಿಎಸ್ಒ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ

ವಸತಿಯುತ ಖಾಸಗಿ ವಿಜ್ಞಾನ ಕಾಲೇಜಿಗೆ ಸೇರಿ ಎರಡು ವರ್ಷ ಮುಗಿಸಿದೆವು. ದಿನದ 14ರಿಂದ 15 ಗಂಟೆ ಓದಿನಲ್ಲೇ ಕಳೆದೆವು. ಭಾನುವಾರ, ಹಬ್ಬ ಹಾಗೂ ಇತರೆ ದಿನಗಳಲ್ಲೂ ಮನೆಗೆ ಕಳುಹಿಸಲಿಲ್ಲ. ಪ್ರಥಮ ಪಿಯುಸಿಯಲ್ಲಿ ಎರಡು ತಿಂಗಳಿಗೆ ಒಂದೆರಡು ದಿನ ಮನೆಗೆ, ಇಲ್ಲವೇ ಪೋಷಕರ ಜತೆ ಹೊರಗೆ ಕಳುಹಿಸುತ್ತಿದ್ದರು. ದ್ವಿತೀಯ ಪಿಯುಗೆ ಇಡೀ ವರ್ಷ ಮನೆಗೆ ಕಳುಹಿಸಲಿಲ್ಲ. ಭವಿಷ್ಯದ ಸುಖಕ್ಕಾಗಿ ಎರಡು ವರ್ಷ ನರಕ ಅನುಭವಿಸಿದೆವು

ಗೌರಿ ಶ್ರೀನಿವಾಸಪುರ, ವಿದ್ಯಾರ್ಥಿನಿ

ಒಂದನೇ ಪುಟದಿಂದ...

ಮಕ್ಕಳ ಭವಿಷ್ಯ ಉಜ್ವಲವಾಗಲೆಂಬ ಮಹಾದಾಸೆಯಿಂದ ಸಾಲ ಮಾಡಿ ಲಕ್ಷಾಂತರ ರೂಪಾಯಿ ತಂದು ಕಾಲೇಜು ಆಡಳಿತ ಮಂಡಳಿಗಳ ಜೋಳಿಗೆಗೆ ಸುರಿಯುವ, ಅವುಗಳ ನಿಜ ಬಣ್ಣ ಬಯಲಾದ ಬಳಿಕ ಭ್ರಮನಿರಸನಗೊಂಡು ಪರಿತಪಿಸುವ ಅದೆಷ್ಟೋ ಪಾಲಕರು ನಮ್ಮ ನಡುವೆ ಇದ್ದಾರೆ. ಇವರ ಜೊತೆಯಲ್ಲಿ ವೈದ್ಯಕೀಯ ಪ್ರವೇಶದ ನೀಟ್ ಹಾಗೂ ಎಂಜಿನಿಯರಿಂಗ್ ಪದವಿ ಪ್ರವೇಶದ ಜೆಇಇ, ಸಿಇಟಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತೇವೆ ಎನ್ನುವ ಕೋಚಿಂಗ್ ಕೇಂದ್ರಗಳು ಸಹ ಅಣಬೆಯಂತೆ ತಲೆಯೆತ್ತಿ ಪಾಲಕರು ಹಾಗೂ ವಿದ್ಯಾರ್ಥಿಗಳನ್ನು ಮರಳು ಮಾಡುತ್ತಿವೆ. ಟ್ಯೂಷನ್ ಹಾಗೂ ಖಾಸಗಿ ಪಿಯು ಕಾಲೇಜುಗಳ ಅಪವಿತ್ರ ಮೈತ್ರಿಯು ಮಾಫಿಯಾದಂತೆ ಪ್ರಬಲವಾಗಿದ್ದರೂ ಸರ್ಕಾರ ತನಗೇನು ಗೊತ್ತಿಲ್ಲದಂತೆ ದಿವ್ಯಮೌನದಲ್ಲಿದೆ.

ಎಸ್‌ಎಸ್‌ಎಲ್‌ಸಿ ಸೇರಿದಂತೆ ವಿವಿಧ ಪಠ್ಯಕ್ರಮದ 10ನೇ ತರಗತಿ ಪರೀಕ್ಷೆ ಹತ್ತಿರವಾಗುತ್ತಿದ್ದಂತೆಯೇ ಖಾಸಗಿ ಪದವಿಪೂರ್ವ (ಪಿಯುಸಿ) ಕಾಲೇಜು ಮತ್ತು ಕೋಚಿಂಗ್ (ತರಬೇತಿ) ಕೇಂದ್ರಗಳನ್ನು ನಡೆಸುವ ಇಂಥ ಹತ್ತುಹಲವು ಸಂಸ್ಥೆಗಳು ಪಾಲಕರತ್ತ ತಮ್ಮ ಕಬಂಧಬಾಹುಗಳನ್ನು ಚಾಚಲು ಶುರುಮಾಡುತ್ತವೆ. ಇಂತಹ ಸಂಸ್ಥೆಗಳಿಂದ ಪಾಲಕರ ಮೊಬೈಲ್‌ಗಳಿಗೆ ಕರೆಗಳ ಮಹಾಪೂರವೇ ಹರಿದು ಬರತೊಡಗುತ್ತದೆ.

'ನೀಟ್', ಸಿಇಟಿ, ಜೆಇಇ ಕೋರ್ಸ್‌ಗಳ ಪ್ರವೇಶಕ್ಕೆ ಅಗತ್ಯವಿರುವ ತರಬೇತಿ ಪಡೆದರೆ ನಿಮ್ಮ ಮಕ್ಕಳಿಗೆ ಸರ್ಕಾರದ (ಕಡಿಮೆ ಶುಲ್ಕ) ಸೀಟು ದೊರೆಯುತ್ತದೆ' ಎಂಬ ಆಮಿಷವನ್ನೂ ಈ ಕರೆಗಳ ಮೂಲಕ ಒಡ್ಡಲಾಗುತ್ತದೆ. ಮಕ್ಕಳ ಭವಿಷ್ಯದ ಬಗ್ಗೆ ಆವರೆಗೂ ಅಷ್ಟಾಗಿ ಆಲೋಚಿಸಿಯೇ ಇರದ ಬಹುಪಾಲು ಪಾಲಕರು, ಇಂತಹ ತರಹೇವಾರಿ ಆಮಿಷಗಳಿಗೆ ಮಾರುಹೋಗುತ್ತಾರೆ. ಕೆಲವರು ಗೊಂದಲಕ್ಕೆ ಒಳಗಾಗಿಬಿಡುವುದೂ ಉಂಟು.

ವಾರ್ಷಿಕ ₹ 2 ಲಕ್ಷದಿಂದ ₹ 6 ಲಕ್ಷ ಶುಲ್ಕ ಪಡೆಯುವ ಈ ಕಾಲೇಜುಗಳು 'ಸ್ಕಾಲರ್‌ಶಿಪ್' (ತಾವೇ ನಿಗದಿಪಡಿಸಿರುವ ಶುಲ್ಕದಲ್ಲಿ ರಿಯಾಯಿತಿ ನೀಡುವುದಕ್ಕೆಂದು ಆಡಳಿತ ಮಂಡಳಿ ಇಟ್ಟಿರುವ ಹೆಸರು ಇದು) ಹೆಸರಿನಲ್ಲಿ ನೀಡುವ ಕೊಡುಗೆ ಹಾಗೂ ಈ ಹಿಂದೆ ಓದಿದ ವಿದ್ಯಾರ್ಥಿಗಳ ಯಶೋಗಾಥೆಯ ವಿವರಣೆಗಳಿಗೆ ಮನಸೋಲುವ ಪಾಲಕರು, ಸಾಲ–ಸೋಲ ಮಾಡಿ ಇಂತಹ ಕಾಲೇಜುಗಳಿಗೆ ಮಕ್ಕಳನ್ನು ದಾಖಲಿಸಿದ ಅನೇಕ ಉದಾಹರಣೆಗಳಿವೆ.

ಮೊದಲ ವರ್ಷದ ಪಿಯುಸಿ ಪ್ರವೇಶಕ್ಕೆ ಮಾತ್ರ 'ಸ್ಕಾಲರ್‌ಶಿಪ್' ನೀಡುತ್ತ, ದ್ವಿತೀಯ ವರ್ಷಕ್ಕೆ ಪೂರ್ಣ ಶುಲ್ಕ ಪಡೆಯುವ ಇಂಥ ಕಾಲೇಜುಗಳು ರಾಜ್ಯದ ಪ್ರಮುಖ ನಗರಗಳಲ್ಲಿ ಈಗಾಗಲೇ ನಾಯಿಕೊಡೆಗಳಂತೆ ತಲೆ ಎತ್ತಿವೆ.

ಮೊದಲೆಲ್ಲಾ 'ಉಳ್ಳವರು' ಮಾತ್ರ ಅಂದರೆ, ಸರ್ಕಾರಿ ನೌಕರರು (ಅದರಲ್ಲೂ ವಿಶೇಷವಾಗಿ ಶಿಕ್ಷಕರು, ಉಪನ್ಯಾಸಕರು), ವ್ಯಾಪಾರಸ್ಥರು, ಮಧ್ಯಮ, ಮೇಲ್ಮಧ್ಯಮ ವರ್ಗದವರು ಇಂತಹ ಕಾಲೇಜುಗಳ ಆಕರ್ಷಣೆಗೆ ಒಳಗಾಗಿ ಮಕ್ಕಳನ್ನು ದಾಖಲಿಸುತ್ತಿದ್ದರು. ಈಚಿನ ವರ್ಷಗಳಲ್ಲಿ ಸಣ್ಣ ಕೃಷಿಕರು, ಕೃಷಿ ಕೂಲಿ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರೂ ಸಾಲ ಮಾಡಿ ಮಕ್ಕಳನ್ನು ಇಲ್ಲಿ ಸೇರಿಸುತ್ತಿದ್ದಾರೆ.

ಉದ್ಯಮದ ಪರಿಭಾಷೆಯಲ್ಲೇ ಹೇಳುವುದಾದರೆ, ಕಾಲೇಜು ಆಡಳಿತ ಮಂಡಳಿಗಳು ವಿದ್ಯಾರ್ಥಿಗಳನ್ನು 'ಕಚ್ಚಾ ವಸ್ತು' ಹಾಗೂ ಕಾಲೇಜುಗಳನ್ನು 'ಕಾರ್ಖಾನೆ' ಎಂಬಂತೆಯೇ ಭಾವಿಸಿಬಿಟ್ಟಿವೆ. ಶೇ 90 ಅಥವಾ ಅದಕ್ಕಿಂತ ಹೆಚ್ಚು ಅಂಕ ಗಳಿಸುವವರಿಗೆ ಆದ್ಯತೆ ಅನುಸಾರ ಪ್ರವೇಶ ನೀಡುವ ಇವು ಪಠ್ಯೇತರ ಚಟುವಟಿಕೆಗಳನ್ನು ಸಂಪೂರ್ಣ ಮರೆತಂತಿವೆ. ವಿಜ್ಞಾನ ವಿಭಾಗಕ್ಕೇ ಒತ್ತು ನೀಡುವ ಕಾಲೇಜುಗಳು, ಸಿಇಟಿ, ಜೆಇಇ, ನೀಟ್ ಕೋಚಿಂಗ್ ಕೊಡುವ ಆಮಿಷದೊಂದಿಗೆ 10ನೇ ತರಗತಿಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಗಾಳ ಹಾಕುತ್ತವೆ. ಸ್ಥಳೀಯವಾಗಿ ಅಸ್ತಿತ್ವದಲ್ಲಿ ಇದ್ದೂ ಇಲ್ಲದಂತಿರುವ ಹತ್ತು ಹಲವು ಕಾಲೇಜುಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು, ಒಂದೊಂದು ತರಬೇತಿ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಾ ಶಿಕ್ಷಣವನ್ನು 'ಬಹುದೊಡ್ಡ ದಂಧೆ' ಮಾಡಿಕೊಂಡಿವೆ ಎಂಬುದು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರ ಆರೋಪ.

ಇಂಥ ಕೋಚಿಂಗ್ ಸೆಂಟರ್ ಸೇರುವ ವಿದ್ಯಾರ್ಥಿಗಳಿಗೆ ಪಿಯುಸಿಗೆ ಪ್ರತ್ಯೇಕ ಕಾಲೇಜಿನಲ್ಲಿ (ಸ್ಥಳೀಯವಾಗಿ ಅಸ್ತಿತ್ವದಲ್ಲಿ ಇದ್ದೂ ಇಲ್ಲದಂತಿರುವ) ಪ್ರವೇಶಾತಿಯನ್ನು ಆ ಸೆಂಟರ್‌ನವರೇ ನಿಗದಿ ಮಾಡುತ್ತಾರೆ. ಪ್ರಾಕ್ಟಿಕಲ್ (ಪ್ರಯೋಗಾಲಯ) ತರಗತಿಗಳಿಗೆ ಹಾಗೂ ಆಂತರಿಕ ಅಂಕ (ಕೆಲವು ವಿಷಯಗಳಿಗೆ 30, ಕೆಲವು ವಿಷಯಗಳಿಗೆ 20 ಅಂಕ) ಪಡೆಯಲು ಕಾಲೇಜಿನಲ್ಲಿ ಶೇ 75ರಷ್ಟು ಹಾಜರಾತಿ ಕಡ್ಡಾಯ ಆಗಿರುವುದರಿಂದ ಹಾಗೂ ಪಿಯು ಮಂಡಳಿಯ ನಿಯಮ ಪಾಲನೆಗಾಗಿ ಈ ಪ್ರವೇಶಾತಿಯ 'ಔಪಚಾರಿಕತೆ' ಪೂರ್ಣಗೊಳಿಸಲಾಗುತ್ತದೆ. ಹೀಗೆ ಪ್ರವೇಶ ನೀಡುವ ಕಾಲೇಜುಗಳಲ್ಲಿ ಯಾವುದೇ ಸೌಲಭ್ಯ, ವಿದ್ಯಾರ್ಥಿಗಳ ಹಾಜರಾತಿ ಕಂಡುಬರದಿದ್ದರೂ ಸರ್ಕಾರ ಕ್ರಮ ಕೈಗೊಳ್ಳದಿರುವುದು ಸೋಜಿಗವೇ ಸರಿ ಎಂಬುದು ಪಾಲಕರು ದೂರು.

ಈ ಜಾಲ ಬೆಂಗಳೂರು, ಧಾರವಾಡ, ಮಂಗಳೂರು, ಮೈಸೂರು, ಮಣಿಪಾಲದಂತಹ 'ಶೈಕ್ಷಣಿಕ ಹಬ್'ಗಳಿಗಷ್ಟೇ ಸೀಮಿತವಾಗಿಲ್ಲ. ಕಲಬುರಗಿ, ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆಯಂತಹ ನಗರಗಳಿಗೂ ಈ ದಂಧೆ ತನ್ನ ಕೆನ್ನಾಲಿಗೆಯನ್ನು ಚಾಚಿದೆ. ಉಳಿದ ಜಿಲ್ಲಾ ಕೇಂದ್ರಗಳಿಗೂ ಇದು ಹರಡುತ್ತಿದ್ದು, ಶಿಕ್ಷಣ ಸಂಸ್ಥೆಗಳು ಏಜೆಂಟರ ಮೂಲಕ ಮನೆಗಳ ಬಾಗಿಲು ಬಡಿದು ಪಾಲಕರಿಗೆ ಗಾಳ ಹಾಕುತ್ತಿವೆ. ಸರ್ಕಾರ ಮಾತ್ರ ಕೈಕಟ್ಟಿ ಕುಳಿತಿದೆ ಎಂದು ದಾವಣಗೆರೆಯ ಕಾಲೇಜೊಂದರಲ್ಲಿ ಮಗನನ್ನು ಓದಿಸಿದ್ದ ಹಗರಿಬೊಮ್ಮನಹಳ್ಳಿಯ ಪಾಲಕ ದೂರಿದರು.

'ಎಸ್‌ಎಸ್‌ಎಲ್‌ಸಿ ಬಳಿಕ ನೀಟ್ ತರಬೇತಿಗೆಂದು ಖಾಸಗಿ ಕೋಚಿಂಗ್ ಸಂಸ್ಥೆಯ ಪ್ರವೇಶ ಪರೀಕ್ಷೆ ಬರೆದೆ. ಅವರ ಸ್ಕಾಲರ್‌ಶಿಪ್ ಯೋಜನೆಗೂ ಆಯ್ಕೆಯಾದೆ. ಬಳಿಕ ಅವರೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದ ಖಾಸಗಿ ಕಾಲೇಜಿಗೆ ದಾಖಲಾಗಬೇಕಾಯಿತು. ಅಲ್ಲೂ ಪ್ರವೇಶ ಪರೀಕ್ಷೆ ಇತ್ತು. ಅಲ್ಲಿಯೂ ಉತ್ತಮ ಅಂಕ ಗಳಿಸಿದ್ದರಿಂದ ಪ್ರಥಮ ಪಿಯುಸಿಗೆ ಉಚಿತ ಪ್ರವೇಶ ನೀಡಿದ್ದರು. ಆದರೆ, ದ್ವಿತೀಯ ಪಿಯುಗೆ ಪೂರ್ಣ ಶುಲ್ಕ ಪಡೆದರು. ಕೋಚಿಂಗ್ ಉಚಿತವಾಗಿದ್ದರೂ ತರಬೇತಿ ಸಾಧನ, ಪುಸ್ತಕಗಳಿಗೆಂದು ಎರಡು ವರ್ಷವೂ ದುಬಾರಿ ಹಣ ವಸೂಲಿ ಮಾಡಿದರು' ಎಂದು ಮೈಸೂರಿನಲ್ಲಿ ಪಿಯು ಮುಗಿಸಿ, ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ಹೆಸರು ಬಹಿರಂಗಪಡಿಸಲು ಬಯಸದ ವಿದ್ಯಾರ್ಥಿಯೊಬ್ಬ ಹೇಳಿರುವುದು ಇಂತಹ ಕಾಲೇಜುಗಳ ಕರಾಳ ಮುಖಕ್ಕೆ ಕನ್ನಡಿ ಹಿಡಿಯುವಂತಿದೆ.

ವಿದ್ಯಾರ್ಥಿಗಳ ನಡುವೆಯೇ ತಾರತಮ್ಯ: ಉತ್ತಮ ಫಲಿತಾಂಶ ದೊರೆಯಬಹುದೆಂಬ 'ಗ್ಯಾರಂಟಿ'ಯೊಂದಿಗೆ 10ನೇ ತರಗತಿಯಲ್ಲಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳನ್ನೇ ಆಯ್ದುಕೊಳ್ಳುವ, ಶುಲ್ಕದಲ್ಲಿ ರಿಯಾಯಿತಿ ಕೊಡುವ ಸೋಗಿನೊಂದಿಗೆ ಪ್ರವೇಶ ಕಲ್ಪಿಸುವ ಖಾಸಗಿ ಕಾಲೇಜುಗಳಲ್ಲಿ ವರ್ಷವಿಡೀ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೂ ಪ್ರತಿನಿತ್ಯ ಪಾಠ–ಪ್ರವಚನ ನಡೆಯುತ್ತವೆ.

ಭಾನುವಾರವೂ ವಿದ್ಯಾರ್ಥಿಗಳನ್ನು ಬಿಡದೆ ಕಾಲೇಜುಗಳಲ್ಲಿ ಮಧ್ಯಾಹ್ನದ ಹೊತ್ತಿನಲ್ಲಿ ವಾರಾಂತ್ಯದ ಪರೀಕ್ಷೆಗಳನ್ನು ಆಯೋಜಿಸಲಾಗುತ್ತದೆ. ಈ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆಯುವ 'ಬುದ್ಧಿವಂತ'ರನ್ನಷ್ಟೇ ಹೆಕ್ಕಿ, ಅವರ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವ ಮೂಲಕ ಮಿಕ್ಕವರನ್ನು ನಿರ್ಲಕ್ಷಿಸಲಾಗುತ್ತದೆ ಎನ್ನುವ ಆರೋಪವಿದೆ.

10ನೇ ತರಗತಿಯಲ್ಲಿ ವಿದ್ಯಾರ್ಥಿಗಳು ಗಳಿಸಿರುವ ಅಂಕಗಳನ್ನು ಆಧರಿಸಿ ವಿಭಾಗಗಳನ್ನು ರಚಿಸಲಾಗುತ್ತದೆ. ಅಧಿಕ ಅಂಕ ಪಡೆದಿರುವವರ ಮೇಲೆ 'ವಿಶೇಷ ನಿಗಾ' ಇಡಲಾಗುತ್ತದೆ. ಅವರಿಗೆ 'ನುರಿತ' ಉಪನ್ಯಾಸಕರಿಂದ ಬೋಧನೆ ಮಾಡಿಸಲಾಗುತ್ತದೆ. ಅವರಿಗಿಂತಲೂ ಕೊಂಚ ಕಡಿಮೆ ಅಂಕ ಗಳಿಸಿದವರನ್ನು ಕಡೆಗಣಿಸಲಾಗುತ್ತದೆ. ಕೆಲವು ವಾರ, ತಿಂಗಳುಗಳ ನಂತರ ಮೇಲಿನ ವಿಭಾಗದಲ್ಲಿರುವ ಯಾರಾದರೂ ಕಡಿಮೆ ಅಂಕ ಪಡೆದಿದ್ದು ಕಂಡುಬಂದರೆ ಅವರನ್ನು ತಿದ್ದದೇ ಹಿಂಬಡ್ತಿ ನೀಡುವ ಪದ್ಧತಿಯೂ ಜಾರಿಯಲ್ಲಿದೆ. ಇಂಥ ಅನಿರೀಕ್ಷಿತ ಬೆಳವಣಿಗೆಗಳಿಂದ ಅನೇಕ ವಿದ್ಯಾರ್ಥಿಗಳು ಮಾನಸಿಕ ಕ್ಷೋಭೆಗೆ ಒಳಗಾದ ನಿದರ್ಶನಗಳೂ ಸಾಕಷ್ಟಿವೆ.

ಪ್ರೌಢಶಿಕ್ಷಣ ಹಂತದಿಂದಲೇ ಒತ್ತಡ: ಪಿಯುಸಿ ನಂತರ ಮೆಡಿಕಲ್ ಅಥವಾ ಎಂಜಿನಿಯರಿಂಗ್‌ಗಳಲ್ಲಿ ಯಾವುದನ್ನು ಆಯ್ದುಕೊಳ್ಳಬೇಕು ಎಂಬ ಗೊಂದಲ ವಿದ್ಯಾರ್ಥಿಗಳು ಮತ್ತು ಪಾಲಕರಲ್ಲಿದೆ. ಆದರೆ, ಈಗ ಕೆಲವು ಶಿಕ್ಷಣ ಸಂಸ್ಥೆಗಳು ಪ್ರೌಢಶಾಲೆಯ ಹಂತದಿಂದಲೇ ಜೆಇಇ, ನೀಟ್ ತರಬೇತಿಗೆ ಅನುಕೂಲವಾಗುವಂತೆ ಶಿಕ್ಷಣ ನೀಡಲು ಮುಂದಾಗಿವೆ. ದ್ವಿತೀಯ ಪಿಯುಸಿ ಸಂದರ್ಭ ನೀಡುವ ತರಬೇತಿ ಸಾಕಾಗದು ಎಂದೇ ಪ್ರೌಢ ಶಿಕ್ಷಣ ಹಂತದಿಂದಲೇ ತರಬೇತಿ ನೀಡಲು ಆರಂಭಿಸಿವೆ. 'ಫೌಂಡೇಷನ್ ಕೋರ್ಸ್' ಹೆಸರಿನಲ್ಲಿ ಗಣಿತ ಹಾಗೂ ವಿಜ್ಞಾನ ವಿಷಯದಲ್ಲಿ ಆಳವಾದ ತರಬೇತಿ ನೀಡುತ್ತಿವೆ. ಪಿಯುಸಿ ನಂತರದ ಪರೀಕ್ಷೆಗೆ 5 ವರ್ಷಗಳಿಂದಲೇ ತಯಾರಿ ಮಾಡಿಕೊಳ್ಳಬೇಕಾದ ಸ್ಥಿತಿ ನಿರ್ಮಾಣ ಮಾಡುತ್ತಿದ್ದಾರೆ. ಇದರಿಂದಾಗಿ ಪಾಲಕರಿಗೆ ಆರ್ಥಿಕವಾಗಿ ಹಾಗೂ ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ನಿರಂತರ ಒತ್ತಡ ಉಂಟಾಗುವ ಅಪಾಯವಿದೆ.

'ಫೌಂಡೇಷನ್ ಕೋರ್ಸ್‌ಗೆ ಹೋಗುವ ವಿದ್ಯಾರ್ಥಿಗಳು ಸಹಜವಾಗಿ ಗಣಿತ ಹಾಗೂ ವಿಜ್ಞಾನಕ್ಕೆ ಆದ್ಯತೆ ನೀಡುತ್ತಾರೆ. ಸಮಾಜ ವಿಜ್ಞಾನ, ಇತಿಹಾಸ, ಭೂಗೋಳ, ಭಾಷಾ ವಿಷಯಗಳ ಬಗ್ಗೆ ಅರಿವಿಲ್ಲದಂತಾಗುತ್ತಾರೆ. ಇದು ವೈವಿಧ್ಯಮಯ ಅಧ್ಯಯನದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ' ಎಂದು ಶಿಕ್ಷಣ ತಜ್ಞ ರಾಜಕುಮಾರ ಪಾಟೀಲ ಆತಂಕ ವ್ಯಕ್ತಪಡಿಸುತ್ತಾರೆ.

'8ನೇ ತರಗತಿ ಓದುವ ವಿದ್ಯಾರ್ಥಿಗಳದ್ದು ಕಿಶೋರಾವಸ್ಥೆ. ಈ ಹಂತದಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಾಕಷ್ಟು ಬದಲಾವಣೆಗಳಾಗುತ್ತಿರುತ್ತವೆ. ಅವರು ತಮ್ಮನ್ನು ತಾವು ಇನ್ನೂ ಅರ್ಥೈಸಿಕೊಂಡಿರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಶಿಕ್ಷಣ ಸಂಸ್ಥೆಗಳ ಅಬ್ಬರದ ಪ್ರಚಾರಕ್ಕೆ ಸಿಲುಕಿ ಮಕ್ಕಳನ್ನು ಎಂಜಿನಿಯರಿಂಗ್ ಅಥವಾ ಮೆಡಿಕಲ್‌ಗೆ ಸನ್ನದ್ಧಗೊಳಿಸುವುದು ಒತ್ತಡ ಹೇರಿದಂತೆಯೇ ಸರಿ. ಇದರ ಬಗ್ಗೆ ಪಾಲಕರು, ಶಿಕ್ಷಣ ರಂಗದವರು ಗಂಭೀರವಾಗಿ ಯೋಚಿಸಬೇಕಾಗಿದೆ' ಎಂಬುದು ಅವರ ಸಲಹೆ.

ವ್ಯವಸ್ಥೆ ಬದಲಾಗಲಿ: 'ಸಿಇಟಿಯಿಂದ ಶೈಕ್ಷಣಿಕ ಗುಣಮಟ್ಟ ಕಾಪಾಡಿಕೊಳ್ಳಬಹುದಾದರೂ ಅದರಲ್ಲಿನ ಕೆಲವು ಲೋಪದಿಂದ ವಿದ್ಯಾರ್ಥಿಗಳು ಗೊಂದಲಕ್ಕೀಡಾಗುತ್ತಿದ್ದಾರೆ. ಈ ವ್ಯವಸ್ಥೆಯೇ ಕೋಚಿಂಗ್ ಕೇಂದ್ರಗಳ ಆರಂಭಕ್ಕೆ ಕಾರಣವಾಯಿತು. ಮಕ್ಕಳನ್ನು ಸೆಳೆಯುವ ಮನೋಭಾವ ಹೆಚ್ಚಿದೆಯೇ ವಿನಾ ಗುಣಮಟ್ಟದ ಶಿಕ್ಷಣ ನೀಡುವತ್ತ ಬಹುತೇಕ ಕಾಲೇಜುಗಳು ಗಮನಹರಿಸುತ್ತಿಲ್ಲ' ಎಂದು ದಾವಣಗೆರೆಯ ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಬೇಸರಿಸಿದರು.

ಅವೈಜ್ಞಾನಿಕ ಸ್ಪರ್ಧೆ: ಇಂಥ ಖಾಸಗಿ ಕಾಲೇಜು, ಕೋಚಿಂಗ್ ಸೆಂಟರ್‌ಗಳಲ್ಲಿನ ವಿದ್ಯಾರ್ಥಿಗಳು ಫೆಬ್ರುವರಿ ಕೊನೆಯ ವಾರ ಅಥವಾ ಮಾರ್ಚ್ ಮೊದಲ ವಾರ ಪಿಯುಸಿ ಪ್ರಥಮ ವರ್ಷದ ಪರೀಕ್ಷೆ ಬರೆಯುತ್ತಿದ್ದಂತೆಯೇ ಬೇಸಿಗೆ ರಜೆಯನ್ನೇ ನೀಡುವುದಿಲ್ಲ. ಬದಲಿಗೆ, ಒಂದು ವಾರದ ಮಟ್ಟಿಗೆ ರಜೆ ನೀಡಿ ಮತ್ತೆ ದ್ವಿತೀಯ ವರ್ಷದ ತರಗತಿ ಆರಂಭಿಸಲಾಗಿದೆ. ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದ ಬಹುತೇಕ ಪಠ್ಯದ ಬೋಧನೆ ಜೂನ್ ವೇಳೆಗೆ ಪೂರ್ಣಗೊಳ್ಳುತ್ತದೆ. ನಂತರದ್ದು ಏನಿದ್ದರೂ ನೀಟ್, ಸಿಇಟಿ ಮತ್ತು ಜೆಇಇಯದ್ದೇ ಓದು.

ಇನ್ನೊಂದೆಡೆ ಗ್ರಾಮೀಣ, ಪಟ್ಟಣ ಪ್ರದೇಶದಲ್ಲಿನ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು ನೀಟ್, ಸಿಇಟಿ ಮತ್ತು ಜೆಇಇ ಪೂರ್ವ ತಯಾರಿ ಇವರಿಗೆ ಇಲ್ಲವೇ ಇಲ್ಲ. ಸ್ಪರ್ಧೆಯ ವಿಷಯದಲ್ಲಿ ಇವರು ಕೋಚಿಂಗ್ ಸೆಂಟರ್‌ಗಳ ವಿದ್ಯಾರ್ಥಿಗಳ ಸಮಾನವಾಗಿ ನಿಲ್ಲುವುದು ದೂರದ ಮಾತು.

'ಶೈಕ್ಷಣಿಕ ಕ್ಷೇತ್ರದಲ್ಲಿ ಸ್ಪರ್ಧೆ ಇರುವುದು ನಿಜ. ಹಾಗಂತ ನೀಟ್, ಜೆಇಇ, ಸಿಇಟಿಗಳೇ ಜೀವನ ವಲ್ಲ. ಭವಿಷ್ಯ ರೂಪಿಸಿಕೊಳ್ಳಲು ಇವುಗಳನ್ನು ಹೊರತುಪಡಿಸಿ ಇನ್ನೂ ಅನೇಕ ಕ್ಷೇತ್ರಗಳಿವೆ. ಅತಿಯಾದ ಶುಲ್ಕ ಪಡೆಯುವ ಆಸೆಯಿಂದ ಇತರ ವೃತ್ತಿಪರ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತಿಲ್ಲ. ತಿಳಿಸಿದಲ್ಲಿ ವಿದ್ಯಾರ್ಥಿಗಳೂ ಆ ಕ್ಷೇತ್ರಗಳತ್ತ ಗಮನಹರಿಸಬಹುದು' ಎಂದು ದಾವಣಗೆರೆಯ ಸೈನ್ಸ್ ಅಕಾಡೆಮಿ ಪಿಯು ಕಾಲೇಜಿನ ಕಾರ್ಯದರ್ಶಿ ವಿನಯ್ ವೈ.ವಿ ಹೇಳುತ್ತಾರೆ.

'ಅಂಕ ಗಳಿಕೆಯೇ ಜೀವನ ಎಂದು ಬಿಂಬಿಸಿದ ಕಾರಣ ಮಕ್ಕಳಿಗೆ ಸೋಲು ಒಪ್ಪಿಕೊಳ್ಳುವುದು ಕಷ್ಟವಾಗುತ್ತಿದೆ. ಮಕ್ಕಳಿಗೆ ನೈತಿಕ ಶಿಕ್ಷಣ ನೀಡಬೇಕು. ಇಲ್ಲಿ ಪಾಲಕರ ತಪ್ಪೂ ಇದೆ' ಎಂದು ಸ್ಪರ್ಧಾತ್ಮಕ ಶಿಕ್ಷಣದ ಲೋಪವನ್ನು ಟೀಕಿಸುವ ಅವರು, ಅವರು ಎಂಜಿನಿಯರಿಂಗ್, ಮೆಡಿಕಲ್ ಹೊರತುಪಡಿಸಿ ಉತ್ತಮ ಭವಿಷ್ಯ ರೂಪಿಸುವ ಇತರ ಕೋರ್ಸ್‌ನತ್ತಲೂ ಗಮನ ಹರಿಸಬೇಕು. ಕಾನೂನು ಪದವಿ, ಕೃಷಿ, ತೋಟಗಾರಿಕೆ, ಮೂಲ ವಿಜ್ಞಾನ ಕಲಿಕೆ, ಬೋಧನಾ ಕ್ಷೇತ್ರ, ರಕ್ಷಣಾ, ಸಂಶೋಧನಾ ಕ್ಷೇತ್ರಗಳಲ್ಲಿನ ವಿಪುಲ ಅವಕಾಶಗಳತ್ತಲೂ ಆಲೋಚಿಸಬೇಕು' ಎಂಬ ಸಲಹೆ ನೀಡುತ್ತಾರೆ.

ಅವೈಜ್ಞಾನಿಕ ಸ್ಪರ್ಧೆ, ಸುಲಿಗೆ, ಓದನ್ನು ಹೊರತುಪಡಿಸಿದ ಜಗತ್ತಿಗೆ ವಿದ್ಯಾರ್ಥಿಗಳ ಪ್ರವೇಶ ನಿರಾಕರಣೆಯಂಥ ಬೆಳವಣಿಗೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೂಕ್ತ ನೀತಿ ರೂಪಿಸುವುದು ಈಗಿನ ತುರ್ತು ಅಗತ್ಯವಾಗಿದೆ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ವಿಕ್ರಂ ಕಾಂತಿಕೆರೆ, ಮಲ್ಲಿಕಾರ್ಜುನ ನಾಲವಾರ, ಶ್ರೀಕಾಂತ ಕಲ್ಲಮ್ಮನವರ, ಎಚ್.ಕೆ.ಸುಧೀರ್ ಕುಮಾರ್

ದೂರಿದರೂ ಕ್ರಮವಿಲ್ಲ

ಒಂದನೇ ಪುಟದಿಂದ...

ಪೋಷಕರ ಸಮ್ಮತಿ ಮೇರೆಗೆ ಆಯಾ ಸಂಸ್ಥೆಗಳು ಕಾಲೇಜು ಅಭಿವೃದ್ಧಿ ಶುಲ್ಕವನ್ನು ಪಡೆಯಲು ನಿಯಮಗಳಲ್ಲೇ ಅವಕಾಶ ಕಲ್ಪಿಸಲಾಗಿದೆ. ಆದರೆ, ರಾಜ್ಯದ ಬಹುತೇಕ ವಿಜ್ಞಾನ ಪದವಿಪೂರ್ವ ಕಾಲೇಜುಗಳು ವರ್ಷಕ್ಕೆ ₹ 1 ಲಕ್ಷದಿಂದ ₹ 5 ಲಕ್ಷದವರೆಗೂ ಪಡೆಯುತ್ತವೆ. ಆದರೆ, ಈ ಕುರಿತು ಹಲವು ಪೋಷಕರು ದೂರು ನೀಡಿದ್ದರೂ ಇಲಾಖೆ ಯಾವ ಕಾಲೇಜುಗಳ ವಿರುದ್ಧವೂ ಕ್ರಮಕೈಗೊಂಡಿಲ್ಲ. 'ಕಳೆದ ವರ್ಷ ಶೇ 91 ಫಲಿತಾಂಶ ಪಡೆದಿದ್ದ 'ಪ್ರತಿಷ್ಠಿತ' ಖಾಸಗಿ ಕಾಲೇಜೊಂದರಲ್ಲಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ್ದೆವು. ಸೀಟು ಸಿಕ್ಕಿತು. ವಸತಿ ಸೇರಿ ವಾರ್ಷಿಕ ಶುಲ್ಕ ₹ 4.75 ಲಕ್ಷ ಎಂದು ಹೇಳಿದರು. ಹಾಗಾಗಿ, ₹ 1.50 ಲಕ್ಷ ಕೊಟ್ಟು ಬೇರೆ ಕಾಲೇಜಿಗೆ ಸೇರಿಸಿದೆವು. ಈ ಕುರಿತು ಕಾಲೇಜಿನ ವಿರುದ್ಧ ಇಲಾಖೆಗೆ ದೂರು ನೀಡಿದರೂ ಕ್ರಮ ಕೈಗೊಳ್ಳಲಿಲ್ಲ' ಎನ್ನುತ್ತಾರೆ ಬೆಂಗಳೂರಿನ ಜೆ.ಪಿ. ನಗರದ ನಿವಾಸಿ ಆರ್.ಶಿವರಾಜ್.

ಪ್ರಮಾಣವಚನಕ್ಕೆ ಗಣ್ಯರ ಸಾಕ್ಷಿ

ನವದೆಹಲಿ (ಪಿಟಿಐ): ಸರ್ಕಾರದ ಮೂಲಗಳ ಪ್ರಕಾರ, ಭಾನುವಾರ ಸಂಜೆ ನಡೆಯುವ ಹೊಸ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಹಲವು ಗಣ್ಯರು ಸಾಕ್ಷಿಯಾಗುವುದು ನಿಚ್ಚಳವಾಗಿದೆ.

ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಶನಿವಾರವೇ ಭಾರತಕ್ಕೆ ಬಂದಿಳಿದಿದ್ದಾರೆ. ಅವರಲ್ಲದೆ ಶ್ರೀಲಂಕಾದ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ, ನೇಪಾಳದ ಪ್ರಧಾನಿ ಪುಷ್ಪ ಕಮಲ್ ದಹಲ್ ಪ್ರಚಂಡ, ಭೂತಾನ್ ಪ್ರಧಾನಿ ಶೆರಿಂಗ್ ಟೋಬಗೆ, ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝು, ಮಾರಿಷಸ್ ಪ್ರಧಾನಿ ಪ್ರವಿಂದ ಕುಮಾರ್ ಜಗನ್ನಾಥ್ ಸೇರಿ ಹಲವು ರಾಷ್ಟ್ರಗಳ ಗಣ್ಯರು ಮೋದಿ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಹಾಜರಿರುವರು ಎಂದು ಮೂಲಗಳು ವಿವರಿಸಿವೆ.

ಪಾಕ್ ಜೊತೆ ಭಾರತ ಕ್ರಿಕೆಟ್ ಆಡಬಾರದು: ಖಾದರ್

ಪ್ರಜಾವಾಣಿ ವಾರ್ತೆ

ಮಂಗಳೂರು: 'ಪಾಕಿಸ್ತಾನದ ಕ್ರಿಕೆಟ್ ತಂಡದ ಜೊತೆ ಭಾರತ ಕ್ರಿಕೆಟ್ ತಂಡವು ಆಡಲೇಬಾರದು. ಇದು ನನ್ನ ವೈಯುಕ್ತಿಕ ಅಭಿಪ್ರಾಯ' ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಇಲ್ಲಿ ಹೇಳಿದರು. ಅಮೆರಿಕದಲ್ಲಿ ನಡೆಯುತ್ತಿವ ಟಿ-20 ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಭಾರತ- ಪಾಕಿಸ್ತಾನ ಮುಖಾಮುಖಿಯಾಗುತ್ತಿರುವ ಕುರಿತು ಅವರು ಪ್ರತಿಕ್ರಿಯಿಸಿದರು.

ಪಾಕಿಸ್ತಾನ ತಂಡವು ಭಾರತಕ್ಕೆ ಬಂದ ಸಂದರ್ಭದಲ್ಲಿ ಮೈದಾನ ಅಗೆದು ಪ್ರತಿಭಟನೆ ನಡೆಸಿದ ಘಟನೆಯನ್ನು ನೆನಪಿಸಿದ ಖಾದರ್, 'ನಾವು ಆ ಕಡೆ– ಈ ಕಡೆ ಹೋಗುವುದನ್ನು ನಿರ್ಬಂಧಿಸಲಾಗಿದೆ. ನಮ್ಮ ಆಟಗಾರರನ್ನು ದುಬೈ ಅಥವಾ ನ್ಯೂಯಾರ್ಕ್‌ಗೆ ಕರೆದೊಯ್ದು ಅಲ್ಲಿ ಅವರ ಜೊತೆ ಪಂದ್ಯ ಏರ್ಪಡಿಸುವುದು ಏಕೆ? ಎಲ್ಲಿಯವರೆಗೆ ಭಾರತ ಹೇಳಿದಂತೆ ಪಾಕಿಸ್ತಾನ ಕೇಳುವುದಿಲ್ಲವೋ ಅಲ್ಲಿವರೆಗೆ ಅವರ ಜೊತೆ ಆಟ ಆಡಬಾರದು' ಎಂದರು. 'ಟಿ20 ವಿಶ್ವಕಪ್‌ನಲ್ಲಿ ಭಾನುವಾರದ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನವನ್ನು ಹೀನಾಯವಾಗಿ ಸೋಲಿಸಬೇಕು ಎಂದು ಅವರು ಆಶಿಸಿದರು.

ಕೇರಳ ಶಾಲೆಯಲ್ಲಿ ರ‍್ಯಾಗಿಂಗ್ ತನಿಖೆಗೆ ಸರ್ಕಾರ ಆದೇಶ

ತಿರುವನಂತಪುರ (ಪಿಟಿಐ): ವಯನಾಡ್ ಜಿಲ್ಲೆಯ ಸರ್ಕಾರಿ ಶಾಲೆಯ ವಿದ್ಯಾರ್ಥಿಯೊಬ್ಬ ನೀಡಿರುವ ರ‍್ಯಾಗಿಂಗ್ ದೂರಿನ ಕುರಿತು ತನಿಖೆ ನಡೆಸುವಂತೆ ಕೇರಳ ಸರ್ಕಾರ ಶನಿವಾರ ಆದೇಶಿಸಿದೆ.

'ಕೆಲವು ಸಹಪಾಠಿಗಳು ಕತ್ತರಿಯಿಂದ ನನ್ನ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ' ಎಂದು ದೂರು ನೀಡಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಶಬರಿನಾಥ್, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ದೂರಿನ ಕುರಿತು ಇಲಾಖಾ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ ಅವರು, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ (ಅಕಾಡೆಮಿಕ್) ಎ. ಅಬೂಬಕರ್ ಅವರಿಗೆ ನಿರ್ದೇಶಿಸಿದ್ದಾರೆ.

ಘಟನೆ ನಡೆದಿರುವ ಶಾಲೆಗೆ ಭೇಟಿ ನೀಡಿ, ಸಂತ್ರಸ್ತ ವಿದ್ಯಾರ್ಥಿ ಮತ್ತು ಅವರ ಪೋಷಕರನ್ನೂ ಭೇಟಿ ಮಾಡುವಂತೆ ವಯನಾಡ್ ಜಿಲ್ಲೆಯ ಉಪ ನಿರ್ದೇಶಕರಿಗೆ ಸಚಿವರು ಸೂಚಿಸಿದ್ದಾರೆ.

ವಯನಾಡ್‌ನ ಪೊಲೀಸ್ ವರಿಷ್ಠಾಧಿಕಾರಿ ಜೊತೆ ಸಚಿವ ಶಿವನ್‌ಕುಟ್ಟಿ ಈ ವಿಷಯ ಕುರಿತಂತೆ ಚರ್ಚಿಸಿದರು. ವಿದ್ಯಾರ್ಥಿಯ ತಾಯಿ ಹಾಗೂ ಶಾಲೆಯ ಪೋಷಕರು ಮತ್ತು ಶಿಕ್ಷಕರ ಸಂಘದ (ಪಿಟಿಎ) ಅಧ್ಯಕ್ಷರೊಂದಿಗೆ ಮಾತನಾಡಿದರು ಎಂದು ಸಚಿವರ ಕಚೇರಿ ತಿಳಿಸಿದೆ. ಶಾಲಾ ಆವರಣದಲ್ಲಿ ರ‍್ಯಾಗಿಂಗ್‌ಗೆ ಅವಕಾಶ ನೀಡುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಚಂದನ್ ಶೆಟ್ಟಿ–ನಿವೇದಿತಾ ವಿಚ್ಛೇದನ

ಬೆಂಗಳೂರು: ರ‍್ಯಾಪರ್ ಚಂದನ್‌ಶೆಟ್ಟಿ ಮತ್ತು ಕಿರುತೆರೆ ಕಲಾವಿದೆ ನಿವೇದಿತಾ ಗೌಡ ಅವರ ನಾಲ್ಕು ವರ್ಷಗಳ ದಾಂಪತ್ಯ ಜೀವನ ವಿಚ್ಛೇದನದೊಂದಿಗೆ ಅಂತ್ಯವಾಗಿದೆ. ಕಿರುತೆರೆ ರಿಯಾಲಿಟಿ ಶೋ ಮೂಲಕ ಪರಿಚಿತರಾಗಿ, ಪ್ರೀತಿಸಿ ಮದುವೆಯಾಗಿದ್ದ ಈ ದಂಪತಿಗೆ 2ನೇ ಹೆಚ್ಚುವರಿ ನ್ಯಾಯಾಲಯವು ವಿಚ್ಛೇದನ ಮಂಜೂರು ಮಾಡಿದೆ. ಚಂದನ್ ಶೆಟ್ಟಿ ಮತ್ತು ನಿವೇದಿತಾ ವಿಚ್ಛೇದನದ ವಿಷಯವನ್ನು ತಮ್ಮ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಬಹಿರಂಗಪಡಿಸಿದ್ದಾರೆ.

'ಈ ದಿನ ನಿವೇದಿತಾ ಗೌಡ ಮತ್ತು ನಾನು, ನಮ್ಮ ದಾಂಪತ್ಯ ಜೀವನವನ್ನು ಕಾನೂನುಬದ್ಧವಾಗಿ ಪರಸ್ಪರ ಒಪ್ಪಿಗೆಯಿಂದ ಕೊನೆಗೊಳಿಸಿದ್ದೇವೆ. ನಮ್ಮ ನಿರ್ಧಾರವನ್ನು ಮತ್ತು ನಮ್ಮ ಜೀವನದ ಖಾಸಗಿತನವನ್ನ ಗೌರವಿಸಲು ಕೋರುತ್ತೇವೆ. ಪ್ರತಿ ಸಂದರ್ಭದಲ್ಲೂ ನಮ್ಮೊಂದಿಗೆ ನಿಂತ ಮಾಧ್ಯಮ ಮಿತ್ರರು, ನಮ್ಮ ಸ್ನೇಹಿತರು ಮತ್ತು ಅಭಿಮಾನಿಗಳಿಂದ ನಾವು ಎಂದಿನಂತೆ ಬೆಂಬಲ ಕೋರುತ್ತೇವೆ. ನಾವು ನಮ್ಮ ಪ್ರತ್ಯೇಕ ಮಾರ್ಗ ಅನುಸರಿಸಿದರೂ, ಪರಸ್ಪರ ಒಬ್ಬರನೊಬ್ಬರು ಗೌರವಿಸುತ್ತೇವೆ. ವಿಷಯವನ್ನು ಸೂಕ್ಷ್ಮವಾಗಿ ಪರಿಗಣಿಸಿದ್ದಕ್ಕಾಗಿ ಎಲ್ಲರಿಗೂ ಧನ್ಯವಾದಗಳು' ಎಂದು ಚಂದನ್ ಶೆಟ್ಟಿ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ. ನಿವೇದಿತಾ ಗೌಡ ಕೂಡ ಇದೇ ರೀತಿಯ ಪೋಸ್ಟ್ ಹಂಚಿಕೊಂಡಿದ್ದಾರೆ.

ಕಿರುತೆರೆ ರಿಯಾಲಿಟಿ ಶೋ ಬಿಗ್‌ಬಾಸ್‌ನಲ್ಲಿನ ಇವರಿಬ್ಬರ ಪರಿಚಯ ಪರಸ್ಪರ ಪ್ರೇಮವಾಗಿ ತಿರುಗಿತ್ತು. ಮದುವೆಯಾದ ಬಳಿಕವೂ ಇಬ್ಬರೂ ಅನೇಕ ರಿಯಾಲಿಟಿ ಶೋಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿದ್ದು ತಮ್ಮದೇ ಅಭಿಮಾನಿ ಬಳಗ ಹೊಂದಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 9-6-1999

- **ವಿಶ್ವಕಪ್‌ನಲ್ಲಿ ಪಾಕ್‌ಗೆ ಮಣಿಯದ ಭಾರತ**

ಮ್ಯಾಂಚೆಸ್ಟರ್, ಜೂನ್ 8– ಜಿದ್ದಾಜಿದ್ದಿನ ಮತ್ತೊಂದು ಹೋರಾಟದಲ್ಲಿ ಕೊನೆಗೂ ಭಾರತ, ಪಾಕಿಸ್ತಾನ ಭಯದ ಭೂತದಿಂದ ಬಿಡುಗಡೆ ಪಡೆಯಿತು. ವಿಶ್ವಕಪ್ ಕ್ರಿಕೆಟ್ ಸೂಪರ್ ಸಿಕ್ಸ್ ಪಂದ್ಯದಲ್ಲಿ ಕ್ರಿಕೆಟ್ ಪಂಡಿತರ ಎಲ್ಲಾ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದ ಭಾರತ, ಪಾಕಿಸ್ತಾನವನ್ನು 47 ರನ್‌ಗಳಿಂದ ಸೋಲಿಸಿತು.

ಸಚಿನ್ ತೆಂಡೂಲ್ಕರ್(45), ರಾಹುಲ್ ದ್ರಾವಿಡ್(61) ಮತ್ತು ಮಹ್ಮದ್ ಅಜರುದ್ದೀನ್(59) ಅವರ ಉತ್ತಮ ಬ್ಯಾಟಿಂಗ್ ನೆರವಿನಿಂದ ಭಾರತ 50 ಓವರ್‌ಗಳಲ್ಲಿ 6 ವಿಕೆಟ್‌ಗೆ 227 ರನ್ ಗಳಿಸಿತು.

50 ವರ್ಷಗಳ ಹಿಂದೆ

ಭಾನುವಾರ, 9-6-1974

- **ಅಣುಸಾಧನ ಸ್ಫೋಟವು ಭಾರತ-ಅಮೆರಿಕ ಬಾಂಧವ್ಯಕ್ಕೆ ಧಕ್ಕೆ ತಂದಿಲ್ಲ: ಕಿಸಿಂಜರ್**

ವಾಷಿಂಗ್ಟನ್, ಜೂನ್ 8– ಭಾರತವು ಅಣು ಸಾಧನವೊಂದನ್ನು ಸ್ಫೋಟಿಸಿದುದು ಭಾರತ–ಅಮೆರಿಕ ಬಾಂಧವ್ಯದ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಉಂಟು ಮಾಡಿಲ್ಲ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಡಾ. ಹೆನ್ರಿ ಕಿಸಿಂಜರ್ ಅವರು ಮತ್ತೆ ಒತ್ತಿ ಹೇಳಿದ್ದಾರೆ.

ಅಲ್ಲದೆ ಈ ಸ್ಫೋಟವು ಆಗ್ನೇಯ ಏಷ್ಯಾ ರಾಷ್ಟ್ರಗಳ ಶಕ್ತಿ ಸಮತೋಲನದ ಮೇಲೂ ಯಾವ ಪ್ರತಿಕೂಲ ಪರಿಣಾಮ ಉಂಟು ಮಾಡಿಲ್ಲವೆಂದೂ ಅವರು ತಿಳಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜೂನ್ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ತೃತೀಯ ಗಂ. 15-45 ನಕ್ಷತ್ರ: ಪುನರ್ವಸು ಗಂ. 20-21 ಯೋಗ: ವೃದ್ಧಿ ಗಂ. 17-21 ಕರಣ: ಗರ ಗಂ. 15-45, ವೃಷಭ ಮಾಸದ ನೇ 26 ದಿನ, ಮಳೆನಕ್ಷತ್ರ: ಮೃಗಶಿರ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-07 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 02 ಜುಲ್‌ಹಿಜಾ
ದಿನ ವಿಶೇಷ : ಪ್ರತಾಪ ಜಯಂತಿ (ರಾಜಸ್ಥಾನ), ರಂಭಾ ತೃತೀಯ — ಅದೃಷ್ಟ ಸಂಖ್ಯೆ : 3, 12

ಮೇಷ: ನಿಮ್ಮ ಇಂದಿನ ದಿನದಲ್ಲಿ ಸಂಭವಿಸುವ ಹಲವಾರು ಘಟನೆಗಳಿಂದ ದಿವ್ಯಶಕ್ತಿಯ ಅನುಭೂತಿ ಸಿಗುತ್ತದೆ. ನೀವು ನಿರ್ಧರಿಸಿದ ರೀತಿಯಲ್ಲಿ ನಿಮ್ಮ ಜೀವನ ಇರುವುದು. ಈ ದಿನವು ನೆಮ್ಮದಿಯ ದಿನವೆನಿಸುವುದು.

ವೃಷಭ: ಸಹೋದರರಲ್ಲಿರುವ ವೈಷಮ್ಯಗಳು ಗಮನಕ್ಕೆ ಬರಲಿದೆ. ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರುತ್ತದೆ. ಹಣಕಾಸಿನ ವಿಚಾರದಲ್ಲಿ ನೀವು ಇನ್ನೊಂದು ಮೆಟ್ಟಿಲು ಹತ್ತುವಂತಾಗಲಿದೆ.

ಮಿಥುನ: ಮಕ್ಕಳು ತಪ್ಪು ಮಾಡಿದಾಗ ಸಿಟ್ಟು ಬಂದರೂ, ತಿಳಿವಳಿಕೆ ಹೇಳುವುದರಿಂದ ಅವರನ್ನು ಸರಿದಾರಿಗೆ ತನ್ನಿ. ಮುಕ್ತ ಮಾತುಕತೆಯಿಂದಾಗಿ ವ್ಯವಹಾರಗಳು ನೀವು ಅಂದುಕೊಂಡ ರೀತಿಯಲ್ಲಿ ನಡೆಯಲಿವೆ.

ಕರ್ಕಾಟಕ: ನಿಮ್ಮ ಜೀವನದ ಸಂಕ್ರಮಣ ಕಾಲದಲ್ಲಿ ಎದುರಿಸಬಹುದಾದ ಗೊಂದಲಗಳಲ್ಲಿ ಸಂಗಾತಿಯು ನಿಮ್ಮ ಬೆನ್ನೆಲುಬಾಗಲಿದ್ದಾರೆ. ನಿಮ್ಮ ಕೆಟ್ಟ ಹಾಗೂ ಅನಾವಶ್ಯಕ ಆಲೋಚನೆಗಳು ಅನಾರೋಗ್ಯವನ್ನು ಅಧಿಕಗೊಳಿಸುವುದು.

ಸಿಂಹ: ಮುಂದಿನ ದಿನಗಳಲ್ಲಿ ನಿಮ್ಮ ಎಲ್ಲಾ ಯೋಜನೆಗಳಲ್ಲಿ ಪ್ರಾಬಲ್ಯ ಸಾಧಿಸುವಿರಿ. ದುಡುಕು ನಿರ್ಧಾರದಿಂದ ವ್ಯವಹಾರದಲ್ಲಿ ಸೋಲಬೇಕಾಗುತ್ತದೆ. ಪ್ರೇಮಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು.

ಕನ್ಯಾ: ಅನಾರೋಗ್ಯದ ಹೊರತಾಗಿಯೂ ಜವಾಬ್ದಾರಿಗಳನ್ನು ನಿಭಾಯಿಸಲೇ ಬೇಕಾದುದು ಮಾನಸಿಕ ಸಂಕಟಕ್ಕೆ ಕಾರಣವಾಗಬಹುದು. ಮಾತೃವರ್ಗದ ಸಂಬಂಧಿಗಳ ಮನೆಯಲ್ಲಿ ಮಂಗಳ ಕಾರ್ಯ ಜರುಗಲಿದೆ.

ತುಲಾ: ನಿಮ್ಮ ಸಹವರ್ತಿಗಳು ಕೆಲವು ಸನ್ನಿವೇಶಗಳಲ್ಲಿ ನಿಮ್ಮ ಪರವಾಗಿರುವಂತೆ ತೋರಿದರೂ, ಆತ ನಂಬಿಕೆಗೆ ಅರ್ಹನಾಗಿರುವುದಿಲ್ಲ. ದಾಂಪತ್ಯದಲ್ಲಿನ ಸಣ್ಣ ಪುಟ್ಟ ವಿಚಾರಗಳಿಂದ ಮಾನಸಿಕ ಅಸಮಾಧಾನ ಮಾಡಿಕೊಳ್ಳದಿರಿ.

ವೃಶ್ಚಿಕ: ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನಗಳಿಸಲು ಸಫಲರಾಗುವಿರಿ. ತಾಳ್ಮೆ-ಸಮಾಧಾನದಿಂದಾಗಿ ದಾಂಪತ್ಯ ಜೀವನದಲ್ಲಿ ಸುಖ, ಶಾಂತಿ ಹಾಗೂ ನೆಮ್ಮದಿ ದೊರಕುವುದು.

ಧನು: ವೃತ್ತಿ ಜೀವನದಲ್ಲಿನ ಅಡೆತಡೆಗಳನ್ನು ಸುಲಭವಾಗಿ ನಿವಾರಿಸುವಿರಿ. ಮೇಲಧಿಕಾರಿಯ ಅಪರೂಪದ ಮೃದು ವರ್ತನೆಯಿಂದ ಕೆಲಸ ಕಾರ್ಯಗಳಲ್ಲಿ ತೃಪ್ತಿಯುಂಟಾಗುವುದು. ತಪ್ಪುಗಳನ್ನು ಮಾಡದಿರಿ.

ಮಕರ: ಮರಗೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ, ಕೆಲಸಕ್ಕೆ ಸೋಮಾರಿತನ ಅಡ್ಡಿಯಾಗುವುದು. ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಆಶಾಕಿರಣ ದೊರೆಯಲಿದೆ.

ಕುಂಭ: ವಿದ್ಯಾಭ್ಯಾಸದಲ್ಲಿನ ನಿಮ್ಮ ಸಾಧನೆಗೆ ನಿಮ್ಮ ಗುರುಗಳ ಕಡೆಯಿಂದ ಪ್ರೋತ್ಸಾಹ ಸಿಗುವುದು. ಹೊಸ ಸ್ಥಳದಲ್ಲಿ ಹೊಂದಾಣಿಕೆ ಕಷ್ಟವಾಗಬಹುದು. ಮಕ್ಕಳೊಂದಿಗಿನ ಸುತ್ತಾಟ, ಮಾತುಕತೆ ಮನಸ್ಸಿಗೆ ಹಿತ ತರಲಿದೆ.

ಮೀನ: ಸಂಗಾತಿಯ ಅಪರೂಪದ ಹೊಗಳಿಕೆಯ ಮಾತುಗಳನ್ನು ಕೇಳಿ ಸಂತೋಷಪಡುವಿರಿ. ಶಾಂತ ಚಿತ್ತದಿಂದ ಕೆಲಸ ಮಾಡಿ. ಹಳೆಯ ದುರ್ಘಟನೆಗಳನ್ನು ಮರೆತು ಭವಿಷ್ಯದತ್ತ ಗಮನ ಹರಿಸುವುದು ಉತ್ತಮ.

ಪದಬಂಧ 5706

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
4.ಈತ ಮುಷ್ಕರ ಹೂಡುವವನು (4)
5.ಗಲ್ಲಿಯಲ್ಲಿ ಆದ ಗೊಂದಲ! (4)
7. ನವೆ ಹೀಗೆ ಉಂಟಾಗಿದೆ (3)
10.ಕೊನೆಗೆ ಪಾಸು ಎಂದರೂ ತೇರ್ಗಡೆಯಾಗದಿರುವಿಕೆ! (3)
12.ದಂತ ಕೊನೆಗಿದ್ದಾಗ ದಿಕ್ಕಿನ ಕೊನೆ ಕಾಣುವುದೇ? (4)
13.ಅದೇತಾನೆ ಮೂಡುತ್ತಿರುವ ಸೂರ್ಯ (4)
15.ಯಾತ್ರಿಕರು ಇಳಿದುಕೊಳ್ಳಲು ಮಾಡಿರುವ ವಸತಿ (6)

ಮೇಲಿಂದ ಕೆಳಕ್ಕೆ
1.ಆ ಜಾಗದಲ್ಲಿರುವ ಹೆಬ್ಬಾವು ಕಾಣುತ್ತಿದೆಯೇ? (4)
2.ರಭಸವಾಗಿ ಹರಿಯುತ್ತಿರುವ ದ್ರವ (2)
3.ಬರದಲ್ಲಿ ಹೊರಹಾಕುವಿಕೆ! (4)
6.ಮನಸ್ಸು ಬಿಚ್ಚಿ ಮಾತನಾಡದಿರುವಿಕೆ (4)
7.ಇನ್ನೂ ಕರು ಹಾಕದೇ ಇರುವ ಹಸು (3)
8.ಕಾರಿನಲ್ಲಿರುವ ಕಾಯಿಪಲ್ಲೆ (4)
9. ಅಕ್ಕಪಕ್ಕ ಎಂದು ಈ ರೀತಿ ಹೇಳಿ (4)
11.ಓಟನ್ನು ನೀಡುವವನು (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



5705ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಸೂತಿಗೃಹ 4.ಸಮಸ್ಯೆ
5.ವರಾತ 6.ವದನ
7.ತಕಲಿ 9.ಶಂಕೆ
10.ಹರಿ 12.ಪರಮ
14.ಪ್ರಭಾವ 15.ಸುಲಭ
16.ಪರಾಕು 17.ವಚನಭ್ರಷ್ಟ

ಮೇಲಿಂದ ಕೆಳಕ್ಕೆ:
1.ಪ್ರಸಾಧನ 2.ತಿಳಿವಳಿಕೆ
3.ಹವನ 4.ಸತತ
8.ಕಚೇರಿ 9.ಶಂಬರ
10.ಹಯವದನ 11.ದಷ್ಟಪುಷ್ಟ
13.ಮಸುಕು 14.ಪ್ರಭವ

ಸುಡೊಕು 6091

2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6090 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರೆಸ್ಟೀಜ್
ಏನನ್ನಾದರೂ
ಯಾವುದಕ್ಕಾದರೂ
ಎಕ್ಸ್‌ಚೇಂಜ್ ಆಫರ್*
ಪ್ರೆಸ್ಟೀಜ್‌ನೊಂದಿಗೆ
ನಿಮ್ಮ ಅಡುಗೆಮನೆಯನ್ನು
ಅಪ್‌ಗ್ರೇಡ್ ಮಾಡಿ.
ಯಾವುದೇ ಬ್ರ್ಯಾಂಡ್‌ನ ಹಳೆಯ ಕಿಚನ್ ಅಪ್ಲಾಯನ್ಸಸ್ ಮತ್ತು ಕಿಚನ್‌ವೇರ್‌ಗಳನ್ನು ವಿನಿಮಯ ಮಾಡಿಕೊಳ್ಳಿ ಮತ್ತು ಪ್ರೆಸ್ಟೀಜ್ ಹಾಗೂ ಜಡ್ಜ್ ನವರ ಅತ್ಯುತ್ತಮ ಆವಿಷ್ಕಾರಗಳನ್ನು ಮನೆಗೆ ತನ್ನಿ.
ಮೇ 1 ರಿಂದ ಜೂನ್ 30, 2024 ವರೆಗೆ
75 Years of Prestige
ಹೊರಚೆಲ್ಲುವಿಕೆ ನಿಯಂತ್ರಿಸಬಲ್ಲ ಪ್ರೆಶರ್ ಕುಕ್ಕರ್‌ಗಳ ಸ್ವಚ್ಛ್ ಶ್ರೇಣಿ
ಸ್ವಚ್ಛ್ ಪ್ರೆಶರ್ ಕುಕ್ಕರ್‌ಗಳು
24% - 42% ರಿಯಾಯಿತಿ*
ಹಾನಿಕಾರಕ ರಾಸಾಯನಿಕಗಳಿಂದ ಮುಕ್ತವಾದ, ಪ್ರೆಸ್ಟೀಜ್‌ನ ನಾನ್-ಸ್ಟಿಕ್ ಕುಕ್‌ವೇರ್‌ಗಳೊಂದಿಗೆ ಆರೋಗ್ಯಕರ ಅಡುಗೆಯನ್ನು ಮಾಡಿಕೊಳ್ಳಿ
PFOA-Free
ನಾನ್-ಸ್ಟಿಕ್ ಕುಕ್‌ವೇರ್ ಶ್ರೇಣಿ
33% - 55% ರಿಯಾಯಿತಿ*
ಸುಲಭ ಸ್ವಚ್ಛತೆಗಾಗಿ ಕ್ರಾಂತಿಕಾರಿ ವಿನ್ಯಾಸ
ಸ್ವಚ್ಛ್ ಗ್ಲಾಸ್ - ಟಾಪ್ ಗ್ಯಾಸ್ ಸ್ಟವ್‌ಗಳು
29% - 41% ರಿಯಾಯಿತಿ*
ಪ್ರೆಶರ್ ಕುಕ್ಕರ್‌ನ ವಿಸಿಲ್ ಲೆಕ್ಕ ಹಾಕುವ ಅನುಕೂಲಕರ ಇಂಡಕ್ಷನ್ ಕುಕ್‌ಟಾಪ್
AUTOMATIC WHISTLE COUNTER
ಇಂಡಕ್ಷನ್ ಕುಕ್‌ಟಾಪ್ 2000W
37% - 51% ರಿಯಾಯಿತಿ*
14 ವಿವಿಧ ಕಾರ್ಯಗಳನ್ನು ಮಾಡುವಂತಹ ಬಹುಪಯೋಗಿ ಗ್ರೈಂಡರ್
14 ವಿವಿಧ ಕಾರ್ಯಗಳು
ಎಂಡ್ಯುರಾ ಪ್ರೋ ಮಿಕ್ಸರ್ ಗ್ರೈಂಡರ್ 1000W
37% - 46% ರಿಯಾಯಿತಿ*
ನಿಮ್ಮ ಅನುಕೂಲಕ್ಕಾಗಿ ಸಣ್ಣ ಉಪಕರಣಗಳು
ಜ್ಯೂಸರ್
ಒಟಿಜಿ
ಸ್ಯಾಂಡ್‌ವಿಚ್ ಮೇಕರ್
ಕೆಟಲ್
ಏರ್ ಫ್ರೈಯರ್
32% - 65% ರಿಯಾಯಿತಿ*
ಗ್ಯಾಸ್ ಲೀಕೇಜ್ ಮತ್ತು ಹೊಗೆ ಪತ್ತೆ ತಂತ್ರಜ್ಞಾನದೊಂದಿಗೆ ಭಾರತದ ಮೊದಲ ಚಿಮಣಿ
App Enabled
SafeSense technology
ಆಸ್ಕರ್ ಸೇಫ್-ಸೆನ್ಸ್ ಚಿಮಣಿ
52% - 62% ರಿಯಾಯಿತಿ*
JUDGE By Prestige
ಅತ್ಯುತ್ತಮ ಪ್ರಾಡಕ್ಟ್‌ಗಳು ಮತ್ತು ಉತ್ಕೃಷ್ಟ ಮೌಲ್ಯ.
ಪ್ರೆಶರ್ ಕುಕ್ಕರ್ 37%-53% ರಿಯಾಯಿತಿ*
ಕುಕ್‌ವೇರ್ 38%-71% ರಿಯಾಯಿತಿ*
ಗ್ಯಾಸ್ ಸ್ಟವ್ 41%-47% ರಿಯಾಯಿತಿ*
ಮಿಕ್ಸರ್ ಗ್ರೈಂಡರ್ 41%-52% ರಿಯಾಯಿತಿ*
ಇಂಡಕ್ಷನ್ 45%-52% ರಿಯಾಯಿತಿ*
ಇತರ ಅಪ್ಲಾಯನ್ಸಸ್ 39%-68% ರಿಯಾಯಿತಿ*
ಸರ್ವ್ ವೇರ್ 36%-74% ರಿಯಾಯಿತಿ*
Prestige
ನಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?
CUSTOMER CARE NO 080-6000 4411
Store Locator
For any institution or bulk enquiries, contact: 7908 710841 biz.enquiry@ttkprestige.com
Scan to Connect
Shop Online on shop.ttkprestige.com

WEEKEND CORNER ಕ್ಲಾಸಿಫೈಡ್ಸ್

ZOR Malam & Lotion

For Faster Relief from
Eczema, Ringworm, Itches, Cold Cracks and Pimples!

BIOPHARM GROUP
Representatives & Managers Required
For more Informations Call / Whatsapp
8217312776

Handloom INDIA

ನೈಸರ್ಗಿಕ ನಾರು ರೇಷ್ಮೆಯ ಪ್ರದರ್ಶನ ಮತ್ತು ಮಾರಾಟ

ಪ್ರಮಾಣೀಕೃತ ಅಸಲಿ ರೇಷ್ಮೆ ಮತ್ತು ನೂಲಿನ, ಹಸ್ತದಿಂದ ತಯಾರಿಸಲಾದ ಭಾರತದಾದ್ಯಂತದ ಎಲ್ಲಾ ಉತ್ಪಾದಕರ ಉತ್ಪನ್ನಗಳು ಒಂದೇ ಸೂರಿನ ಅಡಿಯಲ್ಲಿ

ಇಂದೇ ಕೊನೆಯ ದಿನ
ಪ್ರತಿದಿನ ಬೆಳಗ್ಗೆ 11 ರಿಂದ ರಾತ್ರಿ 9 ಗಂಟೆ
ಸ್ಥಳ
ಶ್ರೀನಿವಾಸ ಸಾಗರ ಕಲ್ಯಾಣ ಮಂಟಪ
ಅಶೋಕ ಸ್ತಂಭದ ಹತ್ತಿರ, 2ನೇ ಬ್ಲಾಕ್,
ಜಯನಗರ, ಬೆಂಗಳೂರು–11

ಪ್ರಮಾಣೀಕೃತ ಅಸಲಿ ರೇಷ್ಮೆ ಉತ್ಪನ್ನಗಳ ಉತ್ಪಾದಕರೆಲ್ಲ ಸೇರಿ ಒಂದೇ ಸೂರಿನ ಅಡಿಯಲ್ಲಿ ತಮ್ಮ ಬನಾರಸಿ, ಕಾಂಚಿಪುರಂ, ಬಿಹಾರ್, ಟಸ್ಸಾರ್ ಮತ್ತು ಮಟ್ಕಾ ಸಿಲ್ಕ, ಚತ್ತೀಸ್‌ಗಢ್ ಕೊಸಾ, ಗುಜರಾತ್ ಪಟೋಲಾ ಮತ್ತು ಬಂಧಿನಿ, ಪಶ್ಚಿಮ ಬಂಗಾಳದ ಬಯಾಲು, ಬಲೂಚರಿ, ಢಕಾಯಿ, ಜಾಮದನಿ, ಕಾಂತಾ ಮತ್ತು ಹ್ಯಾಂಡ್ ಪೈಂಟೆಡ್, ಧರ್ಮಾವರಂ, ಚಾಂದೇರಿ, ಎರಿ (ಅಹಿಂಸಾ), ಹ್ಯಾಂಡ್‌ಬ್ಲಾಕ್ ಪ್ರಿಂಟ್, ಹ್ಯಾಂಡ್ ಕಲಾಂಕರಿ, ಡ್ರೆಸ್ ಮಟೀರಿಯಲ್ & ಇನ್ನೂ ಅನೇಕ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಿದ್ದಾರೆ.

ENTRY FREE • M: 9412258826 • ALL DEBIT & CREDIT CARDS ACCEPTED



ಯಲಹಂಕ Behind BMS College

DC CONVERSION LAYOUT · E KHATA
Land Mark: SHELL PETROL BUNK OPP BMS College ಹಿಂಭಾಗ
30 x 30 ನಿವೇಶನಗಳು @ 44 ಲಕ್ಷಗಳು
30 x 40 ನಿವೇಶನಗಳು @ 58 ಲಕ್ಷಗಳು
Attached to BEL LAYOUT

ವಿದ್ಯಾರಣ್ಯಪುರ

GKVK Back Gate, Attur Layout
BBMP KHATA
Land Mark:
• DMart ನಿಂದ ನಿಮಿಷ
• 1.5km from Vidyaranyapura Busstop
• 2Mins Walking Distance to GKVK Busstop
20 x 30 ನಿವೇಶನಗಳು @ 28 ಲಕ್ಷಗಳು
30 x 40 ನಿವೇಶನಗಳು @ 56 ಲಕ್ಷಗಳು

ಯಲಹಂಕ ಬಾಗಲೂರು

E KHATA · DC CONVERSION LAYOUT
SEZ Road, Vidya Nagar Cross, Venkateswara Engg. College
UPCOMING BBMP LIMITS
30 x 35 ನಿವೇಶನಗಳು @ 39.90 ಲಕ್ಷಗಳು
30 x 40 ನಿವೇಶನಗಳು @ 45 ಲಕ್ಷಗಳು

ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank
9880 149 159 | 9900 698 748

MH PROMOTERS

BBMP Limits **Sites** @ Hemmigepura
Mysore Road, Kengeri
Clear Legal Titles, Ready for Registration & Construction, Bank Loan Avbl
Call for Site Visit: **95138 50029**
www.mhpromoters.in

SAMRUDDHI DEVELOPERS

AMRUTHADAMA ENCLAVE
PHASE - 3
@ BANGALORE NORTH
RAJANKUNTE, YELAHANKA

GATED COMMUNITY SITE FOR SALE
NEIGHBOURING PRESTIGE OASIS VILLAS
ATMOS SILVERWOOD VILLAS
PRESIDENCY UNIVERSITY
AMENITIES
Entrance Arch | 24 Hour Water Facility
Underground Electricity
Plantations / Underground Drainage
White Top Roads / Gated Community
DC CONVERSION SITES
'E' Khata Bank loan 90% Just pay 10%
9741126375 / 9066578786

BUILDING FOR SALE

30x40 BMRDA approved Site, North facing Houses, 1BHK-3 Houses, 2BHK-1 House.
Build-up area: ground +2 floor, 3300 Sqft. with parking facility.
Location: Upakar Spring Fields Layout, Neraluru, near Chandapura.
Property is only 200 meters from the NH-844. Hosur Highway to Half km. Dharmapuri New Highway (80% completed), 15 minutes to Electronic City, 4 kms to Bommasandra Metro Station.
Call: 95913 51111, 93419 06876

Community Centre (R) - 1956

COMMUNITY INSTITUTE OF MANAGEMENT STUDIES [CIMS]

Affiliated to BENGALURU CITY UNIVERSITY, Approved by AICTE, New Delhi
#2/1, Natabhairava Shri V Vajramuni Road, 9th Cross, 9th Main, 2nd Block, Jayanagar, Bengaluru - 560011.

UNIVERSITY RANK HOLDERS - MBA (BATCH 2021 - 23)

3rd Rank

Ms. Brunda T J

4th Rank

Ms. Muntha Jyothsna

5th Rank

Ms. Zhohara Zabeena

Hearty Congratulations

Shri. K M Nagaraj, Chairman · Shri. Chikkaiah, Secretary · Dr. Mahesh Kumar K R, Director
Teaching & Non-Teaching Staff

ADMISSIONS FOR MBA & MCA 2024

GOVERNMENT QUOTA MBA & MCA - 2024
Any Degree Students (even Final Sem UG students) can apply or register in KEA website before 17th June 2024
PGCET CODE: MBA - B153 / MCA – C528

MANAGEMENT QUOTA MBA & MCA ADMISSIONS OPEN FOR 2024

FREE COACHING CLASSES
CIMS is conducting FREE PGCET Coaching Classes for MBA & MCA aspirants at CIMS Campus from 24th June 2024.
Interested Students can register through Whatsapp or Website. SMS "YOUR NAME" "PGCET UPDATE" to 8884401104

Admission Queries Contact:
8884401104 / 9731022994 / 080 26577851
Website: www.cimsbschool.org
Email: cimsadmissions01@gmail.com

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

SALE, 60X40 BDA, NORTH FACING SITE @ BANASHANKARI 6th Stage 10th Block. Good Location. 7411255535

BANASHANKARI 6TH Stage, 4th Block, BDA Site For Sale 30x40, South Facing,Contact:9844216344

Bannerghatta Road

BANNERAGTTA ROAD Bilekahalli 30X50 East Facing A Katha Site Near IIM, Shantiniketan School 1,15,00000:- 9739995042

SITE FOR sale SIMHAPURI LAYOUT, Near Jigani Industrial area, Bengaluru 6100 sq ft. 9591932764

Kempegowda Layout

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

HBR Layout

HBR BEHIND BDA Complex 2nd Block Excellent Location Brand new 4 BHK Spacious Flat 2200 Sft Completion in 2 Months Price 10,000/ Sft: 98451-84220

Hennur

NARAYANPURA Behind Biozen, Excellent Location brand new Architect Designed 3 Separate Units. 2 Carparks Semi-Furnished on 700 sft site Built-up 2100 sft 3 Floors: 98451-84220

GUBBI CROSS Kuvempu Layout behind Decathlon Excellent Semi-Furnished Villa 4 BHK 2 Carparks 2150 Sft Site Built-up 4500 Sft: 98451-84220

Jayanagar

"**JAYANAGAR 4TH- BLOCK** 45x90 West facing Site with old house, Excellent Location, Brokers Excuse. 9845500019/ 7019314962"

PRIME PROPERTY for SALE near Madhavan Park 1st Block, 40x60 South Facing, Brokers Excuse. Contact: 7760110114.

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

30'X45' NORTH, clear titles Jayanagar 3rd block East ₹25,000/ sft. Slightly negotiable. Brokers excuse. 9845397832

40X60 BDA Site Sale Jayanagar 4th Block West Face Cool Joint Opposite Good Location: 9844845864

J P Nagar

20X30 OLD Building For Sale West Facing J.P.Nagar 4th Phase Rent 25000/- Contact: 9880425607

JPNAGAR 9TH Phase 3rd Block 40x60 North Facing BDA Commercial Site on 80 Feet Road for Sale @ Rs.14000/ Sft Slightly Nego Call: 8546919133

Kengeri

30X40 CORNER Varahasandra Layout Hemmigepura Ward Opposite Kadalekai Parishe Conversion B Katha 4000/- Negotiable: 8105251219

Koramangala

KORAMANGALA Semi - Commercial 2,200 sft. North West Corner Site, Price: 33,000/- not negotiable. David- 9845855663.

Kanakapura Road

SITE SALE 30x40 BCMC Layout BDA Approved Near Metro Station Doddakallasandra, 30`Feet Road. 6363726250.

SITES AVAILABLE Near Agara Village Thathaguni Kumbalagodu Road 30x40,East,Good Location,28 Lakhs Contact:9686201071

SALE BMRDA Harohalli Near NH Kanakapura Road 1150 Sft West Facing 25 Lakhs. Contact: 6366001234

Magadi Road

***MAGADI MAIN** Road* Andhrahalli 'D' Group Layout 30×40 West Facing 7500/- sqft. Negotiable. ABHILASHA CONSULTANT:9480565758

Multiple Locations

BUYING/ SELLING BDA Properties Any Measurements Contact Sunstone Properties: 99804 33004/ 8217392686

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

SITES AVAILABLE Near K,Gollahalli Mysore Road, 30x50,East,DC Conversion E'Khata Good Location 35Lakhs: 9686201071

Nagarabhavi

FOR SALE: 2760 Sft W&S corner commercial site in Maruthinagar Main Road, Nagarabhavi Road near Canara Bank Colony. 30x40 West facing 4 Bedroom Duplex House in BDA Nagarabhavi 9th Block. 9242197954

BDA SITE Nagarabhavi 12th Block, Near Nammura Thindi, W/F 40ft Road 30x42 Owner: 9844009086/ 9343368313

Nelamangala

"**30X50 SOUTH- FACING** site for sale @ Nelamangala Rashi developers close to D-Mart Tumkur highway. 9845268611"

Ombr Layout

OMBR LAYOUT Excellent location, East Facing 30x40 BDA SITE Price Rs. 19,000/ Sft. Call: 98451-84220

Rajajinagar

RAJAJINAGAR 5TH Block 68th Cross 1500 sqft South Facing Rs.25000/- sqft Slightly Negotiable.Contact: 9686469799

60X40 OR 50X80 Site Residential or Commercial Required at Basaveshwar Nagar/ Rajajinagar Surroundings Brokers Excuse Contact: 9900457829

R T Nagar

R.T.NAGAR HMT LAYOUT 60X90 West Facing Vacant Site Excellent Location BDA Approved For Sale Call:9341260828

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vijayanagar

SALE VIJAYNAGAR 30x46 North, 35x51 South, 40x60 West, 35x50 North, 50x80 West, 45x90 South. 9481455837.

Vishweshwariah Layout

SMV 6TH Block Modern Layout BBMP A Katha 30x40 (East), 2nd Block 40x60 BDA: 9964971895

AVAILABLE VISHWESHWARAIAH Layout 1st Block 20x30 East Face Builders Location Sirke Apartment Good Location: 8553908699

AVAILABLE 40X60 BDA Site North Facing 1st Block 40ft Road Vishveshwariah Layout Contact Buyers: 9844603127

"**30X40 WEST** facing BDA site Sale 40 feet Road Vishveshwaraiah Layout 7th Block. 9845500019/ 7019314962"

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

"**VISHVESHWARAIAH LAYOUT** 6th-Block Opp.KLE Law college 50x80 North 80'feet Road 100% Vastu Site. 9448432633"

30X40 SITE Sale Vishveshwaraiah Layout 8th Block Corner And 40X60 Site Sale 5th Block: 8310003509

Vidyaranyapura

34X60, 2040 Sqft 40ft Road BBMP B Katha Vidyaranyapura Price 6500/- Psqft Slightly Negotiable: 9916119936

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

18000 sq.ft Commercial Property for Rent
Near Silk Board, HSR Layout
Only for Software Companies
Contact: **98456 98136**

Mandya

40X60 MANDY Muda Site No. 2703 Basaralu Road 1st Petrol Bunk Behind 3100/- Negotiable: 9731652042

Hegdenagar

MCECHS EXCELLENT location Brand new Architect Designed E/F 4 BHK, 1 Carpark. Independent House Semi-Furnished on 600 Sft site, 1900 Sft Built-up 3 Floors: 98451-84220

MCECHS HEGDE Nagar Excellent location 700 Sft. South Facing 'A' Katha site Price 13,000: 98451-84220

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore-560079. Clear Titles & 'A' Katha, Rs.5.10 Crores (slightly negotiable). Party going out of station. Immediate Registration. 9845765559/ 9845043282

RAMAN POLYTECHNIC

12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
ASC - RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
RAMAN DEGREE COLLEGE
BBA CONTACT: 80500 66771 / 63609 03500 BCA
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-24501

HOUSE FOR sale 40x60 west, Ground and first floor, Good location, Near Pavithra paradise. 9845527196.

Jayanagar

SALE 43X92 Commercial RV Road With old House East Facing on 80feet Road Excellent Location Call:9066399102 9844134068

J P Nagar

JP-NAGAR 3RD Near Mini First, Jayadeva Hospital, 60X90 East Facing 20,00,00,000/- 8 BHK House: 9739995042

R T Nagar

R.T.NAGAR HMT Layout 40X60 5-BHK Duplex House N/W Corner Teak and Italian Marble 4- Carparking 9845378269

Nagarabhavi

"**INDIVIDUAL HOUSE** BDA 1.20 Lakhs Rental income new building ₹3.80 Crore negotiable, opposite Nammura Thindi, Nagarabhavi. 9945309883"

***NAGARABHAVI* 30X50** E/F 4 BHK Duplex House. 30X40 N/F 4BHK Duplex Beautiful House sale Call.9591013777

Flat

Banashankari

"**SALE-LUXURY NEW-FLAT,** Poorna Pragna Layout one floor one Flat, 2Car-parking, 2100.Sqft, Rs.1,49,00,000/- "Sri.Ganesh Estate" 9845286505"

Cambridge Layout

SPACIOUS FOUR Bedrooms, Flat/ Villament Private Entrance, Garden, Car-parking. 3700 sft. 2.9 Cr. 9620204637/ 9880346216

Jayanagar

JAYANAGAR 1ST Block 1233sft 2 BHK Posh Flat on 1st Floor For-Sale Near Madhavan Park With Carpark Call:9739393607

Kanakapura Road

VIJAYA HARE Heights Apartment 9thFloor 5400 Sft 5 BHK, Fully Furnished/ Servant Room 4 Carparking 3,90,00000/- 9739995042

DH Classifieds ಪ್ರಜಾವಾಣಿ

More value, more impact
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752
+91 9886213331
+91 9731810277 | +91 9900428036
080-45557163/164
*Conditions apply

MORE Classifieds Ads on Subsequent Pages

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳು-1, ನಂ.39, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ, "ಶಾಂತಿ ಗೃಹ", 4ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001.

ಸಂಖ್ಯೆ : ಕೆಐಎಡಿಬಿ/ಎಲ್ಎಕ್ಯೂ/468/2024-25 ದಿನಾಂಕ: 04.06.2024

ಸಾರ್ವಜನಿಕ ನೋಟೀಸ್

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ)

ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಮಡಿವಾಳ, ಚಂದ್ರಶೇಖರಪುರ, ಮಲ್ಲಿಯಪ್ಪನಹಳ್ಳಿ, ಮಂಚಂಡಹಳ್ಳಿ ಮತ್ತು ಕುರುಗಲ್ ಗ್ರಾಮಗಳಲ್ಲಿ ಈ ಕೆಳಕಂಡ ಖಾತೆದಾರರು / ಅನುಭವದಾರರಿಗೆ ತಿಳಿಯಪಡಿಸುವುದೇನೆಂದರೆ, ಇದರಡಿ ವಿವರಿಸಿರತಕ್ಕ ಸ್ವತ್ತು ಕೈಗಾರಿಕಾ ಅಭಿವೃದ್ಧಿಗೋಸ್ಕರ ಬೇಕಾಗಿರುವುದರಿಂದ ಸದರಿ ಸ್ವತ್ತನ್ನು ಭೂಸ್ವಾಧೀನಕ್ಕೆ ಒಳಪಡಿಸಿ ಘನ ಸರ್ಕಾರದವರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(1)ರಂತೆ ಸಂಖ್ಯೆ: ಸಿಐ 207 ಎಸ್‌ಪಿಕ್ಯೂ (ಇ) 2022 ದಿನಾಂಕ: 02.02.2023 ರಂದು ಕರ್ನಾಟಕ ರಾಜ್ಯ ಪತ್ರದ ದಿನಾಂಕ 09.02.2023 ರಂದು ಪುಟ ಸಂಖ್ಯೆ:1926 ರಿಂದ 2050 ರಲ್ಲಿ ಪ್ರಕಟಗೊಳಿಸಿರುತ್ತಾರೆ. ಸದರಿ ಸ್ವತ್ತನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿಗೋಸ್ಕರ ಏತಕ್ಕೆ ಸ್ವಾಧೀನ ಪಡಿಸಿಕೊಳ್ಳಬಾರದೆಂಬುದರ ಬಗ್ಗೆ ಏನಾದರೂ ಆಕ್ಷೇಪಣೆ ಇದ್ದರೆ ಸದರಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಈ ನೋಟೀಸ್ ತಲುಪಿದ **30 ದಿನಗಳೊಳಗಾಗಿ** ಈ ಕೆಳಕಂಡ ಅಧಿಕಾರಿಯವರಿಗೆ ಖುದ್ದಾಗಿ ಅಥವಾ ಅಂಚೆ ಮುಖಾಂತರ ಕಳುಹಿಸತಕ್ಕದ್ದು, 30 ದಿನಗಳಾದ ನಂತರ ಬಂದ ಆಕ್ಷೇಪಣೆಗಳನ್ನು ಸ್ವೀಕೃತ ಮಾಡಲಾಗುವುದಿಲ್ಲ ಮತ್ತು ಪರಿಗಣನೆಗೆ ತೆಗೆದು ಕೊಳ್ಳಲಾಗುವುದಿಲ್ಲವೆಂದು ತಿಳಿಯುವುದು. ಸದರೀ ಆಕ್ಷೇಪಣೆಗಳನ್ನು ವಿಚಾರಣೆ ಮಾಡಲು ವಿಧಿ 28(3)ರಂತೆ ನಿಮಗೆ ಅವಕಾಶವನ್ನು ಕಲ್ಪಿಸಲಾಗಿದೆ. ನಿಮ್ಮಲ್ಲಿರಬಹುದಾದ ದಸ್ತಾವೇಜುಗಳು ಮತ್ತು ದಾಖಲಾತಿಗಳೊಂದಿಗೆ **ವೇಮಗಲ್ ಪ್ರವಾಸಿ ಮಂದಿರ, ವೇಮಗಲ್ ಹೋಬಳಿ, ಕೋಲಾರ ತಾಲ್ಲೂಕು ಇಲ್ಲಿ ವಿಚಾರಣೆಯನ್ನು ನಿಗದಿಪಡಿಸಲಾಗಿರುತ್ತದೆ. ದಿನಾಂಕ: 12.06.2024 ರಂದು ಬೆಳಿಗ್ಗೆ 11.30 ಗಂಟೆಗೆ ಮಲ್ಲಿಯಪ್ಪನಹಳ್ಳಿ ಗ್ರಾಮ, ದಿನಾಂಕ: 13.06.2024 ರಂದು ಬೆಳಿಗ್ಗೆ 11.30 ಗಂಟೆಗೆ ಮಡಿವಾಳ ಗ್ರಾಮ ಮತ್ತು ದಿನಾಂಕ: 14.06.2024 ರಂದು ಬೆಳಿಗ್ಗೆ 11.30 ಗಂಟೆಗೆ ಚಂದ್ರಶೇಖರಪುರ, ಮಂಚಂಡಹಳ್ಳಿ ಮತ್ತು ಕುರುಗಲ್ ಗ್ರಾಮಗಳು** ಸರಿಯಾಗಿ ರೂಬು ರೂಬು ಖುದ್ದಾಗಿ ಅಥವಾ ಕ್ರಮವಾಗಿ ಮೊಖ್ತಾರಿ ವಹಿಸಿದ ಪ್ರತಿನಿಧಿಗಳ ಮುಖಾಂತರವಾಗಲೀ ಹಾಜರಾಗಬೇಕು. ಹಾಗೆ ಮಾಡದೇ ತಪ್ಪಿದಲ್ಲಿ ಕಾನೂನು ಅನುಸರಿಸಿ ಮುಂದಿನ ತೀರ್ಮಾನ ಮಾಡಲಾಗುತ್ತದೆ. ಸದರಿ ಸ್ವತ್ತಿನ ಮೇಲಾಗಲೀ ಅಥವಾ ಯಾವ ಭಾಗದ ಮೇಲಾಗಲೀ ಇತರರಿಗೆ ಇರಬಹುದಾದ ಭೋಗ್ಯ, ಆಧಾರ, ಹಿಡುವಳಿ ಅಥವಾ ಸಾಗುವಳಿ ಹಿಸ್ಸೆ ಅಥವಾ ಅನುಭವ ಮುಂತಾದ ಹಕ್ಕು ಭಾದ್ಯತೆಗಳನ್ನು ಸಾಧ್ಯವಾದ ಮಟ್ಟಿಗೂ ಕರಾರುವಾಕ್ಕು ತೋರಿಸುವಂತೆ ತಪಶೀಲು ನಮೂದಿಸಿ ಒಂದು ವಾಗ್ಮೂಲವನ್ನು ಹಾಜರ್ ಪಡಿಸತಕ್ಕದ್ದು.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರಗಳು:

ಗ್ರಾಮ: ಮಡಿವಾಳ ಹೋಬಳಿ: ವೇಮಗಲ್ ತಾಲ್ಲೂಕು: ಕೋಲಾರ ಜಿಲ್ಲೆ: ಕೋಲಾರ

ಕ್ರ. ಸಂ	ಭೂಮಾಲೀಕರ ಹೆಸರು	ಸರ್ವೆ ನಂ.	ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ಇಲಿಯಾಸ್‌ಅಹ್ಮದ್ ಬಿನ್ ಅಬ್ದುಲ್ವಹಾಬ್ ಸಾಬ್ ಭೂಪ	72	2-00	0-09	1-31
2	ಅಮ್ಮದ್‌ಅಹಮದ್ ಬಿನ್ ಲೇಟ್ ಅಬ್ದುಲ್ವಹಾಬ್ ಸಾಬ್	73/1	1-06	-	1-06
3	ಅಮ್ಮದ್‌ಅಹಮದ್ ಬಿನ್ ಲೇಟ್ ಅಬ್ದುಲ್ವಹಾಬ್ ಸಾಬ್	73/2	0-25	-	0-25
4	ಬಕಾಶ್ ಬಿನ್ ಲೇಟ್ ಮಹಮ್ಮದ್ ಹುಸೇನ್	73/4	0-10	-	0-10
5	ಕೆಳಗಿನ ಬೀದಿ ಹೈದರ್ ಸಾಬಿ	73/5	0-19	-	0-19
6	ಶಬೀನಾ ಬೇಗಂ ಕೋಂ ಔರಂಗ ಬೇಗ್	74/1	0-13	0-02	0-11
7	ಬಾಷಾಸಾಬಿ ಬಿನ್ ಕರೀಂಬೇಗ್	74/2	0-22	-	0-22
8	ಅಗಾಂಬೇಗ್ ಬಿನ್ ಕರೀಬೇಗ್	74/3	0-02	-	0-02
9	ಆಸೀಫ್ ಬೇಗ್ ಬಿನ್ ಅಗಾಬೇಗ್	74/4	0-06	-	0-06
10	ಬಾಷಾಸಾಬಿ ಬಿನ್ ಕರೀಂಬೇಗ್	74/5	0-06	-	0-06
11	ಅಗಾಂಬೇಗ್ ಬಿನ್ ಕರೀಬೇಗ್	74/6	0-14	-	0-14
12	ರಿಯಾಜ್ ಬೇಗ್ ಬಿನ್ ಲೇಟ್ ಪಾಷಂ ಬೇಗ್	74/7	0-31	0-01	0-30
13	ನವಬ್ ಸಾಬ್ ಬಿನ್ ಕರೀಬೇಗ್	74/8	0-06	-	0-06
14	ರಸೂಲ್ ಬೇಗ್ ಬಿನ್ ಕರೀಬೇಗ್	74/9	0-17	-	0-17
15	ಕೈರುನ್ನೀಸ ಕೋಂ ಲೇಟ್ ಸಾಬ್ ಜಾನ್ ಸಾಬಿ	74/10	0-15	-	0-15
16	ಕೈರುನ್ನೀಸ ಕೋಂ ಲೇಟ್ ಸಾಬ್ ಜಾನ್ ಸಾಬಿ	74/11	0-09	-	0-09
17	ರಸೂಲ್ ಸಾಬಿ, ಬಾಷಾಸಾಬಿ ನವಾಬ್ ಜಾನ್ ಆಗಾಬೇಗ್,ಮಹಬುಜ್ ಹಾಷುಂಬೇಗ್, ಸಾಬ್ ಜಾನ್ ಸಾಬ್ ಹಾಷುಂಬೇಗ್ ಬಿನ್ ಕರೀಂಬೇಗ್	75	3-06	-	3-06
18	ಅಗಾಂಬೇಗ್ ಬಿನ್ ಕರೀಬೇಗ್	75/1	0-09	-	0-09
19	ಆಸೀಫ್ ಬೇಗ್ ಬಿನ್ ಅಗಾಬೇಬ್	75/3	0-06	-	0-06
20	ಬಾಷಾಸಾಬಿ ಬಿನ್ ಕರೀಬೇಗ್	75/4	0-06	-	0-06
21	ಅಗಾಂಬೇಗ್ ಬಿನ್ ಕರೀಬೇಗ್	75/5	0-09	-	0-09
22	ರಿಯಾಜ್ ಬೇಗ್ ಬಿನ್ ಲೇಟ್ ಪಾಷಂ ಬೇಗ್	75/6	0-26	-	0-26
23	ರಸೂಲ್ ಬೇಗ್ ಬಿನ್ ಕರೀಬೇಗ್	75/8	0-16	-	0-16
ಎ. ಬಾನು ಅವರ 'ಭಾನು ಗೀತ', 'ಭಾವ ಸೌರಭ' ಪುಸ್ತಕಗಳ ಬಿಡುಗಡೆ: ವೈ.ವಿ. ಗುಂಡೂರಾವ್, ಉದ್ಘಾಟನೆ: ನಾ. ದಾಮೋದರ ಶೆಟ್ಟಿ, ಅತಿಥಿ: ನ. ರಾಮನಾಥ್, ಅಧ್ಯಕ್ಷತೆ: ಎಚ್. ಡುಂಡಿರಾಜ್, ಪುಸ್ತಕಗಳ ಪರಿಚಯ: ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ದಿವ್ಯ ಹೆಗಡೆ ಕಬ್ಬಿನಗದ್ದೆ, ಆಯೋಜನೆ: ತೇಜು ಪಬ್ಲಿಕೇಷನ್ಸ್, ಸ್ಥಳ: ಸಿ. ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಬೆಳಿಗ್ಗೆ 10

ನಾ. ದಾಮೋದರ ಶೆಟ್ಟಿ

ವಿದ್ಯಾರ್ಥಿ ಮೆರಿಟ್ ಹಾಗೂ ಬ್ಯಾರಿ ವರ್ಷದ ಪ್ರಶಸ್ತಿಗಳ ಪ್ರದಾನ: ಉದ್ಘಾಟನೆ: ಕೆ.ಜೆ. ಜಾರ್ಜ್, ಅಧ್ಯಕ್ಷತೆ: ಯು.ಟಿ. ಖಾದರ್, ಅತಿಥಿಗಳು: ಬಿ.ಎಂ. ಫಾರೂಕ್, ಮಧು ಬಂಗಾರಪ್ಪ, ಎನ್.ಎ. ಹ್ಯಾರಿಸ್, ಎಲ್.ಕೆ. ಅತೀಕ್, ಸಯೀದ್ ಮಹಮ್ಮದ್ ಬ್ಯಾರಿ, ಉಮರ್ ಟಿ., ಬದಿಲ್ ಹುಸೈನ್, ಮೈಮೊನಾ, ಮರ್ಜಿನಾ, ಆಯೋಜನೆ: ದಿ ಬ್ಯಾರಿ ವೆಲ್ಫೇರ್ ಅಸೋಸಿಯೇಷನ್, ಸ್ಥಳ: ಬ್ಯಾರಿ ಸೌಹಾರ್ದ ಭವನ, ಬಿಡಿಎ ಕಾಂಪ್ಲೆಕ್ಸ್, ಎಚ್‌ಬಿಆರ್ ಲೇಔಟ್, ಬೆಳಿಗ್ಗೆ 10

34ನೇ ವರ್ಷದ ಬಿಸು ಪರ್ಬದ ಸಂಭ್ರಮ-2024: ಉದ್ಘಾಟನೆ: ತಾರಾನಾಥ್ ಗಟ್ಟಿ ಕಾಪಿಕಾಡ್, ಅತಿಥಿಗಳು: ಉಪೇಂದ್ರ ಶೆಟ್ಟಿ, ಪುರುಷೋತ್ತಮ ಚೇಂಡ್ಲಾ, ಪರ್ಬದ ಬಗ್ಗೆ ಉಪನ್ಯಾಸ: ನೆಕ್ಕಿದಪುಣಿ ಗೋಪಾಲಕೃಷ್ಣ, ಆಯೋಜನೆ: ತುಳುವೆರೆಂಕುಲು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಆರ್.ಡಿ. ಪಾಟೀಲ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ, 'ಸಾರ್ಥಕ' ಅಭಿನಂದನಾ ಗ್ರಂಥ ಬಿಡುಗಡೆ: ಸಾನ್ನಿಧ್ಯ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಬಿ.ಎ. ಬಸವರಾಜು, ಅಧ್ಯಕ್ಷತೆ: ಬಿ.ಆರ್. ಯಾವಗಲ್, ಪುಸ್ತಕ ಬಿಡುಗಡೆ: ಎಸ್.ಎನ್. ಕಾತರಕಿ, ಅತಿಥಿಗಳು: ನಂದೀಶ್ ರೆಡ್ಡಿ, ಎಸ್.ಜಿ. ನಾಗರಾಜ, ಗೀತಾ ವಿವೇಕಾನಂದ, ಸರೋಜಮ್ಮ ಆರ್.ಡಿ. ಪಾಟೀಲ, ಆಯೋಜನೆ: ಆರ್.ಡಿ. ಪಾಟೀಲ-80 ಅಭಿನಂದನಾ ಸಮಿತಿ, ಸ್ಥಳ: ಪ್ರಸನ್ನ ಸೋಮೇಶ್ವರ ಸ್ವಾಮಿ ದೇವಾಲಯದ ಕಲ್ಯಾಣ ಮಂಟಪ, ಹಳೆ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ, ಬೆಳಿಗ್ಗೆ 10.30

ಸಮ್ಮಿಲನ-300 ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ನಾಗೇಶ್ ಡಿ. ಪಾಟಕ್, ಅತಿಥಿ: ಎನ್.ಆರ್. ವೆಂಕಟರಂಗನ್, ಉಪಸ್ಥಿತಿ: ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಗೀತಾ ಪಿ.ಡಿ., ಎಚ್.ಎಸ್. ಜಯರಾಂ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ದಸಂಸ-50, ಪ್ರೊ.ಬಿ. ಕೃಷ್ಣಪ್ಪ-86ನೇ ಜನ್ಮದಿನದ ಅಂಗವಾಗಿ 'ಸ್ವಾಭಿಮಾನಿ ಚಳವಳಿ, ಅಂಬೇಡ್ಕರ್ ಸಿದ್ಧಾಂತ- ಒಂದು ಸಮಾಲೋಚನೆ ಸಮಾವೇಶ: ಉದ್ಘಾಟನೆ: ಕೋಡಿಹಳ್ಳಿ ಚಂದ್ರಶೇಖರ್, ಅಧ್ಯಕ್ಷತೆ: ಆರ್. ಮೋಹನರಾಜ, ಅತಿಥಿಗಳು: ರಾಜು ಎಂ. ತಳವಾರ್, ಶೇಖರ್ ಹಾವಂಜೆ, ಸ್ವಪ್ನ ಮೋಹನ್, ಕೆ.ಎಂ. ಶ್ರೀನಿವಾಸ್, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11

ವಿಶ್ವ ಬೈಸಿಕಲ್ ದಿನಾಚರಣೆ: ಅತಿಥಿಗಳು: ಸತ್ಯ ಶಂಕರನ್, ಎಂ.ಎನ್. ಅನುಚೇತ್, ಆಯೋಜನೆ: ಪೆಡ್ಲೂರು, ಸ್ಥಳ: ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 6



ಎಂ.ಎನ್. ಅನುಚೇತ್

'ಗಂಗಕನ್ದರ್ಪ' ಅಭಿನಂದನ ಗ್ರಂಥ ಬಿಡುಗಡೆ: ಡಿ.ವಿ. ಪರಮಶಿವಮೂರ್ತಿ, ಅಭಿನಂದನೆ: ಲಕ್ಷ್ಮಣ ತೆಲಗಾವಿ, ಅಧ್ಯಕ್ಷತೆ: ವಿ. ನಾಗರಾಜ್, ಉಪಸ್ಥಿತಿ: ದೇವರಕೊಂಡಾರೆಡ್ಡಿ, ರತ್ನಮ್ಮ ದೇವರಕೊಂಡಾ-ರೆಡ್ಡಿ, ಆಯೋಜನೆ: ಡಾ. ದೇವರಕೊಂಡಾರೆಡ್ಡಿ ಅಭಿನಂದನಾ ಸಮಿತಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ. ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

'ಪ್ರೊ. ಬಿಕೆ-88' ಸಂಘರ್ಷ ದಿನ: ಅತಿಥಿಗಳು: ಸತೀಶ್ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಇಂದಿರಾ ಕೃಷ್ಣಪ್ಪ, ರುದ್ರಪ್ಪ ಹನಗವಾಡಿ, ಸಿ.ಜಿ. ಲಕ್ಷ್ಮೀಪತಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಸರ್ ಪುಟ್ಟಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ಭರತನಾಟ್ಯ ರಂಗಪ್ರವೇಶ: ಭವ್ಯಶ್ರೀ ರಾಮಬಾಣಂ, ಲಾಸ್ಯ ಎ., ಆಯೋಜನೆ: ನವಚೇತನ ನೃತ್ಯಕಲಾ ಅಕಾಡೆಮಿ, ವಿ.ಕೆ.ಆರ್. ನಾಟ್ಯ ಕಲಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2

ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ 'ಧರಿತ್ರಿ' ಪುಸ್ತಕ ಬಿಡುಗಡೆ: ತಲಕಾಡು ಚಿಕ್ಕರಂಗೇಗೌಡ, ಉದ್ಘಾಟನೆ: ವಿಜಯರಂಜಿನಿ, ಅಧ್ಯಕ್ಷತೆ: ಎಸ್. ಷಡಕ್ಷರಿ, ಅತಿಥಿಗಳು: ಎಂ.ಆರ್. ಕಮಲ, ತಾರಾನಾಥ್ ಗಟ್ಟಿ ಕಾಪಿಕಾಡ್, ಪುಸ್ತಕ ಪರಿಚಯ: ಇಂದಿರಾ ಶರಣ್ ಜಮ್ಮಲದಿನ್ನಿ, ಆಯೋಜನೆ: ಋತುಸೌರಭ ಫೌಂಡೇಷನ್, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಪ್ರಶಿತಾ ಶೆಟ್ಟಿ, ಅತಿಥಿಗಳು: ಸಾಯಿ ವೆಂಕಟೇಶ್, ಡಾ. ಶ್ರೀಪತಿ ಡಿ.ಕೆ., ಡಾ. ಚಂದ್ರಮೌಳಿ ಬಿ., ಆಯೋಜನೆ: ಕಲಾನಿಧಿ ನೃತ್ಯ ಮಂದಿರಂ, ಸ್ಥಳ: ಶ್ರೀಹರಿ ಖೋಡೆ ಪರ್ಫಾಮಿಂಗ್ ಆರ್ಟ್ಸ್, ನಂ. 25, ಅಂಜನಾದ್ರಿ ಬಡಾವಣೆ, ಕೋಣನಕುಂಟೆ, ಕನಕಪುರ ರಸ್ತೆ, ಸಂಜೆ 4.30

'ರಂಗ-ರಂಗೋಲಿ' ಕನ್ನಡ ನಾಟಕೋತ್ಸವ: 'ಕಾಲ ಚಕ್ರ' ನಾಟಕ ಪ್ರದರ್ಶನ: ಮೂಲ ಮರಾಠಿ: ಜಯವಂತ ದಳ್ವಿ, ಕನ್ನಡಕ್ಕೆ: ಎಚ್.ಕೆ. ಕರ್ಕೇರಾ, ನಿರ್ದೇಶನ: ಹುಲುಗಪ್ಪ ಕಟ್ಟಿಮನಿ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಸಂಜೆ 6

'ಶಿವಾರ್ಪಣಂ' ನೃತ್ಯ ಪ್ರದರ್ಶನ: ಅನ್ವಿ ಮನೀಶ್, ರೂಪಾ ರವಿಂದ್ರನ್, ಸ್ಥಳ: ಬಸವ ಸಮಿತಿ ಭವನ, ಹೈಗ್ರೌಂಡ್ಸ್, ಸಂಜೆ 6.15.

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in

ಪರಿಸರ ಜಾಗೃತಿ

ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲುವಿನ ಸರ್ ಸಿ.ವಿ. ರಾಮನ್ ಪಬ್ಲಿಕ್ ಶಾಲೆಯ ಮಕ್ಕಳು ಪೊಲೀಸ್ ಠಾಣೆ ಎದುರು ಪರಿಸರ ಜಾಗೃತಿಯ ಬೀದಿ ನಾಟಕ ಪ್ರದರ್ಶಿಸಿದರು

ಕಾಡುಗೋಡಿ: ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕುಂಬೇನ ಅಗ್ರಹಾರದಲ್ಲಿ ವಿದ್ಯುತ್ ಸ್ಪರ್ಶದಿಂದ ಕಾರ್ಮಿಕ ಬಿಪುಲ್ ಕುಮಾರ್ (35) ಎಂಬುವವರು ಮೃತಪಟ್ಟಿದ್ದಾರೆ.

ನಿರ್ಮಾಣ ಹಂತದ ಮನೆಯೊಂದ ರಲ್ಲಿ ಬಿಪುಲ್ ಕುಮಾರ್ ಅವರು ಟೈಲ್ಸ್ ಕೆಲಸ ಮಾಡುತ್ತಿದ್ದರು. ರಾತ್ರಿ ವೇಳೆ ಟೇಬಲ್ ಫ್ಯಾನ್ ಆನ್ ಮಾಡುವ ಸಂದರ್ಭದಲ್ಲಿ ವಿದ್ಯುತ್ ಆಘಾತವಾಗಿ ಸ್ಥಳದಲ್ಲೇ ಕುಸಿದು ಬಿದ್ದಿದ್ದರು. ತಕ್ಷಣವೇ ಸ್ಥಳದಲ್ಲಿದ್ದ ಇತರೆ ಕಾರ್ಮಿಕರು ಅವರನ್ನು ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಬಿಪುಲ್ ಕುಮಾರ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ದುರಂತಕ್ಕೆ ಗುತ್ತಿಗೆದಾರನ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಲಾಗಿದ್ದು, ಗುತ್ತಿಗೆದಾರ ಚೆನ್ನರಾಮ್ ವಿರುದ್ಧ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೆಟ್‌ವರ್ಕ್ ಸಮಸ್ಯೆ: ಕೇಂದ್ರ ಕಾರಾಗೃಹಕ್ಕೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಅಳವಡಿಸಿರುವ ಮೊಬೈಲ್ ಜಾಮರ್‌ನಿಂದ ಸುತ್ತಮುತ್ತಲ ಪ್ರದೇಶಗಳಲ್ಲಿ ನೆಟ್‌ವರ್ಕ್ ಸಮಸ್ಯೆಯಾಗುತ್ತಿದೆ ಎಂದು ಆರೋಪಿಸಿ, ಸ್ಥಳೀಯರು ಕೇಂದ್ರ ಕಾರಾಗೃಹಕ್ಕೆ ಶನಿವಾರ ಮುತ್ತಿಗೆ ಹಾಕಲು ಯತ್ನಿಸಿದರು.

ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಆಗ ಆಕ್ರೋಶಗೊಂಡ ಸ್ಥಳೀಯರು ರಸ್ತೆಯಲ್ಲೇ ಕುಳಿತು ಪ್ರತಿಭಟನೆ ನಡೆಸಿದರು.

ಕೈದಿಗಳು ಮೊಬೈಲ್ ಬಳಕೆ ಮಾಡದಂತೆ ನಿಯಂತ್ರಿಸಲು ಕಾರಾಗೃಹದಲ್ಲಿ ಜಾಮರ್ ಅಳವಡಿಸಲಾಗಿದೆ. ಇದರಿಂದ ಕಾರಾಗೃಹದ ಸುತ್ತಮುತ್ತಲ ಸುಮಾರು ಎರಡು ಕಿ.ಮೀ ವ್ಯಾಪ್ತಿಯಲ್ಲಿ ಸಾರ್ವಜನಿಕರ ಮೊಬೈಲ್‌ಗಳಿಗೆ ನೆಟ್‌ವರ್ಕ್ ಸಿಗದೆ ಸಮಸ್ಯೆಯಾಗಿದೆ ಎಂದು ಸ್ಥಳೀಯರು ಹೇಳಿದರು.

'ಸಮಸ್ಯೆ ಬಗ್ಗೆ ಕಾರಾಗೃಹದ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ' ಎಂದು ಅಳಲು ತೋಡಿಕೊಂಡರು.

ಜಾಮರ್ ಅಳವಡಿಸಿರುವುದರಿಂದ ಕಳೆದ ಏಳು ತಿಂಗಳಿಂದ ಮೊಬೈಲ್ ನೆಟ್‌ವರ್ಕ್ ಸಮಸ್ಯೆಯಾಗಿದೆ. ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್‌ಗೆ ಕರೆ ಮಾಡಲು ಸಾಧ್ಯವಾಗುತ್ತಿಲ್ಲ. ವ್ಯಾಪಾರಿಗಳಿಗೆ ಡಿಜಿಟಲ್ ವ್ಯವಹಾರಕ್ಕೂ ಸಮಸ್ಯೆಯಾಗಿದೆ ಎಂದು ದೂರಿದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 21/2024 ದಿನಾಂಕ : 03-06-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ
1	ಎಲ್8245740	ಏರ್ ಸ್ಪ್ರಿಂಗ್ ಮೆಮು ಟಿಸಿ ಬೋಗಿಗಾಗಿ ಬೋಗಿ ಫ್ರೇಮ್ ವ್ಯವಸ್ಥೆ (2) ಬೋಗಿ ಬೋಲ್ಸ್ಟರ್ ವ್ಯವಸ್ಥೆ (3) ಬೋಗಿ ಬ್ರೇಕ್ ವ್ಯವಸ್ಥೆ (ಸಂಪೂರ್ಣ ಬೋಗಿ ಸೆಟ್‌ಗಾಗಿ)	06 ಸೆಟ್‌ಗಳು
2	ಎಲ್8245741	(1) ಬೋಗಿ ಫ್ರೇಮ್ ವ್ಯವಸ್ಥೆ (2) ಬೋಗಿ ಬೋಲ್ಸ್ಟರ್ ವ್ಯವಸ್ಥೆ (3) ಬೋಗಿ ಬ್ರೇಕ್ ವ್ಯವಸ್ಥೆ (ಸಂಪೂರ್ಣ ಬೋಗಿ ಸೆಟ್‌ಗಾಗಿ)	08 ಸೆಟ್‌ಗಳು
3	ಎಲ್8245798	ವಂದೇ ಭಾರತ್‌ನ ಡಿಟಿಸಿ ಟೈಪ್ ಕೋಚ್‌ಗಳಿಗಾಗಿ ಸೈಡ್ ಪ್ಯಾನೆಲ್‌ಗಳೊಂದಿಗೆ ನೋಸ್ ಕೋನ್ ಸೆಟ್‌ಗಳು ಮತ್ತು ಬಿಡಿಭಾಗಗಳ ಸರಬರಾಜು	02 ಸೆಟ್‌ಗಳು

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 27-06-2024 ರಂದು 10:30 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/139/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR southwesternrailway_swr SWRRLY southwesternrailway SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 21/2024 ದಿನಾಂಕ : 03-06-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ
ಎಲ್8245841	ಎಕ್ಸ್-ರೇ ಬ್ಯಾಗೇಜ್ ಸ್ಕ್ಯಾನರ್ - ಬೆಂಗಳೂರು, ಯಶವಂತಪುರ ಮತ್ತು ಸರ್. ಎಂ ವಿಶ್ವೇಶ್ವರಯ್ಯ ನಿಲ್ದಾಣ ಪಾರ್ಸೆಲ್ ಕಛೇರಿಯಲ್ಲಿ ಪಾರ್ಸೆಲ್ ಕಛೇರಿಯ ಬಳಕೆಗಾಗಿ 3 ವರ್ಷಗಳ ಆನ್‌ಸೈಟ್ ವಾರಂಟಿಯೊಂದಿಗೆ ಪಾರ್ಸೆಲ್ ಸ್ಕ್ಯಾನಿಂಗ್ ಯಂತ್ರಗಳ ಖರೀದಿ.	3 ಸೆಟ್‌ಗಳು

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28-06-2024 ರಂದು 10:30 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/144/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು

South Western Railway - SWR southwesternrailway_swr SWRRLY southwesternrailway SWRRLY

K.I.M.S HOSPITAL & RESEARCH CENTRE

KRISHNARAJENDRA ROAD, VISVESWARAPURAM, BANGALORE-560 004

Ph.: 26624870, 26672976, 26672998, 26620036, 26673057

Ref-No. KIMSH/TENDER/1491/23-24 Dated: 22/03/2023

KIMSH/PUR-126/22-23, RVS/ADMIN/408/2024-25 Dated: 07/06/2024

INVITATION FOR SHORT TENDER

TO RUN PHARMACY IN K.I.M.S HOSPITAL & RESEARCH CENTRE KRISHNARAJENDRA ROAD, VISVESWARAPURAM, BANGALORE PREMISIS

1. AMO & Purchase Committee of KIMS Hospital & Research Centre, K.R. Road, V.V. Puram, Bangalore-560004, invite tenders from eligible tenderers **"TO RUN PHARMACY IN K.I.M.S HOSPITAL PREMISIS"** in **Two cover bid system from authorized agencies.**
2. The tenderers may submit their tender and **are advised to note the qualification criteria specified in Bid Document to qualify for award of the contract**.
3. The tender applications will be issued **from 10/06/2024 TO 18/06/2024** @ Purchase section, KIMS Hospital & Research Centre on payment of nonrefundable tender form fee **of Rs.10000/-** (plus 18% of GST) in the form of DD favoring "AMO, KIMS Hospital & Research Centre", Payable at Bangalore.
4. Tender FORMS submitted must be accompanied by Earnest money deposit as per the EMD Amount mentioned in Tender Document in the form of Demand Draft issued in favour of "**AMO, KIMS Hospital & Research Centre" payable at Bangalore**. The tenderer should submit the quote in Two covers with cover 1 containing Technical Bid and EMD. Cover 2 should contain only financial bid addressing in the name of "AMO, KIMS Hospital".
5. Last date for submitting the Tender document is on or before **18/06/2024** by 4.00pm
6. The tender document is non-transferable.
7. For other details tenders may refer the tender document.

Sd/- Chairman H.D.C KIMSH | Sd/- Chairman Purchase RVS | Sd/- Treasure RVS | Sd/- Jt. Secretary RVS | Sd/- Gen. Secretary RVS | Sd/- Vice President 1 & 2 RVS | Sd/- Hon. President RVS | Sd/- President RVS

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಬಿಡ್ ಸಂ. ಜಿಇಎಂ/2024/ಬಿ/4999244

ದಿನಾಂಕ : 31-05-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ : ಎಸ್‌ಜಿಟಿ (ವೈಟ್‌ಫೀಲ್ಡ್) ಮತ್ತು ಹುಬ್ಬಳ್ಳಿ ಹಾಗೂ ಮೈಸೂರು ಕಾರ್ಯಾಗಾರಗಳ ನಡುವೆ ಎರಡು ವರ್ಷಗಳ ಅವಧಿಗೆ ರಸ್ತೆಯ ಮೂಲಕ ಎಲ್‌ಎಂಜಿ / ಐಸಿಎಫ್ ಬೋಗಿಗಳ ಸಾಗಾಣಿಕೆಗಾಗಿ ಲಾರಿ / ಟ್ರಕ್‌ಗಳ ಗುತ್ತಿಗೆ	ರೂ. 4,15,13,472/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21-06-2024 ರಂದು 12:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ https://gem.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್

ಪಿಯುಬಿ/140/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಬೆಂಗಳೂರು

South Western Railway - SWR SWRRLY SWRRLY

PUBLIC NOTICE

Publics are hereby informed that my client **M/s. DS-Max Properties Pvt. Ltd.**, having its office at No. 1854, 17th Main, 30th 'B' Cross, HBR Layout, 1st Stage, 5th Block, Bangalore- 43 have intend to enter into Joint Development Agreement with the Owner/s **M/S. LAKSH INC**, A Partnership Firm, Having its office at No. 102, Jala Sambhavi Complex, First Floor, 1st Main Road, Gandhinagar, Bangalore- 560 069. Rep; by its **PARTNERS: MR. JAYESH KOTHARI** and **MR. SURESH KUMAR** are the absolute owner/s in respect of undeveloped converted land property bearing Sy. No. **78/1B**, which measuring **2 acres 19 guntas** and Sy. No. **78/1C**, measuring **17 guntas** (Old Sy. No. **78/1**), totally measuring **2 acres 36 guntas**, situated at **Sheshagirihalli Village**, Bidadi Hobli, Ramanagara Taluk and duly converted for Non-Agricultural Residential and Industrial purposes by the Order of the Tahsildar, Ramanagara Taluk, bearing No.**ALN:SR:7/1982-83** dated **20/05/1982** and presently bearing Sheshagirihalli Village, Panchayath Khatha No. **85** to the extent of **2 Acres 23 guntas** (Leaving **13 guntas** acquired for road widening), which is the subject matter for Joint Development Agreement and bounded on **East by:** Property bearing Sy. No. 79, **West by:** Bangalore-Mysore Road, **North by:** AK Colony and **South by:** Property bearing Sy. No. 78/1A.

Any person or Any Authority or Any promoters having any asserting right, title, interest and claims to oppose for Joint Development Agreement of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **15** days from the date of this notice, if any objections fails to comply, my client shall take further steps for entering into Joint Development Agreement of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು-560003

ಇವರ ಕಛೇರಿಯಿಂದ ಸ್ಥಿರಾಸ್ತಿಯ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಇದರ ಮಾಜಿ ಉಪಾಧ್ಯಕ್ಷರು ಹಾಗೂ ಗೌ॥ ಕಾರ್ಯದರ್ಶಿ **ಲೇಟ್ ಎಂ.ವಿ.ರುದ್ರಾಚಾರಿಯವರು** ಸಂಘದ ಹಣ ದುರುಪಯೋಗ ಮಾಡಿದ್ದರ ಮೇರೆಗೆ ಇಲಾಖಾ ವತಿಯಿಂದ ಸ್ವಯಂ ಪ್ರೇರಿತವಾಗಿ ಸಹಕಾರ ಸಂಘಗಳ ಕಾಯಿದೆ ಕಲಂ 103 (2) ರಡಿಯಲ್ಲಿ ತೀರ್ಪಿಗೆ ಮುನ್ನ ಜಪ್ತಿ ಆದೇಶ ಹೊರಡಿಸಿ ಪ್ರತಿವಾದಿ **ಶ್ರೀ ಲೇಟ್ ಎಂ.ವಿ.ರುದ್ರಾಚಾರಿ** ಮಾಜಿ ಉಪಾಧ್ಯಕ್ಷರು/ಗೌ. ಕಾರ್ಯದರ್ಶಿ, ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘ (ನಿಯಮಿತ), ನಂ.9/1, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು-560026, ಇವರಿಂದ ಸಂಘಕ್ಕೆ ಬರಬೇಕಾಗಿರುವ ಹಣ ದುರುಪಯೋಗದ ಮೊತ್ತ **ರೂ.4,59,69,000-00** ಹಾಗೂ ಆದೇಶದ ದಿನಾಂಕದಿಂದ ಶೇಕಡ 18ರ ಬಡ್ಡಿ ಸಮೇತ ವಸೂಲು ಮಾಡಲು ಸಹಕಾರ ಸಂಘಗಳ ಉಪ ನಿಬಂಧಕರು-1, ಬೆಂಗಳೂರು ನಗರ ಜಿಲ್ಲೆರವರ ವ್ಯಾಜ್ಯ ಸಂಖ್ಯೆ: ಡಿ.ಆರ್.ಬಿ.1/ಎಸ್.ಸಿ/01/2001-02 ದಿನಾಂಕ: **27-05-2002** ರನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು-560003 ರವರ ಆದೇಶದ ಮೇರೆಗೆ ಸಿಇಪಿ ಸಂಖ್ಯೆ: **6161:2004-05** ಮೂಲಕ ಅಮಲ್ಜಾರಿ ಆದೇಶ ಹೊರಡಿಸಿದ್ದು ಇದರ ಪ್ರಕಾರ **ಲೇಟ್ ಎಂ.ವಿ.ರುದ್ರಾಚಾರಿ** ಇವರ ವಾರಸುದಾರರಾದ ಶ್ರೀ.ಬಿ.ಆರ್.ಸತೀಶ್ ಮತ್ತು ಶ್ರೀಮತಿ ಲತಾ ಬಿ.ಆರ್ ಇವರುಗಳಿಗೆ ಸೇರಿದ ಸ್ವತ್ತನ್ನು ಮಾರಾಟಾಧಿಕಾರಿಯವರಿಂದ ಈ ಹಣಕ್ಕೆ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಸೊಣ್ಣೇನಹಳ್ಳಿ ಗ್ರಾಮದಲ್ಲಿರುವ ಅವರ ಈ ಕೆಳಗೆ ಕಾಣಿಸಿದ ಸ್ಥಿರಾಸ್ತಿಯನ್ನು **ದಿನಾಂಕ: 28-06-2024 ರ ಶುಕ್ರವಾರ ಬೆಳಿಗ್ಗೆ 11-30 ಗಂಟೆಗೆ** ಸರಿಯಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ 29/1, ಖಾತೆ ಸಂಖ್ಯೆ. 59 (ರುದ್ರಾಚಾರಿ ಆಸ್ತಿ) ಈ ಜಾಗದಲ್ಲಿ ಬಹಿರಂಗ ಹರಾಜು ಹಾಕಲಾಗುತ್ತದೆ. ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಿ ಸ್ವತ್ತನ್ನು ಕೊಂಡು ಕೊಳ್ಳಬಹುದು.

ಹರಾಜಾಗತಕ್ಕ ಸ್ಥಿರ ಸ್ವತ್ತಿನ ವಿವರ:- 1. ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ.29/1, 21 ಗುಂಟೆ

ಸ್ಥಿರಾಸ್ತಿ ಸ್ವತ್ತಿನ ವಿವರ : (1) ಪೂರ್ವ - ಪಶ್ಚಿಮ 56 ಅಡಿಗಳು, ಉತ್ತರ-ದಕ್ಷಿಣ 65 ಅಡಿಗಳ ಜಮೀನು (3.34 ಗುಂಟೆ 3640 ಚ.ಅಡಿ ಮತ್ತು ಇದರಲ್ಲಿರುವ 2 ಅಂತಸ್ತಿನ ಹಳೆಯ ಕಟ್ಟಡ. **(2)** ಕ್ರ.ಸಂ. 1 ರಲ್ಲಿನ ಆಸ್ತಿಯನ್ನು ಹೊರತುಪಡಿಸಿ ಉಳಿಕೆ ಜಮೀನು (17.66 ಗುಂಟೆ)19231 ಚ.ಅಡಿ ಹಾಗೂ ಇದರಲ್ಲಿರುವ 2 ಹಳೆಯ ಕಟ್ಟಡಗಳು (ಜ್ಞಾನೇಶ್ ಸ್ಕೂಲ್ ಆಫ್ ನರ್ಸಿಂಗ್ ಕಟ್ಟಡ ಹಾಗೂ ಒಂದು ವಾಸದ ಮನೆ)

ಹರಾಜಿನ ಷರತ್ತುಗಳು : 1. ಹರಾಜಾಗತಕ್ಕ ಸ್ವತ್ತಿನ ವಿವರಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಸಹಕಾರ ಸೌಧ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ಇವರ ಕಛೇರಿಯಲ್ಲಿ ವಿಚಾರಿಸಬಹುದು. **2.** ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಒಂದು ಗಂಟೆ ಮುಂಚಿತವಾಗಿ ಸಂಘದ ಹೆಸರಿಗೆ ರೂ. ಹತ್ತು ಲಕ್ಷದ ಡಿ.ಡಿ ಯನ್ನು ಠೇವಣಿ ಇಟ್ಟು ರಶೀದಿ ಪಡೆದು ಹಾಜರು ಪಡಿಸತಕ್ಕದ್ದು. ಯಶಸ್ವಿಯಾದ ಬಿಡ್ಡುದಾರರ ಪ್ರಾರಂಭಿಕ ಠೇವಣಿಯನ್ನು ಹೊರತುಪಡಿಸಿ ಉಳಿದವರ ಡಿ.ಡಿ.ಯನ್ನು ಹಿಂದಿರುಗಿಸಲಾಗುವುದು. **3.** ಅಧಿಕೃತ ಬಿಡ್ಡುದಾರರು ಹರಾಜಿನ ಮೊಬಲಗಿನ ಶೇ.15 ರಷ್ಟು ಸರಿಯಾಗುವ ಮೊಬಲಗನ್ನು ಸ್ಥಳದಲ್ಲೇ ಪಾವತಿ ಮಾಡತಕ್ಕದ್ದು ಮತ್ತು ಹರಾಜಿನ ಉಳಿಕೆ ಹಣವನ್ನು ಮತ್ತು ಸಾಮಾನ್ಯ ಮುದ್ರಾಂಕ (ಜನರಲ್ ಸ್ಟಾಂಪ್) ತಗುಲುವ ಹಣವನ್ನು ಸಹ 15 ದಿನದೊಳಗೆ ಪಿ.ಡಿ. ಅಕೌಂಟ್ ಆಫ್ ಎ.ಆರ್.ಸಿ.ಎಸ್. 4ನೇ ವಲಯ, ಬೆಂಗಳೂರು-03. ಇವರಿಗೆ ಡಿ.ಡಿ. ಡ್ರಾ ಮಾಡಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಅವರು ಕಟ್ಟಿರುವ ಹಣವನ್ನು ಕಾನೂನು ರೀತ್ಯಾ ಮುಟ್ಟುಗೋಲು ಹಾಕಿ ಕೊಂಡು ಬದಲಿ ಹರಾಜು ನಡೆಸಲಾಗುವುದು. **4.** ಭೂಮಿ ಮತ್ತು ಕಟ್ಟಡದ ವಿವರಣೆಯಲ್ಲಿ ಅಥವಾ ಅಂದಾಜು ಮಾಡುವ ವಿಸ್ತೀರ್ಣದ ವಿಷಯದಲ್ಲಿ ಏನಾದರೂ ತಪ್ಪುಗಳಿದ್ದರೆ ಅದಕ್ಕೆ ಸರ್ಕಾರದವರು ಜವಾಬ್ದಾರರಲ್ಲವೆಂಬುದನ್ನು ಚೆನ್ನಾಗಿ ತಿಳಿದಿರತಕ್ಕದ್ದು. **5.** ಹರಾಜನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮಾರಾಟಾಧಿಕಾರಿಗಳು ಹೊಂದಿರುತ್ತಾರೆ. **6.** ಮೇಲ್ಕಂಡ ಸ್ವತ್ತನ್ನು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಹರಾಜು ಮಾಡಲಾಗುವುದು. 7. ಈ ಸ್ವತ್ತಿನ ಬಗ್ಗೆ ಕಾನೂನಿನ ತೊಡಕುಗಳಿದ್ದರೆ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ.

ಸ್ಥಳ : ಬೆಂಗಳೂರು **ಸಹಿ/- (ಮುರಳೀಧರ)**
ದಿನಾಂಕ : 14.05.2024 ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿಗಳು
ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ
4ನೇ ವಲಯ, ಬೆಂಗಳೂರು 560 003

ಹರಾಜು ಸ್ಥಳ: ನಂ:74/1, ಜ್ಞಾನೇಶ್ ಸ್ಕೂಲ್ ಆಫ್ ನರ್ಸಿಂಗ್, ರುದ್ರಾಚಾರ್ ಬಿಲ್ಡಿಂಗ್, ಸೊಣ್ಣೇನಹಳ್ಳಿ, ಕೆಂಗೇರಿ ಹೋಬಳಿ, ಬೆಂಗಳೂರು-560 056

‘ವಿಐಎಸ್‌ಎಲ್’ಗಾಗಿ 29,400 ಮರ ಹನನ?

ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಕೆ ● ರಾಮನಮಲ್ಲೈ ವಲಯದಲ್ಲಿ ಗಣಿಗಾರಿಕೆ ಬೇಡ: ಪರಿಸರವಾದಿಗಳ ಆಗ್ರಹ

● ಹರಿಶಂಕರ್ ಆರ್.

ಬಳ್ಳಾರಿ: ‘ಭಾರತೀಯ ಉಕ್ಕು ಪ್ರಾಧಿಕಾರದಡಿ (ಎಸ್‌ಎಐಎಲ್) ಬರುವ ಭದ್ರಾವತಿಯ ‘ವಿಶ್ವೇಶ್ವರಾಯ-ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಗೆ (ವಿಐಎಸ್‌ಎಲ್) ಅದಿರು ಪೂರೈಸುವ ಗಣಿಗಾರಿಕೆ ಸಲುವಾಗಿ ಜಿಲ್ಲೆಯ ಸಂಡೂರು ತಾಲ್ಲೂಕಿನ 150 ಎಕರೆ ದಟ್ಟ ಅರಣ್ಯದ 29,400 ಮರಗಳ ಹನನವಾಗುವ ಆತಂಕ ಎದುರಾಗಿದೆ.

ಸಂಡೂರು ತಾಲ್ಲೂಕಿನ ರಾಮಗಡ (ರಾಮನಮಲ್ಲೈ) ವಲಯದ ಅರಣ್ಯ ಭೂಮಿಯಲ್ಲಿ 60.70 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ಕೋರಿ ಎಸ್‌ಎಐಎಲ್ ಕಳೆದ ವರ್ಷ 2023ರಲ್ಲಿ ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ‘ಅರಣ್ಯ ಸಂರಕ್ಷಣಾ ಕಾಯ್ದೆ 1980 ಮತ್ತು ಮಾರ್ಗಸೂಚಿ’ ಅನ್ವಯ ಗಣಿಗಾರಿಕೆಗೆ ಅನುಮೋದನೆ ಕೋರಿತ್ತು.

ಪೂರಕವಾಗಿ ರಾಮನಮಲ್ಲೈ ಅರಣ್ಯ ಪ್ರದೇಶದ ಸ್ಥಳ ಪರಿಶೀಲಿಸಿ, ನಿರ್ದಿಷ್ಟ ಪ್ರದೇಶದಲ್ಲಿ ಗಿಡ-ಮರಗಳನ್ನು ಎಣಿಕೆ ಮಾಡಿ, ಪಟ್ಟಿ ಮತ್ತು ವರದಿಯನ್ನು ಸಂಡೂರಿನ ಉಪವಲಯ ಅರಣ್ಯಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗೆ ಸಲ್ಲಿಸಿದ್ದಾರೆ. ಅದನ್ನು ವಲಯ ಅರಣ್ಯಾಧಿಕಾರಿಯವರು ಬಳ್ಳಾರಿ ಅರಣ್ಯ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಸಲ್ಲಿಸಿದ್ದಾರೆ.

‘ಪ್ರಸ್ತಾವಿತ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು 91 ವಿಧದ ಒಟ್ಟು 29,400 ಮರಗಳನ್ನು ಕಡಿಯಬೇಕಾಗುವುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಕುರಿತ ದಾಖಲೆಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

ಪರಿಸರಕ್ಕೆ ಯಥೇಚ್ಛ ಆಮ್ಲಜನಕ ಬಿಡುಗಡೆ ಮಾಡುವ ಆಲ (504), ಅರಳಿ (243) ಮರಗಳೂ ಪಟ್ಟಿಯಲ್ಲಿವೆ. ಜತೆಗೆ 224 ಮುಳ್ಳು ಹೊನ್ನೆಮರ, 996 ಸಾಗುವಾನಿ, 3244 ದಿಂಡಾಲದ ಮರಗಳೂ ಧರೆಗುರುಳುವ ಆತಂಕವಿದೆ.

ಸರ್ಕಾರಕ್ಕೆ ಪತ್ರ: ‘ಅರಣ್ಯ ಇಲಾಖೆ ವರದಿ ಆಧರಿಸಿ ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ರಾಮನಮಲ್ಲೈ ವಲಯದಲ್ಲಿ ಗಣಿಗಾರಿಕೆ ನಡೆಸಲು ‘ವಿಐಎಸ್‌ಎಲ್’ಗೆ ಅನುಮೋದನೆ ನೀಡಿದರೆ ಅಪಾಯವಾಗಲಿದೆ. ಅರಣ್ಯದ ಜೊತೆಗೆ ಅತ್ಯಂತ ವಿರಳ ಸಸ್ಯ ಸಂಕುಲ, ಜೀವವೈವಿಧ್ಯಕ್ಕೆ ಪೆಟ್ಟು ಬೀಳಲಿದೆ. ಸ್ಥಳೀಯ ಪರಿಸರದ ಮೇಲೂ ಗಂಭೀರ ಪರಿಣಾಮ ಉಂಟಾಗಲಿದೆ’ ಎಂಬ ಆತಂಕ ಪರಿಸರವಾದಿಗಳು ವ್ಯಕ್ತಪಡಿಸಿದ್ದಾರೆ.

‘ಎಸ್‌ಎಐಎಲ್’ಗೆ ದಟ್ಟ ಅರಣ್ಯವನ್ನು ಗಣಿಗಾರಿಕೆಗೆ ನೀಡುವ ಪ್ರಸ್ತಾವವನ್ನು ಆರಂಭಿಕ ಹಂತದಲ್ಲೇ ಸರ್ಕಾರ ತಿರಸ್ಕರಿಸಬೇಕು. ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಬೇಕು ಎಂದು ಆಗ್ರಹಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ, ‘ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ನೇತೃತ್ವದ ‘ಜನ ಸಂಗ್ರಾಮ ಪರಿಷತ್’ ಪತ್ರ ಬರೆದಿದೆ.

ಗಣಿಗಾರಿಕೆಗೆ ಗುರುತಿಸಲಾಗಿರುವ ಸಂಡೂರಿನ ರಾಮನಮಲ್ಲೈ ಅರಣ್ಯ ಪ್ರದೇಶ

ಮರಗಳ ಗಣತಿ ಕಾರ್ಯ ಪ್ರಗತಿಯಲ್ಲಿದೆ. ವರದಿಯಲ್ಲಿನ ಎಲ್ಲ ಅಂಶಗಳನ್ನು ಪರಾಮರ್ಶಿಸಿ ಕೇಂದ್ರ ಸರ್ಕಾರಕ್ಕೆ ನೀಡಲಾಗುವುದು. ಗಣಿಗಾರಿಕೆಗೆ ಅನುಮತಿ ನೀಡಬೇಕೆ ಅಥವಾ ಬೇಡವೇ ಎಂಬುದು ಅಲ್ಲಿ ನಿರ್ಧಾರವಾಗಲಿದೆ.
ಸಂದೀಪ್ ಸೂರ್ಯವಂಶಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ

ಸಂಡೂರಿನ ಅರಣ್ಯ ವಿಶಿಷ್ಟವಾದದ್ದು. ಪಶ್ಚಿಮ ಘಟ್ಟವನ್ನೇ ಹೋಲುವಂತಿದೆ. ಇಲ್ಲಿ ಗಣಿಗಾರಿಕೆ ನಡೆದರೆ ಅರಣ್ಯದ ಜತೆಗೆ, ಜೀವಿ, ಪರಿಸರ, ಜನಜೀವನದ ಮೇಲೆ ಕೆಟ್ಟ ಪರಿಣಾಮವಾಗಲಿದೆ.
ಶ್ರೀಶೈಲ ಆಲದಹಳ್ಳಿ, ಪರಿಸರ ಹೋರಾಟಗಾರ, ಸಂಡೂರು

‘ಸರ್ಕಾರದ ದ್ವಂದ್ವ ನಿಲುವು’

ಸಂಡೂರಿನಲ್ಲಿ ನಡೆದಿರುವ ಗಣಿಗಾರಿಕೆಯಿಂದ ಹಾಳಾದ ಅರಣ್ಯ ಪ್ರದೇಶದ ಪುನಶ್ಚೇತನಕ್ಕೆ ಕರ್ನಾಟಕ ಗಣಿ ಪ್ರದೇಶ ಪುನಶ್ಚೇತನ ನಿಗಮ (ಕೆಎಂಆರ್‌ಸಿ) ನೂರಾರು ಕೋಟಿ ರೂಪಾಯಿ ಹಣ ವ್ಯಯಿಸಿದೆ. ಸಂಡೂರು ಅರಣ್ಯದ ತುಂಬರಗುಡ್ಡಿ ಬ್ಲಾಕ್, ಈಶಾನ್ಯ ಬ್ಲಾಕ್‌ನ ಜೋನ–‘ಬಿ’ ಮತ್ತು ಜೋನ್–‘ಸಿ’ ಬ್ಲಾಕ್, ರಾಮನಮಲ್ಲೈ ಬ್ಲಾಕ್‌ನಲ್ಲಿ ಲಕ್ಷಾಂತರ ಗಿಡಗಳನ್ನು ನೆಡಲಾಗುತ್ತಿದೆ. ‘ಒಂದೆಡೆ, ಹೊಸ ಗಣಿಗಾರಿಕೆಗೆ ಅನುಮತಿ ನೀಡಿ ಸರ್ಕಾರಗಳೇ ಅರಣ್ಯನಾಶ ಮಾಡುತ್ತಿವೆ, ಮತ್ತೊಂದೆಡೆ ಅರಣ್ಯೀಕರಣಕ್ಕೆ ಸರ್ಕಾರವೇ ಕೋಟ್ಯಂತರ ಹಣ ಸುರಿಯುತ್ತಿದೆ. ಇದು ಸರ್ಕಾರಗಳ ದ್ವಂದ್ವಕ್ಕೆ ಸಾಕ್ಷಿ’ ಎಂದು ಪರಿಸರ ಹೋರಾಟಗಾರ ಶ್ರೀಶೈಲ ಆಲದಹಳ್ಳಿ ಆರೋಪಿಸಿದರು.

ಹೇಳಿಕೆ ಹಿಂಪಡೆಯಿರಿ –ಸಚಿವ ಸತೀಶ ಜಾರಕಿಹೊಳಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): ‘ಲೋಕಸಭೆ ಚುನಾವಣೆಯಲ್ಲಿ ಅಥಣಿಯಲ್ಲಿ ಹಳಬರು, ಹೊಸಬರು ಎನ್ನದೇ ನಾವು ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡಿದ್ದೇವೆ. ದಾರಿಹೋಕರ ಮಾತು ಆಲಿಸಿ ಸಚಿವರು ಶಾಸಕ ಲಕ್ಷ್ಮಣ ಸವದಿ ಅವರ ವಿರುದ್ಧ ಆರೋಪಿಸುತ್ತಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಶಿವು ಗುಡ್ಡಾಪುರ ಆಗ್ರಹಿಸಿದರು.

ಪಟ್ಟಣದಲ್ಲಿ ಶನಿವಾರ ಲಕ್ಷ್ಮಣ ಸವದಿ ಬೆಂಬಲಿಗರ ತಂಡದೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಚಿವ ಸತೀಶ ಜಾರಕಿಹೊಳಿ ತಮ್ಮ ಹೇಳಿಕೆ ಹಿಂಪಡೆಯಲಿ. ಪ್ರಿಯಾಂಕಾ ಜಾರಕಿಹೊಳಿ ಅವರು ಗೆದ್ದ ಬಳಿಕ ಸತೀಶ ಅವರು ಆರೋಪ ಸುತ್ತಿದ್ದಾರೆ. ಇಂತಹ ಹೇಳಿಕೆಗಳಿಂದ ತಮ್ಮ ಗೌರವಕ್ಕೆ ಧಕ್ಕೆ ತಂದುಕೊಳ್ಳಬಾರದು’ ಎಂದರು.

ಕಾಂಗ್ರೆಸ್‌ನ ತೆಲಸಂಗ ಬ್ಲಾಕ್ ಅಧ್ಯಕ್ಷ ಎ.ಎಂ.ಖೊದ್ರಿ ಮಾತನಾಡಿ, ‘ಸಚಿವರು ಅನಗತ್ಯವಾಗಿ ಸಂಶಯದ ಹುಳಬಿಡಲು ದುಡಿದ ಕಾರ್ಯಕರ್ತರಿಗೆ ನೋವಾಗುವಂತೆ ಮಾತನಾಡಿ, ಆತ್ಮಸ್ಥೈರ್ಯ ಕುಗ್ಗಿಸಿದ್ದಾರೆ’ ಎಂದರು.

‘ಹಿಂದಿನ ಬಹುತೇಕ ಚುನಾವಣೆಗಳಲ್ಲೂ ಅಥಣಿ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಮತ ಬಂದಿದ್ದವು. ಈಗಲೂ ಹಾಗೆ ಆಗಿದೆ. ಲಕ್ಷ್ಮಣ ಸವದಿ ಬಹಿರಂಗವಾಗಿ ಬಿಜೆಪಿ ಪರ ನಿಂತಿದ್ದರೆ ಅಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಕನಿಷ್ಠ 75 ರಿಂದ 85 ಸಾವಿರ ಮತ ಬಿಜೆಪಿಗೆ ಹೋಗುತ್ತಿದ್ದವು’ ಎಂದು ಅಥಣಿ ಬ್ಲಾಕ್ ಮುಖಂಡ ಶಿವಾನಂದ ದಿವಾನಮಳ ಹೇಳಿದರು.

‘ಒಳ ಒಪ್ಪಂದ ಆಗಿರಲಿಲ್ಲ’

ಬೆಳಗಾವಿ: ‘ಬೆಳಗಾವಿ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಚಿಕ್ಕೋಡಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲ್ಲಿಸಲು ಯಾರೊಂದಿಗೂ ಒಳಒಪ್ಪಂದ ಮಾಡಿಕೊಂಡಿರಲಿಲ್ಲ. ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ಶ್ರಮಿಸಿದ್ದೇವೆ. ಆದರೆ, ಬೆಳಗಾವಿಯಲ್ಲಿ ಗೆಲುವು ದಕ್ಕಿದೆ’ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

‘ಚಿಕ್ಕೋಡಿಯಲ್ಲಿ ಸ್ಥಳೀಯ ಮುಖಂಡರ ವಿರೋಧದ ಬಿಜೆಪಿ ಅಭ್ಯರ್ಥಿ ಅಣ್ಣಾಸಾಹೇಬ ಜೊಲ್ಲೆ ಅವರ ಸೋಲಿಗೆ ಕಾರಣವಾಗಿರಬಹುದು’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಬೂಸಾ: ದಲಿತ ಚಳವಳಿಗೆ ಸ್ಪಷ್ಟ ರೂಪ’

‘ಬೂಸಾ ಚಳವಳಿ– 50’ ಅವಲೋಕನ ಕಾರ್ಯಕ್ರಮದಲ್ಲಿ ಲೇಖಕ ಅಗ್ರಹಾರ ಕೃಷ್ಣಮೂರ್ತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬೂಸಾ ಚಳವಳಿ ದಿನ ನೆನಪಿಸಿದ ಸಭೆ
- ನಾಯಕರನ್ನು ಹುಟ್ಟುಹಾಕಿದ ಚಳವಳಿ–ಸ್ಮರಣೆ
- ಸಾಹಿತಿ, ಚಿಂತಕರು, ಹೋರಾಟಗಾರರು ಭಾಗಿ

ಮೈಸೂರು: ‘ಬೂಸಾ ಚಳವಳಿಯಲ್ಲಿ ಸಂಸ್ಕೃತಿ, ಭಾಷೆಯ ಹೆಸರಿನಲ್ಲಿ ಜಾತಿ ವ್ಯವಸ್ಥೆ ಕೆಲಸ ಮಾಡಿತು. ಆದರೆ, ಇದರಿಂದ ದಲಿತ ಚಳವಳಿಗೆ ಸ್ಪಷ್ಟ ರೂಪ ಸಿಕ್ಕಿತು’ ಎಂದು ಲೇಖಕ ಅಗ್ರಹಾರ ಕೃಷ್ಣಮೂರ್ತಿ ಪ್ರತಿಪಾದಿಸಿದರು.

ಮೈಸೂರಿನ ಒಡಲು ಟ್ರಸ್ಟ್ ಹಾಗೂ ಮಾನಸ ಗಂಗೋತ್ರಿಯ ವಿದ್ಯಾರ್ಥಿ ಸಂಶೋಧಕರ ಸಂಘವು ಶನಿವಾರ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ‘ಬೂಸಾ ಚಳವಳಿ– 50’ ಕುರಿತ ಅವಲೋಕನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಈ ಚಳವಳಿಯು ಮೇಲ್ವರ್ಗದವರು ದಲಿತರ ಮೇಲೆ ನಡೆಸುತ್ತಿದ್ದ ದೌರ್ಜನ್ಯಗಳನ್ನು ಪ್ರತಿಧ್ವನಿಸಿತ್ತು. ಕಾಲೇಜು ಹಂತದಲ್ಲಿ ನಾವು ಆಗಷ್ಟೇ ಕಟ್ಟಿಕೊಂಡಿದ್ದ ವೈಚಾರಿಕ ವೇದಿಕೆಯು ಮುನ್ನೆಲೆಗೆ ಬಂದು ಕೆಲಸ ಮಾಡಿತ್ತು’ ಎಂದು ನೆನಪಿಸಿಕೊಂಡರು.

‘ಸಂವಿಧಾನ ಬದಲಾಯಿಸಲು ಹೊರಟವರನ್ನು ವಿರೋಧಿಸಿದವರಿಗೇ ಶಿಕ್ಷೆಯಾಗುತ್ತಿದೆ. ದೇವಾಲಯ ಕಟ್ಟಿದ್ದಕ್ಕೆ ಆಕ್ಷೇಪಿಸಿದವರ ಮೇಲೆ ದಾಳಿ ನಡೆದಿದೆ. ಯಾರೂ ಪ್ರತಿಭಟಿಸಿಲ್ಲ. ಆದರೆ, 50 ವರ್ಷಗಳ ಹಿಂದೆ ಬಿ.ಬಸವಲಿಂಗಪ್ಪ ಅವರು ‘ಜೀವನದ ದಾರಿ ರೂಪಿಸಲು ಇಂಗ್ಲಿಷ್ ಕಾರಣವಾಗುತ್ತದೆ. ಇಂಗ್ಲಿಷ್ ಕಲಿಯಿರಿ’ ಎಂದು ಸಾಂದರ್ಭಿಕವಾಗಿ ನೀಡಿದ್ದ ಹೇಳಿಕೆ ಚಳವಳಿಗೆ ಕಾರಣವಾಗಿತ್ತು. ಹೀಗಾಗಿ 50 ವರ್ಷಗಳಲ್ಲಿ ಸಮಾಜದ ದೃಷ್ಟಿಕೋನ ಹೇಗೆ ಬದಲಾಗಿದೆ ಎಂದು ಅರಿಯಬೇಕು’ ಎಂದರು.

ಮೈಸೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮವನ್ನು ಅಗ್ರಹಾರ ಕೃಷ್ಣಮೂರ್ತಿ ಉದ್ಘಾಟಿಸಿದರು. ಕೆ.ಎನ್.ಶಿವಲಿಂಗಯ್ಯ, ಆರ್.ಎಸ್.ದೊಡ್ಡಣ್ಣ, ಇಂದೂಧರ ಹೊನ್ನಾಪುರ, ಸುನಂದಾ ಜಯರಾಮ್, ರಾಜೇಶ್ ಚಾಕನಹಳ್ಳಿ ಭಾಗವಹಿಸಿದ್ದರು

‘ಮಲ ಹೊರುವ ಪದ್ಧತಿಯನ್ನು ಬಸವಲಿಂಗಪ್ಪ ಸಂವಿಧಾನಾತ್ಮಕವಾಗಿ ನಿಷೇಧಿಸಲು ಶ್ರಮಿಸಿದ್ದರು. ಅಂಥ ವ್ಯಕ್ತಿ ಸಾಂಸ್ಕೃತಿಕ ಲೋಕದಲ್ಲಿ ಮೂಡಿಸಿದ್ದ ತಲ್ಲಣ ಸದಾ ಸ್ಮರಣೀಯ. ಅಂದು ಪರ, ವಿರೋಧ ಹೋರಾಟದಲ್ಲಿ ಭಾಗಿಯಾದ ಅನೇಕರು ರಾಜಕೀಯದಲ್ಲಿ ಗುರುತಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಚಳವಳಿಯೊಂದು ಮುಂದಿನ ಅನೇಕ ವರ್ಷಗಳ ಕಾಲ ನಾಯಕರನ್ನು ಹುಟ್ಟುಹಾಕಿತ್ತು’ ಎಂದು ಸ್ಮರಿಸಿಕೊಂಡರು.

ಪತ್ರಕರ್ತ ಇಂದೂಧರ ಹೊನ್ನಾಪುರ ಮಾತನಾಡಿ, ‘ಕನ್ನಡ ಸಾಹಿತ್ಯವೆಲ್ಲಾ ಶ್ರೇಷ್ಠವಲ್ಲ, ಅದರಲ್ಲೂ ಬೂಸಾ ಇದೆ ಎಂಬುದು ಚಳವಳಿಯಾಗಬೇಕಾದ ಹೇಳಿಕೆಯಾಗಿರಲಿಲ್ಲ. ಬಸವಲಿಂಗಪ್ಪ ಅವರು ಧರ್ಮ, ದೇವರ ವಿರುದ್ಧ ಹೇಳಿಕೆಯನ್ನು ಸಾರ್ವಜನಿಕವಾಗಿ ನೀಡುತ್ತಿದ್ದರಿಂದ ಅವರನ್ನು ಹಿಮ್ಮೆಟ್ಟಿಸಲು ಬಳಸಿದ ಅಸ್ತ್ರವಾಗಿತ್ತು. ಹೀಗಾಗಿ ಅದು ಸಾಹಿತ್ಯದ ಪ್ರತಿರೋಧವಾಗದೆ, ಜಾತಿ ಜಗಳವಾಗಿ ಹೊರಬಂತು’ ಎಂದು ಹೇಳಿದರು.

ರಾಜ್ಯ ರೈತ ಸಂಘದ ನಾಯಕಿ ಸುನಂದಾ ಜಯರಾಮ್, ಒಡಲು ಟ್ರಸ್ಟ್ ಅಧ್ಯಕ್ಷ ಆರ್.ಎಸ್.ದೊಡ್ಡಣ್ಣ, ಕಾರ್ಯದರ್ಶಿ ಕೆ.ಎನ್.ಶಿವಲಿಂಗಯ್ಯ, ಸಂಶೋಧಕರ ಸಂಘದ ಅಧ್ಯಕ್ಷ ರಾಜೇಶ್ ಚಾಕನಹಳ್ಳಿ ಭಾಗವಹಿಸಿದ್ದರು.

ಗ್ಯಾರಂಟಿ ಯೋಜನೆ ನಿಲ್ಲಿಸಿ: ಎಂ.ಲಕ್ಷ್ಮಣ್

ಪ್ರಜಾವಾಣಿ ವಾರ್ತೆ

ಮೈಸೂರು: ‘ಲೋಕಸಭೆ ಚುನಾವಣೆಯಲ್ಲಿ ಮತದಾರರು ಬಿಜೆಪಿ ಬೆಂಬಲಿಸಿ, ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ವಿರುದ್ಧ ಮತ ಚಲಾಯಿಸಿದ್ದಾರೆ. ಹೀಗಾಗಿ ಯೋಜನೆಗಳನ್ನು ನಿಲ್ಲಿಸುವುದು ಒಳ್ಳೆಯದು’ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಎಂ.ಲಕ್ಷ್ಮಣ ಪ್ರತಿಪಾದಿಸಿದರು.

‘ಚುನಾವಣೆ ವೇಳೆ ಬಿಜೆಪಿಯವರು ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದು, ಅದನ್ನು ರದ್ದುಗೊಳಿಸಲು ಒತ್ತಾಯಿಸಿದ್ದರು. ಜನ ಬಿಜೆಪಿಗೆ ಮತ ನೀಡಿದ್ದು, ಗ್ಯಾರಂಟಿಯ ವಿರುದ್ಧವಾಗಿದ್ದಾರೆ ಎಂದೇ ಅರ್ಥ. ಹೀಗಾಗಿ ಯೋಜನೆಗಳ ಜಾರಿ ಸಂಬಂಧ ಮುಖ್ಯಮಂತ್ರಿ ಮತ್ತೊಮ್ಮೆ ಪರಿಶೀಲಿಸಬೇಕು’ ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ದೆಹಲಿಯಲ್ಲಿ ಎಎಪಿ ಸರ್ಕಾರ ಈಗಾಗಲೇ ಉಚಿತ ವಿದ್ಯುತ್ ಪೂರೈಕೆ ನಿಲ್ಲಿಸಿದೆ. ರಾಜ್ಯ ಸರ್ಕಾರವೂ ಪರಿಶೀಲಿಸಬೇಕು. ಉಳ್ಳವರಿಗೂ ಪುಕ್ಕಟೆ ಯೋಜನೆ ಕೊಡುವ ಬದಲು ಕಡುಬಡವರಿಗೆ ಮಾತ್ರ ಸೀಮಿತಗೊಳಿಸುವುದು ಒಳ್ಳೆಯದು’ ಎಂದು ಸಲಹೆ ನೀಡಿದರು.

ರಾಹುಲ್ ವಿರೋಧಪಕ್ಷದ ನಾಯಕ?

ಒಂದನೇ ಪುಟದಿಂದ...

ರಾಹುಲ್ ಅವರು ವಿರೋಧ ಪಕ್ಷದ ನಾಯಕನಾಗಬೇಕು ಎಂದು ಪಕ್ಷದೊಳಗೆ ಒತ್ತಡ ಹೆಚ್ಚಾಗಿದೆ. ಸುಮಾರು ಮೂರು ತಾಸುಗಳ ಕಾಲ ನಡೆದ ಸಭೆಯಲ್ಲಿ ಪಕ್ಷದ ಹಿರಿಯ ಮುಖಂಡ ದಿಗ್ವಿಜಯ್ ಸಿಂಗ್ ಅವರು ಈ ಸಂಬಂಧ ನಿರ್ಣಯ ಮಂಡಿಸಿದರು. ಇದಕ್ಕೆ ಎಲ್ಲ 120 ನಾಯಕರು ಸಹಮತ ವ್ಯಕ್ತಪಡಿಸಿದರು. ಶೀಘ್ರದಲ್ಲಿ ತಮ್ಮ ನಿರ್ಧಾರ ತಿಳಿಸುವುದಾಗಿ ರಾಹುಲ್ ಭರವಸೆ ನೀಡಿದರು. ಗೆದ್ದಿರುವ ಎರಡು ಕ್ಷೇತ್ರಗಳ (ವಯನಾಡು ಹಾಗೂ ರಾಯ್ ಬರೇಲಿ) ಪೈಕಿ ಯಾವ ಕ್ಷೇತ್ರವನ್ನು ಉಳಿಸಿಕೊಳ್ಳಲಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, ‘ಜೂನ್ 17ಕ್ಕೆ ಮುನ್ನ ರಾಹುಲ್ ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದರು.

ರಾಜ್ಯದಲ್ಲಿ ‘ಕೈ’ ಹಿನ್ನಡೆ: ಖರ್ಗೆ ಗರಂ

ಒಂದನೇ ಪುಟದಿಂದ...

‘ನಾವು ವಿಧಾನಸಭಾ ಚುನಾವಣೆಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಸರ್ಕಾರ ರಚಿಸಿದ್ದ ರಾಜ್ಯಗಳಲ್ಲೂ ನಮ್ಮ ಸಾಧನೆಯನ್ನು ಪುನರಾವರ್ತಿಸಲು ಸಾಧ್ಯವಾಗಿಲ್ಲ’ ಎಂದು ಖರ್ಗೆ ಬೇಸರ ವ್ಯಕ್ತಪಡಿಸಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಸಾಧನೆ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಹ ಗರಂ ಆಗಿದ್ದರು. ಸಚಿವರ ಕ್ಷೇತ್ರಗಳಲ್ಲೇ ಪಕ್ಷದ ಅಭ್ಯರ್ಥಿಗಳಿಗೆ ಮುನ್ನಡೆ ಸಿಗದ ಕಾರಣಕ್ಕೆ ರಾಜ್ಯದ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಪಕ್ಷ ಉತ್ತಮ ಸಾಧನೆ ಮಾಡಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಗಿ ಹಿಡಿತ ಹೊಂದಿರುವ ಭಾಗದಲ್ಲೇ ಪಕ್ಷಕ್ಕೆ ಹಿನ್ನಡೆಯಾಗಿದೆ. ಈ ಬಗ್ಗೆಯೂ ಖರ್ಗೆ ಗರಂ ಆದರು ಎಂದು ಮೂಲಗಳು ತಿಳಿಸಿವೆ.

ಮೋದಿ ಜನಾದೇಶವನ್ನು, ನಾಯಕತ್ವದ ಹಕ್ಕನ್ನೂ ಕಳೆದುಕೊಂಡಿದ್ದಾರೆ. ಆದರೆ, ಇದರ ಹೊಣೆ ಹೊತ್ತುಕೊಳ್ಳುವ ಬದಲು ಅವರು ಮತ್ತೆ ಪ್ರಮಾಣವಚನ ಸ್ವೀಕರಿಸಲು ಸಿದ್ಧರಾಗಿದ್ದಾರೆ
ಸೋನಿಯಾ ಗಾಂಧಿ
ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ

ಕಾಂಗ್ರೆಸ್‌ಗೆ ಸಾಂಪ್ರದಾಯಿಕವಾಗಿ ಒಲವು ಹೊಂದಿರುವ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಗೆದ್ದ ರಾಜ್ಯಗಳು ಸೇರಿದಂತೆ ತನ್ನ ಶಕ್ತಿಗೆ ತಕ್ಕಂತೆ ಕಾರ್ಯನಿರ್ವಹಿಸದ ರಾಜ್ಯಗಳಲ್ಲಿ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ಶೀಘ್ರದಲ್ಲೇ ಪರಿಶೀಲನಾ ಸಭೆ ನಡೆಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕೇಳಿದ್ದು

- ಪ್ರಜಾಪ್ರಭುತ್ವ ಹಾಗೂ ತನಿಖಾ ಸಂಸ್ಥೆಗಳನ್ನು ದುರ್ಬಲಗೊಳಿಸುವುದರ ವಿರುದ್ಧ ಜನರು ಫಲಿತಾಂಶ ನೀಡಿದ್ದಾರೆ
- ಸೋತ ಅಭ್ಯರ್ಥಿಗಳ ಕೆಚ್ಚೆದೆ ಹೋರಾಟ ಶ್ಲಾಘನಾರ್ಹ
- ಭಾರತ್ ಜೋಡೋ ಯಾತ್ರೆ ಸಾಗಿದ ಪ್ರದೇಶಗಳಲ್ಲಿ ಪಕ್ಷದ ಸ್ಥಾನ ಹಾಗೂ ಮತ ಪ್ರಮಾಣ ಹೆಚ್ಚಳ
- ಮಣಿಪುರ, ನಾಗಾಲ್ಯಾಂಡ್, ಅಸ್ಸಾಂ, ಮೇಘಾಲಯ ಹಾಗೂ ಮಹಾರಾಷ್ಟ್ರದಲ್ಲಿನ ಸಾಧನೆಯೂ ಗಮನಾರ್ಹ
- ನಗರ ಪ್ರದೇಶದಲ್ಲಿ ಪಕ್ಷದ ಅಸ್ತಿತ್ವ ದುರ್ಬಲ ಆಗಿರುವುದು ಕಳವಳಕಾರಿ
- ಇಂಡಿಯಾ’ ಮೈತ್ರಿಕೂಟ ಮುಂದುವರಿಸಲು ಸಂಕಲ್ಪ ಮಾಡೋಣ. ಸಂಸತ್ತಿನ ಒಳಗೆ ಹಾಗೂ ಹೊರಗೆ ಒಗ್ಗಟ್ಟಾಗಿ ಕಾರ್ಯನಿರ್ವಹಿಸೋಣ

ಪ್ರಜ್ವಲ್ ನಿವಾಸದಲ್ಲಿ ಎಸ್‌ಐಟಿ ಮಹಜರು

ಹೊಳೆನರಸೀಪುರದ ಚೆನ್ನಾಂಬಿಕಾ ನಿವಾಸಕ್ಕೆ ಮಾಜಿ ಸಂಸದನ ಕರೆತಂದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಶನಿವಾರ ಎಸ್‌ಐಟಿ ಅಧಿಕಾರಿಗಳು ಇಲ್ಲಿನ ಚೆನ್ನಾಂಬಿಕಾ ನಿವಾಸಕ್ಕೆ ಕರೆತಂದು, ಸ್ಥಳ ಮಹಜರು ನಡೆಸಿದರು. ಅಧಿಕಾರಿಗಳೊಂದಿಗೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರೂ ಬಂದಿದ್ದರು.

ಶನಿವಾರ ಮಧ್ಯಾಹ್ನ 2 ಜೀಪು ಹಾಗೂ ಮೀಸಲು ಪೊಲೀಸ್ ಪಡೆಯ ಒಂದು ವಾಹನ ಚೆನ್ನಾಂಬಿಕಾ ನಿವಾಸದ ಕಾಂಪೌಂಡ್ ಒಳಗೆ ಪ್ರವೇಶಿಸಿದವು. ಎರಡೂ ಜೀಪಿನಲ್ಲಿ ಪ್ರಜ್ವಲ್ ಇರಲಿಲ್ಲ. ಮೀಸಲು ಪೊಲೀಸ್ ಪಡೆಯ ವಾಹನದ ಸೀಟ್ ಮೇಲೆ ಕಪ್ಪು ಬಟ್ಟೆ ಹಾಗೂ ಮಾಸ್ಕ್ ಹಾಕಿ ಮಲಗಿದ್ದ ಪ್ರಜ್ವಲ್ ರೇವಣ್ಣ ಕ್ಯಾಮೆರಾ ಕಣ್ಣಿಗೆ ಕಂಡರು.

ಮನೆ ಕೆಲಸದ ಕೆಲವರನ್ನು ಬಿಟ್ಟರೆ ಮನೆಯಲ್ಲಿ ಬೇರಾರೂ ಇರಲಿಲ್ಲ. ಕಾಂಪೌಂಡ್ ಒಳಗೆ ಯಾರೂ ಪ್ರವೇಶಿಸದಂತೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು ನೇತೃತ್ವದಲ್ಲಿ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರ್, ನಾಲ್ವರು ಎಸ್‌ಐ, 5 ಕ್ಕೂ ಹೆಚ್ಚು ಎಎಸ್‌ಐ, 10 ಕ್ಕೂ ಹೆಚ್ಚು ಪೊಲೀಸರು, ಮೀಸಲು ಪಡೆಯ ಸಿಬ್ಬಂದಿ ನಿಯೋಜಿಸಲಾಗಿತ್ತು.

ನಾಲ್ಕು ಗಂಟೆಯ ವಿಚಾರಣೆಯ ಬಳಿಕ ಪ್ರಜ್ವಲ್ ಅವರನ್ನು ಕರೆದುಕೊಂಡು ಎಸ್‌ಐಟಿ ತಂಡ ಇಲ್ಲಿಂದ ಹೊರಟಿತು. ಆ ವೇಳೆ ಬೆಂಬಲಿಗರು, ಪ್ರಜ್ವಲ್ ಹಾಗೂ ರೇವಣ್ಣ ಅವರಿಗೆ ಜೈಕಾರ ಕೂಗಿದರು.

ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ಬಂಧನ

ಹಾಸನ: ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಆರೋಪಿ, ಪ್ರಜ್ವಲ್ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ಗೌಡ ಅವರನ್ನು ಎಸ್‌ಐಟಿ ಅಧಿಕಾರಿಗಳು ಶನಿವಾರ ಹಾಸನ–ಮೈಸೂರು ಜಿಲ್ಲೆಯ ಗಡಿಯಲ್ಲಿ ಬಂಧಿಸಿ, ಬೆಂಗಳೂರಿಗೆ ಕರೆದೊಯ್ದಿದ್ದಾರೆ.

‘ಪ್ರಜ್ವಲ್ ರೇವಣ್ಣ ಅವರ ಮಾರ್ಫ್ ಮಾಡಿದ ವಿಡಿಯೊಗಳನ್ನು ರೂಪಿಸಿ ಪೆನ್‌ಡ್ರೈವ್ ಮೂಲಕ ಹಂಚಿದ್ದಾರೆ’ ಎಂದು ಜೆಡಿಎಸ್ ಚುನಾವಣಾ ಏಜೆಂಟ್ ಪೂರ್ಣಚಂದ್ರ ಅವರು ಸೆನ್ ಠಾಣೆಗೆ ನೀಡಿದ್ದ ದೂರು ಆಧರಿಸಿ ಕಾರ್ತಿಕ್ ಸೇರಿದಂತೆ ಐವರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಪ್ರಜ್ವಲ್ ಅವರ ಮೊಬೈಲ್‌ನಲ್ಲಿದ್ದ ಅಶ್ಲೀಲ ವಿಡಿಯೋಗಳ ಪೆನ್‌ಡ್ರೈವ್ ಅನ್ನು ವಕೀಲ ದೇವರಾಜೇಗೌಡ ಅವರಿಗೆ ನೀಡಿದ್ದೆ’ ಎಂದು ಹಿಂದೆ ಹೇಳಿಕೆ ನೀಡಿದ್ದ ಆರೋಪದಲ್ಲಿ ಕಾರ್ತಿಕ್ ಅವರನ್ನು ಬಂಧಿಸಲಾಗಿದೆ. ಜೂ.4ರಂದು ಹೊಳೆನರಸೀಪುರದಲ್ಲಿ ಸಂಸದ ಶ್ರೇಯಸ್ ಪಟೇಲ್ ಗೆಲುವಿನ ಸಂಭ್ರಮಾಚರಣೆಯಲ್ಲಿ ಆರೋಪಿ ಕಾಣಿಸಿಕೊಂಡಿದ್ದನು.

ಮಾರಾಮಾರಿ: 19 ವಿದ್ಯಾರ್ಥಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೀದರ್: ನಗರದ ಗುರುನಾನಕ ದೇವ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ‘ಜೈಶ್ರೀರಾಮ್’ ಹಾಡಿನ ವಿಚಾರಕ್ಕೆ ಈಚೆಗೆ ನಡೆದಿದ್ದ ಗಲಾಟೆಗೆ ಸಂಬಂಧಿಸಿದಂತೆ 19 ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಅಮಾನತುಗೊಳಿಸಲಾಗಿದೆ.

‘ಮಾರಾಮಾರಿಗೆ ಸಂಬಂಧಿಸಿದಂತೆ ಕಾಲೇಜು ಆಡಳಿತ ಮಂಡಳಿಯು ಐವರು ಉಪನ್ಯಾಸಕರ ವಿಚಾರಣಾ ಸಮಿತಿ ರಚಿಸಿದೆ. ಕಾಲೇಜಿನ ಆಂತರಿಕ ವಿಚಾರಣೆ ಸಮಿತಿಯ ವರದಿಯು ಪೊಲೀಸ್ ಸಿಬ್ಬಂದಿಗೆ ಮುಂದಿನ ವಿಚಾರಣೆಗೆ ಸಹಾಯವಾಗಲಿದೆ’ ಎಂದು ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸುರೇಶ್ ಸೋಲಿಗೆ ಸಿದ್ದರಾಮಯ್ಯ ಸಂಚು’

ಪ್ರಜಾವಾಣಿ ವಾರ್ತೆ

ತುಮಕೂರು: ‘ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಸೋಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ತಂಡವೇ ಕಾರಣ’ ಎಂದು ಗ್ರಾಮಾಂತರ ಕ್ಷೇತ್ರದ ಬಿಜೆಪಿ ಶಾಸಕ ಬಿ.ಸುರೇಶ್‌ಗೌಡ ಶನಿವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚುನಾವಣೆ ನಂತರ ಮುಖ್ಯಮಂತ್ರಿ ಸ್ಥಾನ ಕೇಳಬಾರದು ಎಂಬ ಕಾರಣಕ್ಕೆ ಅವರ ಸಹೋದರ ಡಿ.ಕೆ.ಸುರೇಶ್ ಅವರನ್ನು ಸೋಲಿಸಿದ್ದಾರೆ. ನೈತಿಕವಾಗಿ ಕುಸಿಯುವಂತೆ ಮಾಡುವ ಸಲುವಾಗಿ ಅವರ ವಿರುದ್ಧ ಸಂಚು ರೂಪಿಸಿದ್ದರು’ ಎಂದು ದೂರಿದರು.

‘ಸಿದ್ದರಾಮಯ್ಯ ಜತೆಗೆ ಸಚಿವರಾದ ಸತೀಶ್ ಜಾರಕಿಹೊಳಿ, ಜಿ.ಪರಮೇಶ್ವರ, ಕೆ.ಎನ್.ರಾಜಣ್ಣ, ಅಹಿಂದ ತಂಡ ಸೇರಿಕೊಂಡು ಸೋಲುವಂತೆ ಮಾಡಿದೆ. ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಲು ಸಿದ್ದರಾಮಯ್ಯ ತಮ್ಮ ಪಕ್ಷದವರ ವಿರುದ್ಧ ಸಂಚು ರೂಪಿಸಿದ್ದರು. ಅವರ ಸೋಲಿಗೆ ಸಿ.ಎಂ ಅಲ್ಲದೇ ಬೇರಾರು ಕಾರಣರಲ್ಲ’ ಎಂದು ಹೇಳಿದರು.

‘ಚುನಾವಣೆಗೆ ಮುನ್ನವೇ ಸೋಲಿಸುವ ಸಂಚು ನಡೆದಿರುವುದು, ಎರಡು ಲಕ್ಷ ಮತಗಳ ಅಂತರದಿಂದ ಸೋಲಿಸುತ್ತಾರೆ ಎಂದು ಹೇಳಿದ್ದೆ. ಈಗ ಅದಕ್ಕಿಂತಲೂ ಹೆಚ್ಚಿನ ಮತಗಳ ಅಂತರದಿಂದ ಸೋಲಿಸಿದ್ದಾರೆ’ ಎಂದು ಎಂದರು.

ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗದಿದ್ದರೆ ರಾಜ್ಯದಲ್ಲಿ ಸರ್ಕಾರ ಉಳಿಯುವುದಿಲ್ಲ. ಕಾಂಗ್ರೆಸ್‌ನಲ್ಲಿ ಒಳಜಗಳ ಆರಂಭವಾಗಲಿದ್ದು, ಈಗಾಗಲೇ ಬೆಳಗಾವಿ ಭಾಗದಲ್ಲಿ ಅಂತಹ ಲಕ್ಷಣಗಳು ಕಾಣಿಸಿಕೊಂಡಿವೆ. ಆರು ತಿಂಗಳಲ್ಲಿ ಸರ್ಕಾರ ಪತನವಾಗಲಿದೆ ಎಂದು ತಿಳಿಸಿದರು.

ಆಳ್ವಾಸ್ ಪ್ರಗತಿ: 2,468 ಜನರಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ ಹಮ್ಮಿಕೊಂಡಿದ್ದ ‘ಆಳ್ವಾಸ್ ಪ್ರಗತಿ ಉದ್ಯೋಗ ಮೇಳ’ದಲ್ಲಿ ವಿವಿಧ ಕಂಪನಿಗಳು 2,468 ಅಭ್ಯರ್ಥಿಗಳನ್ನು ಸ್ಥಳದಲ್ಲೇ ನೇಮಕಾತಿ ಮಾಡಿಕೊಂಡವು.

ಮೇಳದಲ್ಲಿ ಪಾಲ್ಗೊಂಡಿದ್ದ 258 ಕಂಪನಿಗಳಲ್ಲಿ 217 ಕಂಪನಿಗಳು 5,953 ಅಭ್ಯರ್ಥಿಗಳಿಗೆ ಪ್ರಾಥಮಿಕ ಹಂತದಿಂದ ಮುಂದಿನ ಹಂತಕ್ಕೆ ಆಯ್ಕೆ ಮಾಡಿವೆ. ಎರಡು ದಿನಗಳ ಉದ್ಯೋಗ ಮೇಳದಲ್ಲಿ ಒಟ್ಟು 14,780 ಅಭ್ಯರ್ಥಿಗಳು ಪಾಲ್ಗೊಂಡಿದ್ದರು.

ಬೆಂಗಳೂರಿನ ಸರ್ಕಾರಿ ಎಸ್‌ಕೆಎಸ್‌ಜೆ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್‌ನ 43 ವಿದ್ಯಾರ್ಥಿಗಳಿಗೆ ವಿಶೇಷ ಆದ್ಯತೆಯ ಮೇರೆಗೆ ಆಳ್ವಾಸ್ ಸಂಸ್ಥೆಯ ವತಿಯಿಂದ ಉಚಿತ ವಾಹನ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಿ, ಪ್ರಗತಿ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಈ ವಿದ್ಯಾರ್ಥಿಗಳು ಇಜಿ ಇಂಡಿಯಾ, ಇಸಿಯಾ ಸಾಫ್ಟ್ ಹಾಗೂ ಫ್ಲಿಪ್ ಕಾರ್ಟ್ ಕಂಪನಿಗಳಿಗೆ ಉತ್ತಮ ವೇತನದೊಂದಿಗೆ ಆಯ್ಕೆಯಾಗಿದ್ದಾರೆ.

‘ಟೊಯೊಟ ಕಿರ್ಲೋಸ್ಕರ್ ಆಟೊ ಪಾರ್ಟ್ಸ್ ಕಂಪನಿಗೆ ವಾರ್ಷಿಕ ₹ 4.7 ಲಕ್ಷ ವೇತನದೊಂದಿಗೆ ಆಯ್ಕೆಯಾಗಿದ್ದೇನೆ. ಈ ಮೇಳ ನನಗೆ ಉತ್ತಮ ಉದ್ಯೋಗ ದೊರಕಿಸಿಕೊಟ್ಟಿದೆ’ ಎಂದು ಮುಂಬೈನ ಠಾಕೂರ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ, ಪಡುಬಿದ್ರಿಯ ಶೌರ್ಯ ಪೂಜಾರಿ ಸಂತಸ ಹಂಚಿಕೊಂಡರು.

‘ಕಂಪನಿಗಳು ಹಾಗೂ ಉದ್ಯೋಗ ಆಕಾಂಕ್ಷಿಗಳಿಗೆ ಆತಿಥ್ಯ ಕಲ್ಪಿಸುವುದು, ಇಷ್ಟೊಂದು ಅಭ್ಯರ್ಥಿಗಳು ಒಂದೆಡೆ ಸೇರುವಂತೆ ಮಾಡುವುದು ಆಳ್ವಾಸ್ ಪ್ರಗತಿ ಉದ್ಯೋಗ ಮೇಳದ ಹೆಗ್ಗುರುತು. ಇದು ಯಶಸ್ವಿ ಉದ್ಯೋಗ ಮೇಳ’ ಎಂದು ಫ್ಯಾಕ್ಟ್‌ಸೆಟ್ ಕಂಪನಿ ಪ್ರತಿನಿಧಿಗಳಾದ ವೆಂಕಟ ಸತ್ಯಕೃಷ್ಣ, ಸತ್ಯನಾರಾಯಣ ದುರ್ಹಾಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಫೋನ್: 080–22223906, ಇ–ಮೇಲ್: dce.tenders2017@gmail.com

ಸಂಖ್ಯೆ: DCE/ITS/CPS/2/2024-INFO- (Computer No. 1336473) ದಿನಾಂಕ: 07.06.2024

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ–ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://kppp.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀ–ಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ: ಡಿಸಿಇ/2024–25/ಎಸ್‌ಇ002 “ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇರೆಗೆ ಪ್ರೋಗ್ರಾಮರ್‌ಗಳನ್ನು ಒದಗಿಸುವ ಸಂಬಂಧ ಮ್ಯಾನ್‌ಪವರ್ ಏಜೆನ್ಸಿಯನ್ನು ಆಯ್ಕೆ ಮಾಡುವ ಬಗ್ಗೆ”	08/06/2024	11/06/2024 ಬೆಳಿಗ್ಗೆ 11.00 ಗಂಟೆಗೆ	15/06/2024 ಸಂಜೆ 5.30 ಗಂಟೆಗೆ

ಸಹಿ/–
ಕಾಲೇಜು ಶಿಕ್ಷಣ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
DIPR/CP/241/Zen/2024-25

ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕೊಠಡಿ ಸಂ. 8, ವಿಕಾಸಸೌಧ, ಬೆಂಗಳೂರು–560001.
ದೂರವಾಣಿ: 080–22034069/70, ಇ–ಮೇಲ್: director.idd@gmail.com

ಸಂ: IDD/10&9/ITS/2024 ದಿನಾಂಕ: 07.06.2024

ಆಸಕ್ತಿ ವ್ಯಕ್ತಪಡಿಸಲು ವಿನಂತಿ ಆಹ್ವಾನ ಪ್ರಕಟಣೆ (ಆರ್‌ಇಒಐ)

ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಐಡಿಪಿ&ಐಡಬ್ಲ್ಯೂಟಿಡಿ), ಕರ್ನಾಟಕ ಸರ್ಕಾರವು ಕೆಳಗಿನ ಸಮಾಲೋಚನಾ ಸೇವೆಗಳಿಗಾಗಿ ನಿಯೋಜಿಸಲು ಪ್ರಸ್ತಾಪಿಸಿದೆ.

Sl. No.	Name of the Services	Tender Number
1	Program Management Services for Asset Monetization.	IDD/2024-25/Prequal-_Tender_Number_10 dtd 07.06.2024
2	Undertaking Financial Assessment through Innovative Capital Funding in the State.	IDD/2024-25/Prequal-_Tender_Number_11 dtd 07.06.2024

ಮೇಲಿನವುಗಳಿಗೆ ಅರ್ಹ ಹಾಗೂ ಪರಿಣತಿ ಹೊಂದಿರುವ ಸಮಾಲೋಚಕರುಗಳಿಂದ ಆಸಕ್ತಿ ವ್ಯಕ್ತಪಡಿಸಲು ವಿನಂತಿಯನ್ನು ಆಹ್ವಾನಿಸಲಾಗಿದೆ. ಆರ್‌ಇಒಐ ಟೆಂಡರ್ ದಾಖಲೆಗಳು, ವಿವರಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಿಂದ https://kppp.karnataka.gov.in ದಿನಾಂಕ: 07.06.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಪಿಪಿಪಿ ಕೋಶ,
ಐಡಿಪಿ&ಐಡಬ್ಲ್ಯೂಟಿಡಿ, ಟೆಂಡರ್ ಆಹ್ವಾನ ಪ್ರಾಧಿಕಾರ
ವಾಸಾಸಂಇ/ವಾಪ್ರ/225/ಎಂಎಎ/2024–25

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ
ಆಯುಕ್ತಾಲಯ, 1ನೇ ಮಹಡಿ, ಪಶುವೈದ್ಯಕೀಯ ಮಹಾವಿದ್ಯಾಲಯ ಆವರಣ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು – 560 024.

ಸಂಖ್ಯೆ: ಆಪಸಂ/ಸಿಬ್ಬಂದಿ–ಎ5/ಇ–51/2022 ದಿನಾಂಕ: 07.06.2024

ಪ್ರಕಟಣೆ

ವಿಷಯ: 400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡುವ ಕುರಿತು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ **400 ಪಶುವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಲು** ಸರ್ಕಾರದ ಆದೇಶ ಸಂಖ್ಯೆ: ಇ–ಪಸಂಮೀ 31 ಪಸಸೇ 2024, ಬೆಂಗಳೂರು. ದಿನಾಂಕ: 07.06.2024 ರಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಅನುಮತಿಯನ್ನು ನೀಡಲಾಗಿರುತ್ತದೆ. ಸರ್ಕಾರದ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನಿಗಧಿತ ವಿದ್ಯಾರ್ಹತೆ ಹಾಗೂ ಗರಿಷ್ಠ ವಯೋಮಿತಿಯೊಳಗಿನ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು NIC Software ನಲ್ಲಿ ಆನ್‌ಲೈನ್ ಮುಖಾಂತರ https://ahvs.karnataka.gov.in ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕದಿಂದ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದವರೆಗಿನ ನಿಗಧಿತ ವೇಳೆಯೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಕೆಯ ಪ್ರಾರಂಭದ ದಿನಾಂಕ:	14.06.2024
ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ:	24.06.2024ರ ರಾತ್ರಿ 12.00 ಗಂಟೆವರೆಗೆ.

ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತಾಲಯ, ಪಶುಪಾಲನಾ ಭವನ, ಹೆಬ್ಬಾಳ, ಬೆಂಗಳೂರು–560 024 ಇವರನ್ನು ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080–23414446 ಹಾಗೂ ವೆಬ್‌ಸೈಟ್ ವಿಳಾಸ: https://ahvs.karnataka.gov.in ಅನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಆಯುಕ್ತರು,
ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/238/ಎಂಎಎ/24–25

ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ** (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010.
ದೂರವಾಣಿ: 080-23407011-25, ಫ್ಯಾಕ್ಸ್:91-080-23208970, ವೆಬ್‌ಸೈಟ್:www.kssidc.co.in

ಸಂಖ್ಯೆ:ಇಎನ್‌ಜಿ:ಅ.ಅ:ಇಪಿ–83:ಡಿಪಿಆರ್:ಯೂನಿಟಿ ಮಾಲ್:2024–25 ದಿನಾಂಕ: 07–06–2024

ಟೆಂಡರ್ ಪ್ರಕಟಣೆ (ಪ್ರಸ್ತಾವನೆ ಸಲ್ಲಿಸಲು ಕೋರಿಕೆ)

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ) (ದ್ವಿ–ಟೆಂಡರ್ ದಾಖಲೆ ಪದ್ಧತಿ)

ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ Selection of consultant – Architect for services of preparation of Master Planning, Architectural design including Structural design, MEP design and Project Management Consultancy Services for Construction of Unity Mall at Exhibition ground Mysore, Karnataka. ವಿಸ್ತೃತ ಯೋಜನಾ ವರದಿಯನ್ನು ಸಿದ್ದಪಡಿಸಲು (DPR) ನುರಿತ ಸಲಹೆಗಾರರನ್ನು / ಸಮಾಲೋಚಕರನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಟೆಂಡರ್ ಪ್ರಕಟಣೆಯನ್ನು ಸಂಖ್ಯೆ: **ಇಎನ್‌ಜಿ:ಅ.ಅ:ಇಪಿ–83: ಡಿಪಿಆರ್: ಯೂನಿಟಿ ಮಾಲ್: 2024–25 ದಿ: 07–06–2024ರಂತೆ** ಹೊರಡಿಸಲಾಗಿರುತ್ತದೆ.

ಟೆಂಡರ್ ದಸ್ತಾವೇಜುಗಳನ್ನು (RFP Documents) ಕರ್ನಾಟಕ ಸರ್ಕಾರದ ಇ–ಪೋರ್ಟಲ್ **https://kppp.Karnataka.gov.in** (Karnataka State Small Industries Development Corporation Limited) ಮುಖಾಂತರ ದಿನಾಂಕ: **10–06–2024 12.00 ಗಂಟೆಯಿಂದ** ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಬಹುದು.

ಭರ್ತಿಮಾಡಲಾದ (Online submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ (**ರೂ. 10,50,000/–**) ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** (Karnataka State Small Industries Development Corporation Limited) ಇ–ಪೋರ್ಟಲ್ ಮೂಲಕ **ದಿನಾಂಕ: 11–07–2024ರ ಸಂಜೆ 16.00 ಗಂಟೆಯೊಳಗೆ** ಸಲ್ಲಿಸಲು ಕೋರಿದೆ.

ಟೆಂಡರ್ ನ ಕಾಲಮಿತಿ ವಿವರಗಳು:
- ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಭಾವಿ ಸಭೆ ದಿನಾಂಕ: **20–06–2024, 15.00 ಗಂಟೆಗೆ.**
- ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **11–07–2024, 16.00 ಗಂಟೆಯವರೆಗೆ.**
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12–07–2024, 17.00 ಗಂಟೆಗೆ.**
- ತಾಂತ್ರಿಕ ಬಿಡ್‌ಗಳ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಬಿಡ್‌ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನುಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಅಧೀಕ್ಷಕ ಅಭಿಯಂತರರು
ವಾಸಾಸಂಇ/ವಾಪ್ರ/ಜೆಎ/234/2024–25

ತುಂಗಭದ್ರಾ ಜಲಾಶಯಕ್ಕೆ ಒಳಹರಿವು ಏರಿಕೆ • ಉತ್ತರ ಕನ್ನಡದಲ್ಲಿ ತುಂಬಿ ಹರಿಯುತ್ತಿರುವ ನದಿಗಳು

ವರ್ಷಧಾರೆ: ಜಲಮೂಲಗಳಿಗೆ ಜೀವಕಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ ವಿಜಯಪುರ/ ಕಲಬುರಗಿ: ರಾಜ್ಯದಲ್ಲಿ ವರ್ಷಧಾರೆ ಮುಂದುವರಿದಿದೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ಕರಾವಳಿಗೆ ಮುಂಗಾರು ಪ್ರವೇಶಿಸಿದೆ. ನದಿಗಳಲ್ಲಿ ನೀರಿನ ಹರಿವು ಹೆಚ್ಚಿದ್ದು, ಜಲಮೂಲಗಳು ಜೀವಕಳೆ ಪಡೆದು ಕೊಳ್ಳುತ್ತಿವೆ.

ವಿಜಯನಗರ, ಬೆಳಗಾವಿ, ಬಾಗಲಕೋಟೆ ಗದಗ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಶನಿವಾರವೂ ಉತ್ತಮ ಮಳೆಯಾಯಿತು. ಹುಬ್ಬಳ್ಳಿ ನಗರ ಸೇರಿ ಧಾರವಾಡ ಜಿಲ್ಲೆಯಲ್ಲಿ ಬೆಳಿಗ್ಗೆಯಿಂದಲೇ ಆರಂಭವಾದ ಮಳೆ ರಾತ್ರಿಯೂ ಮುಂದುವರೆಯಿತು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನೆಲ್ಲೆಡೆ ಸುರಿದ ಮಳೆಯಿಂದ ಬತ್ತಿದ್ದ ಜಲಮೂಲಗಳು ಜೀವಕಳೆ ಪಡೆದಿವೆ. ತಾಲ್ಲೂಕಿನ ಹುಲೇಕಲ್, ಸೋಂದಾ, ಭೈರುಂಬೆ, ಬನವಾಸಿ, ಬಂಡಲ, ಹೆಗಡೆಕಟ್ಟಾ ಸೇರಿ ಹಲವೆಡೆ ಉತ್ತಮ ಮಳೆಯಾಗಿದೆ. ಇದರಿಂದ ಶಾಲ್ಮಲಾ, ವರದಾ ಹಾಗೂ ಅಘನಾಶಿನಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಿದೆ.

ಕೋಡಿ ಬಿದ್ದ ಕೆರೆ: ರಭಸದಿಂದ ಸುರಿದ ಮಳೆಗೆ ಶಿರಸಿ ತಾಲ್ಲೂಕಿನ ಹನುಮಂತಿ ಬಳಿಯ ಕೆರೆ ಕೋಡಿ ಬಿದ್ದಿದೆ. ಕೆರೆ ದಂಡೆಯ ನಿವಾಸಿಗಳು ಸುರಕ್ಷಿತ ಸ್ಥಳಕ್ಕೆ ಹೋಗಿದ್ದಾರೆ. ಭಟ್ಕಳ ತಾಲ್ಲೂಕಿನ ಬದ್ರಿಯಾ ಕಾಲೊನಿಯಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಭಟ್ಕಳದ ಜಂಬರಮಠದಲ್ಲಿ ಈಶ್ವರ ನಾಯ್ಕ ಅವರ ಮನೆ ಕಾಂಪೌಂಡ್ ಕುಸಿದಿದೆ.

ಕುಮಟಾ ತಾಲ್ಲೂಕಿನಲ್ಲಿ ನಿರಂತರ ಮಳೆಯಾಗುತ್ತಿದೆ. ಪಟ್ಟಣದ ಸಸಿಹಿತ್ಲುವಿನಲ್ಲಿ ಇಪ್ಪತ್ತು ಮನೆಗಳು ಜಲಾವೃತಗೊಂಡಿದ್ದು, 15 ಮನೆಗಳಿಗೆ ನೀರು ನುಗ್ಗಿದೆ ಎಂದು ತಹಶೀಲ್ದಾರ್ ಪ್ರವೀಣ ಕರಾಂಡೆ ತಿಳಿಸಿದ್ದಾರೆ. ತುರ್ತುಪರಿಹಾರ ಕ್ರಮಗಳಿಗೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಕಾಗಾಲದಲ್ಲಿ ಲೀಲಾ ಪಟಗಾರ ಎನ್ನುವವರ ಮನೆಯ ಚಾವಣಿ ಕುಸಿದಿದೆ. ಎಂದು ಮಾಹಿತಿ ನೀಡಿದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಹನುಮಂತಿ ಬಳಿಯ ಕೆರೆ ಕೋಡಿ ಬಿದ್ದಿರುವುದು

ನಾಲ್ಕು ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ನಾಲ್ಕು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಧಾರವಾಡ, ಹಾವೇರಿ ಹಾಗೂ ಉಡುಪಿ ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ ಹಾಗೂ ಗದಗ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದ್ದು, ಈ ಎರಡು ಜಿಲ್ಲೆಗಳಲ್ಲಿ ಅತಿ ಭಾರಿ ಮಳೆಯಾಗುವ ಸಂಭವವಿದೆ. ಬಾಗಲಕೋಟೆ, ಕೊಪ್ಪಳ, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಅಲರ್ಟ್ ನೀಡಲಾದ ಜಿಲ್ಲೆಗಳ ಕೆಲವೆಡೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಉಳಿದ ಜಿಲ್ಲೆಗಳ ಹಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ: ಚಂಡಮಾರುತದ ಹವಾಮಾನವು ಕರಾವಳಿಯಲ್ಲಿ ಮೇಲುಗೈ ಸಾಧಿಸುವ ಸಾಧ್ಯತೆಯಿದೆ. ಗಾಳಿಯು 55 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ. ಇದರಿಂದಾಗಿ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ಸಮುದ್ರದಲ್ಲಿ ಭಾರಿ ಅಲೆಗಳು ಕಾಣಿಸಿಕೊಳ್ಳಬಹುದು ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದ ವಿವಿಧೆಡೆ ಇದೇ 12ರವರೆಗೂ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಇಲಾಖೆ, ಮುಂದಿನ ಎರಡು ದಿನ ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ಒಳನಾಡಿನ ಹಲವು ಜಿಲ್ಲೆಗಳಿಗೆ 'ಆರೆಂಜ್' ಹಾಗೂ 'ಯೆಲ್ಲೊ ಅಲರ್ಟ್' ನೀಡಿದೆ.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು, ಮೂಡಲಗಿ, ಸವದತ್ತಿ ಹಾಗೂ ಬೈಲಹೊಂಗಲ ಭಾಗದಲ್ಲಿಯೂ ಉತ್ತಮ ಮಳೆ ಆಗಿದೆ. ಗದಗ ಜಿಲ್ಲೆಯ ಮುಂಡರಗಿ, ಶಿರಹಟ್ಟಿ, ನರಗುಂದ ಭಾಗದಲ್ಲಿಯೂ ಮಳೆಯಾಗಿದೆ.

ತುಂಗಭದ್ರಾಗೆ ಒಳಹರಿವು ಹೆಚ್ಚಳ: ವಿಜಯನಗರ ಜಿಲ್ಲೆ ಹರಪನಹಳ್ಳಿಯಲ್ಲಿ ಎರಡು ಮನೆಗಳು ಕುಸಿದಿವೆ. ತುಂಗಭದ್ರಾ ಜಲಾಶಯದ ಒಳಹರಿವು ಏರುತ್ತಿದೆ. ಶನಿವಾರ 1,550 ಕ್ಯೂಸೆಕ್ ನೀರು ಹರಿದಿದೆ. 105.78 ಟಿಎಂಸಿ ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 3.94 ಟಿಎಂಸಿ ಅಡಿಯಷ್ಟು ನೀರಿದೆ.

ಡೋಣಿ ನದಿಗೆ ಪ್ರವಾಹ: ವಿಜಯಪುರ ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ ಮತ್ತು ಶನಿವಾರ ಧಾರಾಕಾರ ಮಳೆಯಾಗಿದೆ. ತಾಳಿಕೋಟೆ ಪಟ್ಟಣದ ಬಳಿ ಡೋಣಿ ನದಿಯಲ್ಲಿ ಪ್ರವಾಹ ಬಂದಿದೆ. ಸೇತುವೆ ಮುಳುಗಿದ್ದು, ವಿಜಯಪುರ ಮಾರ್ಗದಲ್ಲಿ ಶುಕ್ರವಾರ ಕೆಲವೊತ್ತು ಸಂಪರ್ಕ ಕಡಿತವಾಗಿತ್ತು. ಶನಿವಾರ ಸಹಜ ಸ್ಥಿತಿಗೆ ಮರಳಿತು.

'ಕಲ್ಯಾಣ'ದಲ್ಲಿ ಮುಂದುವರಿದ ಮಳೆ (ಕಲಬುರಗಿ ವರದಿ): ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಮಳೆಯು ಮುಂದುವರಿದಿದ್ದು, ರೈತರಲ್ಲಿ ಹರ್ಷ ತಂದಿದೆ.

ಕಲಬುರಗಿ ಜಿಲ್ಲೆಯಾದ್ಯಂತ ಐದು ದಿನಗಳಿಂದ ಮಳೆಯಾಗುತ್ತಿದೆ. ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಬಿತ್ತನೆ ಬೀಜ ಮತ್ತು ಗೊಬ್ಬರ ಖರೀದಿಗೆ ಕೃಷಿಕರು ರೈತ ಸಂಪರ್ಕ ಕೇಂದ್ರಗಳಿಗೆ ಮುಗಿಬಿದ್ದಿದ್ದಾರೆ. ಬೀದರ್ ಜಿಲ್ಲೆಯಾದ್ಯಂತ ಉತ್ತಮವಾಗಿ ಮಳೆಯಾಗಿದೆ. ಬೀದರ್ ತಾಲ್ಲೂಕಿನಲ್ಲಿ ಸತತ ಐದನೇ ದಿನವೂ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ ನಗರ, ಕುಷ್ಟಗಿ, ಯಲಬುರ್ಗಾ, ಮುನಿರಾಬಾದ್ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ. ಕೊಪ್ಪಳ ತಾಲ್ಲೂಕಿನ ಹ್ಯಾಟಿ ಗ್ರಾಮದಲ್ಲಿ ಕೃಷಿ ಹೊಂಡ ಕೊಚ್ಚಿಕೊಂಡು ಹೋಗಿದೆ. ಯಾದಗಿರಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಕೊಡಗಿನಲ್ಲಿ ಬಿರುಸು (ಮಡಿಕೇರಿ ವರದಿ): ಕೊಡಗು ಜಿಲ್ಲೆಯಲ್ಲಿ ಮಳೆ ಬಿರುಸು ಪಡೆದಿದೆ. ಮಡಿಕೇರಿಯಲ್ಲಿ ಎರಡೂವರೆ ಗಂಟೆ ಬಿರುಸಿನ ಮಳೆಯಾಗಿದೆ. ಸೋಮವಾರಪೇಟೆ, ಕುಶಾಲನಗರ, ಸುಂಟಿಕೊಪ್ಪ, ನಾಪೋಕ್ಲು, ವಿರಾಜಪೇಟೆ ಸೇರಿದಂತೆ ಹಲವೆಡೆ ಸಾಧಾರಣ ಮಳೆಯಾಗಿದೆ.

ಕರಾವಳಿಯಲ್ಲಿ ಮುಂಗಾರು ಚುರುಕು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮುಂಗಾರು ಚುರುಕುಗೊಂಡಿದೆ. ಮಂಗಳೂರಿನಲ್ಲಿ ಉತ್ತಮ ಮಳೆಯಾಗಿದ್ದು, ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದವು. ವಾಹನ ಸವಾರರಿಗೆ ಸಮಸ್ಯೆಯಾಯಿತು. ಉಡುಪಿ ಜಿಲ್ಲೆಯಲ್ಲಿ ಬೈಂದೂರು, ಹೆಬ್ರಿ ತಾಲ್ಲೂಕುಗಳಲ್ಲಿ ಮಳೆಯಾಗಿದೆ.

ಮುನ್ಸೂಚನೆ: ಇದೇ 9ರಂದು ಗಂಟೆಗೆ 45 ಕಿ.ಮೀ.ಯಿಂದ 55 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆ ನಡೆಸದಂತೆ ಜಿಲ್ಲಾಡಳಿತ ಮುನ್ನೆಚ್ಚರಿಕೆ ನೀಡಿದೆ.

ಕೇರಳದಲ್ಲಿ ಭಾರಿ ಮಳೆ, ಬಿರುಗಾಳಿಯ ಮುನ್ಸೂಚನೆ

ತಿರುವನಂತಪುರಂ (ಪಿಟಿಐ): ಕೇರಳದಲ್ಲಿ ನೈರುತ್ಯ ಮುಂಗಾರು ಮಳೆಯ ಅಬ್ಬರ ಮುಂದುವರೆದಿದ್ದು, ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಕೇರಳ ರಾಜ್ಯದಾದ್ಯಂತ ವಿವಿಧ ಸ್ಥಳಗಳಲ್ಲಿ ಭಾರಿ ಮಳೆ ಮತ್ತು ಬಿರುಗಾಳಿ ಬೀಸುವ ಮುನ್ಸೂಚನೆ ನೀಡಿದೆ.

ಇತ್ತೀಚಿನ ಐಎಂಡಿ ಅಪ್‌ಡೇಟ್ ಪ್ರಕಾರ, ತಿರುವನಂತಪುರಂ, ಕೊಲ್ಲಂ, ಪತ್ತನಂತಿಟ್ಟ ಮತ್ತು ತ್ರಿಶೂರ್ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ ಮತ್ತು ಗಂಟೆಗೆ 40 ಕಿ.ಮೀ. ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹೇಳಿದೆ.

ತಿರುವನಂತಪುರಂನ ಅರುವಿಕ್ಕರ ಅಣೆಕಟ್ಟಿನ ಶಟರ್‌ಗಳನ್ನು ಶನಿವಾರ ಬೆಳಿಗ್ಗೆ 25 ಸಿ.ಎಂ.ಗಳಷ್ಟು ಮೇಲಕ್ಕೆ ಎತ್ತಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಮುಂದಿನ ಗಂಟೆಗಳಲ್ಲಿ ಶಟರ್‌ಗಳನ್ನು ಮತ್ತಷ್ಟು ಮೇಲಕ್ಕೆತ್ತಿ, ಹೆಚ್ಚು ನೀರನ್ನು ಹರಿಸಲಾಗುವುದು. ಈ ಪ್ರದೇಶದಲ್ಲಿ ವಾಸಿಸುವವರು ಎಚ್ಚರಿಕೆ ವಹಿಸಬೇಕು ಎಂದು ಅವರು ಮಾಹಿತಿ ನೀಡಿದ್ದಾರೆ.

ಆಂಧ್ರದ ಕೆಲವೆಡೆ ಗುಡುಗು ಸಹಿತ ಮಳೆ ಸೂಚನೆ: ಆಂಧ್ರಪ್ರದೇಶದ ದಕ್ಷಿಣ ಕರಾವಳಿ ಹಾಗೂ ರಾಯಲಸೀಮಾ ಪ್ರದೇಶದಲ್ಲಿ ಶನಿವಾರದಿಂದ ಜೂನ್ 12ರ ವರೆಗೆ ಗುಡುಗು ಸಹಿತ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆಯವರ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಯಡಿಯೂರಪ್ಪಗೆ 'ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ'ಗೆ ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. ನಾಡಿನ ಸಂಸ್ಕೃತಿ, ಸಾಹಿತ್ಯ, ಕಲೆ, ಪರಂಪರೆಯ ಪೋಷಕರು ಅಥವಾ ಈ ಕ್ಷೇತ್ರಗಳಲ್ಲಿ ಕನಿಷ್ಠ 25 ವರ್ಷಗಳು ಸೇವೆ ಸಲ್ಲಿಸಿದವರನ್ನು ಆಯ್ಕೆ ಮಾಡುವುದು ಈ ದತ್ತಿಯ ಆಶಯವಾಗಿದೆ.

ಮುಖ್ಯಮಂತ್ರಿಯಾಗಿ, ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿರುವ ಯಡಿಯೂರಪ್ಪ, ಕನ್ನಡ ಮತ್ತು ಸಂಸ್ಕೃತಿಗೆ ನಿರಂತರ ಕೊಡುಗೆ ನೀಡಿದ್ದಾರೆ. ಅವರಿಗಿರುವ ಕನ್ನಡದ ಬಗೆಗಿನ ಕಾಳಜಿ ಮತ್ತು ಸಾಂಸ್ಕೃತಿಕ ಕೊಡುಗೆಯನ್ನು ಗಮನಿಸಿ ಈ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ತಿಳಿಸಿದ್ದಾರೆ.

ಜ್ಯೇಷ್ಠತಾ ಪಟ್ಟಿ ಪ್ರಕಟಣೆಗೆ ಪಿಡಿಒಗಳ ಗಡುವು

ಬೆಂಗಳೂರು: ರಾಜ್ಯದ ಎಲ್ಲ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಜ್ಯೇಷ್ಠತಾ ಪಟ್ಟಿಯನ್ನು ಸೋಮವಾರದೊಳಗೆ ಪ್ರಕಟಿಸುವಂತೆ ರಾಜ್ಯ ಪಿಡಿಒ ಕ್ಷೇಮಾಭಿವೃದ್ಧಿ ಸಂಘ ಪಂಚಾಯತ್ ರಾಜ್ ಇಲಾಖೆ ಆಯುಕ್ತರಿಗೆ ಗಡುವು ನೀಡಿದೆ.

ಪಿಡಿಒಗಳ ಜ್ಯೇಷ್ಠತಾ ಪಟ್ಟಿಯನ್ನು ಎರಡು ತಿಂಗಳೊಳಗೆ ಸಿದ್ಧಪಡಿಸಿ ಪ್ರಕಟಿಸುವಂತೆ ಹೈಕೋರ್ಟ್ 2023ರ ಜೂನ್‌ನಲ್ಲಿ ಆದೇಶಿಸಿತ್ತು. ಇದಕ್ಕಾಗಿ ಪಂಚಾಯತ್ ರಾಜ್ ಆಯುಕ್ತರ ಅಧ್ಯಕ್ಷತೆಯಲ್ಲಿ ಜ್ಯೇಷ್ಠತಾ ಪಟ್ಟಿ ಸಮಿತಿಯನ್ನೂ ರಚಿಸಲಾಗಿತ್ತು. ಈವರೆಗೆ ಪಟ್ಟಿ ಪ್ರಕಟಿಸದೇ ಇರುವ ಕ್ರಮಕ್ಕೆ ಆಕ್ಷೇಪಿಸಿರುವ ಸಂಘ, ಸೋಮವಾರದೊಳಗೆ ಪಟ್ಟಿ ಪ್ರಕಟಿಸದಿದ್ದರೆ ರಾಜ್ಯದಾದ್ಯಂತ ಮುಷ್ಕರ ಆರಂಭಿಸುವುದಾಗಿ ತಿಳಿಸಿದೆ.

ಪಂಚಾಯತ್ ರಾಜ್ ಆಯುಕ್ತಾಲಯದ ಎದುರು ಮೂರು ದಿನಗಳ ಕಾಲ ಸಾಂಕೇತಿಕ ಧರಣಿ ನಡೆಸಿದ ಪಿಡಿಒಗಳು, ಸೋಮವಾರದವರೆಗೆ ಗಡುವು ನೀಡಿ ಶನಿವಾರ ಪ್ರತಿಭಟನೆ ಅಂತ್ಯಗೊಳಿಸಿದರು. ಪಂಚಾಯತ್ ರಾಜ್ ಆಯುಕ್ತೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಅವರಿಗೆ ಮನವಿ ಸಲ್ಲಿಸಿರುವ ಸಂಘದ ಪದಾಧಿಕಾರಿಗಳು, ಗಡುವಿನೊಳಗೆ ಪಟ್ಟಿ ಪ್ರಕಟಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ಆರಂಭಿಸುವುದಾಗಿ ತಿಳಿಸಿದ್ದಾರೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ರಾಜ್ಯ ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜು ವಾರದ, 'ಪಿಡಿಒಗಳ ಜ್ಯೇಷ್ಠತಾ ಪಟ್ಟಿ ಪ್ರಕಟಣೆಗೆ ಸಂಬಂಧಿಸಿದ ಕಡತ ಆಯುಕ್ತಾಲಯದಲ್ಲೇ ಬಾಕಿ ಇದೆ. ಪಟ್ಟಿ ಪ್ರಕಟವಾಗುವವರೆಗೂ ಹೋರಾಟ ಮುಂದುವರಿಸುವ ನಿರ್ಧಾರಕ್ಕೆ ಬಂದಿದ್ದೇವೆ. ಸೋಮವಾರ ಪಟ್ಟಿ ಪ್ರಕಟಿಸುವುದಾಗಿ ಆಯುಕ್ತರು ಭರವಸೆ ನಿಡಿದ್ದಾರೆ. ಅದನ್ನು ಈಡೇರಿಸದೇ ಇದ್ದರೆ ಸೋಮವಾರದಿಂದ ರಾಜ್ಯದಾದ್ಯಂತ ಪಿಡಿಒಗಳು ಹೋರಾಟ ಆರಂಭಿಸುತ್ತಾರೆ' ಎಂದರು.

ವಿಷಸೇವನೆ: ಅಪ್ಪ ಸಾವು, ಮೂವರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ/ಹನೂರು: ಮೈಸೂರು ಜಿಲ್ಲೆಯ ಕೆ.ಆರ್.ನಗರದ ತಾಲ್ಲೂಕಿನ ಒಂದೇ ಕುಟುಂಬದ ನಾಲ್ವರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಟ್ಟ ಸಮೀಪದ ತಾಳಬೆಟ್ಟದಲ್ಲಿ ನಡೆದಿದೆ. ಒಬ್ಬರು ಮೃತಪಟ್ಟಿದ್ದು, ಮೂವರ ಪೈಕಿ ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ.

'ಪೊಲೀಸರು ದೂರು ಸ್ವೀಕರಿಸಲು ನಿರಾಕರಿಸಿದ್ದೇ ಆತ್ಮಹತ್ಯೆ ಯತ್ನಕ್ಕೆ ಕಾರಣ' ಎಂದು ಆರೋಪಿಸಲಾಗಿದೆ. ಕೆ.ಆರ್. ನಗರ ತಾಲ್ಲೂಕಿನ ಚಂದಗಾಲದ ಮಹದೇವ ನಾಯ್ಕ (65) ಮೃತಪಟ್ಟವರು. ಪತ್ನಿ ಗೌರಮ್ಮ (60) ಅಪಾಯದಿಂದ ಪಾರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಗಳು ಲೀಲಾವತಿ (42), ಮೊಮ್ಮಗಳು ರಿಷಿಕಾ (17) ಸ್ಥಿತಿ ಗಂಭೀರವಾಗಿದೆ. ಹನೂರು ಬಳಿಯ ಕಾಮಗೆರೆಯ ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ಆಘಾತದಲ್ಲಿರುವ ಗೌರಮ್ಮ, ರಿಷಿಕಾ ಘಟನೆಯ ಬಗ್ಗೆ ಏನೂ ಹೇಳುತ್ತಿಲ್ಲ. ಘಟನೆಯ ಬಗ್ಗೆ ನಿಖರ ಮಾಹಿತಿ ಸಿಕ್ಕಿಲ್ಲ' ಎಂದು ಪೊಲೀಸರು ಹೇಳಿದ್ದಾರೆ.

ಶುಕ್ರವಾರ ಕೆ.ಆರ್.ನಗರದಿಂದ ಬಂದ ನಾಲ್ವರು ತಾಳಬೆಟ್ಟದ ಒಂದನೇ ತಿರುವಿನಲ್ಲಿ ಇಳಿದು ಕಾಡಿನೊಳಗೆ ಹೋಗಿ ಕೀಟನಾಶಕ ಸೇವಿಸಿದ್ದರು. ಶನಿವಾರ ಬೆಳಿಗ್ಗೆ 10.30ರ ಸುಮಾರಿಗೆ ಮಾಹಿತಿ ಸಿಕ್ಕಿ ಪೊಲೀಸರಿಗೆ ಭೇಟಿ ನೀಡಿದಾಗ ಮಹದೇವನಾಯ್ಕ ಮೃತಪಟ್ಟಿದ್ದರು.

'ಕುಟುಂಬದ ಮರ್ಯಾದೆಗೆ ಅಂಜಿ ಮಹದೇವನಾಯ್ಕ ಅವರ ಕುಟುಂಬ ಆತ್ಮಹತ್ಯೆಗೆ ಯತ್ನಿಸಿದೆ' ಎಂದು ಹೇಳಲಾಗುತ್ತಿದೆ.

'ಹಿನ್ನಡೆ: ಒಬ್ಬರನ್ನೇ ಹೊಣೆಯಾಗಿಸಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಹಿನ್ನಡೆಗೆ ಯಾರೋ ಒಬ್ಬರನ್ನು ಹೊಣೆ ಮಾಡುವುದು ಸಾಧ್ಯವಿಲ್ಲ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಹಿನ್ನಡೆಗೆ ಕಾರಣಗಳೇನು ಎಂದು ಕಾಂಗ್ರೆಸ್ ಪಕ್ಷವು ಆತ್ಮಾವಲೋಕನ ಮಾಡಿಕೊಳ್ಳಲಿದೆ. ಪಕ್ಷದ ಮುಂದಿನ ಕಾರ್ಯತಂತ್ರ ಏನಿರಬೇಕು ಎಂದಷ್ಟೇ ಚಿಂತಿಸಲಾಗುವುದು' ಎಂದರು.

'ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರವು ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು, ಜನರಿಗೆ ಅದರ ಲಾಭ ಸಿಗುವಂತೆ ಮಾಡಿತ್ತು. ಆದರೂ ನಾವು ಎಡವಿದ್ದೆಲ್ಲಿ ಎನ್ನುವುದನ್ನು ಕಂಡುಕೊಳ್ಳಲಿದ್ದೇವೆ. ಗೆಲ್ಲಬಹುದಾಗಿದ್ದ ಕೆಲವು ಕ್ಷೇತ್ರಗಳು ಕೈಜಾರಿರುವುದು ನಮಗೆ ಗೊತ್ತಾಗಿದೆ' ಎಂದರು.

'ನರೇಂದ್ರ ಮೋದಿ 3ನೇ ಬಾರಿ ಪ್ರಧಾನಿ ಆಗುತ್ತಿದ್ದಾರೆ. ಕಳೆದ ಎರಡು ಬಾರಿಗಿಂತ ಈ ಬಾರಿ ಬಿಜೆಪಿ ಬಲ ಕುಸಿದಿದೆ. ಹೀಗಾಗಿ, ಈ ಬಾರಿ ಅವರ ಸರ್ಕಾರ ಎಷ್ಟು ದಿನ ಇರುತ್ತದೆಂದು ಹೇಳಲು ಸಾಧ್ಯವಿಲ್ಲ. ಅದರಲ್ಲೂ ನಿತೀಶ್ ಅವರಂತಹ ವ್ಯಕ್ತಿಯನ್ನು ಇಟ್ಟುಕೊಂಡು ಸರ್ಕಾರ ನಡೆಸುವುದು ಎಷ್ಟು ಕಷ್ಟ ಎನ್ನುವುದು ನಮಗೆ ಗೊತ್ತಿದೆ' ಎಂದರು.

'ವಿಶ್ಲೇಷಣೆಗೆ ರಾಹುಲ್ ಗಾಂಧಿ ಸೂಚನೆ'

ಬೆಂಗಳೂರು: 'ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗಿರುವ ಕ್ಷೇತ್ರಗಳ ಬಗ್ಗೆ ವಿಶ್ಲೇಷಣೆ ಮಾಡುವಂತೆ ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಚುನಾವಣೆಯಲ್ಲಿ ಗೆದ್ದ ಮತ್ತು ಪರಾಜಿತ ಕಾಂಗ್ರೆಸ್ ಅಭ್ಯರ್ಥಿಗಳ ಜೊತೆ ಕೆಪಿಸಿಸಿ ಸಭೆಯಲ್ಲಿ ಶುಕ್ರವಾರ ಸಭೆ ನಡೆಸಿದ ರಾಹುಲ್ ಗಾಂಧಿ, ಸಚಿವರನ್ನು ತರಾಟೆಗೆ ತೆಗೆದುಕೊಂಡಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಫಲಿತಾಂಶ ಯಾಕೆ ಹೀಗಾಗಿದೆ ಎಂದು ವಿಶ್ಲೇಷಣೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅವರು ಕೊಟ್ಟ ಸೂಚನೆ ಪಾಲಿಸಲು ನಾವು ಬದ್ಧ' ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಹೆಸರು ತಳುಕು ಹಾಕಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ತನಿಖೆ ನಡೆಯುತ್ತಿರುವಾಗ ಅನೇಕ ವಿಚಾರ ಬರುತ್ತವೆ. ಅಪರಾಧಿ ಸ್ಥಾನದಲ್ಲಿ ಇರುವವರು ತನಿಖೆ ವೇಳೆ ಹಲವು ಹೇಳಿಕೆಗಳನ್ನು ಕೊಡುತ್ತಾರೆ. ಆ ಹೇಳಿಕೆಯಲ್ಲಿ ಹಲವರ ಹೆಸರು ಬರುತ್ತವೆ. ಆ ಬಗ್ಗೆ ಎಸ್‌ಐಟಿಯವರು ತನಿಖೆ ಮತ್ತು ವಿಚಾರಣೆ ಮಾಡುತ್ತಾರೆ. ನಾವು ವ್ಯಾಖ್ಯಾನ ಮಾಡುವುದು ಸರಿಯಲ್ಲ' ಎಂದರು.

ನೀಟ್‌ನಲ್ಲಿ 'ಕೃಪಾಂಕ' ಪರಿಶೀಲನೆಗೆ ಸಮಿತಿ

ಒಂದನೇ ಪುಟದಿಂದ...

ಮರು ಪರೀಕ್ಷೆಗೆ ಆಗ್ರಹ: 'ಮೇಘಾಲಯ, ಹರಿಯಾಣದ ಬಹದ್ದೂರ್‌ಗಢ, ಛತ್ತೀಸಗಢದ ದಂತೇವಾಡ, ಬಲೋಧ್, ಗುಜರಾತ್‌ನ ಸೂರತ್ ಮತ್ತು ಚಂಡೀಗಢದ ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳಿಗೆ ಆದ ಪರೀಕ್ಷಾ ಸಮಯ ನಷ್ಟವನ್ನು ಸರಿದೂಗಿಸಲು ನೀಡಲಾಗಿರುವ 'ಕೃಪಾಂಕ'ಗಳಿಂದ ಕೆಲವರಿಗೆ ಹೆಚ್ಚು ಅಂಕಗಳು ದೊರೆತಿವೆ. ಇದು ಇತರ ಅಭ್ಯರ್ಥಿಗಳ ಅವಕಾಶವನ್ನು ಕಸಿದಿದೆ. ಹೀಗಾಗಿ ಆ ಕೇಂದ್ರಗಳಲ್ಲಿ ಮರು ಪರೀಕ್ಷೆ ನಡೆಸಬೇಕು' ಎಂಬ ಆಗ್ರಹ ಅಭ್ಯರ್ಥಿಗಳು ಮತ್ತು ಅವರ ಪೋಷಕರಿಂದ ವ್ಯಕ್ತವಾಗಿದೆ.

ಕೆಲ ಕೇಂದ್ರಗಳ ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಂಗ್, 'ಸಮಿತಿಯ ಶಿಫಾರಸುಗಳನ್ನು ಆಧರಿಸಿ ನಿರ್ಧರಿಸಲಾಗುವುದು' ಎಂದು ಹೇಳಿದರು.

'ಸಮಯ ನಷ್ಟವಾಗಿರುವ ಅಭ್ಯರ್ಥಿಗಳು ಅಥವಾ ಇತರ ಅಭ್ಯರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವುದು ಸಮಿತಿ ರಚನೆಯ ಹಿಂದಿನ ಉದ್ದೇಶವಾಗಿದೆ' ಎಂದು ಅವರು ತಿಳಿಸಿದರು.

ಪರೀಕ್ಷೆ ರದ್ದಿಗೆ ಮಹಾರಾಷ್ಟ್ರ ಆಗ್ರಹ: 'ನೀಟ್' ಫಲಿತಾಂಶದಲ್ಲಿ ಮಹಾರಾಷ್ಟ್ರದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಹೀಗಾಗಿ ಈ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಬಿಜೆಪಿ ಮೈತ್ರಿಕೂಟ ಎನ್‌ಡಿಎಗೆ ಸೇರಿರುವ ಪಕ್ಷದ ನೇತೃತ್ವದ ಮಹಾರಾಷ್ಟ್ರ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿದೆ.

ಫೆಡರಲ್ ವ್ಯವಸ್ಥೆಗೆ ವಿರುದ್ಧ– ಡಿಎಂಕೆ: ಇತ್ತೀಚೆಗೆ ಪ್ರಕಟವಾದ ನೀಟ್ ಫಲಿತಾಂಶಗಳು ಸಾಕಷ್ಟು ಗೊಂದಲ ಮೂಡಿಸಿದ್ದು, ನೀಟ್ ವಿರೋಧಿಸುವ ಡಿಎಂಕೆ ನಿಲುವನ್ನು ಸಮರ್ಥಿಸಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ. ಅಲ್ಲದೆ 'ನೀಟ್' ಸಾಮಾಜಿಕ ನ್ಯಾಯ ಮತ್ತು ದೇಶದ ಫೆಡರಲ್ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಅವರು ಪುನರುಚ್ಚರಿಸಿದ್ದಾರೆ.

ತನಿಖೆಗೆ ಎಬಿವಿಪಿ ಒತ್ತಾಯ: ನೀಟ್ ಪರೀಕ್ಷಾ ಅಕ್ರಮಗಳ ಕುರಿತು ಸಿಬಿಐ ತನಿಖೆ ಆಗಬೇಕು ಎಂದು ಆರ್‌ಎಸ್‌ಎಸ್‌ನ ವಿದ್ಯಾರ್ಥಿ ವಿಭಾಗವಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಆಗ್ರಹಿಸಿದೆ.

'ಸುಪ್ರೀಂ' ಮೇಲ್ವಿಚಾರಣೆಯಲ್ಲಿ ತನಿಖೆಗೆ ಆಗ್ರಹ

ಇದು ದೊಡ್ಡ ಹಗರಣವಾಗಿದ್ದು, ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಈ ಕುರಿತು ತನಿಖೆ ನಡೆಸಬೇಕು ಎಂದು ಕಾಂಗ್ರೆಸ್, ಎಎಪಿ ಮತ್ತು ಎಸ್‌ಪಿ ಆಗ್ರಹಿಸಿವೆ.

'ಬಿಜೆಪಿ ಆಡಳಿತದಲ್ಲಿ ಪರೀಕ್ಷಾ ಅಕ್ರಮಗಳು ಹೆಚ್ಚಾಗಿವೆ. ಪ್ರಶ್ನೆ ಪತ್ರಿಕೆ ಸೋರಿಕೆ, ನಕಲಿ ಅಭ್ಯರ್ಥಿ ಪ್ರಕರಣಗಳು ನಡೆದಿವೆ. ಪರೀಕ್ಷಾ ಕೇಂದ್ರಗಳ ಸ್ಥಾಪನೆ ಮತ್ತು ಫಲಿತಾಂಶ ನಿರ್ವಹಣೆಯು ದಂಧೆಯಾಗಿ ಬದಲಾಗುತ್ತಿದೆ' ಎಂದು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ 'ಎಕ್ಸ್'ನಲ್ಲಿ ಆರೋಪಿಸಿದ್ದಾರೆ.

'ಭಾರತವನ್ನು ವಿಶ್ವಗುರುವನ್ನಾಗಿ ಮಾಡುವುದಾಗಿ ಬಿಜೆಪಿ ಹೇಳುತ್ತಿದೆ. ಆದರೆ ಅವರಿಗೆ ಪ್ರವೇಶ ಪರೀಕ್ಷೆಗಳನ್ನೇ ಸರಿಯಾಗಿ ನಡೆಸಲು ಬರುತ್ತಿಲ್ಲ' ಎಂದು ಎಎಪಿ ನಾಯಕ ಜಾಸ್ಮಿನ್ ಶಾ ಸುದ್ದಿಗೋಷ್ಠಿಯಲ್ಲಿ ಲೇವಡಿ ಮಾಡಿದರು.

'ಬಿಜೆಪಿ ಆಡಳಿತವಿರುವ ಗುಜರಾತ್‌ನಲ್ಲಿ ಕಳೆದ 11 ವರ್ಷಗಳಲ್ಲಿ 11 ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿವೆ. ಹಾಗೆಯೇ ಉತ್ತರ ಪ್ರದೇಶದಲ್ಲಿ ಪೊಲೀಸ್ ಕಾನ್‌ಸ್ಟೆಬಲ್‌ಗಳು ಮತ್ತು ಶಿಕ್ಷಕರ ನೇಮಕಾತಿಯ ಪ್ರಶ್ನೆ ಪತ್ರಿಕೆಗಳೂ ಸೋರಿಕೆಯಾಗಿವೆ. ಈ ಮೂಲಕ ಬಿಜೆಪಿ ಲಕ್ಷಾಂತರ ಯುವ ಜನರ ಭವಿಷ್ಯವನ್ನು ಅನಿಶ್ಚಿತಗೊಳಿಸಿದೆ' ಎಂದು ಅವರು ದೂರಿದರು.

ಬೆಟ್ಟದೂರುಗೆ 'ಚಂಪಾ ಸಿರಿಗನ್ನಡ' ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಸ್ವಾಭಿಮಾನಿ ವೇದಿಕೆ ನೀಡುವ 'ಚಂಪಾ ಸಿರಿಗನ್ನಡ ಪ್ರಶಸ್ತಿ'ಗೆ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಆಯ್ಕೆಯಾಗಿದ್ದಾರೆ.

ಅಲ್ಲಮಪ್ರಭು ಬೆಟ್ಟದೂರು

ಪ್ರಶಸ್ತಿಯು ₹10 ಸಾವಿರ ನಗದು, ಕಂಚಿನ ಫಲಕ ಒಳಗೊಂಡಿದೆ.

'ಬೆಂಗಳೂರಿನ ನಯನ ಸಭಾಂಗಣದಲ್ಲಿ ಜೂನ್ 20ರಂದು ನಡೆಯುವ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಅಧ್ಯಕ್ಷತೆ ವಹಿಸಲಿದ್ದು, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ' ಎಂದು ವೇದಿಕೆಯ ಅಧ್ಯಕ್ಷ ಶಂಕರ್ ಹೂಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖಾಸಗಿ ಆಸ್ಪತ್ರೆ: ಕೆಪಿಎಂಇ ಸಂಖ್ಯೆ ಪ್ರದರ್ಶನ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆಸ್ಪತ್ರೆಗಳು, ಕ್ಲಿನಿಕ್‌ಗಳು ತಮ್ಮ ಕೆಪಿಎಂಇ ನೋಂದಣಿ ಸಂಖ್ಯೆ, ಆಸ್ಪತ್ರೆ ಮತ್ತು ಮಾಲೀಕರ ಹೆಸರನ್ನು ಕಟ್ಟಡದ ಮುಂಭಾಗ ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ನಕಲಿ ವೈದ್ಯರ ಹಾವಳಿ ತಡೆಯಲು ಇಲಾಖೆ ಈ ಕ್ರಮ ಕೈಗೊಂಡಿದೆ. ಕೆಪಿಎಂಇ ಕಾಯ್ದೆ ನಿಯಮ 5ರ ಪ್ರಕಾರ, ಸಾರ್ವಜನಿಕರ ಮಾಹಿತಿಗಾಗಿ ವೈದ್ಯಕೀಯ ಪದ್ಧತಿ ಮತ್ತು ಲಭ್ಯವಿರುವ ಸೇವೆಗಳ ವಿವರವನ್ನು ಆಸ್ಪತ್ರೆಯ ಆವರಣದ ಪ್ರಮುಖ ಸ್ಥಳಗಳಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು ಎಂದು ಸೂಚಿಸಲಾಗಿದೆ.

ಕೆಲ ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳು ಸಾಂಪ್ರದಾಯಿಕ ಹಾಗೂ ಪಾರಂಪರಿಕ ಪದ್ಧತಿ, ಮನೆ ಮದ್ದುಗಳು, ಬಾಡಿ ಮಸಾಜ್ ಹಾಗೂ ವಿವಿಧ ಥೆರಪಿಗಳ ಅನಧಿಕೃತ ಅಭ್ಯಾಸದಲ್ಲಿ ತೊಡಗಿಕೊಂಡಿರುವುದು ಗಮನಕ್ಕೆ ಬಂದಿದೆ. ಇವುಗಳು ಕೆಪಿಎಂಇ ಕಾಯ್ದೆ ಅಡಿಯಲ್ಲಿ ವೈದ್ಯಕೀಯ ಚಿಕಿತ್ಸೆಗಳಾಗಿ ವರ್ಗೀಕರಿಸಲ್ಪಟ್ಟಿಲ್ಲ. ಆದ್ದರಿಂದ ಎಲ್ಲ ಖಾಸಗಿ ಆಸ್ಪತ್ರೆಗಳು ಮತ್ತು ಕ್ಲಿನಿಕ್‌ಗಳು ಹೊರಭಾಗದಲ್ಲಿ ಮಾಹಿತಿ ಫಲಕವನ್ನು ಹಾಕಬೇಕು. ಅಲೋಪತಿ ಆಸ್ಪತ್ರೆಗಳು ನೀಲಿ ಬಣ್ಣ ಮತ್ತು ಆಯುರ್ವೇದ ಆಸ್ಪತ್ರೆಗಳು ಹಸಿರು ಬಣ್ಣ ಸೂಚಿತ ಫಲಕವನ್ನು ಬಳಸಬೇಕು. ಈ ಮೂಲಕ ಬಣ್ಣ ಸಂಹಿತೆಯನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದು ತಿಳಿಸಲಾಗಿದೆ.

ಈ ನಿಯಮಗಳನ್ನು ಅನುಸರಿಸಲು ವಿಫಲವಾದಲ್ಲಿ, ಅಂತಹವರ ವಿರುದ್ಧ ಕೆಪಿಎಂಇ ಕಾಯ್ದೆಯಡಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

'ನಕಲಿ ಮತ್ತು ಅರ್ಹತೆ ಹೊಂದಿಲ್ಲದ ವೈದ್ಯರು ಸಮಾಜಕ್ಕೆ ಕಂಟಕರಾಗಿದ್ದು, ರೋಗಿಗಳ ಆರೋಗ್ಯದ ವಿಚಾರದಲ್ಲಿ ಚೆಲ್ಲಾಟವಾಡುತ್ತಿದ್ದಾರೆ. ನಮ್ಮ ಸರ್ಕಾರವು ರೋಗಿಗಳ ಸುರಕ್ಷತೆಗೆ ಮತ್ತು ಉತ್ತಮ ಆರೋಗ್ಯ ಸೇವೆ ಒದಗಿಸಲು ಬದ್ಧವಾಗಿದೆ. ನಕಲಿ ವೈದ್ಯರಿಗೆ ಕಡಿವಾಣ ಹಾಕಲು ಕಠಿಣ ನಿಯಮ ಜಾರಿಗೊಳಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಕೀಟನಾಶಕಗಳಿಂದ ರಕ್ಷಣೆಗೆ 'ಕಿಸಾನ್ ಕವಚ' ಬಟ್ಟೆ

ಬಟ್ಟೆಯ ಮಾದರಿಯೊಂದಿಗೆ ವಿಜ್ಞಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರನ್ನು ಕೀಟನಾಶಕಗಳಿಂದ ರಕ್ಷಿಸುವ ಬಟ್ಟೆಯನ್ನು ಬೆಂಗಳೂರಿನ ಇನ್‌ಸ್ಟೆಮ್ ಸಂಸ್ಥೆಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

'ಕಿಸಾನ್ ಕವಚ್' ಎನ್ನುವ ಈ ಬಟ್ಟೆಯು ಕೀಟನಾಶಕಗಳಿಂದ ರಕ್ಷಣೆ ಒದಗಿಸುತ್ತದೆ. ಈ ರಕ್ಷಕ ಬಟ್ಟೆಯನ್ನು ಇಲಿಗಳ ಮೇಲೆ ಪ್ರಯೋಗಿಸಲಾಗಿದ್ದು, ಮಾರಕ ಕೀಟನಾಶಕಗಳಿಂದಲೂ ರಕ್ಷಣೆ ಒದಗಿಸಲು ಯಶಸ್ವಿಯಾಗಿದೆ. ಈ ಬಟ್ಟೆಗೆ ಬಳಸಿದ ತಂತ್ರಜ್ಞಾನವನ್ನು ಸೆಪಿಯೊ ಹೆಲ್ತ್ ಎನ್ನುವ ನವೋದ್ಯಮಕ್ಕೆ ವರ್ಗಾಯಿಸಲಾಗಿದೆ.

'ರೈತರು ವ್ಯಾಪಕವಾಗಿ ಬಳಸುವ ಆರ್ಗ್ಯಾನೋಫಾಸ್ಫರಸ್ ಕೀಟನಾಶಕವನ್ನು ಚರ್ಮ ಹೀರಿಕೊಳ್ಳುವುದರಿಂದ ಇದನ್ನು ಬಳಸುವವರಿಗೆ ಅಪಾಯ ತಪ್ಪಿದ್ದಲ್ಲ. ಭಾರತದಂತಹ ದೇಶಗಳಲ್ಲಿ ಈ ಕೀಟನಾಶಕಗಳಿಂದ ರಕ್ಷಿಸುವಂತಹ ವಿಶೇಷ ದಿರಿಸುಗಳನ್ನು ಧರಿಸುವುದೂ ಕಷ್ಟ. ಕಿಸಾನ್ ಕವಚ್ ಇದಕ್ಕೆ ಪರಿಹಾರ ಒದಗಿಸಲಿದೆ' ಎಂದು ಇನ್‌ಸ್ಟೆಮ್ ಸಂಸ್ಥೆಯ ಜೈವಿಕ ತಂತ್ರಜ್ಞ ಪ್ರವೀಣ್ ವೆಮುಲಾ ಅವರು ತಿಳಿಸಿದ್ದಾರೆ.

'ಹತ್ತಿಯ ಬಟ್ಟೆಗಳನ್ನೇ ಬಳಸಿಕೊಂಡು ರಕ್ಷಣಾ ಕವಚವಾಗಿ ಪರಿವರ್ತಿಸಲಾಗಿದೆ. ಹತ್ತಿಯ ಎಳೆಗಳಿಗೆ ನ್ಯಾನೊ ಕಣಗಳ ರೂಪದಲ್ಲಿ ಹಚ್ಚಿರುವ ರಾಸಾಯನಿಕಗಳು ವಿಶೇಷವಾಗಿ ಕೀಟನಾಶಕಗಳ ಹೃದಯಭಾಗವನ್ನು ಆಕರ್ಷಿಸಿ ಅಂಟಿಕೊಳ್ಳುತ್ತವೆ. ತದನಂತರ ಅವನ್ನು ವಿಘಟಿಸಿ, ಒಡೆಯುತ್ತವೆ. ದೇಶದಲ್ಲಿ ಬಳಸುವ ವಿವಿಧ ಕೀಟನಾಶಕಗಳನ್ನು ಈ ಬಟ್ಟೆ ಸಮರ್ಥವಾಗಿ ನಿಷ್ಕ್ರಿಯಗೊಳಿಸಲಿದೆ. ಒಂದು ವರ್ಷದವರೆಗೂ ಇದು ಈ ಸಾಮರ್ಥ್ಯವನ್ನು ಹೊಂದಿರಲಿದೆ' ಎಂದು ಸೆಪಿಯೋ ಹೆಲ್ತ್‌ನ ನಿರ್ದೇಶಕ ಓಂಪ್ರಕಾಶ್ ಸುಣ್ಣಾಪು ಅವರು ಹೇಳಿದ್ದಾರೆ.

15ರಿಂದ 30 ವರ್ಷದೊಳಗಿನವರಿಗೆ ಹೆಚ್ಚಿದ ಮಾನಸಿಕ ಸಮಸ್ಯೆ • ತಿಂಗಳಿಗೆ ಸರಾಸರಿ 9,500 ಕರೆ

'ಟೆಲಿ ಮನಸ್': ಹೆಚ್ಚಿದ ಯುವ ಮನಸ್ಸುಗಳ ಕರೆ

• ವರುಣ ಹೆಗಡೆ

ಬೆಂಗಳೂರು: ಕೌಟುಂಬಿಕ ಸಮಸ್ಯೆ, ಆರ್ಥಿಕ ಸಂಕಷ್ಟ, ಶೈಕ್ಷಣಿಕ ಒತ್ತಡ ಸೇರಿ ವಿವಿಧ ಕಾರಣಗಳಿಂದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಮಾನಸಿಕ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಇದರಿಂದಾಗಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) 'ಟೆಲಿ ಮನಸ್' ಸಹಾಯವಾಣಿಗೆ ಬರುತ್ತಿದ್ದ ದೂರವಾಣಿ ಕರೆಗಳ ಸಂಖ್ಯೆ ಹೆಚ್ಚಳವಾಗಿದೆ.

ಸಂಸ್ಥೆಯು ಈ ಸಹಾಯವಾಣಿಯನ್ನು 2022ರಲ್ಲಿ ಪ್ರಾರಂಭಿಸಿತ್ತು. ಆ ವೇಳೆ ಕೊರೊನಾ ಸೋಂಕಿತರು ಹಾಗೂ ಈ ಸಾಂಕ್ರಾಮಿಕ ರೋಗದ ವ್ಯತಿರಿಕ್ತ ಪರಿಣಾಮ ಎದುರಿಸಿದವರು ಹೆಚ್ಚಾಗಿ ಕರೆ ಮಾಡುತ್ತಿದ್ದರು. ಈ ಸೇವೆಯನ್ನು ಸಂಸ್ಥೆಯು ಮುಂದುವರಿಸಿ, ದೇಶದಾದ್ಯಂತ ವಿಸ್ತರಿಸಿದೆ. ವಿವಿಧ ಮಾನಸಿಕ ಸಮಸ್ಯೆಗಳಿಗೆ ಟೆಲಿ ಸಮಾಲೋಚನೆ ಮೂಲಕ ಪರಿಹಾರ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಈ ಸಹಾಯವಾಣಿಗೆ 15ರಿಂದ 30 ವರ್ಷದೊಳಗಿನವರು ಅಧಿಕ ಸಂಖ್ಯೆಯಲ್ಲಿ ಕರೆ ಮಾಡುತ್ತಿದ್ದಾರೆ. ಈ ವಯೋಮಾನದವರಿಂದ ಕಳೆದ ವರ್ಷ ತಿಂಗಳಿಗೆ ಸರಾಸರಿ ಮೂರು ಸಾವಿರ ಕರೆಗಳನ್ನು ಸ್ವೀಕರಿಸಲಾಗುತ್ತಿತ್ತು. ಈಗ ಆ ಸಂಖ್ಯೆ 9,500ಕ್ಕೆ ಏರಿಕೆಯಾಗಿದೆ. ಈವರೆಗೆ ಕರೆ ಮಾಡಿದವರಲ್ಲಿ 1.13 ಲಕ್ಷ ಮಂದಿ ಯುವಜನರಾಗಿದ್ದಾರೆ.

ಸಂಸ್ಥೆಯ ಬೆಂಗಳೂರು ಹಾಗೂ ಧಾರವಾಡದ ಕೇಂದ್ರದಲ್ಲಿ ಟೆಲಿ ಮನಸ್ ಘಟಕ ಕಾರ್ಯ ನಿರ್ವಹಿಸುತ್ತಿದೆ. ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ದೂರವಾಣಿ ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿಬಿ) ಈ ಸಹಾಯವಾಣಿಗೆ ತಾಂತ್ರಿಕ ನೆರವು ಒದಗಿಸುತ್ತಿದೆ.

9.27 ಲಕ್ಷ ಕರೆಗಳು: ಇಲ್ಲಿನ ನಿಮ್ಹಾನ್ಸ್‌ಗೆ ಬರುವ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಸಂಸ್ಥೆಯು 1,096 ಹಾಸಿಗೆಗಳನ್ನು ಒಳಗೊಂಡಿದ್ದು, ದೇಶದ ವಿವಿಧೆಡೆಯಿಂದ ಚಿಕಿತ್ಸೆಗಾಗಿ ರೋಗಿಗಳು ಬರುತ್ತಿದ್ದಾರೆ. ಇದರಿಂದಾಗಿ ರೋಗಿಗಳ ದಟ್ಟಣೆ ಉಂಟಾಗುತ್ತಿದ್ದು, ಚಿಕಿತ್ಸೆಗೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕೋವಿಡ್ ಕಾಣಿಸಿಕೊಳ್ಳುವ ಮೊದಲು ಸಂಸ್ಥೆಗೆ ಪ್ರತಿನಿತ್ಯ ಸರಾಸರಿ 1,400 ಹೊರರೋಗಿಗಳು ಬರುತ್ತಿದ್ದರು. ಈಗ ಆ ಸಂಖ್ಯೆ 2 ಸಾವಿರಕ್ಕೆ ಏರಿಕೆಯಾಗಿದೆ. ಹೊರರೋಗಿಗಳ ದಟ್ಟಣೆ ನಿವಾರಿಸುವುದು ಹಾಗೂ ಸುಲಭವಾಗಿ ವೈದ್ಯರ ಸಮಾಲೋಚನೆ ಒದಗಿಸುವುದು ಸಹಾಯವಾಣಿ ಪ್ರಾರಂಭದ ಮುಖ್ಯ ಉದ್ದೇಶವಾಗಿತ್ತು. ಈವರೆಗೆ ಒಟ್ಟು 9.27 ಲಕ್ಷ ಕರೆಗಳು ಸಹಾಯವಾಣಿಗೆ ಬಂದಿವೆ.

'ಮಾನಸಿಕ ಆರೋಗ್ಯದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಜಾಗೃತಿ ಮೂಡುತ್ತಿದೆ. ಇದರಿಂದಾಗಿ ಸಹಾಯವಾಣಿಗೂ ಮನೋವ್ಯಾಧಿಗೆ ಸಂಬಂಧಿಸಿದಂತೆ ಕರೆಗಳು ಬರುತ್ತಿವೆ. ಮಾನಸಿಕ ಆರೋಗ್ಯದ ಬಗ್ಗೆ ಯುವಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ಶಿಕ್ಷಣ ಸಂಸ್ಥೆಗಳು ಸೇರಿ ವಿವಿಧೆಡೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದು ನಿಮ್ಹಾನ್ಸ್‌ಗಳನ್ನು ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ನವೀನ್ ಕುಮಾರ್ ಸಿ. ತಿಳಿಸಿದರು.

> ಮಾನಸಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿಗೆ ಕರೆ ಮಾಡುವವರ ಸಂಖ್ಯೆ ಹೆಚ್ಚಳವಾಗಿದೆ. ಯುವಜನರಿಂದಲೇ ಅಧಿಕ ಕರೆಗಳು ಬರುತ್ತಿವೆ
>
> **ಟಿ.ಕೆ.ಶ್ರೀಕಾಂತ್**
> ಐಐಐಟಿಬಿ ಪ್ರಧಾನ ತನಿಖಾಧಿಕಾರಿ

20 ಭಾಷೆಗಳಲ್ಲಿ ಸೇವೆ

ಮಾನಸಿಕ ಸಮಸ್ಯೆ ಹಾಗೂ ಒತ್ತಡಕ್ಕೆ ಒಳಗಾದವರು 'ಟೆಲಿ ಮನಸ್' ಸಹಾಯವಾಣಿ ಮೂಲಕ ಉಚಿತವಾಗಿ ಸಲಹೆ ಪಡೆಯಬಹುದಾಗಿದೆ. ಈ ಸಹಾಯವಾಣಿ ಮೂಲಕ 20 ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದೆ.

ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು, ಒತ್ತಡಕ್ಕೆ ಒಳಗಾದವರು, ವ್ಯಥೆಗೆ ಒಳಪಟ್ಟವರು, ಕೌಟುಂಬಿಕ ಸಮಸ್ಯೆಗೆ ಒಳಗಾದವರು, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಆರ್ಥಿಕ ಒತ್ತಡದಲ್ಲಿ ಇರುವವರು ಸೇರಿ ಇತರೆ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರೂ ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದಾಗಿದೆ.

ಟೆಲಿ ಮನಸ್ ಸಹಾಯವಾಣಿ: 14416

ಉದ್ಯಮಿಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಉದ್ಯಮಿ ಅಮಿತ್ ಅರೋರಾ ಅವರಿಗೆ ದೆಹಲಿ ನ್ಯಾಯಾಲಯವು ಎರಡು ವಾರಗಳ ಕಾಲ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಜಾರಿ ನಿರ್ದೇಶನಾಲಯ ಮತ್ತು ಸಿಬಿಐ ತನಿಖೆ ನಡೆಸುವ ಪ್ರಕರಣಗಳ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು, 'ಈ ಪ್ರಕರಣದ ಆರೋಪಿ ಹಾಗೂ ಗುರುಗ್ರಾಮ ಮೂಲದ ಬಡ್ಡಿ ರಿಟೇಲ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಅಮಿತ್ ಅರೋರಾ ಅವರ ಪತ್ನಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದ್ದು, ಆಕೆಯ ಯೋಗ-ಕ್ಷೇಮವನ್ನು ಅರೋರಾ ನೋಡಿಕೊಳ್ಳಬೇಕಿದೆ' ಎಂದು ಜೂನ್ 6ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಿದ್ದಾರೆ.

ಪತ್ನಿ ಆರೋಗ್ಯದ ದೃಷ್ಟಿ ಹೊರತಾಗಿ, ಯಾವುದೇ ಕಾರಣಕ್ಕೂ ದೆಹಲಿ ರಾಷ್ಟ್ರ-ರಾಜಧಾನಿ ವಲಯವನ್ನು ಬಿಟ್ಟು ಬೇರೆಡೆ ಹೋಗುವಂತಿಲ್ಲ ಎಂದು ಷರತ್ತು ವಿಧಿಸಲಾಗಿದೆ.

ಇದೇ ಪ್ರಕರಣದ ಸಂಬಂಧ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಎಎಪಿ ಮುಖಂಡ ಮನೀಷ್ ಸಿಸೋಡಿಯಾ ಹಾಗೂ ಬಿಆರ್‌ಎಸ್ ನಾಯಕಿ ಕೆ.ಕವಿತಾ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮಹಾರಾಷ್ಟ್ರ: 'ಕೆಲ ಸಂಸದರು ಸಂಪರ್ಕದಲ್ಲಿದ್ದಾರೆ' ಎಂದ ಶಿಂದೆ ಬಣ

ಪಕ್ಷಾಂತರ ಪರ್ವದ ಸೂಚನೆ

ಪ್ರಜಾವಾಣಿ ವಾರ್ತೆ

ಮುಂಬೈ: ನವದೆಹಲಿಯಲ್ಲಿ ನರೇಂದ್ರ ಮೋದಿ ಅವರು ಸರ್ಕಾರ ರಚನೆಯ ಪ್ರಕ್ರಿಯೆಯಲ್ಲಿ ತೊಡಗಿರುವ ಸಂದರ್ಭದಲ್ಲೇ ಮಹಾರಾಷ್ಟ್ರ ರಾಜಕಾರಣದಲ್ಲಿ ಮತ್ತೊಮ್ಮೆ ಪಕ್ಷಾಂತರ ಪರ್ವ ಆರಂಭವಾಗುವ ಸೂಚನೆಗಳು ಗೋಚರಿಸುತ್ತಿವೆ. ಶಿವಸೇನಾದ (ಯುಬಿಟಿ) ಕೆಲವು ಸಂಸದರು ತಮ್ಮ ಸಂಪರ್ಕದಲ್ಲಿದ್ದು, ಪಕ್ಷಾಂತರಕ್ಕೆ ಸಿದ್ಧರಾಗಿದ್ದಾರೆ ಎಂದು ಶಿವಸೇನಾ (ಶಿಂದೆ ಬಣ) ಪ್ರತಿಪಾದಿಸಿದೆ.

ಇನ್ನೊಂದೆಡೆ, ಶಿವಸೇನಾ (ಯುಬಿಟಿ) ಈ ಸುದ್ದಿಯನ್ನು ನಿರಾಕರಿಸಿದ್ದು, ಶಿಂದೆ ಬಣವು ಮೊದಲು ತಮ್ಮ ಸಂಸದರನ್ನು ಹಿಡಿದಿಟ್ಟುಕೊಳ್ಳಲಿ ಎಂದಿದೆ.

'ಇಬ್ಬರು ಸಂಸದರು ನಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ. ಅವರು ಶಿಂದೆ ಸಾಹೇಬರೊಂದಿಗೂ ಮಾತನಾಡಿದ್ದಾರೆ. ಆರು ಸಂಸದರು ಒಟ್ಟಾದ ತಕ್ಷಣವೇ ಅವರು ಮೋದಿ ಸರ್ಕಾರವನ್ನು ಬೆಂಬಲಿಸಲಿದ್ದಾರೆ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಆಪ್ತರು ಮತ್ತು ಪಕ್ಷದ ವಕ್ತಾರರಾದ ಔರಂಗಾಬಾದ್ ಪಶ್ಚಿಮ ಕ್ಷೇತ್ರದ ಶಾಸಕ ಸಂಜಯ್ ಶಿರ್ಸಾತ್ ಮತ್ತು ಹೊಸದಾಗಿ ಆಯ್ಕೆಯಾಗಿರುವ ಸಂಸದ ನರೇಶ್ ಮಸ್ಕೆ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಶಿವಸೇನಾ (ಯುಬಿಟಿ) ಉಪನಾಯಕಿ ಸುಷ್ಮಾ ಅಂಧಾರೆ, ಮಸ್ಕೆ ಮಾತಿಗೆ ತಾವು ಯಾವ ಬೆಲೆಯನ್ನೂ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಶಿಂದೆ ಬಣದ ಕೆಲವು ಸಂಸದರು ತಮ್ಮ ಪಕ್ಷಕ್ಕೆ ಸೇರ್ಪಡೆಯಾಗಲು ಸಿದ್ದರಿದ್ದು, ಸೂಕ್ತ ಅವಕಾಶಕ್ಕಾಗಿ ಕಾಯುತ್ತಿದ್ದೇವೆ ಎಂದು ಠಾಕ್ರೆ ಬಣ ಹಿಂದೆ ಹೇಳಿತ್ತು.

ಸಂಸದೀಯ ಪಕ್ಷದ ನಾಯಕರಾಗಿ ಶ್ರೀಕಾಂತ್ ಶಿಂದೆ ಆಯ್ಕೆ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಪುತ್ರ ಡಾ.ಶ್ರೀಕಾಂತ್ ಶಿಂದೆ ಅವರು ಶಿವಸೇನಾದ ಸಂಸದೀಯ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಮೂಳೆತಜ್ಞರಾಗಿದ್ದ ಶ್ರೀಕಾಂತ ಶಿಂದೆ ನಂತರ ತಂದೆಯ ಹಾದಿಯಲ್ಲಿಯೇ ರಾಜಕಾರಣಕ್ಕಿಳಿದಿದ್ದರು. ಅವರು ಮೂರನೇ ಬಾರಿಗೆ ಕಲ್ಯಾಣ್ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ 15 ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಏಕನಾಥ ಶಿಂದೆ ಬಣದ ಶಿವಸೇನಾದಿಂದ 7 ಮಂದಿ ಸಂಸದರು ಆಯ್ಕೆಯಾಗಿದ್ದಾರೆ. ಈ ಏಳು ಸಂಸದರು ಮತ್ತು ರಾಜ್ಯಸಭಾ ಸದಸ್ಯ ಮಿಲಿಂದ್ ದೇವ್ರಾ ನವದೆಹಲಿಯಲ್ಲಿ ಸಭೆ ಸೇರಿ ಶ್ರೀಕಾಂತ್ ಶಿಂದೆ ಅವರನ್ನು ಸಂಸದೀಯ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಿದರು.

ಮರಾಠಾ ಮೀಸಲು: ಜರಾಂಗೆಯಿಂದ ಮತ್ತೆ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಮುಂಬೈ: ಮರಾಠಾ ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವ ಮನೋಜ್ ಜರಾಂಗೆ ಅವರು, ಬೇಡಿಕೆ ಈಡೇರಿಗಾಗಿ ಸರ್ಕಾರದ ಮೇಲೆ ಒತ್ತಡವನ್ನು ಹೇರಲು ಶನಿವಾರ ಮತ್ತೊಂದು ಸುತ್ತಿನ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಇದೇ ವರ್ಷದ ಅಕ್ಟೋಬರ್ ತಿಂಗಳಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದೂ ಜರಾಂಗೆ ಅವರು ಎಚ್ಚರಿಸಿದ್ದಾರೆ.

ರಾಜ್ಯದಲ್ಲಿ ಲೋಕಸಭೆ ಚುನಾವಣೆಯಲ್ಲಿ ನೀರಸ ಸಾಧನೆ ತೋರಿರುವ ಏಕನಾಥ ಶಿಂದೆ ನೇತೃತ್ವದ ಬಿಜೆಪಿ, ಶಿವಸೇನೆ ಮತ್ತು ಎನ್‌ಸಿಪಿ ಮೈತ್ರಿ ಸರ್ಕಾರ ಈ ಬೆಳವಣಿಗೆಯು ಹೊಸ ಸವಾಲಾಗಿ ಎದುರಾಗಿದೆ.

ಈಚೆಗೆ ಮುಕ್ತಾಯವಾದ ಚುನಾವಣೆಯಲ್ಲಿ ಮರಾಠಾ ಮೀಸಲು ಹಾಗೂ ಒಬಿಸಿ ವರ್ಗದವರ ವಿರೋಧ ಪರಿಣಾಮ ಬೀರಿದೆ ಎಂದು ವ್ಯಾಖ್ಯಾನಿಸಲಾಗಿದೆ. ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಮಹತ್ವ ಪಡೆದಿದೆ.

ಸುದ್ದಿಗಾರರ ಜೊತೆಗೆ ಮಾತನಾಡಿದ ಶಿವ್ಬಾ ಸಂಘಟನೆಯ ಸ್ಥಾಪಕರೂ ಆದ ಜರಾಂಗೆ ಅವರು, 'ಮರಾಠಾ ಮೀಸಲಾತಿ ಕುರಿತು ಹೊರಡಿಸಿರುವ ಅಧಿಸೂಚನೆಯನ್ನು ಜಾರಿಗೊಳಿಸಬೇಕು. ನಮ್ಮ ಮೀಸಲಾತಿಗೆ ಸ್ಪಂದನೆ ಸಿಗದಿದ್ದರೆ 288 ಕ್ಷೇತ್ರಗಳಲ್ಲಿಯೂ ಅಭ್ಯರ್ಥಿ ಕಣಕ್ಕಿಳಿಸಲಿದ್ದೇವೆ' ಎಂದು ತಿಳಿಸಿದರು.

ಮರಾಠಾರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸಲು ಅವಕಾಶ ಕಲ್ಪಿಸುವ 'ಮಹಾರಾಷ್ಟ್ರ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರ ಮೀಸಲಾತಿ ಮಸೂದೆ 2024'ಕ್ಕೆ ಫೆಬ್ರುವರಿಯಲ್ಲಿ ವಿಧಾನಸಭೆ ಅನುಮೋದಿಸಿತ್ತು.

ಜೈಲಿನಲ್ಲಿ ಅಮೃತ್‌ಪಾಲ್ ಭೇಟಿಯಾದ ತಂದೆ–ತಾಯಿ

ದಿಬ್ರೂಗಢ (ಪಿಟಿಐ): ಜೈಲಿನಲ್ಲಿರುವ 'ವಾರಿಸ್ ಪಂಜಾಬ್ ದೆ' ಹೋರಾಟಗಾರ ಅಮೃತ್‌ಪಾಲ್ ಸಿಂಗ್ ಅವರನ್ನು ಅವರ ತಂದೆ-ತಾಯಿ ಶನಿವಾರ ಭೇಟಿ ಮಾಡಿದರು.

ಲೋಕಸಭಾ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಖದೂರ್ ಸಾಹಿಬ್ ಕ್ಷೇತ್ರದಲ್ಲಿ ಅಮೃತ್‌ಪಾಲ್ ಗೆದ್ದಿದ್ದಾರೆ. ಅವರು 1,97,120 ಮತಗಳ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಕುಲಬೀರ್ ಸಿಂಗ್ ಝಿರಾ ಅವರನ್ನು ಪರಾಭವಗೊಳಿಸಿದ್ದಾರೆ.

ಅಮೃತ್‌ಪಾಲ್ ಅವರ ತಂದೆ ತರಸೆಮ್ ಸಿಂಗ್ ಹಾಗೂ ತಾಯಿ ಬಲವಿಂದರ್ ಕೌರ್ ಅವರು ವಿಮಾನನಿಲ್ದಾಣಕ್ಕೆ ಶನಿವಾರ ಬಂದಿಳಿದರು. ಅಮೃತಪಾಲ್ ಪತ್ನಿ ಕಿರಣ್‌ದೀಪ್ ಕೌರ್ ಅವರನ್ನು ಬರಮಾಡಿಕೊಂಡರು.

ಮಾರ್ಚ್ 23ರಿಂದ ಅಮೃತ್‌ಪಾಲ್ ಜೈಲಿನಲ್ಲಿ ಇದ್ದಾರೆ. ಪತಿಯ ಪರವಾಗಿ ಕಿರಣ್‌ದೀಪ್ ಚುನಾವಣಾ ಪ್ರಚಾರ ನಡೆಸಿದ್ದರು.

'ನನ್ನ ಮಗ ಚುನಾವಣೆಯಲ್ಲಿ ಗೆದ್ದಿದ್ದು ಖುಷಿಯಾಗಿದೆ. ಜನರು ಅವನನ್ನು ಪ್ರೀತಿಸುತ್ತಾರೆ ಎನ್ನುವುದನ್ನು ಖುದ್ದು ಅವನಿಗೆ ಹೇಳಿ, ಅವನನ್ನೂ ಖುಷಿಪಡಿಸುವುದು ನಮ್ಮ ಭೇಟಿಯ ಉದ್ದೇಶ. ಜನರಿಗೆ ಅವನು ಏನು ಸಂದೇಶ ಕೊಡುತ್ತಾನೆ ಎಂದೂ ಕೇಳುತ್ತೇವೆ' ಎಂದು ತರಸೆಮ್ ಸಿಂಗ್ ಜೈಲಿನ ಒಳಗೆ ಹೋಗುವ ಮುನ್ನ ಪ್ರತಿಕ್ರಿಯಿಸಿದರು.

ಬಲವಿಂದರ್ ಕೌರ್ ಅವರು ಜೈಲಿನಲ್ಲಿದ್ದ ಕೈದಿಗಳಿಗೆ ಸಿಹಿ ಹಂಚಿದ್ದಾಗಿ ಅಧಿಕಾರಿಗಳು ತಿಳಿಸಿದರು. ಮಗನಿಗಾಗಿ ಹೊಸ ಬಟ್ಟೆ ಹಾಗೂ ಶೂಗಳನ್ನು ಅವರು ತಂದಿದ್ದರು. 'ಪ್ರಮಾಣವಚನ ಸ್ವೀಕರಿಸಲು ಹೋಗುವಾಗ ಇವು ಅವನಿಗೆ ಬೇಕಾಗುತ್ತವೆ' ಎಂದು ಬಲವಿಂದರ್ ಕೌರ್ ಹೇಳಿದರು.

ಕಿರಣ್‌ದೀಪ್ ಅವರ ಜತೆಯಲ್ಲಿ ವಕೀಲ ಹಾಗೂ ಮಾಜಿ ಸಂಸದ ರಾಜದೇವ್ ಸಿಂಗ್ ಖಾಲ್ಸಾ ಅವರೂ ಇದ್ದರು. ಅಮೃತ್‌ಪಾಲ್ ಬಿಡುಗಡೆಗೆ ಕಾನೂನು ಪ್ರಕ್ರಿಯೆ ನಡೆಯುತ್ತಿದೆ ಎಂದು ಅವರು ತಿಳಿಸಿದರು.

ಸಿಖ್ ಸಮುದಾಯದವರಿಗೆ ಅಮೃತ್‌ಪಾಲ್ ಅವರಲ್ಲಿ ಜನನಾಯಕ ಕಂಡಿರುವುದರಿಂದ ಹೆಚ್ಚಿನ ಮತಗಳನ್ನು ಹಾಕಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

ಖಾಲಿಸ್ತಾನಿ ಪ್ರತ್ಯೇಕತಾವಾದಿ ಚಳವಳಿಯಲ್ಲಿ ತೊಡಗಿದ್ದ ಆರೋಪದಡಿ ಅಮೃತ್‌ಪಾಲ್ ಸಿಂಗ್ ಹಾಗೂ ಅವರ ಸಂಬಂಧಿ ಸೇರಿದಂತೆ ಹತ್ತು ಜನರನ್ನು ಕಳೆದ ವರ್ಷ ಬಂಧಿಸಲಾಗಿತ್ತು.

ಸೇನೆಗೆ ಹೊಸದಾಗಿ ಸೇರ್ಪಡೆಗೊಂಡ ಅಧಿಕಾರಿಗಳು ಡೆಹ್ರಾಡೂನ್‌ನ ಭಾರತೀಯ ಮಿಲಿಟರಿ ಅಕಾಡೆಮಿಯಲ್ಲಿ ಶನಿವಾರ ನಿರ್ಗಮನ ಪಥಸಂಚಲನದ ನಂತರ ಸಂಭ್ರಮಿಸಿದರು —ಪಿಟಿಐ ಚಿತ್ರ

ಕುಲ್ವಿಂದರ್ ಕೌರ್‌ಗೆ ಬೆಂಬಲ: ಕಂಗನಾ ಟೀಕೆ

ಈ ಘಟನೆ ಕೊಂಡಾಡಿದವರು ಕೊಲೆ, ಅತ್ಯಾಚಾರ ಬೆಂಬಲಿಸುವರೆ?: ಸಂಸದೆ

ನವದೆಹಲಿ: ಚಂಡೀಗಢ ವಿಮಾನ ನಿಲ್ದಾಣದಲ್ಲಿ ತಮಗೆ ಕಪಾಳಕ್ಕೆ ಹೊಡೆದ ಸಿಐಎಸ್‌ಎಫ್‌ನ ಮಹಿಳಾ ಸಿಬ್ಬಂದಿಯನ್ನು ಬೆಂಬಲಿಸುತ್ತಿರುವವರು ಮತ್ತು ಸಂಭ್ರಮಿಸುತ್ತಿರುವವರ ವಿರುದ್ಧ ನಟಿ ಹಾಗೂ ಬಿಜೆಪಿ ಸಂಸದೆ ಕಂಗನಾ ರನೌತ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಈಘಟನೆಯನ್ನುಬೆಂಬಲಿಸುತ್ತಿರುವವರು ಅತ್ಯಾಚಾರ ಮತ್ತು ಕೊಲೆಯನ್ನು ಬೆಂಬಲಿಸುತ್ತಾರೆಯೇ' ಎಂದು ಪ್ರಶ್ನಿಸಿದ್ದಾರೆ.

ಈ ಸಂಬಂಧ ತಮ್ಮ 'ಎಕ್ಸ್' ಖಾತೆಯಲ್ಲಿ ಸುದೀರ್ಘವಾಗಿ ಬರೆದುಕೊಂಡಿರುವ ಅವರು, 'ಗಾಢವಾದ ಭಾವನಾತ್ಮಕತೆ, ದೈಹಿಕ, ಮಾನಸಿಕ ಅಥವಾ ಆರ್ಥಿಕ ಕಾರಣದಿಂದಾಗಿ ಅತ್ಯಾಚಾರಿ, ಕೊಲೆಪಾತಕಿ ಅಥವಾ ಕಳ್ಳನು ಅಪರಾಧ ಕೃತ್ಯಗಳಲ್ಲಿ ಪಾಲ್ಗೊಳ್ಳುತ್ತಾನೆ. ಕಾರಣಗಳಿಲ್ಲದೆ ಅಪರಾಧ ಘಟನೆಗಳು ನಡೆಯುವುದಿಲ್ಲ. ಇಂಥ ಅಪರಾಧ ಕೃತ್ಯಗಳಲ್ಲಿ ಭಾಗಿಯಾದವರು ಜೈಲು ಶಿಕ್ಷೆಗೆ ಗುರಿಯಾಗುತ್ತಾರೆ' ಎಂದಿದ್ದಾರೆ.

> **ಕಂಗನಾ ಅವರ ಕಪಾಳಕ್ಕೆ ಹೊಡೆದ ಘಟನೆಯನ್ನು ಸಂಭ್ರಮಿಸುತ್ತಿರುವವರೊಂದಿಗೆ ಗುರುತಿಸಿಕೊಳ್ಳಲಾಗದು. ಭದ್ರತಾ ಸಿಬ್ಬಂದಿ ಕಾನೂನು ಕೈಗೆತ್ತಿಕೊಂಡರೆ, ನಾವು ಯಾರೂ ಸುರಕ್ಷಿತವಾಗಿರಲು ಸಾಧ್ಯವಿಲ್ಲ**
> **ಶಬಾನಾ ಅಜ್ಮಿ,** ಬಾಲಿವುಡ್ ನಟಿ

'ಯಾವುದೇ ಒಬ್ಬ ವ್ಯಕ್ತಿಯ ಅನುಮತಿ ಇಲ್ಲದೆ, ಆತನ ದೇಹ ಸ್ಪರ್ಶಿಸುವುದು ಮತ್ತು ನಿಂದಿಸುವುದು ಸರಿ ಎಂದು ನೀವು ಹೇಳುವುದಾದರೆ, ಅತ್ಯಾಚಾರ ಮತ್ತು ಕೊಲೆಗೂ ನಿಮ್ಮ ಸಮ್ಮತಿ ಇದೆ ಎಂದೇ ಅರ್ಥ. ಹೀಗಿದ್ದಾಗ, ಅಪರಾಧ ಕೃತ್ಯಗಳ ಪರವಿರುವ ನಿಮ್ಮ ಮಾನಸಿಕತೆಯ ಬಗ್ಗೆ ನೀವೇ ಒಮ್ಮೆ ಪರಾಮರ್ಶಿಸಿಕೊಳ್ಳಬೇಕು. ಇಂಥವರು ಯೋಗ ಮತ್ತು ಧ್ಯಾನ ಮಾಡಬೇಕು ಎಂದು ನಾನು ಸಲಹೆ ನೀಡುತ್ತೇನೆ. ಇಲ್ಲದಿದ್ದರೆ, ನಿಮ್ಮ ಜೀವನವೇ ವ್ಯಥೆ ಮತ್ತು ಒಂದು ಹೊರೆ ಎಂಬ ಭಾವನೆ ಮೂಡಲಿದೆ. ದಯವಿಟ್ಟು ದ್ವೇಷ, ಅಸೂಯೆಯನ್ನು ಬಿಟ್ಟುಬಿಡಿ' ಎಂದು ಮನವಿ ಮಾಡಿದ್ದಾರೆ.

ನಿಷ್ಪಕ್ಷಪಾತ ತನಿಖೆಯಾಗಲಿ: ಕಿರಣಜಿತ್

ಚಂಡೀಗಢ (ಪಿಟಿಐ): ನಟಿ ಕಂಗನಾ ಅವರ ಕಪಾಳಕ್ಕೆ ಹೊಡೆದಿದ್ದಾರೆ ಎಂಬ ಆರೋಪ ಎದುರಿಸುತ್ತಿರುವ ಸಿಐಎಸ್‌ಎಫ್ ಮಹಿಳಾ ಕಾನ್‌ಸ್ಟೆಬಲ್ ಕುಲ್ವಿಂದರ್ ಕೌರ್ ಅವರಿಗೆ ಪಂಜಾಬ್ ಕಿಸಾನ್ ಕಾಂಗ್ರೆಸ್ ಮುಖ್ಯಸ್ಥ ಕಿರಣಜಿತ್ ಸಿಂಗ್ ಶನಿವಾರ ಬೆಂಬಲ ಘೋಷಿಸಿದ್ದಾರೆ.

ಈ ಘಟನೆ ಕುರಿತು ಯಾವುದೇ ಪ್ರತಿಕ್ರಿಯೆ ನೀಡದೆ ತಟಸ್ಥ ನೀತಿ ಅನುಸರಿಸಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ನಟಿ ಕಂಗನಾ ಅವರಿಗೆ ಕಪಾಳಕ್ಕೆ ಹೊಡೆದ ದೃಶ್ಯಾವಳಿಗಳು ಸಿ.ಸಿ. ಟಿ.ವಿಯಲ್ಲಿ ದಾಖಲಾಗದೆ ಇರುವ ಹೊರತಾಗಿಯೂ, ಸಿಐಎಸ್‌ಎಫ್ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಘಟನೆ ಕುರಿತು ನಿಷ್ಪಕ್ಷಪಾತ ತನಿಖೆ ನಡೆಯಬೇಕು' ಎಂದು ಅವರು ಒತ್ತಾಯಿಸಿದರು.

ಒಂದೇ ಗ್ರಾಮದ 16 ಮಂದಿಗೆ ಜೀವಾವಧಿ ಶಿಕ್ಷೆ

ಔರಂಗಾಬಾದ್ (ಬಿಹಾರ, ಪಿಟಿಐ): ವಾಮಾಚಾರದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಹತ್ಯೆಗೈದಿದ್ದ ಇಬ್ಬರು ಮಹಿಳೆಯರು ಸೇರಿ 16 ಮಂದಿಗೆ ಔರಂಗಾಬಾದ್‌ನ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆ ವಿಧಿಸಿದೆ.

ಪ್ರಕರಣದ ವಿಚಾರಣೆ ಆಲಿಸಿದ ಔರಂಗಾಬಾದ್‌ನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಧನಂಜಯ್ ಮಿಶ್ರಾ ಅವರು, ಪ್ರಕರಣದ ಎಲ್ಲ 16 ಅಪರಾಧಿಗಳಿಗೆ ತಲಾ ₹25,000 ದಂಡ ಹಾಗೂ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ನೀಡಿದ್ದಾರೆ.

ವಾಮಾಚಾರ ನಡೆಸಿರುವ ಶಂಕೆ ಮೇರೆಗೆ ಜಗದೀಶ್ ರಾಮ್(65) ಎಂಬುವವರನ್ನು 2020ರ ಆ. 13ರಂದು ಇಬ್ರಾಹಿಂಪುರದಲ್ಲಿ ಹತ್ಯೆ ಮಾಡಲಾಗಿತ್ತು. ಈ ಬಗ್ಗೆ, ಇದೀಗ ಶಿಕ್ಷೆಗೆ ಗುರಿಯಾಗಿರುವ ಎಲ್ಲ 16 ಮಂದಿಯ ಮೇಲೆ ಆರೋಪ ಹೊರಿಸಿ ಮೃತ ಜಗದೀಶ್ ಪತ್ನಿ ದೂರು ದಾಖಲಿಸಿದ್ದರು.

'ಆಧುನಿಕ ಯುದ್ಧದ ಸವಾಲಿಗೆ ಸಜ್ಜಾಗಿ'

ಡೆಹ್ರಾಡೂನ್ (ಪಿಟಿಐ): ಯುದ್ಧದ ಸ್ವರೂಪ ಮತ್ತು ಕ್ರಿಯಾತ್ಮಕತೆ ಬದಲಾಗುತ್ತಲೇ ಇದೆ. ಈ ಸವಾಲುಗಳನ್ನು ಎದುರಿಸಲು ತಯಾರಾಗಿ ಎಂದು ಇಲ್ಲಿಯ ಪ್ರತಿಷ್ಠಿತ ಭಾರತೀಯ ಸೇನಾ ಅಕಾಡೆಮಿಯಿಂದ (ಐಎಂಎ) ತರಬೇತಿ ಮುಗಿಸಿ ಹೊರಹೋಗುತ್ತಿರುವ ವಿದ್ಯಾರ್ಥಿಗಳಿಗೆ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಲೆಫ್ಟಿನೆಂಟ್ ಎಂ.ವಿ. ಸುಚೇಂದ್ರ ಕುಮಾರ್ ಅವರು ಕಿವಿಮಾತು ಹೇಳಿದರು.

ಐಎಂಎನ ನಿರ್ಗಮನ ಪಥ ಸಂಚಲನದಲ್ಲಿ ಮಾತನಾಡಿದ ಅವರು, 'ತಾಂತ್ರಿಕತೆ ಮುಂದುವರೆಯುತ್ತಿರುವುದು ಆಧುನಿಕ ಯುದ್ಧಗಳ ಮೇಲೆ ಪರಿಣಾಮ ಉಂಟುಮಾಡುತ್ತಿದೆ. ಬಾಹ್ಯಾಕಾಶ, ಸೈಬರ್ ಮತ್ತು ಮಾಹಿತಿ ತಂತ್ರಜ್ಞಾನದ ಬಳಕೆ ಹೆಚ್ಚಾದಂತೆಲ್ಲ ಯುದ್ಧದ ಸ್ವರೂಪ ಕೂಡ ಬದಲಾಗುತ್ತಿದೆ. ಇಂದು ನಡೆಯುತ್ತಿರುವ ಯುದ್ಧಗಳು ಚಿಂತನೆ, ಬುದ್ಧಿಶಕ್ತಿ ಮತ್ತು ಅವಿಷ್ಕಾರಗಳ ಯುದ್ಧ. ಈ ಸವಾಲುಗಳನ್ನು ಎದುರಿಸಲು ನೀವು ಸನ್ನದ್ಧರಾಗಿರಬೇಕು' ಎಂದು ಹೇಳಿದರು.

'ಐಎಂಎಯಂಥ ಸಂಸ್ಥೆ ನೀಡುವ ಉನ್ನತ ಮಟ್ಟದ ತರಬೇತಿ, ದೈಹಿಕ ಮತ್ತು ಮಾನಸಿಕ ದೃಢತೆ ತರಬೇತಿ, ತಾಂತ್ರಿಕ ತರಬೇತಿಯಿಂದಾಗಿ ನೀವು ಆಧುನಿಕ ಯುದ್ಧಗಳು ಒಡ್ಡುವ ಸವಾಲುಗಳಿಗೆ ಸಜ್ಜಾಗುತ್ತೀರ' ಎಂದು ಅವರು ಹೇಳಿದರು.

ಒಟ್ಟು 394 ಮಂದಿ ಶನಿವಾರ ಐಎಂಎಯಿಂದ ತರಬೇತಿ ಪಡೆದು ನಿರ್ಗಮಿಸಿದರು. ಅವರಲ್ಲಿ 355 ಮಂದಿ ಭಾರತೀಯರು ಮತ್ತು 39 ಮಂದಿ ವಿದೇಶಿಯರು.

ಸಂಕ್ಷಿಪ್ತ ಸುದ್ದಿ

ಕಚೇರಿಯಲ್ಲೇ ಹೊಡೆದಾಡಿದ ಕಾಂಗ್ರೆಸ್ಸಿಗರು

ತ್ರಿಶೂರ್ (ಪಿಟಿಐ): ಕೇರಳದ ತ್ರಿಶೂರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕೆ.ಮುರಳೀಧರನ್ ಅವರು ಪರಾಭವಗೊಂಡ ಬೆನ್ನಲ್ಲೇ ಇಲ್ಲಿನ ಜಿಲ್ಲಾ ಕಾಂಗ್ರೆಸ್ (ಡಿಸಿಸಿ) ಕಚೇರಿಯಲ್ಲಿ ಶುಕ್ರವಾರ ಸ್ಥಳೀಯ ಕಾಂಗ್ರೆಸ್ ಮುಖಂಡರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ.

ತ್ರಿಶೂರ್ ಡಿಸಿಸಿ ಅಧ್ಯಕ್ಷ ಜೋಸ್ ವಲ್ಲೂರ್ ಮತ್ತು ಆತನ ಬೆಂಬಲಿಗರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬುದಾಗಿ ತ್ರಿಶೂರ್ ಡಿಸಿಸಿ ಕಾರ್ಯದರ್ಶಿ ಸಂಜೀವನ್ ಕುರಿಯಾಚಿರಾ ಅವರು ದೂರು ನೀಡಿದ್ದಾರೆ. ಈ ಸಂಬಂಧ ಜೋಸ್ ವಲ್ಲೂರ್ ಹಾಗೂ ಇತರ 19 ಆರೋಪಿಗಳ ಮೇಲೆ ಪೊಲೀಸರು ಆರೋಪಪಟ್ಟಿ ದಾಖಲಿಸಿದ್ದಾರೆ.

'ತ್ರಿಶೂರ್ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋಲಲು ಮಾಜಿ ಸಂಸದ ಟಿ.ಎನ್.ಪ್ರತಾಪನ್ ಹಾಗೂ ಡಿಸಿಸಿ ಅಧ್ಯಕ್ಷ ಜೋಸ್ ವಲ್ಲೂರ್ ಅವರೇ ಕಾರಣ' ಎಂದು ಪರಾಜಿತ ಅಭ್ಯರ್ಥಿ ಕೆ. ಮುರಳೀಧರನ್ ಅವರ ಬೆಂಬಲಿಗರೂ ಆಗಿರುವ ಕುರಿಯಾಚಿರಾ ಟೀಕಿಸಿದ್ದರು. ಅಲ್ಲದೆ, ಡಿಸಿಸಿ ಕಚೇರಿ ಮುಂಭಾಗ ಈ ಸಂಬಂಧಿತ ಪೋಸ್ಟರ್‌ಗಳನ್ನು ಅಂಟಿಸಿದ್ದರು. ಈ ಕಾರಣದಿಂದಲೇ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ ಎನ್ನಲಾಗಿದೆ.

ಬಿಜೆಪಿ ಅಭ್ಯರ್ಥಿ, ನಟ ಸುರೇಶ್ ಗೋಪಿ ಅವರು ತ್ರಿಶೂರ್ ಲೋಕಸಭಾ ಕ್ಷೇತ್ರವನ್ನು ಗೆಲ್ಲುವ ಮೂಲಕ ಕೇರಳ ರಾಜ್ಯದಲ್ಲಿ ಬಿಜೆಪಿಗೆ ಐತಿಹಾಸಿಕ ಗೆಲುವು ತಂದುಕೊಟ್ಟಿದ್ದಾರೆ. ಅವರು, ಹತ್ತಿರದ ಪ್ರತಿಸ್ಪರ್ಧಿ ಸಿಪಿಐನ ವಿ.ಎಸ್. ಸುನೀಲ್ ಕುಮಾರ್ ಎದುರು 74,686 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದಾರೆ. ಕಾಂಗ್ರೆಸ್‌ನ ಎಲ್. ಮುರಳೀಧರನ್ ಅವರು ಮೂರನೇ ಸ್ಥಾನಕ್ಕೆ ಕುಸಿದಿದ್ದರು.

ಗುಂಪು ದಾಳಿ– ಇಬ್ಬರ ಹತ್ಯೆ ತನಿಖೆಗೆ ವಿಶೇಷ ತಂಡ ರಚನೆ

ರಾಯಪುರ (ಪಿಟಿಐ): ಜಾನುವಾರು ಸಾಗಾಟಗಾರರ ಮೇಲೆ ನಡೆದ ಗುಂಪು ದಾಳಿಯಲ್ಲಿ ಇಬ್ಬರು ಮೃತಪಟ್ಟ ಪ್ರಕರಣ ಸಂಬಂಧ ತನಿಖೆಗೆ ರಾಯಪುರ ಗ್ರಾಮಾಂತರ ಪೊಲೀಸರು ವಿಶೇಷ ತಂಡ ರಚಿಸಿದ್ದಾರೆ.

ಅರ್ನಾಗ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜನರ ಗುಂಪೊಂದು ಶುಕ್ರವಾರ ಮುಂಜಾನೆ ಜಾನುವಾರು ಸಾಗಾಟಗಾರರನ್ನು ಬೆನ್ನಟ್ಟಿ ಹೋಗಿ ದಾಳಿ ಮಾಡಿದೆ.

ಈ ವೇಳೆ ಒಬ್ಬ ಸಾಗಾಟಗಾರ ಸ್ಥಳದಲ್ಲಿಯೇ ಮೃತಪಟ್ಟಿದ್ದರೆ, ಇನ್ನೊಬ್ಬರು ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಮತ್ತೊಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೃತರನ್ನು ಚಾಂದ್ ಮಿಯಾ, ಗುಡ್ಡು ಖಾನ್ ಹಾಗೂ ಗಾಯಗೊಂಡ ವ್ಯಕ್ತಿಯನ್ನು ಸದ್ದಾಂ ಖಾನ್ ಎಂದು ಗುರುತಿಸಲಾಗಿದೆ. ಎಲ್ಲರೂ ಉತ್ತರ ಪ್ರದೇಶ ಮೂಲದವರು ಎಂದು ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ ಜೀವಾವಧಿ ಶಿಕ್ಷೆ

ಗುರುಗ್ರಾಮ (ಪಿಟಿಐ): 14 ವರ್ಷದ ಅಂಧ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗೆ ಪಂಜಾಬ್‌ನ ಗುರುಗ್ರಾಮ ನ್ಯಾಯಾಲಯವು ಜೀವಾವಧಿ ಶಿಕ್ಷೆಯನ್ನು ವಿಧಿಸಿ ಆದೇಶ ಹೊರಡಿಸಿದೆ. ಆರೋಪಿಯನ್ನು ತಪ್ಪಿತಸ್ಥನೆಂದು ಪರಿಗಣಿಸಿದ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶ ಅಶ್ವನಿ ಕುಮಾರ್ ಅವರು ₹30,000 ದಂಡವನ್ನು ವಿಧಿಸಿದರು.

ಅಂಧ ಬಾಲಕಿ ಕುಟುಂಬದ ಸಂಬಂಧಿಯೂ ಆಗಿದ್ದ ವ್ಯಕ್ತಿ 2020ರಲ್ಲಿ ಈಕೆ ಮೇಲೆ ಅತ್ಯಾಚಾರ ಎಸಗಿದ್ದ. 'ನನ್ನ ಮಗಳ ಮೇಲೆ ಅತ್ಯಾಚಾರ ಎಸಗಿರುವ ವ್ಯಕ್ತಿಯು, ಈ ವಿಷಯ ಬಹಿರಂಗಪಡಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ' ಎಂದು ಬಾಲಕಿಯ ತಾಯಿ ಪೊಲೀಸರಿಗೆ ದೂರು ನೀಡಿದ್ದರು.

ಶಾಸಕನಿಂದ ಹಲ್ಲೆ

ಕೋಲ್ಕತ್ತಾ(ಪಿಟಿಐ): ಸಿನಿಮಾವೊಂದರ ಚಿತ್ರೀಕರಣದ ವೇಳೆ ಸಂಸದ ಅಭಿಷೇಕ್ ಬ್ಯಾನರ್ಜಿ ಅವರನ್ನು ನಿಂದಿಸಿದ ರೆಸ್ಟೋರೆಂಟ್ ಮಾಲೀಕನ ಮೇಲೆ ನಟ ಮತ್ತು ತೃಣಮೂಲ ಕಾಂಗ್ರೆಸ್ ಶಾಸಕ ಸೋಹಮ್ ಚಕ್ರವರ್ತಿ ಹಲ್ಲೆ ನಡೆಸಿ, ವಿವಾದ ಸೃಷ್ಟಿಸಿದ್ದಾರೆ.

ಕೋಲ್ಕತ್ತ ಬಳಿಯ ನ್ಯೂ ಟೌನ್‌ನಲ್ಲಿರುವ ರೆಸ್ಟೋರೆಂಟ್ ಮುಂದೆ ಚಕ್ರವರ್ತಿ ಮತ್ತು ಅವರ ಸಿಬ್ಬಂದಿ ಕಾರುಗಳನ್ನು ನಿಲ್ಲಿಸಿದ್ದ ವಿಚಾರಕ್ಕೆ ಇಬ್ಬರ ನಡುವೆ ಪರಸ್ಪರ ಜಗಳ ಆರಂಭವಾಗಿದೆ.

'ಶನಿವಾರ ಸಂಜೆ ತನ್ನ ರೆಸ್ಟೋರೆಂಟ್‌ನ ಒಂದು ಭಾಗದಲ್ಲಿ ಉಚಿತವಾಗಿ ಚಿತ್ರೀಕರಣಕ್ಕೆ ನೀಡಿದ್ದೆ. ಪಾರ್ಕಿಂಗ್ ಸ್ಥಳದಲ್ಲಿ ಚಕ್ರವರ್ತಿ ಮತ್ತು ಅವರ ಸಿಬ್ಬಂದಿ ಕಾರು ನಿಲ್ಲಿಸಿದ್ದು, ಇತರ ಗ್ರಾಹಕರಿಗೆ ವಾಹನಗಳನ್ನು ನಿಲುಗಡೆ ಮಾಡಲು ಸಾಧ್ಯವಾಗದ ಕಾರಣ ಅವರ ಕಾರುಗಳನ್ನು ತೆಗೆಯುವಂತೆ ಸಿಬ್ಬಂದಿಗಳು ಚಕ್ರವರ್ತಿ ಅವರ ಕಡೆಯವರಿಗೆ ತಿಳಿಸಿದರು. ಆಗ ಅವರು ಟಿಎಂಸಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ಅತ್ಯಂತ ಆತ್ಮೀಯ ಸ್ನೇಹಿತ ಎಂದರು. ಅವರು ನರೇಂದ್ರ ಮೋದಿಯವರ ಸ್ನೇಹಿತರಾಗಲಿ ಅಥವಾ ಅಭಿಷೇಕ್ ಅವರಾಗಲಿ ನಾನು ಹೆದರುವುದಿಲ್ಲ ಎಂದು ಹೇಳಿದೆ. ಆಗ ಇದ್ದಕ್ಕಿದ್ದಂತೆ ಚಕ್ರವರ್ತಿ ಬಂದು ನನ್ನ ಮುಖಕ್ಕೆ ಹೊಡೆದರು ಮತ್ತು ನನ್ನ ಹೊಟ್ಟೆಗೆ ಒದ್ದರು' ಎಂದು ಮಾಲೀಕ ಅನಿಸುಲ್ ಆಲಂ ಆರೋಪಿಸಿದ್ದಾರೆ.

ಗ್ಯಾಸ್ ಸೋರಿಕೆ ಮೂವರು ಬಲಿ

ನವದೆಹಲಿ (ಪಿಟಿಐ): ದೆಹಲಿ ನರೇಲಾ ಕೈಗಾರಿಕಾ ಪ್ರದೇಶದ ಆಹಾರ ತಯಾರಿಕಾ ಘಟಕದಲ್ಲಿ ಸಂಭ ವಿಸಿದ ಸ್ಫೋಟದಲ್ಲಿ ಮೂವರು ಸಾವಿಗೀಡಾಗಿದ್ದು, ಆರು ಮಂದಿ ಗಾಯ ಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಶ್ಯಾಮ್ ಕೃಪಾ ಫುಡ್ಸ್ ಪ್ರೈವೇಟ್ ಲಿಮಿಟೆಡ್‌ನ ಒಣ ಹೆಸರು ಬೇಳೆ ತಯಾರಿಕಾ ಕಾರ್ಖಾನೆಯಲ್ಲಿ ಬೆಂಕಿ ಅವಘಡ ಆಗಿದೆ ಎಂದು ಫೋನ್ ಕರೆ ಬಂತು. ಬೆಂಕಿಯು ಕಾರ್ಖಾನೆಯನ್ನು ಸುತ್ತುವರಿದಿದ್ದು, ಕಾರ್ಮಿಕರು ಒಳಗೆ ಸಿಲುಕಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

ಒಂಬತ್ತು ಜನರನ್ನು ರಕ್ಷಿಸಲಾಗಿದ್ದು, ಸತ್ಯವಾಡಿ ರಾಜಾ ಹರಿಶ್ಚಂದ್ರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಶ್ಯಾಮ್ (24), ರಾಮ್ ಸಿಂಗ್ (30), ಬೀರ್‌ಪಾಲ್ (42) ಈ ಮೂವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡ್ರಗ್ಸ್ ಪ್ರಕರಣ: ಮತ್ತೆ 7 ಮಂದಿ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಪಂಜಾಬ್‌ನ ಅಟಾರಿಯಲ್ಲಿ 2022ರ ಏಪ್ರಿಲ್‌ನಲ್ಲಿ ₹700 ಕೋಟಿ ಮೌಲ್ಯದ 100 ಕೆ.ಜಿಯಷ್ಟು ಹೆರಾಯಿನ್ ಜಪ್ತಿ ಮಾಡಲಾದ ಪ್ರಕರಣ ಸಂಬಂಧ ಎನ್‌ಐಎ ಮತ್ತೆ 7 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಈ ಸಂಬಂಧ ಎನ್‌ಐಎ ಶುಕ್ರವಾರ ಪಟಿಯಾಲ ಹೌಸ್ ಕೋರ್ಟ್‌ಗೆ ಪೂರಕ ದೋಷಾರೋಪಪಟ್ಟಿ ಸಲ್ಲಿಸಿದ್ದು, ಅದರಲ್ಲಿ ಏಳು ಆರೋಪಿಗಳು ಅಂತರರಾಷ್ಟ್ರೀಯ ಮಾದಕ ದ್ರವ್ಯದ ಸಿಂಡಿಕೇಟ್‌ನಲ್ಲಿ ಪ್ರಮುಖರಾಗಿದ್ದಾರೆ ಎಂದು ತಿಳಿಸಲಾಗಿದೆ.

ಈ ಪ್ರಕರಣ ಸಂಬಂಧ ಈ ಹಿಂದೆ ನಾಲ್ವರು ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಪುಣೆ: ಪೋಶೆ ಕಾರು ಅಪಘಾತ ಪ್ರಕರಣ

ಬಾಲಕನ ಕುಟುಂಬದ ಕಟ್ಟಡ ನೆಲಸಮ

ಸತಾರಾ (ಪಿಟಿಐ): ಪುಣೆ ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಆರೋಪಿಯಾಗಿರುವ 17 ವರ್ಷದ ವಿಶಾಲ್ ಅಗರ್ವಾಲ್‌ನ ಕುಟುಂಬದ ಒಡೆತನದ ರೆಸಾರ್ಟ್‌ನಲ್ಲಿ ಅಕ್ರಮವಾಗಿ ನಿರ್ಮಿಸಲಾಗಿವೆ ಎನ್ನಲಾದ ಕಟ್ಟಡಗಳನ್ನು ಸತಾರಾ ಜಿಲ್ಲಾಡಳಿತವು ಬುಲ್ಡೋಜರ್‌ನಿಂದನೆಲಸಮಗೊಳಿಸಿದೆ.

ಮಹಾಬಲೇಶ್ವರದ ಮಲ್ಕಮ್ ಪೇಟ್ ಪ್ರದೇಶದಲ್ಲಿ ಕುಟುಂಬದ ಒಡೆತನದ ಎಂಪಿಜಿ ಕ್ಲಬ್‌ನಲ್ಲಿನ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿದ್ದ ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೆಸಾರ್ಟ್ ನಿರ್ಮಾಣದಲ್ಲಿ ಅಕ್ರಮ ಕಂಡುಬಂದರೆ ಕ್ರಮ ಕೈಗೊಳ್ಳುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕ್‌ನಾಥ್ ಶಿಂಧೆ ಅವರು ಆದೇಶಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

'ಮೇ 19ರ ನಸುಕಿನಲ್ಲಿ ಇಲ್ಲಿನ ಕಲ್ಯಾಣ ನಗರ ಪ್ರದೇಶದಲ್ಲಿ 17 ವರ್ಷದ ಬಾಲಕನೊಬ್ಬ ಪೋಶೆ ಕಾರನ್ನು ಅತಿ ವೇಗವಾಗಿ ಚಲಾಯಿಸುತ್ತಿದ್ದಾಗ ನಡೆದ ಅಪಘಾತದಲ್ಲಿ ಇಬ್ಬರು ಐಟಿ ಉದ್ಯೋಗಿಗಳು ಮೃತಪಟ್ಟಿದ್ದರು. ಅಪಘಾತ ನಡೆದಾಗ ಬಾಲಕ ಮದ್ಯ ಕುಡಿದಿದ್ದ' ಎಂದು ಪೊಲೀಸರು ಹೇಳಿದ್ದಾರೆ.

ಬಾಲಕ ಕಾರು ಚಲಾಯಿಸುತ್ತಿರಲಿಲ್ಲ ಎಂದು ಸಾಬೀತು ಮಾಡಲು, ತಮ್ಮ ಚಾಲಕನು ಆ ಕಾರು ಚಲಾಯಿಸುತ್ತಿದ್ದ ಎಂದು ಬಿಂಬಿಸಲು ಚಾಲಕನನ್ನು ಅಪಹರಿಸಿದ ಆರೋಪದಡಿ ಬಾಲಕನ ತಂದೆ ಹಾಗೂ ತಾತನನ್ನು ಬಂಧಿಸಲಾಗಿದೆ.

ಅಲ್ಲದೇ ಬಾಲಕ ಮದ್ಯಪಾನ ಮಾಡಿದ್ದರ ಕುರಿತು ಪರೀಕ್ಷೆಗೆ ತಮ್ಮ ರಕ್ತದ ಮಾದರಿಯೊಂದಿಗೆ ಮಗನ ರಕ್ತದ ಮಾದರಿಯನ್ನು ಬದಲಾಯಿಸಿದ್ದ ಆರೋಪದ ಮೇಲೆ ತಾಯಿ ಶಿವಾನಿ ಅಗರ್ವಾಲ್ ಅವರನ್ನು ಪೊಲೀಸರು ಜೂನ್ 1ರಂದು ಬಂಧಿಸಿದ್ದರು.

ಇದಕ್ಕೆ ಸಹಾಯ ಮಾಡಿರುವ ಇಬ್ಬರು ವೈದ್ಯರನ್ನೂ ಬಂಧಿಸಲಾಗಿದೆ.

ENTRY	Air Force Common Admission Test (AFCAT) Entry	NCC Special Entry
BRANCHES	Flying/ Technical/ Weapon Systems/ Administration/ Logistics/ Accounts/ Education/ Meteorology	Flying (NCC Air Wing 'C' certificate is mandatory)

AFCAT Entry: Registration mandatory and online exam/ NCC Special Entry registration mandatory and no online exam
Aadhaar card is mandatory for online registration
Registrations open from **30 May 2024** till **28 June 2024**
For more details, refer to Employment News dated **25 May 2024** and for detailed notification visit our website **careerairforce.nic.in** and **afcat.cdac.in**
For updates, follow us on
DISHA by Indian Air Force careeriniaf CareerinIAF
DISHA Cell, Air Headquarter, Vayu Bhawan
Tel: 011-23013690 | Toll-free No.: 1800-11-2448 | E-mail: career.iaf@nic.in
cbc 10801/13/0004/2425

ವಿಜ್ಞಾನ ಮೊಗಸಾಲೆ
ಕಲಿಕೆಯ ಶಾಲೆ 9

> ಕಲ್ಯಾಣ ಕರ್ನಾಟಕದಲ್ಲಿ ತನ್ನ ವಿಶಿಷ್ಟ ಸುವಾಸನೆ ಮತ್ತು ಸ್ವಾದದಿಂದ ಇರಾನಿ ಚಾಯ್ ಹೆಸರುವಾಸಿ. ಇದು ಆತಿಥ್ಯಕ್ಕೂ ಹೇಳಿಮಾಡಿಸಿದ್ದು. ಕಾಲ ಬದಲಾದಂತೆ ಇರಾನಿ ಚಾಯ್ ಮೆಲ್ಲನೆ ತನ್ನ ಖದರ್ ಕಳೆದುಕೊಳ್ಳುತ್ತಿದೆ.

ತಣ್ಣಗಾಗುತ್ತಿದೆ ಇರಾನಿ ಚಾಯ್ ಸಂಸ್ಕೃತಿ

ಡಿಕಾಕ್ಷನ್ ಸಿದ್ಧತೆಯ ಪರಿ
ಚಿತ್ರಗಳು: ತಾಜುದ್ದೀನ್ ಆಜಾದ್

ರಶ್ಮಿ ಎಸ್

ರಿಮ್‌ಝಿಮ್ ಗಿರೆ ಸಾವನ್... ಸುಲಗ್ ಸುಲಗ್ ಜಾಯೆ ಮನ್... ಹಾಡು ಹಿನ್ನೆಲೆಯಲ್ಲಿ ಬರ್ತಿತ್ತು. ಸಣ್ಣನೆಯ ಸೋನೆ ಮಳೆ ತಣ್ಣನೆಯ ತಂಗಾಳಿ ಬೀಸುವಾಗ ಒಂದು ಚಹಾ ಬೇಕಿತ್ತು. ಅದೇ ಇರಾನಿ ಚಾಯ್...

ಅಲೀಮ್ ಭಾಯ್.. ಏಕ್‌ಚಾಯ್ ಪಿಲಾತೆ...? (ಅಲೀಮ್ ಭಾಯ್ ಒಂದು ಚಹಾ ಕುಡಿಸ್ತೀರಾ) ಕೇಳಿದ ತಕ್ಷಣ..

ಬೆಳ್ಳನೆಯ ಬೆಳ್ಮುಗಿಲ ಬಣ್ಣದ ಕಪ್ಪುಬಸಿಯಲ್ಲಿ ಬಿಸಿಬಿಸಿ ಚಹಾ ಸೋಸಿದವರೇ ಮಲೈ ದೂಂ.. (ಕೆನೆ ಕೊಡಲೇ?) ಎಂದು ಕೇಳಿದರು..

ಬೇಡ ಅಂತ ತಲೆ ಅಲ್ಲಾಡಿಸಿದೆ...

'ಅಬ್ ವೋ ಜಮಾನಾ ಗಯಾ' (ಈಗ ಆ ಕಾಲ ಹೋಯ್ತು) ಅಂದವರೇ ತಾವೂ ಒಂದು ಚಹಾ ಹಿಡಿದು ಕುಳಿತರು. ಹಾಗಿದ್ದರೆ ಯಾವುದು ಆ ಜಮಾನಾ?

ಅದೇ ಇರಾನಿ ಚಾಯ್ ಕುಡಿಯುವ ಜಮಾನಾ.. ಒಂದು ಕಾಲ ಇತ್ತು. ಹೈದರಾಬಾದ್‌ನಲ್ಲಿ ಹಲವು ಇರಾನಿ ಕೆಫೆಗಳಿದ್ದವು. ಮಸ್ಕಾಬನ್, ಉಸ್ಮಾನಿಯಾ ಬಿಸ್ಕೂಟ್ ಜೊತೆಗೆ ಬಿಸಿಬಿಸಿ ಚಹಾ ಸೇವಿಸುವ ಮಜವೇ ಬೇರೆ ಇತ್ತು. ಈಗ ಆ ಕಾಲವೂ ಇಲ್ಲ, ಕೆಫೆಗಳೂ ಇಲ್ಲ.. ಆದರೆ ಚಹಾ ಮಾತ್ರ ಬದಲಾಗಿಲ್ಲ.

ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ರಾಯಚೂರಿನಲ್ಲಿ ಈಗಲೂ ಕೆಲವು ಕೆಫೆಗಳಲ್ಲಿ ಇರಾನಿ ಚಹಾ ಸಿಗುತ್ತದೆ. ಈ ಭಾಗಕ್ಕೆ ಇರಾನಿ ಚಹಾದ ಯಾನವೇ ಆಸಕ್ತಿಕರ. ಪಾರ್ಸಿಗಳು 'ಬಂದರು ಪ್ರದೇಶ'ವಾದ ಮುಂಬೈಗೆ ವಲಸೆ ಬಂದರು. ಮಹಾನಗರ ನಿರ್ಮಾಣವಾಗುತ್ತಿದ್ದ ಆ ಕಾಲದಲ್ಲಿ ಕಾರ್ಮಿಕರಿಗೆ ಚೈತನ್ಯ ನೀಡುವ ಚಹಾ ಮತ್ತು ಡಬಲ್ ರೋಟಿ, ಮಸ್ಕಾಬನ್, ಮಟನ್ ಪಾವ್ ನೀಡಲಾಗುತ್ತಿತ್ತು. ಇಂಥ ಸುಮಾರು 200 ಕೆಫೆಗಳು ಸ್ವಾತಂತ್ರ್ಯಪೂರ್ವ ಭಾರತದ ಮುಂಬೈನಲ್ಲಿದ್ದವು. ಪಾರ್ಸಿ ಜನಾಂಗದ ಅತಿಮುಖ್ಯ ಖಾದ್ಯಗಳಾದ ಮಟನ್ ಖೀಮಾ, ಚಿಕನ್ ಖೀಮಾಗಳನ್ನು ತಮ್ಮದೇ ಬೇಕರಿಯಲ್ಲಿ ತಯಾರಿಸುತ್ತಿದ್ದ ಡಬಲ್‌ರೋಟಿ ಎಂದು ಕರೆಯಲಾಗುವ ಬನ್‌ಗಳು, ಪಾವ್‌ಗಳ ಜೊತೆಗೆ ನೀಡುತ್ತಿದ್ದರು.

ಮುಂಬೈನಿಂದ ನಿಜಾಮ್ ಪ್ರದೇಶವಾದ ಹೈದರಾಬಾದ್‌ಗೆ ಪಾರ್ಸಿಗಳು ವಲಸೆ ಬಂದಾಗಲೇ ಡೆಕ್ಕನ್ ಪ್ರದೇಶಕ್ಕೆ ಇರಾನಿ ಚಹಾದ ಪರಿಚಯವಾಯಿತು. ಇರಾನಿ ಚಹಾ ಅಂದರೆ ಸಾಕು, ಈಗಲೂ ಮೂಗಿನ ಹೊರಳೆಗಳು ಒಂದಕ್ಕೊಂದು ಸಂತೋಷದಿಂದ ಅಪ್ಪಿಕೊಳ್ಳುತ್ತವೆ. ಹಂಗೆ ಅಪ್ಪಿಕೊಂಡು ಆ ಚಹಾದ ಘಮವನ್ನು ಮೊದಲು ಹೀರುತ್ತವೆ. ಹದವಾದ ಶುಂಠಿ ಮತ್ತು ಏಲಕ್ಕಿಯ ಸುವಾಸನೆಯೊಂದಿಗೆ ಹಾಲಿನ ಪರಿಮಳವೂ ಬೆರೆತಿರುತ್ತದೆ. ಇದಕ್ಕೆ ಚಹಾದ ಕಮಟು ಬರುವಂತೆ ಮಾಡಲು ಬರೋಬ್ಬರಿ 45 ನಿಮಿಷ ಚಹಾದ ಪುಡಿಯನ್ನು ಕುದಿಸಲಾಗುತ್ತದೆ. ನೀರಿನಲ್ಲಿ ಚಹಾದ ಪುಡಿ ಹಾಕಿದಾಗಲೇ ಶುಂಠಿ, ಏಲಕ್ಕಿ ಜೊತೆಗೆ ಚೂರು ಚಕ್ಕೆಯನ್ನು ಬೆರೆಸುತ್ತಿದ್ದರಂತೆ. ಇದೀಗ ಕೇವಲ ಶುಂಠಿ ಮತ್ತು ಏಲಕ್ಕಿ ಬಳಸಲಾಗುತ್ತದೆ. ಚಹಾದ ಪುಡಿಯಿದ್ದರೆ ವಿಶೇಷ ಸ್ವಾದ ಮತ್ತು ಬಣ್ಣ ಬಾರದು. ನೀಲಗಿರಿಯ ವಿಶೇಷ ಚಹಾ ಪುಡಿಯೇ ಆಗಬೇಕು. ಕೆಟಲ್‌ನಲ್ಲಿ ನಲ್ವತ್ತೈದು ನಿಮಿಷ ಕುದ್ದ ಈ ಡಿಕಾಕ್ಷನ್‌ಗೆ ಹಾಲು ಬೆರೆಸುತ್ತಾರೆ...

'ಅಯ್ಯೋ, ಇಷ್ಟು ಸರಳವಾ' ಅನ್ನಬೇಡಿ.. ಚಹಾ ಡಿಕಾಕ್ಷನ್ ಕುದಿಸಿದಂತೆಯೇ ಹಾಲನ್ನೂ ಕುದಿಸಲಾಗುತ್ತದೆ. ಹತ್ತು ಲೀಟರ್ ಹಾಲನ್ನು ಕಾಯಿಸಿ.. ಕಾಯಿಸಿ, ಕೆನೆಪದರವನ್ನು ತೆಗೆಯುತ್ತ, ತಳ ಹತ್ತದಂತೆ ಒಲೆಯ ಮೇಲೆ ವರ್ತುಲಾಕಾರದಲ್ಲಿ ಕೈ ಆಡಿಸುತ್ತಲೇ ಇರುತ್ತಾರೆ. ಹಾಲುಕಾಯಿಸಲೆಂದೇ ಒಂದಾಳು ಬೇಕು. ಹೀಗೆ ಕಾದ ಹಾಲು ಏಳು ಲೀಟರ್‌ಗೆ ಇಳಿದಾಗ, ಅದು ಚಹಾಕ್ಕೆ ಸಿದ್ಧವಾದಂತೆ.

ಚಹಾದ ಘಮವನ್ನು ಹೀರುತ್ತಲೇ ಅದನ್ನು ಕುಡಿಯುವ ಮಜಾ ಅದ್ಭುತ!

ಹಾಲಿನ ಕಥೆ–ವ್ಯಥೆ

ಎಮ್ಮೆ ಹಾಲನ್ನೆಲ್ಲ ಗೌಳಿಗರು ಡೇರಿಗೆ ನೀಡುತ್ತಾರೆ. ಹಸುವಿನ ಹಾಲಿನ ಚಹಾ ಮಾಡಲಾಗದು. ಅದಕ್ಕೆ ಕೆನೆ ಬಾರದು. ನೀರು ಸೇರಿಸಿದರೆ ಹತ್ತು ಲೀಟರ್ ಹಾಲು ಕಾಯಿಸಿದರೆ ಸರಿಯಾಗಿ ಐದು ಲೀಟರ್ ಹಾಲು ಸಹ ಬಾರದು. ಪಾಕೀಟು ಹಾಲಿನ ಚಹಾ ಮಾಡಲು ಹೋದರೆ ಅದರಲ್ಲಿ ಸ್ವಾದ ಬರುವುದಿಲ್ಲ. ಕೆನೆ ತೆಗೆದಿರುವ ಹಾಲಿನಲ್ಲಿ ಇರಾನಿ ಚಹಾಗೆ ಅಗತ್ಯ ಇರುವ ಮಂದ ಸವಿ ಬರುವುದೇ ಇಲ್ಲ ಎನ್ನುತ್ತ ಹಾಲಿನ ಕಥೆಯನ್ನು ಮೊಹ್ಮದ್ ಅಲೀಮ್ ಬಿಚ್ಚಿಟ್ಟರು. ಸೌದೆ ಒಲೆ, ಗಟ್ಟಿ ಹಾಲು, ಹಾಲಿನ ಬೆಲೆ, ಶ್ರಮಕ್ಕೆ ತಕ್ಕ ಬೆಲೆ ಸಿಗದೇ ಇರುವುದರಿಂದ ಚಹಾದ ಕಪ್ಪುಗಳೀಗ ತಮ್ಮ ಖದರು ಕಳೆದುಕೊಂಡಿವೆ. ಜನರ ಜೇಬಿಗೆ ಭಾರವಾಗದಂತೆ ಕೊಡಬೇಕೆಂದರೆ ಕಪ್ಪು ಬಸಿಯ ಗಾತ್ರ ಚಿಕ್ಕದಾಗಿದೆ. ಕುಡಿದದ್ದು ಸಾಕೆನಿಸಲಿ ಎಂದು ಸಕ್ಕರೆಯ ಪ್ರಮಾಣವೂ ಹೆಚ್ಚಾಗಿದೆ. ಸದ್ಯ ಬದಲಾಗದೇ ಇರುವುದೆಂದರೆ 45 ನಿಮಿಷಗಳಷ್ಟು ಡಿಕಾಕ್ಷನ್ ಕುದಿಸುವುದು ಮತ್ತು ಹದವಾಗಿ ಹಾಲು ಕಾಯಿಸುವುದು.

ಆ ಜಮಾನಾದ ಮಾತು ಬಂತಲ್ಲ.. ಅದಕ್ಕೂ ಕಾರಣ ಇದೆ. ನಿಜಾಮ್ ಪ್ರದೇಶದಲ್ಲಿ ಚಹಾ ಕುಡಿಸ್ತೀರಾ ಅಂತಲೇ ಕೇಳ್ತಾರೆ. ಆತಿಥ್ಯವಹಿಸಿಕೊಳ್ಳಲು ವಿನೀತರಾಗಿ ಕೇಳಿಕೊಳ್ಳುವ ಪರಿ ಅದು.

10ನೇ ಪುಟಕ್ಕೆ...

ಪ್ರತಿಕ್ರಿಯೆಗಾಗಿ:
bhanuvara@prajavani.co.in

ನೆಲದ ನಂಟು ಒಣಮೀನು ಗಂಟು

ಗಣಪತಿ ಹೆಗಡೆ

ಕಾರವಾರದ ಭಾನುವಾರ ಸಂತೆಯಲ್ಲಿ ಒಣಮೀನು ಖರೀದಿಯ ಭರಾಟೆ.
ಚಿತ್ರಗಳು: ಗಣಪತಿ ಹೆಗಡೆ/ದಿಲೀಪ್ ರೇವಣಕರ್

ಮೇ ತಿಂಗಳು ಬಂತೆಂದರೆ ಸಾಕು, ಕಾರವಾರದ ಬಹುತೇಕ ಮನೆಗಳಲ್ಲಿ ಸಂಭ್ರಮದ ವಾತಾವರಣ. ವರ್ಷದ ಬಹುತೇಕ ದಿನಗಳಲ್ಲಿ ಖಾಲಿ ಹೊಡೆಯುವ ಇಲ್ಲಿನ ಮನೆಗಳಲ್ಲಿ ಜನರ ಓಡಾಟ, ಮಕ್ಕಳ ಕೇಕೆ ಕಾಣಸಿಗುತ್ತದೆ. ಅಷ್ಟೇ ಅಲ್ಲ, ವರ್ಷಪೂರ್ತಿ ಮಕ್ಕಳನ್ನು ಕಾಣದ ವಯೋವೃದ್ಧ ತಂದೆ–ತಾಯಿಯ ಮುಖದಲ್ಲಿ ಮಂದಹಾಸ ಚಿಮ್ಮುತ್ತಿರುತ್ತದೆ.

ಇದಕ್ಕೆ ಕಾರಣ ಹಬ್ಬ ಹರಿದಿನ ಅಲ್ಲ. ವಿಶೇಷ ಆಚರಣೆಯಂತೂ ಅಲ್ಲವೇ ಅಲ್ಲ. ಜೀವನ ಕಟ್ಟಿಕೊಳ್ಳುವ ಸಲುವಾಗಿ ಊರು ತೊರೆದು ಮಹಾನಗರಗಳಲ್ಲಿ ನೆಲೆನಿಂತವರನ್ನು ಹೀಗೆ ಬರಸೆಳೆದು ಸಡಗರದ ವಾತಾವರಣ ಸೃಷ್ಟಿಸುವುದು ಒಣಮೀನು!

ಕಾರವಾರದ ಜನರಿಗೂ ಒಣಮೀನಿನ ಘಮಲಿಗೂ ಬಿಡಿಸಲಾರದ ನಂಟು. ಕರಾವಳಿ ಭಾಗದ ಜನರ ಜನಪ್ರಿಯ ಖಾದ್ಯಗಳಲ್ಲಿ ಒಂದೆನಿಸಿದ ಒಣಮೀನು ಇಲ್ಲಿನ ಜನರ ಭಾವ–ಬಂಧ ಗಟ್ಟಿಗೊಳಿಸುವುದನ್ನು ಕಾಣಬಹುದು. ದೇಶದ ಯಾವ ಭಾಗದಲ್ಲೇ ಇದ್ದರೂ ಕಾರವಾರಿಗರು ಬೇಸಿಗೆ ರಜೆಯಲ್ಲಿ ಊರಿಗೆ ಮರಳುತ್ತಾರೆ. ಹೀಗೆ ಬಂದಾಗ ಕುಟುಂಬದ ಒಟ್ಟಿಗೆ ವಾರಗಟ್ಟಲೆ, ಕೆಲವರು ತಿಂಗಳುಗಟ್ಟಲೆ ಕಾಲ ಕಳೆಯುತ್ತಾರೆ. ಹೊರ ರಾಜ್ಯದಲ್ಲಿ, ರಾಜ್ಯದ ಮಹಾನಗರಗಳಲ್ಲಿ ಹುಟ್ಟಿ ಬೆಳೆದ ತಮ್ಮ ಕುಡಿಗಳಿಗೆ ಇಲ್ಲಿನ ಆಚಾರ–ವಿಚಾರ, ಸಂಸ್ಕೃತಿಯನ್ನು ಪರಿಚಯಿಸಿಕೊಡಲು ಅವರಿಗೆ ಇದು ಸಕಾಲವೂ ಹೌದು.

'ಒಣಮೀನು ನಮ್ಮ ಪಾಲಿಗೆ ಕೇವಲ ಆಹಾರದ ವಸ್ತುವಲ್ಲ, ಅದು ನಮ್ಮೊಂದಿಗೆ ತವರು ನೆಲದ ನಂಟು ಬೆಸೆಯುವ ಪದಾರ್ಥ'–ಹೀಗೆ ಮಾತಿಗೆ ಇಳಿದದ್ದು ಮಹಾರಾಷ್ಟ್ರದ ಪುಣೆಯಲ್ಲಿ ನೆಲೆಸಿರುವ ಸಾಯಿನಾಥ ಫಳ ದೇಸಾಯಿ. ಸಂತೆಯಲ್ಲಿ ಕೆ.ಜಿ.ಗಟ್ಟಲೆ ಒಣಮೀನು ಖರೀದಿಸುತ್ತಿದ್ದ ಅವರೊಟ್ಟಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದರು. ಅವರಿಗೆ ಒಣಮೀನಿನ ಕುರಿತು ವಿವರಿಸುವ ಜತೆ ಜತೆಗೆ ಕಾರವಾರದ ಸಾಂಪ್ರದಾಯಿಕ ಆಚರಣೆಗಳಾದ ಬಂಡಿಹಬ್ಬ, ಮಾಘ ಹುಣ್ಣಿಮೆ ಕುರಿತು ತಿಳಿಸುತ್ತಿದ್ದರು.

> ಕಾರವಾರದಲ್ಲಿ ಪ್ರತಿ ಭಾನುವಾರ ನಡೆಯುವ ಸಂತೆಗೆ ಬೇರೆಯೇ ಖದರ್. ಆದರೆ ಮೇ ತಿಂಗಳ ಕೊನೆಯ ಎರಡು ಭಾನುವಾರದ ಸಂತೆ ಮಾತ್ರ ಭಾವನಾತ್ಮಕ ನಂಟನ್ನು ಬೆಸೆಯುವ ವೇದಿಕೆಯಾಗಿ ರೂಪಾಂತರಗೊಳ್ಳುತ್ತದೆ.

ಇದೇ ಮಾರುಕಟ್ಟೆಯ ಇನ್ನೊಂದು ಬದಿಯಲ್ಲಿ ಗೋವಾದ ಮಾಪುಸಾದಿಂದ ಬಂದಿದ್ದ 14 ಜನರ ತಂಡವೊಂದು ಚೀಲಗಟ್ಟಲೆ ಒಣಮೀನು ಖರೀದಿಯಲ್ಲಿ ತೊಡಗಿತ್ತು. 'ಹ್ಯಾ ಪಟ್ಟಿ ತಾಜಾ ಮಾಶ್ಳಿ ಜಾಸ್ತಿ ಮೆಳ್‌ನಾ ತಶಾಕಿ ಸುಕೇಲಿ ಮಾಶ್ಳಿ ಖಾವ್‌ಚೆ' (ಈ ಬಾರಿ ತಾಜಾ ಹಸಿ ಮೀನಂತೂ ನಮಗೆ ಸಿಕ್ಕಿಲ್ಲ, ಒಣಮೀನನ್ನಾದರೂ ತಿನ್ನೋಣ) ಎಂದು ಅವರು ಕೊಂಕಣಿ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಅವರಲ್ಲಿ ಬಹುತೇಕ ಮಂದಿ ಕಾರವಾರ ಮೂಲದವರು.

ಮೇ ತಿಂಗಳ ಕೊನೆಯ ಎರಡು ಭಾನುವಾರ ಕಾರವಾರದ ಒಣಮೀನು ಮಾರುಕಟ್ಟೆ ಭಾವನಾತ್ಮಕ ಸನ್ನಿವೇಶಕ್ಕೆ ಸಾಕ್ಷಿಯಾಗುತ್ತದೆ. ವರ್ಷಗಟ್ಟಲೆ ತವರು ನೆಲದಿಂದ ದೂರ ಇರುವ ಕುಟುಂಬಗಳ ಸದಸ್ಯರು ಒಟ್ಟಾಗಿ ಸೇರಲು ಈ ಮಾರುಕಟ್ಟೆ ವೇದಿಕೆ ಆಗುತ್ತದೆ. ವೃದ್ಧರಿಂದ ಹಿಡಿದು ಪುಟಾಣಿ ಮಕ್ಕಳವರೆಗೆ ಒಣಮೀನು ಮಾರುಕಟ್ಟೆಗೆ ಒಟ್ಟಾಗಿ ಬಂದು ಖರೀದಿಯಲ್ಲಿ ತೊಡಗುತ್ತಾರೆ.

'ಕಾರವಾರದ ನೆನಪು ತಂದುಕೊಡುವಲ್ಲಿ ಒಣಮೀನಿಗೆ ಅಗ್ರಸ್ಥಾನವಿದೆ. ದೇಶದ ಯಾವ ಭಾಗದಲ್ಲಿ ನೆಲೆಸಿದ್ದರೂ ನಮ್ಮೂರಿನಲ್ಲಿ ಸಿದ್ಧವಾಗುವ ಒಣಮೀನಿನ ಖಾದ್ಯ ಬೇರೆಲ್ಲೂ ಸಿಗಲಾರದು. ಮಳೆಗಾಲಕ್ಕೆ ದಾಸ್ತಾನು ಮಾಡಿಡಬಹುದಾದ ಒಣಮೀನನ್ನು ಖರೀದಿಸುವ ನೆಪಕ್ಕಾದರೂ ವರ್ಷಕ್ಕೊಮ್ಮೆ ಊರಿಗೆ ಬರುವ ಪರಿಪಾಟ ಬೆಳೆಸಿಕೊಂಡಿದ್ದೇವೆ. ನಮ್ಮ ಮಕ್ಕಳಿಗೂ ಊರಿನ ಪರಿಚಯ, ಬಂಧುಗಳೊಂದಿಗೆ ಒಡನಾಡಲು ಇದು ಸೂಕ್ತ ಸಮಯ' ಎಂದು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ನೆಲೆಸಿದ, ಸುಂಕೇರಿ ಮೂಲದ ರಜತ ಅಣ್ವೇಕರ ಹೇಳುತ್ತಾರೆ.

ಕರಾವಳಿ ಭಾಗದ ಜನರ ಪಾಲಿಗೆ ಅವಶ್ಯ ಖಾದ್ಯವಾಗಿರುವ ಮೀನು ಮಳೆಗಾಲದಲ್ಲಿ ಸಿಗುವುದು ವಿರಳ. ಜೂನ್, ಜುಲೈ ತಿಂಗಳಿನಲ್ಲಿ ಯಾಂತ್ರೀಕೃತ ಮೀನುಗಾರಿಕೆ ನಿಷೇಧವಿರುವ ಕಾರಣ ಈ ಅವಧಿಯಲ್ಲಿ ಒಣಮೀನು ಸಂಗ್ರಹಿಸಿಟ್ಟು ಸೇವಿಸುವುದು ವಾಡಿಕೆ.

9ನೇ ಪುಟಕ್ಕೆ...

ಒಣಮೀನು ಸಿದ್ಧಪಡಿಸುವುದು ಹೀಗೆ

ಜನವರಿ ತಿಂಗಳಿನಿಂದಲೇ ಒಣಮೀನು ತಯಾರಿ ಚುರುಕುಗೊಳ್ಳುತ್ತದೆ. ದೋಣಿಗಳಿಗೆ ಹೆಚ್ಚು ಮೀನು ಸಿಕ್ಕಾಗ, ಸಣ್ಣಗಾತ್ರದ ಮೀನುಗಳು ಬಲೆಗೆ ಬಿದ್ದಾಗ ಅವುಗಳನ್ನು ಮಾರುವ ಬದಲು ಒಣಮೀನು ಸಿದ್ಧಪಡಿಸಲು ಖರೀದಿಸಲಾಗುತ್ತದೆ. ಹಸಿಮೀನಿಗೆ ಸಾಣೆಕಟ್ಟಾದ ಹರಳುಉಪ್ಪು ಸವರಿ ಒಂದಿಡೀ ದಿನ ನೆನೆಸಿಡಲಾಗುತ್ತದೆ. ಬಳಿಕ ಸಮುದ್ರದ ನೀರಿನಲ್ಲಿ ತೊಳೆದು ವಾರಗಟ್ಟಲೆ ಒಣಗಿಸಲಾಗುತ್ತದೆ. ಚೆನ್ನಾಗಿ ಒಣಗಿದ ಮೀನನ್ನು ಗಾಳಿ ಆಡದ ಪೆಟ್ಟಿಗೆ ಅಥವಾ ಬುಟ್ಟಿಯಲ್ಲಿ ಮುಚ್ಚಿಟ್ಟರೆ ಐದಾರು ತಿಂಗಳವರೆಗೆ ಕೆಡುವುದಿಲ್ಲ. ಇಷ್ಟೊಂದು ವ್ಯವಸ್ಥಿತ ರೀತಿಯಲ್ಲಿ ಒಣಮೀನು ಸಿದ್ಧಪಡಿಸುವುದು ಕಾರವಾರ, ಮಾಜಾಳಿ, ಬೇಲೆಕೇರಿ ಭಾಗದಲ್ಲಿ ಹೆಚ್ಚು. ಇದೇ ಕಾರಣಕ್ಕೆ ಇಲ್ಲಿನ ಒಣಮೀನಿಗೆ ಬೇಡಿಕೆಯೂ ಹೆಚ್ಚು.

ಸೋರಾ ಮೀನು ವ್ಯಾಪಾರ ನಿರತ ಮಹಿಳೆ

ಅಂಜೂರ ಬೆಳೆದವರು ಅಂಜಬೇಕಿಲ್ಲ

ಹರಿಶಂಕರ್ ಆರ್.

ಅಂಜೂರದ ಹಣ್ಣುಗಳನ್ನು ಹೊರ ರಾಜ್ಯದ ಮಾರುಕಟ್ಟೆಗೆ ರವಾನಿಸಲು ಪ್ಯಾಕ್ ಮಾಡುತ್ತಿರುವುದು
ಚಿತ್ರಗಳು: ಮುರುಳಿಕಾಂತರಾವ್

ಮೆಣಸಿನಕಾಯಿ, ಭತ್ತ, ಜೋಳ ಬೆಳೆಯುತ್ತಿದ್ದ ಬಳ್ಳಾರಿಯಲ್ಲಿ ಈಗ್ಗೆ 50 ವರ್ಷಗಳ ಹಿಂದೆ, ಅಂಜೂರ ಬೆಳೆಯಲು ಹೊರಟಾಗ ಜನರೆಲ್ಲ ಅನುಮಾನ, ವ್ಯಂಗ್ಯದ ಕಣ್ಣುಗಳಿಂದ ನೋಡಿದ್ದರು. 'ಇದೆಂಥಾ ಬೆಳೆಯೋ, ಈ ಬಿಸಿಲಿಗೆ ಬಾಳುತ್ತದೋ, ಮಾರುಕಟ್ಟೆ ಹೇಗೋ' ಎಂಬ ಪ್ರಶ್ನೆಗಳು ಹಲವರ ಮನದಲ್ಲಿ ತೋಯ್ದಾಡಿದ್ದವು. ಆದರೆ, ಇಲ್ಲಿನ ಕರಿಮಣ್ಣಿಗೆ ಒಗ್ಗಿಕೊಂಡ ಅಂಜೂರ ಸೊಂಪಾಗಿ ಬೆಳೆಯಿತು. ಭರಪೂರ ಫಸಲನ್ನೂ ಕೊಟ್ಟಿತು.

ಒಂದು ಕಾಲಕ್ಕೆ ಜನರು ಶಂಕೆಯಿಂದ ನೋಡಿದ್ದ ಬೆಳೆಯೊಂದು ನೋಡ ನೋಡುತ್ತಲೇ ಬಳ್ಳಾರಿಯ ಹೊಲಗಳನ್ನು ಆವರಿಸತೊಡಗಿತು. ಚೆನ್ನೈ, ಹೈದರಾಬಾದ್, ಬೆಂಗಳೂರು, ಕೋಲ್ಕತ್ತವರೆಗೆ ಮಾರಾಟ ಆಗತೊಡಗಿತು. 2000 ಹೆಕ್ಟೇರ್ ಪ್ರದೇಶವನ್ನು ವ್ಯಾಪಿಸಿಕೊಂಡ ಅಂಜೂರ ಈಗ ಬಳ್ಳಾರಿ ಜಿಲ್ಲೆಯಲ್ಲಿ ಲಾಭದಾಯಕ ಬೆಳೆ. ಹಲವು ಕುಟುಂಬಗಳಿಗೆ ಆಸರೆ. ಇಷ್ಟೇ ಅಲ್ಲ, ಅಂಜೂರ ಈಗ ಉದ್ಯಮದ ಸಾಧ್ಯತೆಗಳನ್ನು ಜನರ ಮುಂದೆ ಹರಿಡಿದೆ.

ಅತ್ಯಂತ ಮೃದುವಾದ ಸ್ವಾದಿಷ್ಟವಾದ ಅಂಜೂರ ಪೌಷ್ಟಿಕಾಂಶಗಳ ಆಗರ. ಮಧ್ಯಪ್ರಾಚ್ಯ ಮತ್ತು ಪಶ್ಚಿಮ ಏಷ್ಯಾದ ನಾಗರಿಕತೆಗಳೊಂದಿಗೆ ಬೆಸೆದುಕೊಂಡಿರುವ, ಅವರ ಆಹಾರ ಪದ್ಧತಿಯಲ್ಲಿ ಪ್ರಾಧಾನ್ಯತೆ ಪಡೆದಿರುವ ಅಂಜೂರ ಜಗತ್ತಿನ ಅತ್ಯಂತ ಪುರಾತನ ಹಣ್ಣಿನ ಬೆಳೆಗಳಲ್ಲಿ ಒಂದು.

ಮಧ್ಯಪ್ರಾಚ್ಯದಲ್ಲಿ 'ಬಡವರ ಹಣ್ಣು' ಎಂಬ ಖ್ಯಾತಿ ಗಿಟ್ಟಿಸಿಕೊಂಡಿದ್ದ ಅಂಜೂರ, ನಾಗರಿಕತೆಗಳು ಬೆಳೆದಂತೆ, ಜಾಗತಿಕ ವ್ಯಾಪಾರ ಸಂಪರ್ಕಗಳು ವಿಸ್ತಾರಗೊಂಡಂತೆ ಯಾವುದೋ ಕಾಲಘಟ್ಟದಲ್ಲಿ ಭಾರತಕ್ಕೂ ಕಾಲಿಟ್ಟಿತು. ಅಂಜೂರಕ್ಕೆ ಕಡಿಮೆ ತೇವಾಂಶವಿರುವ ಫಲವತ್ತಾಗಿರುವ ಕಡಿಮೆ ಮಳೆಯಾಗುವ ಒಣಭೂಮಿ ಹೇಳಿಮಾಡಿಸಿದ್ದು. ಹೀಗಾಗಿ ಭಾರತದ ಕೆಲವೇ ಕೆಲವು ಪ್ರದೇಶಗಳಿಗೆ ಅಂಜೂರ ಒಗ್ಗಿಕೊಂಡಿದೆ.

ಅಂಜೂರವನ್ನು ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಉತ್ತರಪ್ರದೇಶ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಬೆಳೆಯಲಾಗುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಬಳ್ಳಾರಿ, ಚಿತ್ರದುರ್ಗ, ರಾಯಚೂರು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಅಂಜೂರದ ತೋಟಗಳಿವೆ, ಆದರೆ ಬಳ್ಳಾರಿಯೇ ಅಂಜೂರದ ತವರೂರು.

ಅತ್ತ ಗಿಡವೂ ಅಲ್ಲದ, ಇತ್ತ ಮರವಾಗಿಯೂ ಬೆಳೆಯದ ಪೊದೆಯಂಥ ರಚನೆಯುಳ್ಳ ಅಂಜೂರದ ಬೆಳೆಯನ್ನು ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲ್ಲೂಕಿನ ಲಕ್ಷ್ಮೀಪುರ, ಕಲ್ಲುಕಂಬ, ಸೋಮಲಾಪುರ, ಮುಷ್ಟಕಟ್ಟೆ, ಬಾದನಹಟ್ಟಿ, ಸಿರುಗುಪ್ಪ ತಾಲ್ಲೂಕಿನ ಕೊಂಚಿಗೇರಿ, ಸಿರಿಗೇರಿ, ದಾಸಾಪುರಗಳಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತದೆ.

'ಕಟಾವು ಮಾಡಿದ ಒಂದು ಒಂದೂವರೆ ದಿನದಲ್ಲೇ ಅಂಜೂರ ಕೊಳೆತುಬಿಡುತ್ತದೆ. ಹೀಗಾಗಿ ಅಂದೇ ಕಟಾವು ಮಾಡಿ, ಅಂದೇ ಮಾರಾಟ ಮಾಡಬೇಕು' ಎನ್ನುತ್ತಾರೆ ಕಲ್ಲುಕಂಬ ಗ್ರಾಮದ ಯುವ ರೈತ ವಿಠಲ್.

'ಅಂಜೂರದ ಸಸಿಯನ್ನು ಒಮ್ಮೆ ನಾಟಿ ಮಾಡಿದರೆ ಅದರಿಂದ ನಿರಂತರವಾಗಿ ಫಸಲು ಪಡೆಯಬಹುದು. ಕೋವಿಡ್‌ಗೂ ಮೊದಲು ಬಳ್ಳಾರಿ ಜಿಲ್ಲೆಯಲ್ಲಿ 2000 ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಅಂಜೂರವನ್ನು ಬೆಳೆಯಲಾಗುತ್ತಿತ್ತು. ಕೆ.ಜಿಗೆ ₹100ರಿಂದ ₹150ರವರೆಗೂ ಮಾರಾಟ ಮಾಡಲಾಗಿತ್ತು. ಕೋವಿಡ್ ಸಂದರ್ಭದಲ್ಲಿ ಮಾರುಕಟ್ಟೆ ಸಿಗದೇ ಅಂಜೂರದ ಹಣ್ಣು ಗಿಡದಲ್ಲೇ ಮಾಗಿ, ಉದುರಿ ಕೊಳೆಯುತ್ತಿತ್ತು. ನಾವು ಇನ್ನಿಲ್ಲದ ಸಂಕಷ್ಟಕ್ಕೆ ಗುರಿಯಾದೆವು. ಅಕ್ಕಪಕ್ಕದ ಹೊಲದವರು ಗಿಡಗಳನ್ನು ಕಿತ್ತೆಸೆದರು. ನಾವು ಹಾಗೇ ಉಳಿಸಿಕೊಂಡೆವು. ಸದ್ಯ ಮಾರುಕಟ್ಟೆ ಚೆನ್ನಾಗಿದೆ. ಅಂಜೂರ ಕೈ ಹಿಡಿದಿದೆ' ಎಂದರು ಕುರುಗೋಡಿನ ರೈತ ರಮೇಶ್.

ಕೋವಿಡ್ ನಂತರದ ಕಾಲಘಟ್ಟದಲ್ಲಿ ಅಂಜೂರದ ಬೆಳೆ ಬಳ್ಳಾರಿ ಜಿಲ್ಲೆಯಲ್ಲಿ 500 ಹೆಕ್ಟೇರ್‌ಗಳಿಗಿಂತಲೂ ಕಡಿಮೆ ಪ್ರದೇಶಕ್ಕೆ ಕುಸಿದಿತ್ತು. ಈಗ ಅದನ್ನು ಬೆಳೆಯುವವರ ಪ್ರಮಾಣ ಮತ್ತೆ ಏರುಮುಖವಾಗುತ್ತಾಸಾಗಿದೆ. ಸದ್ಯ 500ರಿಂದ 750 ಹೆಕ್ಟೇರ್ ಪ್ರದೇಶವನ್ನು ಅಂಜೂರ ಆವರಿಸಿಕೊಂಡಿದೆ.

10ನೇ ಪುಟಕ್ಕೆ...

ಮಲಬದ್ಧತೆಗೆ ರಾಮಬಾಣ

'ಫಿಕಸ್ ಕ್ಯಾರಿಕಾ' ಎಂಬ ವೈಜ್ಞಾನಿಕ ಹೆಸರಿನ ಅಂಜೂರ, ಹಿಪ್ಪುನೇರಳೆ ಜಾತಿಗೆ ಸೇರಿದೆ. ಕ್ಯಾಲ್ಸಿಯಂ, ಪೊಟ್ಯಾಸಿಯಂ, ರಂಜಕ ಮತ್ತು ಕಬ್ಬಿಣಾಂಶವನ್ನು ಹೆಚ್ಚಾಗಿ ಹೊಂದಿದೆ. ಹೀಗಾಗಿ ಇದು ಅತ್ಯಂತ ಪೌಷ್ಟಿಕ ಆಹಾರ. ಜತೆಗೆ ಇದರಲ್ಲಿ ನಾರಿನಾಂಶವೂ ಇರುವುದರಿಂದ ಮಲಬದ್ಧತೆಯಂತಹ ಸಮಸ್ಯೆಗಳಿಗೆ ರಾಮಬಾಣ ಎನ್ನುತ್ತಾರೆ ವೈದ್ಯರು.

ಅಂಜೂರ

ವಿಜ್ಞಾನ ಮೊಗಸಾಲೆ ಕಲಿಕೆಯ ಶಾಲೆ



ವಿಜ್ಞಾನ ಮಾದರಿ ವೀಕ್ಷಿಸುತ್ತಿರುವ ಯುವತಿಯರು

ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್.

ಅಬ್ದುಲ್ ರಹಿಮಾನ್

ಬೆಂಗಳೂರಿನಲ್ಲಿ ಹೆಚ್ಚು ಹಸಿರಿನಿಂದ ಕೂಡಿರುವ ಸ್ಥಳಗಳಲ್ಲಿ ಒಂದಾದ ಕಬ್ಬನ್ ಪಾರ್ಕ್ ಸುತ್ತಮುತ್ತಲ ಪ್ರದೇಶದಲ್ಲಿ ಮಾಲಿನ್ಯ ಕಡಿಮೆ ಇರಬಹುದು ಎನ್ನುವುದು ನಮ್ಮ ಊಹೆ. ಆದರೆ, ಇದು ನಿಜವಲ್ಲ ಎಂದು ತಿಳಿದರೆ ನಂಬಲು ಕಷ್ಟವೇ. ಎಲೆಕ್ಟ್ರಿಕ್ ವಾಹನಗಳಿಂದ ಪರಿಸರ ಹಾನಿ ಕಡಿಮೆ ಎನ್ನುವ ಗ್ರಹಿಕೆಯೂ ತಪ್ಪು ಎಂದು ಹೇಳಿದರೆ ಹತ್ತಾರು ಪ್ರಶ್ನೆಗಳು ಸುರುಳಿ ಸುತ್ತಬಹುದು. ಫೈಲುಗಳನ್ನು ಶೇಖರಿಸಿಟ್ಟುಕೊಳ್ಳಲು ಮೊಬೈಲ್, ಕಂಪ್ಯೂಟರ್‌ಗಳಲ್ಲಿ ಬಳಸುವ 'ಕ್ಲೌಡ್'ಗೂ, ಆಗಸದ ಮೋಡಕ್ಕೂ ಹತ್ತಿರದ ಸಂಬಂಧವಿದೆ! ಡಿಜಿಟಲ್ ಕರೆನ್ಸಿಗಳ 'ಮೈನಿಂಗ್'ಗೂ, ಕಲ್ಲಿದ್ದಲು ಗಣಿಗಾರಿಕೆಗೂ ನಂಟಿದೆ ಎಂದರೆ ಮನಸ್ಸು ತರ್ಕಕ್ಕೆ ಇಳಿಯಬಹುದು. ರೇಷ್ಮೆ ನೂಲುಗಳ ಹೊಳಪು ಹಿಗ್ಗಬೇಕಾದರೆ ಹಿಪ್ಪುನೇರಳೆಗೆ ಬೆರಸಬೇಕಾದುದು ಏನು? ಪರಿಸರದಲ್ಲಿ ನಡೆಯುವ ಬದಲಾವಣೆಗೆ ಮನುಷ್ಯನ ಹಾಗೆ ಮರಗಳೂ ಖುಷಿಯಾಗುವ, ವ್ಯಥೆ ಪಡುವ ಬಗೆಯನ್ನು ದೃಶ್ಯರೂಪದಲ್ಲಿ ಮುಂದಿಟ್ಟರೆ ಹೇಗಿರಬಹುದು?.. ಹೀಗೆ ನಮ್ಮ ಹಲವಾರು ಪ್ರಶ್ನೆಗಳು, ಕುತೂಹಲಗಳಿಗೆ ಉತ್ತರ ನೀಡುತ್ತದೆ 'ಸೈನ್ಸ್ ಗ್ಯಾಲರಿ ಬೆಂಗಳೂರು'.

ಬೆಂಗಳೂರಿನ ಬಳ್ಳಾರಿ ರಸ್ತೆಯ ಸಿಬಿಐ ಬಸ್ ನಿಲ್ದಾಣದ ಬಳಿ ಇರುವ ಈ 'ವಿಜ್ಞಾನ ಮೊಗಸಾಲೆ'ಯು ನಮ್ಮ ಕುತೂಹಲವನ್ನು ತಣಿಸುವ ತಾಣ. ವಿಜ್ಞಾನವನ್ನು ಜನರ ಜೀವನ, ಕಲೆ ಹಾಗೂ ಸಂಸ್ಕೃತಿಯೊಂದಿಗೆ ಬೆಸೆಯುವ ಪ್ರಯತ್ನ ಮಾಡುತ್ತಿದೆ. ಜಾಗತಿಕ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಜನಸಾಮಾನ್ಯರಿಗೂ ವಿಜ್ಞಾನವನ್ನು ದಾಟಿಸುವ, ವಿಜ್ಞಾನದ ಬಗ್ಗೆ ಕುತೂಹಲ ಮೂಡಿಸುವ ಗುರಿ ಹೊಂದಿದೆ. ಅಟ್ಲಾಂಟಾ, ಬರ್ಲಿನ್, ಡಬ್ಲಿನ್, ಲಂಡನ್, ಮೆಲ್ಬೋರ್ನ್, ಮಾಂಟೆರಿ ಹಾಗೂ ರೊಟ್ಟರ್‌ಡ್ಯಾಮ್‌ನಲ್ಲಿ ಶಾಖೆಗಳಿವೆ. ಬೆಂಗಳೂರಿನಲ್ಲಿ ಇರುವುದು ಏಷ್ಯಾದ ಏಕೈಕ ಹಾಗೂ ಅತಿ ದೊಡ್ಡ ಗ್ಯಾಲರಿ. ಬೆಂಗಳೂರು ಮಾಹಿತಿ ತಂತ್ರಜ್ಞಾನ, ಮೂಲ ಸೌಕರ್ಯದಲ್ಲಿ ಮಂಚೂಣಿಯಲ್ಲಿರುವುದರಿಂದ ಇಲ್ಲಿ ಗ್ಯಾಲರಿ ಆರಂಭಿಸಲಾಗಿದೆ. ಒಂದು ವಿಷಯವನ್ನು 'ಥೀಮ್' ಆಗಿ ಇಟ್ಟುಕೊಂಡು ಪ್ರದರ್ಶನ ಏರ್ಪಡಿಸಲಾಗುತ್ತದೆ. ಸದ್ಯ ಇಂಗಾಲವನ್ನು (ಕಾರ್ಬನ್) ಥೀಮ್ ಆಗಿರಿಸಿಕೊಂಡು 36 ಪ್ರದರ್ಶನಗಳಿವೆ.

'ಈ ಹಿಂದೆ ಬೆಂಗಳೂರಿನಲ್ಲಿ ಸೈನ್ಸ್ ಗ್ಯಾಲರಿ ಇತ್ತಾದರೂ, ಅದಕ್ಕೊಂದು ಶಾಶ್ವತ ನೆಲೆ ಇರಲಿಲ್ಲ. ದೊಮ್ಮಲೂರಿನ ಇಂಟರ್‌ನ್ಯಾಷನಲ್ ಸೆಂಟರ್, ಜೈವಿಕ ವಿಜ್ಞಾನಗಳ ರಾಷ್ಟ್ರೀಯ ಕೇಂದ್ರ ಮುಂತಾದ ಸ್ಥಳಗಳಲ್ಲಿ ಪ್ರದರ್ಶನ ನಡೆಯುತ್ತಿತ್ತು. ಈಗ ವಿಸ್ತಾರವಾದ ಕಟ್ಟಡವಿದ್ದು, ಪ್ರದರ್ಶನವನ್ನು ವಿಸ್ತೃತವಾಗಿ, ಯೋಜನಾಬದ್ಧವಾಗಿ ಆಯೋಜಿಲಾಗುತ್ತದೆ. ಪ್ರಪಂಚದಾದ್ಯಂತ ಹಲವು ವಿಜ್ಞಾನಿಗಳನ್ನು ಒಳಗೊಳ್ಳುವಂತೆ ಮಾಡಿ ಪ್ರತಿಯೊಂದು ಪ್ರದರ್ಶನವನ್ನು ನಡೆಸಲಾಗುತ್ತದೆ. ಉನ್ನತ ಸಮಿತಿ 'ಥೀಮ್' ನಿರ್ಧರಿಸಿ, ಅದರಲ್ಲಿ ಪಾಲ್ಗೊಳ್ಳುವಂತೆ ಜಾಗತಿಕವಾಗಿ ಮುಕ್ತ ಆಹ್ವಾನ ನೀಡುತ್ತೇವೆ. ಬಂದ ಅರ್ಜಿಗಳನ್ನು ಪರಿಶೀಲಿಸಿ ಅಂತಿಮಗೊಳಿಸುತ್ತೇವೆ. ಪ್ರದರ್ಶನದ ಬಗ್ಗೆ ನಿರ್ಧರಿಸಿ ಪ್ರಸ್ತುತಿ ಪಡಿಸಲು ಸುಮಾರು ಒಂದು ವರ್ಷ ಬೇಕು' ಎಂದು ಸೈನ್ಸ್ ಗ್ಯಾಲರಿ ಬೆಂಗಳೂರಿನ ಕಾರ್ಯನಿರ್ವಾಹಕ ನಿರ್ದೇಶಕಿ ಜಾಹ್ನವಿ ಫಾಲ್ಕೆ ಹೇಳುತ್ತಾರೆ.

> **ಕಾರ್ಬನ್ ಅನ್ನು ಹೀಗೂ ಪ್ರದರ್ಶಿಸಬಹುದು ಎಂದು ನೋಡಿ ಚಕಿತನಾಗಿದ್ದೇನೆ. ವಿಜ್ಞಾನದ ವಿದ್ಯಾರ್ಥಿಯಾದ ನನಗೆ ಇದು ವಿಶೇಷ ಎನಿಸಿದೆ. ವಿಜ್ಞಾನವಲ್ಲದ ಬೇರೆ ವಿಭಾಗದ ಸ್ನೇಹಿತನೊಬ್ಬ ಇದರ ಬಗ್ಗೆ ಹೇಳಿದ. ನಾವು ಐದು ಮಂದಿ ಬಂದಿದ್ದೇವೆ**
>
> **ಸುಂದರ್ ಪವನ್,** ವಿದ್ಯಾರ್ಥಿ ರಾಮಯ್ಯ ಕಾಲೇಜು

'ಜನವರಿಯಲ್ಲಿ ಪ್ರಾರಂಭವಾದ ಗ್ಯಾಲರಿ ಈಗ ಯುವಜನರ ಹ್ಯಾಂಗೌಟ್ ತಾಣವಾಗಿ ಮಾರ್ಪಟ್ಟಿದೆ. ಮೊದಲು ಬೆರಳೆಣಿಕೆಯಷ್ಟು ಕುತೂಹಲಿಗರು ಬರುತ್ತಿದ್ದರು. ಈಗ ನಿತ್ಯ ಬರುವವರ ಸಂಖ್ಯೆ ಹೆಚ್ಚಳವಾಗಿದೆ. ವಾರಾಂತ್ಯದಲ್ಲಿ ಜನಸಂದಣಿ ಹೆಚ್ಚಿರುತ್ತದೆ. ಭೇಟಿ ನೀಡುವವರಲ್ಲಿ ಹೆಚ್ಚಿನವರು 18 ರಿಂದ 40 ವಯೋಮಾನದವರು. ವಿಜ್ಞಾನದ ಬಗ್ಗೆ ಅಭಿರುಚಿ ಇಲ್ಲದವರೂ ಬಂದು ಆಸಕ್ತಿಯಿಂದ ವೀಕ್ಷಿಸುತ್ತಾರೆ. ಇಲ್ಲಿನ ಪ್ರಸ್ತುತಿಗಳನ್ನು ಬೆರಗುಗಣ್ಣಿನಿಂದ ನೋಡುತ್ತಾರೆ. ಹಲವು ಪ್ರಶ್ನೆಗಳನ್ನು ಕೇಳಿ ಸಂಶಯ ನಿವಾರಿಸಿಕೊಳ್ಳುತ್ತಾರೆ' ಎನ್ನುತ್ತಾರೆ ಗೈಡ್ ಆಗಿರುವ ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿನಿ ಅನುಷ್ಕಾ ವಿಜಯ್.

ಜುಲೈ 15ರಿಂದ 'ಕ್ವಾಂಟಮ್' ಅನ್ನು ಥೀಮ್ ಆಗಿರಿಸಿಕೊಂಡು ಹೊಸ ಪ್ರದರ್ಶನ ಇರಲಿದೆ. ವೈಜ್ಞಾನಿಕ ವಿಷಯಗಳನ್ನು ಜನರು ವಿಚಾರ ಮಾಡಬೇಕು ಎನ್ನುವ ದೃಷ್ಟಿಯಿಂದ ಪ್ರಸ್ತುತಿಗಳನ್ನು ಸಂಯೋಜಿಸಲಾಗುತ್ತದೆ. ಉದಾಹರಣೆಗೆ, ಹವಾಮಾನ ಬದಲಾವಣೆ ಬಗ್ಗೆ ಪ್ರದರ್ಶನ ಏರ್ಪಡಿಸುವ ಬದಲು, ಅದರ ಬಗೆಗಿನ ಮುಂಜಾಗ್ರತೆ ಹಾಗೂ ಅಪಾಯಗಳನ್ನು ಜನರಿಗೆ ಮನದಟ್ಟು ಮಾಡುವ ಪ್ರದರ್ಶನಗಳು ಆಯೋಜಿಸಲಾಗುತ್ತದೆ. ಅದರ ಬಗ್ಗೆ ಜನರಲ್ಲಿ ಚರ್ಚೆಯನ್ನು ಉತ್ತೇಜಿಸುವುದು, ಅವರಲ್ಲಿ ಅರಿವು ಮೂಡಿಸುವುದು ಇದರ ಧ್ಯೇಯ. ಮುಂದಿನ ದಿನಗಳಲ್ಲಿ ವಿವಿಧ ಕಡೆಗಳಲ್ಲಿ ಏಳು ಪ್ರಾಯೋಗಿಕ ಗ್ಯಾಲರಿಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಫೆಲೋಷಿಪ್ ಮಾದರಿಯಲ್ಲಿ ಅವುಗಳನ್ನು ನಡೆಸಲಾಗುತ್ತದೆ. ಅಲ್ಲಿ ಹಲವು ವಿಭಾಗಗಳು ಇರಲಿದ್ದು, ಜನರು ಭಾಗವಹಿಸಬಹುದು. ಕರ್ನಾಟಕ ಸರ್ಕಾರ ಹಾಗೂ ಹಲವು ಸ್ವಯಂ ಸೇವಾ ಸಂಸ್ಥೆಗಳು ಇದಕ್ಕೆ ಪ್ರಾಯೋಜಕತ್ವ ನೀಡುತ್ತಿವೆ.

ಸಂದರ್ಶನ ಸಮಯ

ಗ್ಯಾಲರಿಯು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ತೆರೆದಿರುತ್ತದೆ. ಸೋಮವಾರ ಹಾಗೂ ಮಂಗಳವಾರ ರಜಾದಿನ. ಶುಕ್ರವಾರ, ಶನಿವಾರ ಹಾಗೂ ಭಾನುವಾರ ರಾತ್ರಿ 8 ರವರೆಗೆ ತೆರೆದಿರುತ್ತದೆ. ಎಲ್ಲಾ ವಯೋಮಾನದವರಿಗೂ ಪ್ರವೇಶ ಉಚಿತ.

ಪ್ರತಿಯೊಂದು ಪ್ರಯೋಗವನ್ನು ಜನರಿಗೆ ಸುಲಭವಾಗಿ ಮನದಟ್ಟಾಗುವಂತೆ ಪ್ರದರ್ಶಿಸಲಾಗುತ್ತದೆ. ಪಡಿಸಲಾಗುತ್ತದೆ. ಪ್ರಸ್ತುತಿ ಬಳಿ ಅವುಗಳ ಹೆಸರು, ಅದರ ವಿಜ್ಞಾನಿ ಹಾಗೂ ಕಲಾವಿದರ ಹೆಸರು ಬರೆಯಲಾಗಿದೆ. ಸಂಕ್ಷಿಪ್ತ ವಿವರಣೆಯೂ ಇದ್ದು, ಸಂಬಂಧಿತ ವಿಷಯದ ಬಗ್ಗೆ ಹೆಚ್ಚು ಮಾಹಿತಿ ಬೇಕಿದ್ದರೆ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ವಿಡಿಯೊ, ಆಡಿಯೊ ಮಾಹಿತಿಯನ್ನೂ ಪಡೆಯಬಹುದು. ವಿಡಿಯೊ ಗೇಮ್ ಮೂಲಕ ವಿಷಯವನ್ನು ತಿಳಿದುಕೊಳ್ಳುವ ಪ್ರಸ್ತುತಿ ಬಳಿ ಮಕ್ಕಳು ದಂಡು ಹೆಚ್ಚಿತ್ತು. ವಿಡಿಯೊ, ವಿ.ಆರ್ ಪ್ರಸ್ತುತಿ ಬಳಿ ಯುವಕರು ಕುತೂಹಲಿಗಳಾಗಿ ನಿಂತಿದ್ದರು. ಪ್ರತಿಯೊಂದು ಪ್ರಸ್ತುತಿಯ ಬಳಿ ನಿಮ್ಮನ್ನು ಕರೆದುಕೊಂಡು ಅದರ ಬಗ್ಗೆ ಮಾಹಿತಿ ನೀಡುವ ವಿಷಯ ನಿಪುಣ ಗೈಡ್‌ಗಳಿದ್ದಾರೆ. ಪ್ರಯೋಗದ ಹಿನ್ನೆಲೆ, ಉದ್ದೇಶ, ಅದರ ಹಿಂದಿರುವ ತರ್ಕವನ್ನು ಸೊಗಸಾಗಿ ವಿವರಿಸುತ್ತಾರೆ. ಕನ್ನಡ, ಇಂಗ್ಲಿಷ್ ಹಾಗೂ ಸಂಜ್ಞಾ ಭಾಷೆಯಲ್ಲಿ ವಿವರಿಸುವ ಹತ್ತಾರು ಗೈಡ್‌ಗಳು ಇದ್ದಾರೆ.

ಪ್ರದರ್ಶನದ ಜೊತೆಗೆ ಮೆಂಟರ್‌ಶಿಪ್ ಕಾರ್ಯಕ್ರಮಗಳೂ ಇವೆ. ಪಾರ್ಟ್‌ಟೈಮ್ ಗೈಡ್ ಆಗಿ, ಅಪ್ರೆಂಟಿಸ್ ಆಗಿ, ಸಂಶೋಧಕರಾಗಿ ಕೆಲಸ ಮಾಡುವವರಿಗೆ ಮುಕ್ತ ಅವಕಾಶ ಇದೆ. 'ನಾನು ಇಲ್ಲಿ ಪಾರ್ಟ್‌ಟೈಮ್ ಗೈಡ್ ಆಗಿ ಕೆಲಸ ಮಾಡುತ್ತಿದ್ದೇನೆ. ಸೆಮಿಸ್ಟರ್‌ಗಳು ಮುಗಿದು ಈಗ ಕಾಲೇಜಿಗೆ ಬಿಡುವು. ಕಾಲೇಜು ಇದ್ದ ವೇಳೆ ವಾರಾಂತ್ಯದಲ್ಲಿ ಕೆಲಸ ಮಾಡುತ್ತಿದ್ದೆ. ಈಗ ವಾರದ ದಿನಗಳಲ್ಲೂ ಕೆಲಸ ಇದೆ. ಆರು ತಿಂಗಳು ತರಬೇತಿ ಬಳಿಕ ನಮ್ಮನ್ನು ಇಲ್ಲಿ ನಿಯೋಜಿಸಲಾಗಿದೆ. ಬಂದ ಪ್ರತಿಯೊಬ್ಬರಿಗೂ ಪ್ರಯೋಗದ ಬಗ್ಗೆ ಮಾಹಿತಿ ನೀಡುತ್ತೇವೆ. ನಮಗೂ ಹೊಸ ವಿಷಯ ತಿಳಿಯುತ್ತದೆ. ಪ್ರತಿ ದಿನದ ದುಡಿತಕ್ಕೆ ಕೆಲಸಕ್ಕೆ ಸಂಬಳವೂ ಸಿಗುತ್ತದೆ' ಎನ್ನುತ್ತಾರೆ ಗೈಡ್ ಆಗಿರುವ ಮೌಂಟ್ ಕಾರ್ಮೆಲ್ ಕಾಲೇಜು ವಿದ್ಯಾರ್ಥಿನಿ ಅಂಜಲಿ ರಾಜನ್.

ನೀವು ನಿಮ್ಮ ಮಕ್ಕಳೊಂದಿಗೆ ವಿಜ್ಞಾನ ಮೊಗಸಾಲೆಗೆ ಹೊರಡಲು ಸಿದ್ಧರಾಗಿ. ಏಕೆಂದರೆ, ಇದೊಂದು ವಿಸ್ಮಯ ಲೋಕ.

ಮಾದರಿ ಕುರಿತು ಮಾಹಿತಿ ನೀಡುತ್ತಿರುವ ಗೈಡ್

ವಿಭಿನ್ನ ವಿನ್ಯಾಸದ ಕಟ್ಟಡ

ಜನಸಾಮಾನ್ಯರು ಹಾಗೂ ವಿಜ್ಞಾನದ ನಡುವೆ ಇರುವ ಬಹುದೊಡ್ಡ ಅಂತರವನ್ನು ಕಡಿಮೆ ಮಾಡುವ ಸಲುವಾಗಿ ಈ 'ವಿಜ್ಞಾನ ಮೊಗಸಾಲೆ' ಆರಂಭಿಸಲಾಗಿದೆ. ಕಟ್ಟಡವನ್ನೂ ಅದೇ ಉದ್ದೇಶ ಇಟ್ಟುಕೊಂಡು ವಿನ್ಯಾಸ ಮಾಡಲಾಗಿದೆ. ಪ್ರದರ್ಶನ ಸಭಾಂಗಣಗಳು ಹಾಗೂ ಪ್ರಯೋಗಾಲಯಗಳನ್ನು ಪ್ರತ್ಯೇಕಗೊಳಿಸುವ ಯಾವುದೇ ಗೋಡೆಗಳಿಲ್ಲ. ಜನರ ಕಲ್ಪನೆಗಳ ಹರಿವಿನಂತೆ ಕಟ್ಟಡವೂ ಮುಕ್ತವಾಗಿರಬೇಕು ಎನ್ನುವ ದಿಸೆಯಲ್ಲಿ ಹೀಗೆ ವಿನ್ಯಾಸ ಮಾಡಲಾಗಿದೆ ಎಂದರು ಫಾಲ್ಕೆ.

ಬೆಂಗಳೂರಿನ ವಾಸ್ತುಶಿಲ್ಪಿಗಳು ಸುಮಾರು 1.6 ಎಕರೆಯಲ್ಲಿ ಕಟ್ಟಡ ವಿನ್ಯಾಸ ಮಾಡಿದ್ದಾರೆ. ತೆರೆದ ಸ್ಟುಡಿಯೊ, ವಾಚನಾಲಯ, ಚಟುವಟಿಕೆ ಸಭಾಂಗಣ, ಪ್ರದರ್ಶನ ಸಭಾಂಗಣಗಳು ಮತ್ತು ಉಪನ್ಯಾಸ, ಕಾರ್ಯಾಗಾರ ಮತ್ತು ಚಲನಚಿತ್ರ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳಿವೆ.

ನೆಲದ ನಂಟು ಒಣಮೀನು ಗಂಟು

ಒಣಗಿಸಿದ ಬಂಗುಡೆ ಮೀನು.

8ನೇ ಪುಟದಿಂದ...

ಈ ಕಾರಣಕ್ಕಾಗಿಯೇ ಮೇ ತಿಂಗಳಿನಲ್ಲಿ ನಡೆಯುವ ಪ್ರತಿ ವಾರದ ಸಂತೆಯಲ್ಲಿ ಒಣಮೀನು ವಹಿವಾಟು ನಡೆಯುವುದು ಹೆಚ್ಚು.

'ಗೋವಾ, ಮಹಾರಾಷ್ಟ್ರದಲ್ಲಿ ಒಣಮೀನು ಲಭಿಸಿದರೂ ಕಾರವಾರದ ಒಣಮೀನಿನ ರುಚಿ ತಂದುಕೊಡಲಾರದು. ಕಾರವಾರದ ಮೀನುಗಾರ ಮಹಿಳೆಯರು ಮೀನು ಒಣಗಿಸುವ ಶೈಲಿ ಅದ್ಭುತ. ಅಲ್ಲದೆ ಇಲ್ಲಿನ ಒಣಮೀನು ಕೆಡದಂತೆ ನಾಲ್ಕು ತಿಂಗಳವರೆಗೂ ಇಟ್ಟುಕೊಳ್ಳಬಹುದು. ಇದೇ ಕಾರಣಕ್ಕಾಗಿ ಒಣಮೀನು ಖರೀದಿಗೆ ಕಾರವಾರಕ್ಕೆ ಬರುತ್ತೇವೆ' ಎಂದು ಗೋವಾದಲ್ಲಿ ನೆಲೆಕಂಡುಕೊಂಡ, ಕಾಜುಬಾಗದ ಸ್ಟೆಫಿ ಫರ್ನಾಂಡಿಸ್ ಹೇಳುತ್ತಾರೆ.

ಪ್ರತಿ ಭಾನುವಾರ ನಡೆಯುವ ಸಂತೆಯಲ್ಲಿ ಬಂಗುಡೆ, ಸೋರಾ, ಬಣಗು, ಬೊಂಬಿಲ್, ಸಿಗಡಿ, ತೊರ್ಕೆ ಸೇರಿದಂತೆ ಹಲವು ಬಗೆಯ ಒಣಮೀನುಗಳ ಮಾರಾಟ ನಡೆಯುತ್ತದೆ. ಬಂಗುಡೆ, ಬಣಗು ಮೀನುಗಳನ್ನು ಪ್ರತಿ ಮೀನಿನ ಲೆಕ್ಕದಲ್ಲಿ ಮಾರಾಟ ಮಾಡಿದರೆ, ದುಬಾರಿ ಸೋರಾ ಮೀನನ್ನು ತುಂಡಿನ ಲೆಕ್ಕದಲ್ಲಿ ಮಾರಾಟ ಮಾಡಲಾಗುತ್ತದೆ. ಸಿಗಡಿ, ಸಣ್ಣ ಸಿಗಡಿ (ಸುಂಗಟ್) ಮುಂತಾದ ಸಣ್ಣಗಾತ್ರದ ಮೀನುಗಳನ್ನು ಸೇರಿನ ಲೆಕ್ಕದಲ್ಲಿ ಅಳೆದು ಮಾರಾಟ ಮಾಡುತ್ತಾರೆ.

ಕೆ.ಜಿ.ಗಟ್ಟಲೆ ಮೀನನ್ನು ಖರೀದಿಸಿ ದೂರದ ಊರುಗಳಿಗೆ ಒಯ್ಯುವ ಕಾರವಾರಿಗರು ಒಣಮೀನುಗಳ ಜತೆಗೆ ಈ ನೆಲದ ನೆನಪನ್ನೂ ಹೊತ್ತೊಯ್ಯುತ್ತಾರೆ.

ಸಣ್ಣಗಾತ್ರದ ಒಣ ಸಿಗಡಿ (ಸುಂಗಟ್) ಮೀನನ್ನು ಸೇರಿನಲ್ಲಿ ಮೊಗೆಯುತ್ತಿರುವ ಮೀನು ವ್ಯಾಪಾರಿ.

ಎಚ್‌ಎಂಟಿ ಜೊತೆಗಿನ ನೆನಪುಗಳು...

ಪ್ರತಿಕ್ರಿಯೆ

ಹಿಂದೂಸ್ತಾನವೂ ಎಂದೂ ಮರೆಯದ ಕಾಲ (ಗಿರೀಶ ದೊಡ್ಡಮನಿ, ಜೂನ್ 2) ಲೇಖನ ಐವತ್ತು ವರ್ಷಗಳ ಹಿಂದಿನ ಘಟನೆಯೊಂದನ್ನು ನೆನಪಿಗೆ ತಂದಿತು. ನಮ್ಮ ಕುಟುಂಬಸ್ಥರ ಮದುವೆಯಲ್ಲಿ ವರನಿಗೆ ಕೊಡಬೇಕಾದ ಎಚ್‌ಎಂಟಿ ವಾಚ್ ಅನ್ನು ಸರಿಯಾದ ಸಮಯಕ್ಕೆ ತರಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಮದುವೆ ನಿಲ್ಲುವ ಹಂತಕ್ಕೆ ಬಂದು ನಿಂತಿತ್ತು. ಆಗ ನನ್ನ ಗೆಳೆಯ ತನ್ನ ಕೈಯಲ್ಲಿ ಇದ್ದ ಎಚ್‌ಎಂಟಿ ವಾಚನ್ನು ಬಿಚ್ಚಿ ವರನಿಗೆ ಕೊಟ್ಟು ಮದುವೆ ಸುಸೂತ್ರವಾಗಿ ನಡೆಯುವ ಹಾಗೆ ಮಾಡಿದ್ದ.

ಅಲ್ಲದೇ ಎಚ್‌ಎಂಟಿ ಗಡಿಯಾರ ವಿಶ್ವಖ್ಯಾತಿ ಹೊಂದಿದ ಕರ್ನಾಟಕ ಉತ್ಪನ್ನಗಳಲ್ಲಿ ಸರ್ವಶ್ರೇಷ್ಠ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು ಎಂಬುದು ಸಾರ್ವಕಾಲಿಕ ಸತ್ಯ.

ಕುಬೇರಪ್ಪ ಎಂ ವಿಭೂತಿ ಹರಿಹರ

ಆ ಕಾಲಕ್ಕೆ ಸಾಮಾನ್ಯವಾಗಿ ಮದುವೆಯಾಗುವ ಸಾಮಾನ್ಯ ಕುಟುಂಬದ ವರನಿಗೆ ಎಚ್‌ಎಂಟಿ ವಾಚ್ ಅನ್ನು ವರೋಪಚಾರ ನೀಡುವಂತೆ ವರನ ಪೋಷಕರ ಕಡೆಯಿಂದ ಬೇಡಿಕೆ ಇರಿಸಲಾಗುತಿತ್ತು. 45 ವರ್ಷಗಳ ಹಿಂದೆ ನನ್ನ ಮದುವೆ ನಡೆದಿದ್ದು, ಆಗ ನಾನೇ ಖರೀದಿಸಿದ್ದ ಎಚ್‌ಎಂಟಿ ಕಂಪನಿಯ 'ಜಯಂತ್' ಹೆಸರಿನ ವಾಚ್ ಮತ್ತು ಅದೇ ಸಮಯದಲ್ಲಿ ನನ್ನಾಕೆಗೆ ಕೊಡಿಸಿದ 'ದೀಪ್ತಿ' ಹೆಸರಿನ ಸ್ಟೀಲ್ ವಾಚ್ ನಮ್ಮ ಬಳಿ ನೆನಪಾಗಿ ಈಗಲೂ ಉಳಿದಿದೆ.

ಕೆ.ಎನ್.ಶಿವಶಂಕರ್ ಬೆಂಗಳೂರು

ಎಚ್‌ಎಂಟಿ ಕೈಗಡಿಯಾರಗಳಲ್ಲಿ 'ಜವಾಹರ್' ಎಂಬ ಮಾಡೆಲ್ ಕೂಡ ಇತ್ತು. ನನಗೆ ನೌಕರಿ ಸಿಕ್ಕ ಹೊಸತರಲ್ಲಿ ಅದನ್ನು ಖರೀದಿಸಿದ್ದೆ. ಬೆಂಗಳೂರು ಘಟಕ ಇನ್ನೂ ಇರುವುದು ಗಮನಾರ್ಹ. ಯಾವುದೇ ವಸ್ತು ಕೇವಲ ಹೆರಿಟೇಜ್ ಮೌಲ್ಯ ಹೊಂದಿದರೆ ಸಾಲದು, ವರ್ತಮಾನದಲ್ಲೂ ಬಳಕೆಯಲ್ಲಿರಬೇಕು.

ಎಚ್.ಎಸ್.ಮಂಜುನಾಥ ಗೌರಿಬಿದನೂರು

ಈಗ ಬೇರೆ ಬೇರೆ ಬ್ರ್ಯಾಂಡ್‌ಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದರೂ ಎಚ್‌ಎಂಟಿ ಕೈಗಡಿಯಾರಗಳನ್ನು ಬಳಸುವವರ ಸಂಖ್ಯೆ ಬಹಳಷ್ಟಿದೆ. ಅದರ ಮೌಲ್ಯ ಹಾಗೆಯೇ ಇದೆ. ಈ ಲೇಖನ ಓದಿದ ಮೇಲೆ ಮ್ಯೂಸಿಯಂಗೆ ಭೇಟಿ ನೀಡಬೇಕೆನಿಸಿದೆ.

ಶಶಿಕಲಾ ಮಂಡ್ಯ

'ಬೆರಗು ಮೂಡಿಸಿತು'

ಇದು ಅಂತಿಂಥ ರೈಲು ಸುರಂಗವಲ್ಲ! (ಎಸ್ ರವಿಪ್ರಕಾಶ್) ಲೇಖನ ಆಧುನಿಕ ತಂತ್ರಜ್ಞಾನ ಕುರಿತು ಬೆರಗು ಮೂಡಿತು. ಇಂತಹ ವಿಸ್ಮಯಕಾರಿ ಯೋಜನೆಯ ಕಾಮಗಾರಿಯನ್ನು ದಿಟ್ಟತನದಿಂದ ನಿರ್ವಹಿಸುತ್ತಿರುವುದು ಶ್ಲಾಘನೀಯ. ಅಲ್ಲದೆ ಸಾಧಕ-ಬಾಧಕಗಳ ಕುರಿತೂ ಮುಂದಾಲೋಚನೆ ಮಾಡಿರುವುದು ಸೂಕ್ತವಾಗಿದೆ.

ಎಸ್.ವಿಜಯಲಕ್ಷ್ಮಿ ಶಿವಮೊಗ್ಗ

ಸಂಭಾವ್ಯ ಅಪಾಯಗಳ ಅರಿವಿಟ್ಟುಕೊಂಡು ಸಮಾನಾಂತರ ಸುರಂಗ ಮಾರ್ಗವೂ ಸಿದ್ಧವಾಗುತ್ತಿರುವ ವಿಷಯ ಕೇಳಿ ಸಂತೋಷವಾಯಿತು. ಅಭಿವೃದ್ಧಿ ಎನ್ನುವುದು ತನ್ನೊಡಲಲ್ಲಿ ವಿನಾಶದ ಬೀಜಗಳನ್ನ ಇಟ್ಟುಕೊಂಡಿರುತ್ತದೆ ಎನ್ನುವ ಸತ್ಯದ ಅರಿವಿದ್ದರೂ ಮಾನವನ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

ಎಸ್.ವಿಶ್ವನಾಥ ಐನಹಳ್ಳಿ ಮೈಸೂರು

ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಮಾರ್ಗದ ಚೆನಾಬ್ ನದಿಗೆ ಅಡ್ಡಲಾಗಿ ವಿಶ್ವದ ಅತೀ ಎತ್ತರದ (359 ಮೀಟರ್ ಹಾಗೂ 1,315 ಮೀಟರ್ ಉದ್ದ) ಸೇತುವೆ ನಿರ್ಮಿಸಿದ ಹೆಗ್ಗಳಿಕೆ ಭಾರತೀಯ ರೈಲ್ವೆಯದು. ಈಗ, ಉತ್ತರಾಖಂಡದ ಹೃಷಿಕೇಶದಿಂದ ಕರ್ಣಪ್ರಯಾಗವರೆಗಿನ ರೈಲು ಮಾರ್ಗದ ನಡುವೆ ದೇಶದ ಅತೀ ಉದ್ದನೆಯ ರೈಲು ಸುರಂಗ ಮಾರ್ಗ ನಿರ್ಮಾಣದ ಕಥನ ಓದಿ ಹೆಮ್ಮೆ ಎನಿಸಿತು.

ವೆಂಕಟೇಶ್ ಮುದಗಲ್ ಕಲಬುರಗಿ

'ಪುಸ್ತಕಗಳನ್ನು ಮರುಮುದ್ರಿಸಲಿ'

ಪ್ರಗತಿಪರ ಚಿಂತನೆಯ ಕಥೆಗಾರ್ತಿ ದೇವಕಿ (ಕೆ.ಉಷಾ ಪಿ ರೈ) ಕುರಿತಾದ ಬರಹ ಮಹತ್ವಪೂರ್ಣವಾದದು. ಓದು ಮತ್ತು ಬರವಣಿಗೆಯ ಬಗೆಗೆ ಅವರಿಗಿದ್ದ ಅದಮ್ಯ ಆಸಕ್ತಿ, ಸಾಮಾಜಿಕ ಕಾಳಜಿಗೆ ಕೌಟುಂಬಿಕ ಸಹಕಾರ ಸಿಗದೇ ಹೋದದ್ದು ನೋವಿನ ಸಂಗತಿ. ಅಂತಹ ಸನ್ನಿವೇಶದಲ್ಲಿಯೂ ಅಪರೂಪದ ಕಥಾ ಸಾಹಿತ್ಯವನ್ನು ಬರೆದಿರುವುದು ಸೋಜಿಗ. ಅವರ ಬರವಣಿಗೆಯಲ್ಲಿ ನಿರೂಪಿತವಾದ ಮನುಷ್ಯ ಪ್ರೀತಿ, ಜೀವನ ಮೌಲ್ಯ, ಆಲೋಚನಾ ಕ್ರಮ, ಪ್ರಗತಿಪರ ನಿಲುವು, ಬಂಡಾಯ ಮನೋಧರ್ಮವನ್ನು ಹೊಸ ತಲೆಮಾರು ಅಷ್ಟೇ ಅಲ್ಲದೆ ನಾವೆಲ್ಲರೂ ಮನಗಾಣಬೇಕಾದ ಅಗತ್ಯವಿದೆ. ಸರ್ಕಾರ ಅವರ ಪುಸ್ತಕಗಳನ್ನು ಮರು ಮುದ್ರಣ ಮಾಡಬೇಕಾದ ಜರೂರಿದೆ.

ದಸ್ತಗೀರಸಾಬ್ ದಿನ್ನಿ ಬಳ್ಳಾರಿ

ದೇವಕಿ ಅವರ ಸಾಹಿತ್ಯವನ್ನು ವಾಚಿಕೆಯ ರೂಪದಲ್ಲಾದರೂ ಇಂದಿನ ಓದುಗರಿಗೆ ನೀಡಬೇಕಿದೆ. ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಥವಾ ಕಸಾಪ ಇಂತಹ ಕಾರ್ಯ ಮಾಡಬೇಕು. ಅಂದಹಾಗೆ ಕೃತಿಚೌರ್ಯ ಇಂದಿಗೂ ಒಂದು ಅಪಸವ್ಯವಾಗಿ ಸಾಹಿತ್ಯ ಕೃಷಿಯಲ್ಲಿ ಕಾಣಿಸಿಕೊಳ್ಳುತ್ತಲೇ ಇದೆ. ಆದ್ದರಿಂದ ದೇವಕಿ ಅವರು ಈ ಕುರಿತು ಚಿಕಿತ್ಸಕವಾಗಿ ಬರೆದಿರುವುದನ್ನು ನಮ್ಮ ಇಂದಿನ ಪೀಳಿಗೆಯ ಲೇಖಕರೂ ಓದಬೇಕಾದ ಅಗತ್ಯವಿದೆ. ಆದ್ದರಿಂದ ಈ ಲೇಖನವೂ ಅಂತಹ ವಾಚಿಕೆಯಲ್ಲಿ ಸೇರುವಂತಾಗಬೇಕು.

ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

ಮುನ್ನೋಟ 09-06-2024 ರಿಂದ 15-06-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭದಲ್ಲೇ ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಅದರಂತೆ ಮಾಡುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ರಿಯಲ್‌ಎಸ್ಟೇಟ್ ಉದ್ಯಮಿಗಳಿಗೆ ಕಾನೂನಿನ ತೊಡಕುಗಳು ದೂರವಾಗುತ್ತವೆ. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸಂಗಾತಿಯಿಂದ ಸ್ವಲ್ಪ ಆದಾಯ ಬಂದರೂ ಅದಕ್ಕಿಂತ ಹೆಚ್ಚು ಖರ್ಚು ಮಾಡಬೇಕಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆತ್ಮಾಭಿಮಾನದ ಜೊತೆಗೆ ಗೌರವವು ಇರುತ್ತದೆ. ನಿಮ್ಮ ಖರ್ಚಿಗೆ ಹೊಂದುವಷ್ಟು ಆದಾಯವಿರುತ್ತದೆ. ಆದಾಯ ತರುವ ಹೊಸ ಮಾರ್ಗಗಳನ್ನು ಹುಡುಕುತ್ತಿರುವಿರಿ. ನಿಮಗೆ ಸಿಕ್ಕಿರುವ ಸರ್ಕಾರಿ ನೀವೇಶನದ ದಾಖಲೆಗಳನ್ನು ಈಗ ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಸ್ವಲ್ಪ ಸಂಕಷ್ಟವಿರುತ್ತದೆ. ಮಹಿಳೆಯರ ಜೊತೆ ಹಣಕಾಸಿನ ವ್ಯವಹಾರಗಳು ಖಂಡಿತ ಬೇಡ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭ ಬಹಳ ಆಹ್ಲಾದಕರವಾಗಿರುತ್ತದೆ. ಮಾತಿನಿಂದ ಜನರನ್ನು ಸೆಳೆಯುವಿರಿ. ಆದಾಯವು ನಿಮ್ಮ ಅಗತ್ಯ ಖರ್ಚನ್ನು ಪೂರೈಸುವಷ್ಟಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರಿಂದ ವಿರೋಧ ಎದುರಾಗಬಹುದು. ಆಸ್ತಿ ವಿಚಾರಗಳಲ್ಲಿ ಸ್ವಲ್ಪ ಬೆಳಕು ಕಾಣುತ್ತದೆ. ಮಕ್ಕಳಿಗಾಗಿ ಮತ್ತು ಅವರ ಓದಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಶಸ್ತ್ರಚಿಕಿತ್ಸಕರಿಗೆ ಬೇಡಿಕೆ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮನಸ್ಸಿನಲ್ಲಿ ಅಂತಹ ಆನಂದ ಇರುವುದಿಲ್ಲ, ಏನೋ ಕಳೆದುಕೊಂಡ ಭಾವನೆ ಇರುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ಅನುಗುಣವಾಗಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಲ್ಲಿ ನಿಧಾನಗತಿಯನ್ನು ಕಾಣಬಹುದು. ಕ್ರೀಡಾಪಟುಗಳಿಗೆ ಉದ್ಯೋಗ ಸಿಗುವ ಸಂದರ್ಭವಿದೆ. ಲಲಿತ ಕಲೆಯನ್ನು ಅಭ್ಯಾಸ ಮಾಡುತ್ತಿರುವವರಿಗೆ ಆದಾಯ ಹೆಚ್ಚುತ್ತದೆ. ಹಿರಿಯರ ಆರೋಗ್ಯಕ್ಕಾಗಿ ಹಣ ಕರ್ಚಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ವೃತ್ತಿಪರತೆಯು ನಿಮ್ಮಿಂದ ಮರೆಯಾಗಿರುತ್ತದೆ. ಆದಾಯ ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳ ಮೇಲೆ ನಿಮ್ಮ ಒಡಹುಟ್ಟಿದವರು ಕಣ್ಣಿಟ್ಟಿರುತ್ತಾರೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಅನಿರೀಕ್ಷಿತವಾಗಿ ಮೂಳೆ ತೊಂದರೆಗಳು ಎದುರಾಗಬಹುದು. ಸಂಗಾತಿಯು ಸಂಸಾರಕ್ಕಾಗಿ ಸಾಕಷ್ಟು ಶ್ರಮ ಪಡುವರು. ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮೊಳಗೆ ಅನೇಕ ಮುಚ್ಚಿಟ್ಟ ಸಂಗತಿಗಳಿರುತ್ತವೆ, ಇವು ನಿಮ್ಮನ್ನು ಆಗಾಗ ಚಿಂತೆಗೀಡು ಮಾಡಬಹುದು. ಆದಾಯವು ಮಂದಗತಿಯಲ್ಲಿರುತ್ತದೆ. ಹಾಗೆಯೇ ಖರ್ಚು ಹೆಚ್ಚಾಗಿರುತ್ತದೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ನಿರೀಕ್ಷಿಸಿದ್ದ ಆಸ್ತಿಯ ಬೆಲೆ ಹೆಚ್ಚಾಗುವ ಸಾಧ್ಯತೆ ಇದೆ. ಕಬ್ಬಿಣ ತಯಾರಿಸುವವರಿಗೆ ಹೆಚ್ಚು ಬೇಡಿಕೆ ಇರುತ್ತದೆ. ಸಾಂಪ್ರದಾಯಿಕ ಚಿಕಿತ್ಸೆ ನೀಡುವ ವೈದ್ಯರುಗಳಿಗೆ ಸಾಕಷ್ಟು ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸರಿಯಾದ ನಿರ್ಧಾರಗಳಿಲ್ಲದೆ ಮನಸ್ಸು ಗೊಂದಲದ ಗೂಡಾಗಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿ ತಂತ್ರಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಕೆಲವು ರಾಜಕಾರಣಿಗಳಿಗೆ ಅನಿರೀಕ್ಷಿತವಾಗಿ ಸ್ಥಾನ ದೊರಕಬಹುದು. ಕೆಲವರಿಗೆ ಕಿಬ್ಬೊಟ್ಟೆ ಭಾಗದಲ್ಲಿ ನೋವು ಕಾಣಿಸಬಹುದು. ಸಂಗಾತಿಯಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ತಂದೆಯಿಂದ ಸಿಗುತ್ತಿದ್ದ ಸಹಕಾರ ಸ್ವಲ್ಪ ಕಡಿಮೆ ಆಗುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಬಹಳ ಶ್ರಮಪಟ್ಟು ಕೆಲಸ ಆರಂಭಿಸುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಹಠ ಬಿಡದೆ ಹಿಡಿದ ಕೆಲಸವನ್ನು ಸಾಧಿಸುವಿರಿ. ಸಂಸಾರದಲ್ಲಿ ಕಸಿವಿಸಿಗಳು ಇದ್ದರೂ ಸಂತೋಷ ಕೂಡ ಇರುತ್ತದೆ. ವಿದೇಶದಲ್ಲಿ ಓದಬೇಕೆನ್ನುತ್ತಿರುವವರಿಗೆ ಈಗ ಅವಕಾಶಗಳು ದೊರೆಯುತ್ತವೆ. ಕೃಷಿಯಿಂದ ನಿರೀಕ್ಷಿತ ಆದಾಯ ಬರುವುದಿಲ್ಲ. ಸಂಗಾತಿಯಿಂದ ಸಹಕಾರ ಮತ್ತು ಸಹಾಯ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಎಂತಹ ಸ್ಥಿತಿಯಲ್ಲೂ ಸಂತಸದಿಂದಿರಲು ಯತ್ನಪಡುವಿರಿ. ಆದಾಯವು ಕಡಿಮೆ ಇದ್ದರೂ ಅದರಲ್ಲಿಯೇ ನಿರ್ವಹಣೆ ಮಾಡುವಿರಿ. ನಿಮ್ಮ ಕೆಲಸಗಳಿಗೆ ಬಂಧುಗಳಿಂದ ಸಹಕಾರ ಸಿಗುವ ಸಾಧ್ಯತೆಗಳಿವೆ. ನೂತನ ವಾಸ್ತುಶಿಲ್ಪಿಗಳಿಗೆ ಬೇಡಿಕೆ ಬರುತ್ತದೆ. ಕೃಷಿಯಿಂದ ಆದಾಯವಿರುತ್ತದೆ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸ ಕಾಣಬಹುದು. ಕೆಲವರ ಪ್ರೀತಿ ಪ್ರೇಮಗಳು ಯಶಸ್ಸನ್ನು ಕಾಣುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಯಾವುದೇ ವಿಚಾರದಲ್ಲೂ ಸ್ಥಿತಪ್ರಜ್ಞರಾಗಿರುವುದು ಒಳ್ಳೆಯದು. ಆದಾಯ ಸ್ವಲ್ಪ ಕಡಿಮೆ ಇರುತ್ತದೆ. ಹೊಸ ಜನಗಳಿಂದ ನಿಮ್ಮ ಕೆಲಸಕ್ಕೆ ಸಹಕಾರ ಸಿಗುತ್ತದೆ. ಭೂಮಿಯನ್ನು ಅಭಿವೃದ್ಧಿಪಡಿಸುವವರಿಗೆ ಕೆಲಸ ಮತ್ತು ಹೆಚ್ಚು ಆದಾಯವಿರುತ್ತದೆ. ಅಧ್ಯಯನಶೀಲರಿಗೆ ಉತ್ತಮ ಅವಕಾಶವಿರುತ್ತದೆ. ಸಂಗಾತಿಯಿಂದ ಕೆಲವೊಂದು ಕೆಲಸಗಳಿಗೆ ಸೂಕ್ತ ಸಹಕಾರ ಸಿಗುವುದಿಲ್ಲ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯ ಸ್ವಲ್ಪ ಕಡಿಮೆ ಇರುತ್ತದೆ. ನಿಮ್ಮಲ್ಲಿ ಬಹಳ ಚುರುಕಾದ ನಡವಳಿಕೆ ಇರುತ್ತದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ಸ್ತ್ರೀಯರಿಗೆ ಅಭಿವೃದ್ಧಿ ಬಹಳ ಉತ್ತಮವಾಗಿರುತ್ತದೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ನಿಮಗೆ ಲಾಭವಿರುತ್ತದೆ. ಯುವಕರು ತಮ್ಮ ಮಾತಿನಿಂದ ತಾವೇ ಸಂಕಟಕ್ಕೆ ಸಿಲುಕುವರು. ಹೈನುಗಾರಿಕೆ ಮಾಡುವವರಿಗೆ ಆದಾಯವಿರುತ್ತದೆ. ತಂದೆಯಿಂದ ಆರ್ಥಿಕ ಸಹಾಯ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ದ್ವಂದ್ವ ನಡವಳಿಕೆಗಳಿರುತ್ತವೆ. ಆದಾಯ ತಕ್ಕಮಟ್ಟಿಗೆ ಇರುತ್ತದೆ. ನಿಮ್ಮ ಮಾತಿನಿಂದ ಹಿರಿಯರು ನಿಮ್ಮ ಕೆಲಸ ಕಾರ್ಯಗಳಿಗೆ ವಿರೋಧ ವ್ಯಕ್ತಪಡಿಸುವರು. ಹಳೆಯ ಬಂಧುಗಳ ಭೇಟಿಯಿಂದ ಸಂತಸವಾಗುತ್ತದೆ. ರಾಜಕೀಯ ಚಿಂತಕರುಗಳಿಗೆ ಅಷ್ಟು ಅಭಿವೃದ್ಧಿ ಇರುವುದಿಲ್ಲ. ನೇತ್ರ ಸಂಬಂಧಿ ದೋಷಗಳು ಕಾಡಬಹುದು. ಸಂಗಾತಿಯಿಂದ ನಿರೀಕ್ಷಿಸಿದ ಧನಸಹಾಯ ಇರುವುದಿಲ್ಲ.

ಪದಬಂಧ 2845



ಮೇಲಿನಿಂದ ಕೆಳಕ್ಕೆ

1. ಸಮುದ್ರಯಾನಕ್ಕೆ ಬೇಕಾಗುವ ಹಡಗು 3
2. ಮತ್ತೆ ಹಿಂತಿರುಗುವ ಉಸುಕು 3
3. ಬೇಕಾದ್ದು ಸ್ವಂತಕ್ಕೆ ಎಂಬ ಮಾತು 3
4. ಕಂಪನದ ಅಲೆ 3
7. ತಾಯಿ ಮಗುವಿನ ಸಂಬಂಧದ ಬಳ್ಳಿ ತಲೆಕೆಳಕಾಗಿದೆ 3
9. ಭೂಮಿಕೊರೆದು ಮಾಡಿದ ಮಾರ್ಗದಲ್ಲಿ ರಂಗ ಅಡಗಿದ್ದಾನೆ 3
10. ತಲೆಕೆಳಕಾದ ಶೌರ್ಯ ಪರಾಕ್ರಮದ ಪ್ರಯತ್ನ 3
11. ಉರಿಯುತ್ತಿರುವ ಮನವನ್ನು ಶಾಂತಗೊಳಿಸು 3
12. ವಿರಾಮದಲ್ಲಿ ಬರುವ ಬೆಳದಿಂಗಳ ಹೆಣ್ಣು 3
13. ಹೂವಿನಂತೆ ಮುದುಡು 3
14. ತಾವರೆಯಿಂದ ಹುಟ್ಟಿದ ಬಾಲೆ ತಲೆಕೆಳಗು ಮಾಡಿದ್ದಾಳೆ 3
16. ಗಾಯಗೊಂಡಿದ್ದರೂ ಉಳಿಯುವ ಹಾಡಿಕೆ 3
18. ಅಲಂಕಾರದಿಂದ ಕೂಡಿದ ನಾಟಕ, ತಾಳ 3
20. ಸರೋವರದಂತಹ ಮನಸ್ಸು 3
21. ಮನ ಬೆರೆತ ವಂದನೆ 3
22. ತಕತಕ ಎಂಬ ಕುಣಿತದಿಂದಲೇ ಮೂಡಿದ ನೃತ್ಯ ಪ್ರಕಾರ 3
23. ಹಣದೊಡತಿಯ ಒಡೆಯ 3

ಎಡದಿಂದ ಬಲಕ್ಕೆ

1. ಉಫೇ ನಮ್ಮ ದಶರಥಾತ್ಮಜನಿಗೆ 4
3. ಹೊಸದಂತೆ ಕಾಣುವ ಬೆಣ್ಣೆ 4
5. ದೇಹದಲ್ಲಿ ನೆತ್ತರಿನ ಕೊರತೆಯಿಂದ ಬಳಲುವವ 4
6. ಹರಿವ ನದಿಯ ನಿನಾದ ಹೀಗೆ 4
8. ಆದಿ ಮಾನವನಿಂದಲೂ ಬಳಕೆಯಲ್ಲಿರುವ ಕಂದ ಮೂಲ 5
10. ಎಲ್ಲಾ ಐಶ್ವರ್ಯದ ಒಡೆಯನ ಮಲೆನಾಡಿನೂರು 6
13. ತ್ಯಾಗರಾಜರ 'ನಗುಮೋಮು' ಕೃತಿಯ ಬೆಟ್ಟಗಳ ಒಡೆಯ 4
15. ಸರಸ್ವತಿಗೆ ಪ್ರಿಯವಾದ ವೇದ ಗಾಯನ 4
17. ಸತ್ಯ ಸಿದ್ಧಾಂತ ಸ್ವರೂಪದ ಅವತಾರ 6
19. ಈ ಮಂದಿಯಲ್ಲಿ ಮೇಲು ಕೀಳೆಂಬುದಿಲ್ಲ, ಎಲ್ಲರೂ ಒಂದೇ 5
22. ಹರಿಯುವ ನೀರು ಮತ್ತು ಮನಸ್ಸು ಕದಡುವ ಶಬ್ದಕ್ಕಿರುವ ಸಾಮ್ಯತೆ 4
24. ಮತ್ತೆ ಹಾಕುವ ಓಟು 4
25. ಕೊಪ ತಾಪವಿಲ್ಲದ ಶಾಂತ ಸ್ಥಿತಿ 4
26. ಪದ್ಮಪ್ರಿಯ ವಿಠಲನ ರೂಪ 4

ಪದಬಂಧ ಉತ್ತರ -2844

ಮೇಲಿಂದ ಕೆಳಕ್ಕೆ

1.ಆಕಾಶ 2. ನಕ್ಷತ್ರ 3.ನಿಕರ 4.ತಲ್ಲಣ 6. ಯಾತ್ರಿಕ 8.ನಿಗಮ 10.ಗುಡಾರ 11.ಪ್ರತಿ 12.ಟಪ 14.ನುರಿತ 16.ಸನಿಹ 17.ಜಾತಕ 18.ದನಿ 19.ಹಸೆ 20.ನಿಸ್ಸೀಮ 22.ರಾಘವ 23.ಪಾಪಾಸು 24.ಲವಣ 25.ಮುರುಗ 26.ಗುರ್ಜರ

ಎಡದಿಂದ ಬಲಕ್ಕೆ

1. ಆಲಿಂಗನ 3.ನಿಯಮಿತ 5.ಕ್ಷಮಾಯಾಚಕ 7.ಶನಿಮಿತ್ರ 9.ರಜೋಗುಣ 11.ಪ್ರಕಟ 13.ಮನುಸ್ಮೃತಿ 15.ಪರಿಸರ 17.ಜಾತವೇದ 19.ಹನಿಹನಿ 21.ನಿರಾಸೆ 23.ಪಾಕಶಾಲ 25.ಮುದ್ದುಮಗು 27.ವಧೂವರರು 28.ಸುಮಬಾಣ 29.ಗಡಿಯಾರ

‘ಶಾಸನರತ್ನಾಕರ’ ದೇವರಕೊಂಡಾರೆಡ್ಡಿ

ಶೇಷಶಾಸ್ತ್ರಿ ಆರ್.

ದೇವರಕೊಂಡಾರೆಡ್ಡಿ, ಶಾಸನಾಧ್ಯಯನ ಕ್ಷೇತ್ರದಲ್ಲಿ ಪದೇ ಪದೇ ನಮಗೆ ಎದುರಾಗುವ ಹೆಸರು. ಲಿಪಿಶಾಸ್ತ್ರ, ಹಸ್ತಪ್ರತಿಶಾಸ್ತ್ರ, ವಾಸ್ತು ಮತ್ತು ಮೂರ್ತಿಶಿಲ್ಪ, ಪ್ರಾಚೀನ ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಬಗ್ಗೆ ನಿಖರವಾಗಿ ಮಾತಾಡಬಲ್ಲವರು; ತಮ್ಮ ಅಧ್ಯಯನದ ಫಲಿತಗಳನ್ನು ಆಲೋಚನೆಗಳನ್ನು ನೇರವಾಗಿ ದಾಖಲಿಸಿದವರು. ಸಂಶೋಧನೆ ಎಂಬುದು ಅಭಿಪ್ರಾಯಗಳ ಮೊತ್ತವಲ್ಲ. ಮೂಲ ದಾಖಲೆಗಳನ್ನು ಅಧ್ಯಯನ ಮಾಡಿದ ಫಲಿತ ಎಂಬುದನ್ನು ಇವರ ಲೇಖನಗಳಲ್ಲಿ ಕಾಣಬಹುದು.

ಅಧ್ಯಯನಾಸಕ್ತರನ್ನು ಹುರಿದುಂಬಿಸಿ, ಅವರಲ್ಲಿನ ಸುಪ್ತಪ್ರತಿಭೆಗೆ ಮೆರಗನ್ನು ನೀಡಬಲ್ಲ ಔದಾರ್ಯಶೀಲಿ ದೇವರಕೊಂಡಾರೆಡ್ಡಿ. ಜಿ.ಎಸ್. ದೀಕ್ಷಿತ್, ಸೂರ್ಯನಾಥ ಕಾಮತ್, ಎಂ.ಬಿ. ಪಾಟೀಲ್ ಮುಂತಾದವರು ನೆಲೆಗೊಳಿಸಿದ ಕರ್ನಾಟಕ ಇತಿಹಾಸ ಅಕಾಡೆಮಿಯನ್ನು ಈಗ ಸಮರ್ಥವಾಗಿ ಮುನ್ನಡೆಸುತ್ತಿರುವ ಸಾರಥಿ. ಕರೊನಾ ಕಾಲದಲ್ಲಿಯೂ ಇತಿಹಾಸ ಅಕಾಡೆಮಿಯನ್ನು ಜೀವಂತವಾಗಿಟ್ಟರು ರೆಡ್ಡಿ. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಶಾಸನ ಮತ್ತು ಕರ್ನಾಟಕ ಇತಿಹಾಸ ಕ್ಷೇತ್ರದಲ್ಲಿ ಕೃಷಿ ಮಾಡಿದ ಹಿರಿಯರ ಜೀವನ ಮತ್ತು ಅವರ ಸಾಧನೆಗಳ ಬಗ್ಗೆ ನಿರಂತರವಾಗಿ ಆನ್‌ಲೈನ್ ಉಪನ್ಯಾಸಗಳನ್ನು ಏರ್ಪಡಿಸಿದರು. ಇಂದಿನ ಸಂಶೋಧಕರಿಗೆ ಹಿಂದಿನವರ ಕೃಷಿ, ಸಾಧನೆಗಳ ಪರಿಚಯವಿರಬೇಕು ಎಂಬುದಾಗಿ ಬಲವಾಗಿ ನಂಬಿದವರು. ದೇವರಕೊಂಡಾರೆಡ್ಡಿ ನಡೆದು ಬಂದ ದಾರಿ ನೇರವಾದುದು; ದಿಟ್ಟವಾದುದು, ಯಾವ ವಿಷಯದಲ್ಲಿಯೂ ‘ರಾಜಿ’ ಎಂಬ ಪ್ರಶ್ನೆಯೇ ಇಲ್ಲ. ತನ್ನ ಕೆಲಸದ ಬಗ್ಗೆ ಅಪ್ಪಟರಮಟ್ಟಿಗೆ ತಾದಾತ್ಮ್ಯ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎ.ಎಂ. ಅಣ್ಣಿಗೇರಿಯವರ ನಂತರ ಶಾಸನ ತರಗತಿಗಳನ್ನು ನಡೆಸಿದರು. ಅಪಾರವಾದ ಸಂಖ್ಯೆಯಲ್ಲಿ ಶಾಸನತಜ್ಞರನ್ನು ತಯಾರು ಮಾಡಿದ ಅಧ್ಯಾಪಕ. ಅಲ್ಲಿನ ಸಂಶೋಧನಾ ವಿಭಾಗಕ್ಕೆ ಲಕ್ಷ್ಮಣ ತೆಲಗಾವಿ ಮುಂತಾದವರೊಡನೆ ವಿಶೇಷ ಸ್ಥಾನ ದೊರೆಯುವಂತೆ ಮಾಡಿದರು.

ಅನಂತರ ಕೆಲವು ಕಾಲ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ರೆಡ್ಡಿಯವರ ಸಾಮರ್ಥ್ಯವನ್ನು ಗುರುತಿಸಿದ್ದ ಸೂರ್ಯನಾಥ ಕಾಮತರು ಗೆಝೆಟಿಯರ್‌ಗೆ ದೇವರಕೊಂಡಾರೆಡ್ಡಿ ಅವರ ಎರವಲು ಸೇವೆಯನ್ನು ಪಡೆದರು. ಅಲ್ಲಿ ಅವರು ಗಳಿಸಿದ ಅನುಭವ ಅವರನ್ನು ಉತ್ತಮ ಸಂಶೋಧಕನನ್ನಾಗಿ ರೂಪಿಸಿತು. ಕನ್ನಡ ವಿಶ್ವವಿದ್ಯಾಲಯಕ್ಕೆ ಸೇರಿದ ನಂತರ ಕುರ್ಚಿ ಮೇಜಿನ ಸಂಶೋಧನೆಗಿಂತ ಕ್ಷೇತ್ರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮ ಸಹೋದ್ಯೋಗಿಗಳನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿದರು. ಇದರ ಫಲವೇ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು.

ಶಾಸನ ಸಂಪುಟಗಳ ಪರಿಕಲ್ಪನೆ ರೆಡ್ಡಿ ಅವರದ್ದು, ಸಂಪುಟದಿಂದ ಸಂಪುಟಕ್ಕೆ ಆ ಪರಿಕಲ್ಪನೆ ಗಟ್ಟಿಯಾಯಿತು. ಪ್ರತಿ ಸಂಪುಟಕ್ಕೂ ಅವರು ದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಪ್ರಸ್ತಾವನೆಗಳು ಆಯಾ ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳ ನಿಶಿತ ವಿಶ್ಲೇಷಣೆಯಾಗಿದೆ. ಮಿಗಿಲಾಗಿ ಆಯಾ ಜಿಲ್ಲೆಗಳ ಸಮಗ್ರ ಇತಿಹಾಸವನ್ನು ಕಟ್ಟಿಕೊಟ್ಟಿವೆ.

ದೇವರಕೊಂಡಾರೆಡ್ಡಿ

> ಕರ್ನಾಟಕದಲ್ಲಿ ಶಾಸನಾಧ್ಯಯನ ಕ್ಷೇತ್ರದಲ್ಲಿನ ಪ್ರಮುಖರಲ್ಲಿ ದೇವರಕೊಂಡಾರೆಡ್ಡಿ ಅವರೂ ಒಬ್ಬರು. ಅಪಾರ ಓದು, ಅಧ್ಯಯನ, ಸಂಶೋಧನೆ ಮತ್ತು ಶ್ರದ್ಧೆಯಿಂದ ಪದೇ ಪದೇ ನೆನಪಾಗುವ ಹೆಸರು. ಉತ್ತರ ಕರ್ನಾಟಕದ ಶಾಸನಗಳನ್ನು ಹೊರತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕನ್ನಡ ಶಾಸನಗಳ ಸಮಗ್ರ ಸಂಕಲನವಾಗಬೇಕಾದರೆ ಹೊರ ರಾಜ್ಯಗಳಲ್ಲಿನ ಶಾಸನಗಳ ಸಂಕಲನವೂ ಆಗಬೇಕು ಎಂಬುದನ್ನು ಗುರುತಿಸಿದರು. ಈ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯದ ಹೊರಗಿನ ವಿದ್ವಾಂಸರಿಂದ ತಮಿಳುನಾಡಿನ ಕನ್ನಡ ಶಾಸನಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು ಮತ್ತು ಮಹಾರಾಷ್ಟ್ರದ ಕನ್ನಡ ಶಾಸನಗಳು ಎಂಬ ಶಾಸನ ಸಂಪುಟಗಳನ್ನು ಕನ್ನಡ ವಿಶ್ವವಿದ್ಯಾಲಯದ ಮೂಲಕ ಹೊರತಂದರು.

‘ದಕ್ಷಿಣ ಕರ್ನಾಟಕದಲ್ಲಿ ಶಾಸನಗಳನ್ನು ಹೊರತಂದ ಬಿ.ಎಲ್. ರೈಸ್ ಅವರಂತೆ ಉತ್ತರ ಕರ್ನಾಟಕದ ಶಾಸನಗಳನ್ನು ಹೊರತಂದ ಕೀರ್ತಿ ದೇವರಕೊಂಡಾರೆಡ್ಡಿ ಅವರಿಗೆ ಸಲ್ಲುತ್ತದೆ. ರೈಸ್ ಅವರ ಎಪಿಗ್ರಾಫಿಯ ಕರ್ನಾಟಕ ಸಂಪುಟಗಳಂತೆ ಇವರ ಕನ್ನಡ ಯೂನಿವರ್ಸಿಟಿ ಎಪಿಗ್ರಾಫಿಕಲ್ ಸೀರೀಸ್ ಮೈಲಿಗಲ್ಲು ಎನಿಸಿದೆ. ಶಾಸನ ಪ್ರಕಟಣೆಗೆ ಸಂಬಂಧಿಸಿದಂತೆ ಇವರದು ಬಿ.ಎಲ್. ರೈಸ್ ಮಾದರಿಯ ಕೆಲಸವೆಂದು ಮನವರಿಕೆಯಾಗುತ್ತದೆ’ ಎಂಬುದಾಗಿ ದೇವರಕೊಂಡಾರೆಡ್ಡಿ ಅವರ ಸಾಧನೆಯನ್ನು ಎಂ.ಎಂ. ಕಲಬುರ್ಗಿ ಪ್ರಶಂಸೆ ಮಾಡಿದ್ದಾರೆ.

ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವತಿಯಿಂದ ಕೆ.ಆರ್. ಗಣೇಶ್ ಅವರೊಂದಿಗೆ ಸಂಪಾದಿಸಿ ಪ್ರಕಟಿಸಿರುವ ‘ಶಾಸನ ಪದ್ಯಸಿರಿ’ ಎಂಬ ಶಾಸನಗಳ ಸಂಕಲನ ಆರ್. ನರಸಿಂಹಾಚಾರ್ಯರ ಕನ್ನಡ ಶಾಸನ ಪದ್ಯಮಂಜರಿಯ ನಂತರ ಬಂದ ಮಹತ್ವದ ಸಂಕಲನ. ಇತ್ತೀಚೆಗೆ ಕರ್ನಾಟಕದ ಜೈನಶಾಸನಗಳನ್ನು ಐದು ಸಂಪುಟಗಳಲ್ಲಿ ಸಂಪಾದಿಸಿದ್ದಾರೆ.

ಈ ಎಲ್ಲಾ ಕೆಲಸಗಳನ್ನು ಮಾಡುವಲ್ಲಿ ಸಹೋದ್ಯೋಗಿಗಳ, ಇತರ ಸಂಶೋಧಕರ ನೆರವನ್ನು ರೆಡ್ಡಿಯವರು ಪಡೆದಿದ್ದಾರೆ. ಯಾರ ಶ್ರಮವನ್ನು ತನ್ನದೆಂದು ಬಿಂಬಿಸಿಲ್ಲ. ‘ಕ್ರೆಡಿಟ್’ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲಿಸಿದ್ದಾರೆ.

ಗಂಗರ ರಾಜಕೀಯ, ಸಾಮಾಜಿಕ, ಮೂರ್ತಿ ಮತ್ತು ವಾಸ್ತುಶಿಲ್ಪಗಳ ಬಗೆಗಿನ ಇವರ ಅಧ್ಯಯನ ಒಂದು ಮೈಲುಗಲ್ಲು. ಹಾಗೆಯೇ ‘ಲಿಪಿಯ ಹುಟ್ಟು ಮತ್ತು ಬೆಳವಣಿಗೆ’ ಎಂಬ ಇವರ ಕೃತಿ ಸಮಗ್ರವಾಗಿದ್ದು ಲಿಪಿಯ ಬಗ್ಗೆ ಒಳನೋಟಗಳನ್ನು ಹೊಂದಿದೆ. ಕನ್ನಡ ಶಾಸನಗಳಲ್ಲಿ ಬರುವ ಪಾರಿಭಾಷಿಕ ಪದಗಳ ಅರ್ಥಕೋಶವನ್ನು ಇವರು ರಚಿಸಿದ್ದು, ಅದು ಪ್ರಕಟವಾಗಬೇಕಾಗಿದೆ. ಈ ಪುಸ್ತಕ ರಚನೆಯ ಸಂದರ್ಭದಲ್ಲಿ ತಾವು ಬಳಸಿಕೊಂಡ ಮುಖ್ಯ ಆಕರ ಗ್ರಂಥಗಳ ಬಗ್ಗೆ ಮನಬಿಚ್ಚಿ ಹೇಳಿಕೊಂಡಿದ್ದಾರೆ.

ಶಾಸನ ಕ್ಷೇತ್ರದಲ್ಲಿ ಮಾತ್ರವಲ್ಲ ಹಸ್ತಪ್ರತಿಶಾಸ್ತ್ರದಲ್ಲಿಯೂ ಇವರ ಸಾಧನೆ ಗಣನೀಯವಾದುದು. ಶಾಸನಗಳ ಕ್ಷೇತ್ರಕಾರ್ಯ ಮಾಡುವಾಗ ಇವರು ಸಂಪಾದಿಸಿದ ಅಪರೂಪದ ಕೃತಿ ಕೆಳದಿಯ ದೊರೆ ಬಸವರಾಜನ ‘ಕಾಳಿಕಾ ಪುರಾಣ’. ಇದು ಇನ್ನೂ ಬೆಳಕಿಗೆ ಬರಬೇಕಾಗಿದೆ. ಈ ಕೃತಿಯಲ್ಲಿ ಕರ್ನಾಟಕದ ಜನಜೀವನದ ಬಗ್ಗೆ ದೊರೆಯುವ ಐತಿಹಾಸಿಕ ಅಂಶಗಳನ್ನು ವಿಶ್ಲೇಷಿಸಿ ಸಂಪ್ರಬಂಧ ಬರೆದಿದ್ದಾರೆ.

ಇವರು ಬರೆದಿರುವ ಸಂಪ್ರಬಂಧಗಳು ಅನೇಕ ಪ್ರತಿಯೊಂದು ಸಂಪ್ರಬಂಧವೂ ವಿಶಿಷ್ಟವಾದದು. ಈ ಎಲ್ಲವೂಗಳಲ್ಲಿ ರೆಡ್ಡಿಯವರ ವ್ಯಾಪಕವಾದ ನಿಶಿತವಾದ ಅಧ್ಯಯನದ ಛಾಪು ಎದ್ದುಕಾಣುತ್ತದೆ.

ತಮ್ಮ ಸಂಪ್ರಬಂಧಗಳ ಬಗ್ಗೆ ಎಷ್ಟು ಮುತುವರ್ಜಿ ವಹಿಸುತ್ತಾರೆಯೋ, ಅಷ್ಟೇ ಮುತುವರ್ಜಿಯಿಂದ ವಿದ್ಯಾರ್ಥಿ ಸಂಶೋಧಕರ ಲೇಖನಗಳ ಬಗ್ಗೆಯೂ ಕಾಳಜಿ ವಹಿಸುತ್ತಾರೆ.

ನಿರೂಪಿಸುವ ವಿಷಯದ ಎಲ್ಲ ಮಗ್ಗುಲುಗಳನ್ನು ಖಚಿತವಾಗಿ ನಿರೂಪಿಸುವ ರೆಡ್ಡಿಯವರ ಗಮನ ಕೇವಲ ಸತ್ಯದ ಕಡೆಗೆ. ಪ್ರತಿಯೊಂದನ್ನು ತನ್ನ ಮೂಗಿನ ನೇರಕ್ಕೆ ನೋಡುವ ಹಠವಾದಿಯಲ್ಲ. ಮುಕ್ತ ಮನಸ್ಸಿನ ಸಗಟು ವ್ಯಕ್ತಿ. ಗೆಳೆಯರ, ವಿದ್ಯಾರ್ಥಿಗಳ ಅಗತ್ಯಗಳನ್ನು ತಾನೇ ಅರಿತು ಸಹಾಯ ಮಾಡಿ ಅದು ತೀರಾ ಸಹಜಕ್ರಿಯೆ ಎಂಬಂತೆ ಕೈಕೊಡವಿಗೊಂಡು ಮುನ್ನಡೆಯುವ ನಿರ್ಲಿಪ್ತ. ಈ ಗುಣಗಳೇ ಆತನ ಸಾನ್ನಿಧ್ಯವನ್ನು ಮಧುರವಾಗಿಸುತ್ತದೆ.

ದೇವರಕೊಂಡಾರೆಡ್ಡಿ ನಿತ್ಯ ವಿದ್ಯಾರ್ಥಿ. ಅಂದಿನಿಂದ ಇಂದಿನವರೆಗೆ ಅವರ ಅಧ್ಯಯನ ನಿಷ್ಠೆ ಹಸಿರಾಗಿಯೇ ಉಳಿದಿದೆ. ಎಪ್ಪತ್ತೈದು ವಸಂತಗಳನ್ನು ಕಂಡ ಈ ಗುಣಮಧುರ ಈಗ ಶಾಸನರತ್ನಾಕರನಾಗಿದ್ದಾನೆ. ಆತನ ಜ್ಞಾನಯಜ್ಞ ಅವಿರತವಾಗಿ ಸಾಗಲಿ.

ತಣ್ಣಗಾಗುತ್ತಿದೆ ಇರಾನಿ ಚಾಯ್ ಸಂಸ್ಕೃತಿ

ಇರಾನಿ ಚಹಾ ಸವಿಯುತ್ತಿರುವ ಗ್ರಾಹಕರು

8ನೇ ಪುಟದಿಂದ...

ಚಹಾ ಕುಡಿಸ್ತೀನಿ ಅನ್ನೋದು ಅಹಂಕಾರದ ಆಹ್ವಾನವದು ಎಂಬ ನಂಬಿಕೆ. ಒಮ್ಮೆ ಒಪ್ಪಿ ಟೇಬಲ್‌ಗೆ ಹೋಗಿ ಚಹಾ ಕಪ್ ಎದುರಿಗೆ ಬಂದರೆ ಇನ್ನೊಂದು ಆಹ್ವಾನ.. ಪೆಹಲೆ ಆಪ್ (ಮೊದಲು ನೀವು).. ನಂತರ ಚಹಾ ಕುಡಿಯುವವರ ಆತಿಥ್ಯ ಅದು. ಮೊದಲು ಕುಡಿದವರು ಅತಿಥಿಯಾಗಿ ಅದನ್ನು ಸ್ವೀಕರಿಸಬೇಕು ಎಂಬ ಒತ್ತಾಸೆ. ಹೀಗಾಗಿ ಪೆಹಲೆ ಆಪ್.. ಪೆಹಲೆ ಆಪ್.. ಎನ್ನುವ ಮಾತುಗಳು.

ಇರಾನಿ ಕೆಫೆಗಳಲ್ಲಿ ಚಹಾದ ಜೊತೆಗೆ ಉಸ್ಮಾನಿಯಾ ಬಿಸ್ಕೂಟ್ ವಜ್ರಾಕೃತಿಯ ಸಿಹಿ ಬಿಸ್ಕೂಟುಗಳು, ವೃತ್ತಾಕಾರದ ಉಪ್ಪುಕರಿಮೆಣಸಿನ ಮಸಾಲೆಯುಕ್ತ ಬಿಸ್ಕೂಟುಗಳು ಇದ್ದೇ ಇರುತ್ತವೆ. ಬಿಸ್ಕೂಟುಗಳಿಗೆ ಕಾಯುವಾಗಲೇ ಆಲೀಮ್ ಭಾಯ್ ಮತ್ತೊಮ್ಮೆ ಕಾಳಜಿಯಿಂದ ಕೇಳಿದರು.. ಮಲ್ಯೆ ನಕ್ಕೊ? (ಕೆನೆ ಬೇಡವೇ) ಬೇಡವೇ ಬೇಡ ಎಂದೆ.

ಮೊಹ್ಮದ್ ಅಲೀಮ್ ಅವರ ಚಿಕ್ಕಪ್ಪ ಹೈದರಾಬಾದ್‌ನ ಇರಾನಿ ಕೆಫೆಯೊಂದರಲ್ಲಿ ಪಾರ್ಸಿ ಕುಟುಂಬದ ಸಹಾಯಕರಾಗಿದ್ದರಂತೆ. ಚಹಾ ಮಾಡುವುದನ್ನು ಅಲ್ಲಿಂದಲೇ ಕಲಿತಿದ್ದು. ಪಾರ್ಸಿ ಕುಟುಂಬಗಳು ಒಂದೊಂದಾಗಿ ಈ ಕೆಫೆಗಳನ್ನು ಮುಚ್ಚತೊಡಗಿದಾಗ, ಇವರು ಚಹಾ ಅಂಗಡಿಯನ್ನು ತೆರೆದರಂತೆ. ಹೀಗೆ ಒಂದೊಂದೆ ಕುಟುಂಬಗಳು ಹೈದರಾಬಾದ್‌ನಿಂದ, ಪಟ್ಟಣಚೆರು, ಜಹೀರಾಬಾದ್ ಮೂಲಕ ಬೀದರ್ ಪ್ರವೇಶಿಸಿದವು. ಕಲಬುರಗಿ, ರಾಯಚೂರುಗಳಲ್ಲಿಯೂ ಇರಾನಿ ಚಹಾ ಸಿಗತೊಡಗಿತು.

ಮೊಹ್ಮದ್ ಅಲೀಮ್ ಕುಟುಂಬ ನಾಲ್ವತ್ತು ವರ್ಷಗಳಿಂದಲೂ ಈ ಭಾಗದಲ್ಲಿ ಚಹಾ ತಯಾರಿಸುತ್ತಿದ್ದಾರೆ. ಮೊದಲಿನಂತೆ ಗಟ್ಟಿಹಾಲು ಸಿಗುತ್ತಿಲ್ಲ ಎನ್ನುವುದೇ ಅವರ ದೂರು.

ತುಟಿಗಂಟುವ ಕೆನೆಯನ್ನು ಒಳಗೆಳೆದುಕೊಂಡು, ಚಪ್ಪರಿಸಿ ತಿನ್ನುತ್ತಲೇ ಮಂದವಾದ ಚಹಾ ಹೀರಿದಾಗ ಕಂಠದಿಂದ ನಾಭಿಯವರೆಗೂ ನಿಧಾನವಾಗಿ ಇಳಿಯುವುದು ಗೊತ್ತಾಗಬೇಕು. ಸವಿಯುವುದೆಂದರೆ ಅದು.. ಬಿಸ್ಕೂಟ್ ಅದ್ದಿ, ಚಹಾ ಹೀರಿ ತಿನ್ನಬೇಕು. ಬನ್ಸ್ ಮೆಲ್ಲುತ್ತ ಒಂದೊಂದೇ ಗುಟುಕು ಹೀರಬೇಕು. ಗಾಜಿನ ಗ್ಲಾಸು ಹಿಡಿಯಲು ಬಿಸಿಯಾಗಿದ್ದರೂ ಎರಡು ಬೆರಳುಗಳ ನಡುವೆ ಗ್ಲಾಸು ಹಿಡಿದು ಕುಡೀಬೇಕು. ಇಲ್ಲವೇ ಕರವಸ್ತ್ರವನ್ನು ಅಂಗೈಯಲ್ಲಿ ಮಡಿಚಿಟ್ಟು ಚಹಾದ ಗ್ಲಾಸು ಹಿಡಿದು ಕುಡೀಬೇಕು. ಪ್ರತಿ ಗುಟುಕಿನ ನಂತರವೂ ನಮ್ಮ ನಾಲಗೆ ತುಟಿ ಸವರಿಕೊಳ್ಳಬೇಕು. ಆಹ್... ಅನ್ನುವ ಸದ್ದು ಬರುವಂತೆ ಉದ್ಗರಿಸಿ ಸವಿಯಬೇಕು. ಅದು ಇರಾನಿ ಚಾಯ್... ಈಗ ಟೈಮೆಲ್ಲಿದೆ... ಅಬ್ ವೊ ಜಮಾನಾ ನ ರಹಾ... (ಈಗ ಆ ಕಾಲ ಉಳಿಲಿಲ್ಲ) ಎನ್ನುತ್ತ ಹಾಲಿನೊಳಗೆ ಕೈ ಆಡಿಸಲು ಹೊರಟರು.

ಉಳಿದಿದ್ದೆಲ್ಲವೂ ಬದಲಾಗಿದೆ. ‘ಪೆಹಲೆ ಆಪ್’ ಅನ್ನುವ ಕೋರಿಕೆಗಳಿರುವುದಿಲ್ಲ. ಬಿಸ್ಕೂಟು, ಡಬಲ್‌ರೋಟಿಗಳು ಬೇಕೆಬೇಕು ಅಂತೇನಿಲ್ಲ. ಹಾಡು ಕೇಳುವುದಿಲ್ಲ. ಧಾವಂತದಲ್ಲಿ ಬಂದು ಚಹಾ ಹೀರಿ ಹೊರಡುತ್ತಾರೆ. ಚಹಾ ಕುಡಿದು ನಿರಾಳರಾಗಿ ನಗುತ್ತಹೊರಹೋಗುವವರಿಲ್ಲ.ಕಾಲಬದಲಾಗಿದೆ.

ಇರಾನಿ ಕೆಫೆಗಳಷ್ಟೇ ಅಲ್ಲ, ಆತಿಥ್ಯದ ಸಂಸ್ಕೃತಿಯೊಂದು ಮರೆಯಾದ ಬಗೆ ಇದು...

ಅಂಜೂರ ಬೆಳೆದವರು ಅಂಜಬೇಕಿಲ್ಲ

8ನೇ ಪುಟದಿಂದ...

ರಾಜ್ಯದ ರಾಯಚೂರು, ಚಿತ್ರದುರ್ಗ, ಮಂಡ್ಯದ ಶ್ರೀರಂಗಪಟ್ಟಣದಲ್ಲಿ ಸೀಮಿತ ಪ್ರದೇಶದಲ್ಲಿ ಅಂಜೂರವನ್ನು ಬೆಳೆಯಲಾಗುತ್ತಿದೆ. ಶ್ರೀರಂಗಪಟ್ಟಣದಲ್ಲಿ ಈಗ ತೋಟಗಾರಿಕೆ ಇಲಾಖೆ ಮಾತ್ರ 80 ಹೆಕ್ಟೇರ್ ಪ್ರದೇಶದಲ್ಲಿ ಅಂಜೂರವನ್ನು ಉಳಿಸಿಕೊಂಡಿದೆ.

ಗಣಿನಾಡಿನಲ್ಲಿ ಬೆಳೆಯಲಾಗುತ್ತಿರುವ ಅಂಜೂರವನ್ನು ಮಧ್ಯಪ್ರಾಚ್ಯದ ರಾಷ್ಟ್ರಗಳಿಗೆ ಕಳುಹಿಸುವ ಬಯಕೆ ಇಲ್ಲಿನ ರೈತರಿಗೆ ಇದೆಯಾದರೂ, ಹಣ್ಣು ಬೇಗ ಕೆಡುವುದರಿಂದ ಅದು ಸಾಧ್ಯವಾಗುತ್ತಿಲ್ಲ.

‘2018ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ‘ಒಂದು ಜಿಲ್ಲೆ ಒಂದು ಉತ್ಪನ್ನ’ದ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯಿಂದ ಅಂಜೂರವನ್ನು ಆಯ್ಕೆ ಮಾಡಲಾಗಿತ್ತು. ₹29 ಲಕ್ಷ ಮೊತ್ತದ ಘಟಕ ವೆಚ್ಚದಲ್ಲಿ ಅಂಜೂರದ ಬೆಳೆ, ಅದರ ಉಪ ಉತ್ಪನ್ನ ತಯಾರಿಸಲು ಸಾಲ ಸೌಲಭ್ಯ ನೀಡಲಾಗುತ್ತಿತ್ತು. ಇದಕ್ಕೆ ಶೇಕಡ 50ರಷ್ಟು ಸಬ್ಸಿಡಿಯನ್ನೂ ನೀಡಲಾಗಿತ್ತು’ ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಸಂತೋಷ್ ಸಪ್ಪಂಡಿ. ಆದರೆ, ಆಗಷ್ಟೇ ಬಿದ್ದದ್ದ ಕೋವಿಡ್ ಹೊಡೆತದಿಂದಾಗಿ ಸಾಲ ಸೌಲಭ್ಯ ಪಡೆಯಲು ಅಷ್ಟಾಗಿ ಯಾರೂ ಗಮನ ಕೊಡಲಿಲ್ಲ. ಹೀಗಾಗಿ ಕೆಲವರಷ್ಟೇ ಈ ಯೋಜನೆ ಲಾಭ ಪಡೆದರು.

ಉದ್ಯಮದ ಅವಕಾಶ

ಅಂಜೂರ ಕಟಾವು ಮಾಡಿದ ಒಂದರಿಂದ ಎರಡು ದಿನಗಳಲ್ಲೇ ಕೊಳೆಯುತ್ತದೆ. ಇದು ಅಂಜೂರಕ್ಕಿರುವ ಮಾರುಕಟ್ಟೆಯ ಮಿತಿ. ಕೋವಿಡ್ ಕಾಲದಲ್ಲಿ ಸಾವಿರಾರು ರೈತರು ಸಂಕಷ್ಟಕ್ಕೆ ಗುರಿಯಾಗಿದ್ದನ್ನು ಗಮನಿಸಿದ ಕರ್ನಾಟಕ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಅಂಜೂರದ ಉಪ ಉತ್ಪನ್ನಗಳನ್ನು ತಯಾರಿಸುವ ಬಗೆಯನ್ನು ರೈತರಿಗೆ ಹೇಳಿಕೊಟ್ಟರು. ಅಂಜೂರದ ರೋಲ್, ಬರ್ಫಿಗಳನ್ನು ಮಾಡಲು ತಿಳಿಸಿಕೊಟ್ಟರು. ಅಂಜೂರದ ಮಿತಿ ವಿಸ್ತಾರವಾಗುತ್ತಾ ಹೋಯಿತು. ರೈತರು ಅಂಜೂರವನ್ನು ಮಾರಾಟ ಮಾಡುವುದರ ಜತೆಗೆ, ಅದರ ಉಪ ಉತ್ಪನ್ನಗಳನ್ನೂ ತಯಾರಿಸಿ ಮಾರಾಟ ಮಾಡಲೂ ಆರಂಭಿಸಿದರು. ಅಂಜೂರ ಒಂದೆರಡು ದಿನದಲ್ಲಿ ಹಾಳಾದರೆ, ಅದರ ಉಪ ಉತ್ಪನ್ನಗಳು ಮೂರು ತಿಂಗಳ ವರೆಗೆ ತಿನ್ನಲು ಯೋಗ್ಯ. ಹೀಗಾಗಿ ಅವುಗಳನ್ನು ದೆಹಲಿ ವರೆಗೆ ಮಾರಾಟ ಮಾಡಲಾಗುತ್ತಿದೆ. 100 ರಿಂದ 250 ಗ್ರಾಂ ತೂಕದ ರೋಲ್‌ಗಳನ್ನು ಪ್ಲಾಸ್ಟಿಕ್ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಿ ₹300ರ ವರೆಗೆ ಮಾರಾಟ ಮಾಡಲಾಗುತ್ತಿದೆ. ಸದ್ಯ ಈ ಉಪ ಉತ್ಪನ್ನಗಳನ್ನು ಮಾಡಿ ಹಲವು ಕುಟುಂಬಗಳು ಜೀವನ ನಡೆಸುತ್ತಿವೆ. ಉಪ ಉತ್ಪನ್ನ ತಯಾರಿಕಾ ಕೇಂದ್ರಗಳಲ್ಲಿ ಹಲವರು ಉದ್ಯೋಗಗಳನ್ನು ಕಂಡುಕೊಂಡಿದ್ದಾರೆ. ಈಗ ಅಂಜೂರ ತೋಟಗಾರಿಕೆ ಬೆಳೆ ಎಂಬ ಮಿತಿಯನ್ನೂ ಮೀರಿ, ಉದ್ಯಮದ ಸಾಧ್ಯತೆಯನ್ನು ರೈತರ ಮುಂದಿಟ್ಟಿದೆ.

ಅಂಜೂರದ ರೋಲ್‌ಗಳನ್ನು ಪ್ಯಾಕ್ ಮಾಡುತ್ತಿರುವ ಮಹಿಳೆಯರು.

ಕವನ
ಸವಿತಾ ನಾಗಭೂಷಣ
ಅವರ
ಗಾಂಧಿ ಇರುವರು ನಿಮ್ಮೊಳಗೆ ನೀವು ಬಯಸದಿದ್ದರೂ....
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮೊದಲ ಓದು

ದಲಿತ ಕಣ್ಣಲ್ಲಿ ಗಾಂಧಿ ಹುಟ್ಟುತ್ತಾನೆ!

ಬೇರೆ ಬೇರೆ ಸಂದರ್ಭದಲ್ಲಿ ದಿನ ಪತ್ರಿಕೆಗಳು, ನಿಯತಕಾಲಿಕೆಗಳು, ಪುಸ್ತಕ, ಬ್ಲಾಗ್, ಸ್ಮರಣ ಸಂಚಿಕೆ, ಸಂಪಾದಿತ ಕೃತಿಗಳಿಗಾಗಿ ಸಾಮಾಜಿಕ ಕಾರ್ಯಕರ್ತ, ಪ್ರಮುಖ ಲೇಖಕ ದೇವನೂರ ಮಹಾದೇವ ಅವರ ಜೊತೆ ನಡೆಸಿದ ಸಂದರ್ಶನಗಳನ್ನು ಸಂಗ್ರಹಿಸಿ ‘ದೇವನೂರ ಮಹಾದೇವ ಜೊತೆ ಮಾತುಕತೆ’ ಕೃತಿಯಾಗಿದೆ. ಎಚ್.ಎಲ್.ಪುಷ್ಪಾ, ರಾಜೇಂದ್ರ ಚೆನ್ನಿ, ಮಾವಳ್ಳಿ ಶಂಕರ್, ದು. ಸರಸ್ವತಿ, ಡಿ.ಎಸ್. ನಾಗಭೂಷಣ, ಓ.ಎಲ್. ನಾಗಭೂಷಣಸ್ವಾಮಿ, ರಹಮತ್ ತರಿಕೆರೆ ಮೊದಲಾದವರ ಸಂದರ್ಶನಗಳು ಸೇರಿ ಒಟ್ಟು 41 ಬರಹಗಳಿವೆ.

ವರ್ತಮಾನದ ಸಂದರ್ಭಕ್ಕೆ ದೇವನೂರ ಮಹಾದೇವ ಅವರ ಸಂವೇದನೆಯ ನೆಲೆಯನ್ನು ಗುರುತಿಸುವ ಯತ್ನವನ್ನು ಇಲ್ಲಿನ ಸಂದರ್ಶಕರು ಮಾಡಿದ್ದಾರೆ. ವಿಘಟನೆಯಾಗುತ್ತಿರುವ ದಲಿತ ಸಂಘರ್ಷ ಸಮಿತಿ ಒಂದಾಗಬೇಕು ಎಂಬ ಪ್ರಕ್ರಿಯೆ ಆರಂಭವಾದ ಸಂದರ್ಭದಲ್ಲಿ ‘ದಲಿತ ಸಮಾಜ ತಬ್ಬಲಿ ಆಯ್ತು’ ಪ್ರಜಾವಾಣಿ (25.4.2010) ಸುದೇಶ ದೊಡ್ಡಪಾಳ್ಯ ಅವರ ಎಡಗೈ, ಬಲಗೈ ಸಮಸ್ಯೆ ಹಾಗೆ ಉಳಿಯುತ್ತದಲ್ಲವೇ? ಪ್ರಶ್ನೆಗೆ ‘ಬಹಳ ಹಿಂದೆ ಪ್ರಜಾವಾಣಿಯ ವಾಚಕರವಾಣಿಗೆ ನಾನು ಒಂದು ಪತ್ರ ಬರೆದಿದ್ದೆ’ ಎಂದು ಅದರ ಸಾರಾಂಶವನ್ನು ಮತ್ತೆ ಸ್ಮರಿಸುತ್ತಾರೆ. ಆ ಸಮಸ್ಯೆಗೆ ಪರಿಶಿಷ್ಟ ಸಮುದಾಯದ ಜಾತಿ, ಉಪಪಂಗಡಗಳ ಜನಸಂಖ್ಯೆಯ ಗಣತಿ ಸಮರ್ಪಕವಾಗಿ ಮಾಡಬೇಕು. ನಂತರ ಆದ ಅನ್ಯಾಯವನ್ನು ಸರಿಪಡಿಸಬಹುದು ಎನ್ನುವ ಇಂಗಿತವನ್ನು ಮಹಾದೇವ ವ್ಯಕ್ತಪಡಿಸುತ್ತಾರೆ.

ರಾಜ್ಯದಲ್ಲಿ ಸೈದ್ಧಾಂತಿಕ ರಾಜಕೀಯದ ಪ್ರಯೋಗದ ಭಾಗವಾಗಿ ‘ಸರ್ವೋದಯ ಕರ್ನಾಟಕ’ ಪಕ್ಷ ಅಸ್ತಿತ್ವಕ್ಕೆ ಬಂದಿತ್ತು. ಅದಕ್ಕೆ ಹತ್ತು ವರ್ಷ ತುಂಬಿದ ಹಿನ್ನೆಲೆಯಲ್ಲಿ ಪಕ್ಷದ ಅಧ್ಯಕ್ಷ ದೇವನೂರ ಮಹಾದೇವ ಅವರ ಜೊತೆ ರಹಮತ್ ತರಿಕೆರಿ ನಡೆಸಿದ ಸುದೀರ್ಘ ಮಾತುಕತೆ ‘ಸರ್ವೋದಯ ನಡಿಗೆಯಲ್ಲಿ ತಿಟ್ಟತ್ತಿ ನಿಂತು...’ ಪ್ರಜಾವಾಣಿ, ಮುಕ್ತಛಂದ ಪುರವಣಿಯಲ್ಲಿ (2.8. 2015) ಪ್ರಕಟಗೊಂಡಿದೆ. ಅದರಲ್ಲಿ ದಲಿತರು, ರೈತರು ಹಾಗೂ ಶ್ರಮಿಕ ವರ್ಗವನ್ನು ಒಟ್ಟಾಗಿಸಿ ಪರ್ಯಾಯ ರಾಜಕಾರಣದ ಶಕ್ತಿಯಾಗಿ ಪರಿವರ್ತಿಸುವ ಆಯಾಮದ ಚರ್ಚೆ ಇದೆ. ‘ರಾಜಕೀಯದ ಸುಳಿ ಜೊತೆಗೆ ಗಾಂಧಿ...’ ಎಂಬ ಭಾಗದಲ್ಲಿ ಹತ್ತು ಲೇಖನಗಳು ಇವೆ. ಅದರಲ್ಲಿ ಅಮೃತಾ ದತ್ತ ‘ಗಾಂಧಿಯಿಂದ ದಲಿತರು ಏನು ನಿರೀಕ್ಷೆ ಮಾಡಬೇಕು’ ಎಂದು ಕೇಳುವ ಪ್ರಶ್ನೆಗೆ ‘ಗಾಂಧಿ ಮುಂದಿನ ಜನ್ಮದಲ್ಲಿ ಹರಿಜನ ಆಗಿ ಹುಟ್ಟಬೇಕು ಎನ್ನುತ್ತಾರೆ. ಇದು ಆಗುತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ಆದರೆ ಗಾಂಧಿ ಬದುಕು ಬರಹ ನಡೆಗಳನ್ನು ದಲಿತ ಕಣ್ಣಲ್ಲಿ ಸಂಪಾದನೆ ಮಾಡಿದರೆ ಅಲ್ಲಿ ದಲಿತ ಗಾಂಧಿ ಹುಟ್ಟುತ್ತಾನೆ’ ಎಂದು ದೇವನೂರ ಸೂಕ್ಷ್ಮವಾಗಿ ಉತ್ತರಿಸುತ್ತಾರೆ.

ಆರ್‌ಎಸ್‌ಎಸ್ ಆಳ ಮತ್ತು ಅಗಲ, ಚಳವಳಿ, ಕನ್ನಡ ಸಾಹಿತ್ಯ ಸಂವಾದ ಮಾತ್ರವಲ್ಲದೆ, ಸಮಕಾಲೀನ ಅನೇಕ ಘಟನೆಗಳು ಮತ್ತು ದಲಿತ ಸಮಾಜಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ದೇವನೂರ ಮಹಾದೇವ ಅವರ ಪರಿಹಾರ ಸೂಚಕ ಪ್ರಶ್ನೋತ್ತರ ಮಾಲಿಕೆ ಈ ಕೃತಿ.



ಪು: 232 ₹220

ದೇವನೂರ ಮಹಾದೇವ ಜೊತೆ ಮಾತುಕತೆ
ಸಂಪಾದನೆ: ಬನವಾಸಿಗರು
ಪ್ರ: ಅಭಿರುಚಿ ಪ್ರಕಾಶನ
ಸಂ: 9980560013

ಕಣ್ಣ ಕನ್ನಡಿಯಲ್ಲಿ ಅಬ್ಬೂರಿನ ಚಿತ್ರಗಳು

ಅಬ್ಬೂರಿನ ಚಿತ್ರಗಳು ಎಂಬ ಒಕ್ಕಣೆಯೊಂದಿಗೆ ಆರಂಭವಾಗುವ ಈ ಪುಸ್ತಕ ಕೆಲವೆಡೆ ಅಬ್ಬೂರಿನ ವರದಿಗಳಾಗಿ ಬದಲಾಗಿದೆ. ಸರಳವಾಗಿ ನಿರೂಪಿಸುವ ಕಥನಶೈಲಿಯಲ್ಲಿರುವ ಲೇಖನಗಳು ಮುದಕೊಡುತ್ತವೆ. ಬಿಡಿ ಬರೆಹಗಳಾಗಿ ಓದುವಾಗ ಪುನರಾವರ್ತನೆಯಾದರೂ ಆ ಲೇಖನಕ್ಕೆ ಮಾಹಿತಿ ಸಂಗತವಾಗಿರುತ್ತದೆ. ಒಟ್ಟಿಗೆ ಪುಸ್ತಕ ಓದುವಾಗ ಚೂರು ತೊಡಕೆನಿಸುತ್ತದೆ. ಇದನ್ನು ಹೊರತುಪಡಿಸಿ, ಅಬ್ಬೂರಿನ ಚಿತ್ರಗಳು ನಮ್ಮ ನಿಮ್ಮ ಸುತ್ತಲಿನ ಯಾವ ಗ್ರಾಮದ ಚಿತ್ರವಾದರೂ ಆಗಿರಬಹುದು. ಜಾತಿ ಪದ್ಧತಿ, ಮರೆಯಾಗುವ ಬೇಸಾಯದ ಜಮೀನು, ಕೆರೆ ನುಂಗುವವರು, ಸಂತೆ, ಮಠ, ದೇಗುಲ ಜಾತ್ರೆ ಇವೆಲ್ಲವೂ ನಿಮ್ಮೂರಿನ ಚಿತ್ರಗಳನ್ನೇ ಕಣ್ಮುಂದೆ ತರುವಂಥ ನಿರೂಪಣೆ ಇಲ್ಲಿದೆ. ಹಳ್ಳಿಗಳು ತಮ್ಮ ಜೀವಂತಿಕೆಯನ್ನು ಕಳೆದುಕೊಳ್ಳುವ ಹಳಹಳಿಕೆ, ಬಾಂಧವ್ಯಗಳಲ್ಲಿ ಚುಕ್ಕಿಯಾದವರ ಒಳಿತನ್ನು ನೆನಪಿಸಿಕೊಳ್ಳುವ ತಹತಹ ಎದ್ದು ಕಾಣುತ್ತದೆ. ಬಹು ವರ್ಷಗಳ ನಂತರ ಊರಿಗೆ ಭೇಟಿ ನೀಡಿ, ಪಡಸಾಲೆಯಲ್ಲಿ ಹರಟುವಂತೆ, ಇದ್ದವರ ಸಂಗತಿ, ಇಲ್ಲದವರ ನೆನಪು ಎಲ್ಲವನ್ನೂ ನೆನಪಿಸಿಕೊಳ್ಳುವ ಪುಸ್ತಕ ಇದಾಗಿದೆ.

ಆದರೆ ಒಂದೇ ಗುಕ್ಕಿನಲ್ಲಿ ಪುಸ್ತಕ ಓದುವಾಗ ಕೆಲವು ಅಂಶಗಳು (ಮಾರ್ಲಮ್ಮಿ ಹಬ್ಬ, ಆ ಸಂದರ್ಭದ ರಂಗಭೂಮಿಯ ವಿವರಗಳು, ಅವರ ಸಹೋದರಿ ಜಯಮ್ಮ ಮತ್ತು ಸಹೋದರ ರಾಜು) ಪುನರಾವರ್ತನೆ ಆಗುತ್ತ ಹೋಗುತ್ತವೆ. ಫೇಸ್‌ಬುಕ್‌ನಲ್ಲಿ ಬರೆದ ಬಿಡಿ ಬರೆಹಗಳ ಈ ಸಂಗ್ರಹದಲ್ಲಿ ಇದೊಂದು ದೋಷವೆಂಬಂತೆ ಉಳಿದುಕೊಂಡಿದೆ. ಮುಂದಿನ ಆವೃತಿಯಲ್ಲಿ ಲೇಖಕರು ಈ ಸರಣಿ ಲೇಖನಗಳನ್ನು ಮತ್ತೊಮ್ಮೆ ಪರಿಷ್ಕರಿಸಿದರೆ ಉತ್ತಮ ಓದು ದೊರೆತಂತಾಗುತ್ತದೆ.



ಪು: 136 ₹170

ಕಣ್ಣ ಕನ್ನಡಿಯಲ್ಲಿ ಅಬ್ಬೂರಿನ ಚಿತ್ರಗಳು
ಲೇ: ಅಬ್ಬೂರು ಪ್ರಕಾಶ್
ಪ್ರ: ಬಹುರೂಪಿ
ಸಂ: 7019182729

ಭವಿಷ್ಯದ ಭಾರತಕ್ಕೆ ಪಥವಾಗಬಲ್ಲ ಕೃತಿ

ಆವಧ್ ಸಂಸ್ಥಾನದ ಇಬ್ಬರು ಶ್ರೀಮಂತ ನವಾಬರು ಚದುರಂಗ ಆಡುತ್ತಾ ಕೂತಿರುವ ಹೊತ್ತಿಗೆ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿ ಈ ಇಡೀ ಸಂಸ್ಥಾನವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಇಂದಿನ ಸ್ಥಿತಿಯೂ ಹೀಗೇ ಇದೆ. ಪಕ್ಕದಲ್ಲಿರುವ ಚೀನಾ ಬೆಳವಣಿಗೆಯು ಭಾರತದ ಸ್ಪರ್ಧಾತ್ಮಕತೆಯನ್ನು ಹರಿತಗೊಳಿಸಿಕೊಳ್ಳಲು ಪ್ರೇರಣೆಯಂತೆ ಕೆಲಸ ಮಾಡಬೇಕು’ ಎನ್ನುವ ಮಾತಿನಿಂದ ಹಿಂದಿನ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿದ್ದ ಎಸ್.ಜೈಶಂಕರ್ ಅವರ ‘ದಿ ಇಂಡಿಯಾ ವೇ’: ಸ್ಟ್ರಾಟಜೀಸ್ ಫಾರ್ ಆ್ಯನ್ ಅನ್‌ಸರ್ಟೈನ್ ವರ್ಲ್ಡ್’ ಕೃತಿ ಆರಂಭವಾಗುತ್ತದೆ.

ರಾಜತಾಂತ್ರಿಕ ಕ್ಷೇತ್ರದಲ್ಲಿ ನಾಲ್ಕು ದಶಕಗಳ ಕಾಲ ಕೆಲಸ ಮಾಡಿದ ಅನುಭವ ಹೊಂದಿರುವ ಎಸ್. ಜೈಶಂಕರ್ ಅವರು ವಿದೇಶಾಂಗ ಸಚಿವರಾಗಿಯೂ ಸಾಕಷ್ಟು ಹೆಸರು ಮಾಡಿದವರು. ನಿವೃತ್ತರಾದ ನಂತರ ರಾಜಕೀಯ ಪ್ರವೇಶ ಹಾಗೂ ಸರ್ಕಾರದ ಭಾಗವಾದ ಬಳಿಕ ತಮ್ಮ ವೃತ್ತಿ ಬದುಕಿನ ಹಲವು ಸವಾಲು, ಅವುಗಳನ್ನು ಪರಿಹರಿಸಿದ ಪರಿ ಮತ್ತು ತಮ್ಮ ವಿದೇಶಾಂಗ ನೀತಿಗಳ ಕುರಿತು ಹಲವು ವೇದಿಕೆಗಳಲ್ಲಿ ಹಂಚಿಕೊಂಡ ವಿಚಾರಗಳೇ ಅಕ್ಷರರೂಪ ತಾಳಿವೆ. ಇವರ ಈ ಕೃತಿಯನ್ನು ಪತ್ರಕರ್ತ ಹಾಗೂ ಲೇಖಕ ಬಿ.ಎಸ್.ಜಯಪ್ರಕಾಶ ನಾರಾಯಣ ಅವರು ಅನುವಾದಿಸಿ ‘ಭಾರತ ಪಥ’ ಎಂಬ ಶೀರ್ಷಿಕೆಯನ್ನಿಟ್ಟಿದ್ದಾರೆ.

ಗತಿಸಿದ ಹಲವು ತಪ್ಪುಗಳ ಜತೆಗೆ, ಭವಿಷ್ಯದಲ್ಲಿ ಭಾರತವನ್ನು ಆವಧ್ ಸಂಸ್ಥಾನ ಕಬಳಿಸಿದ ಬ್ರಿಟಿಷರಂತೆ ಇತರರ ಅಪಾಯಗಳಿಗೆ ಸಿಲುಕದಂತೆ ಮುನ್ನಡೆಸುವ ಹಾಗೂ ಜಾಗತಿಕ ಮಟ್ಟದಲ್ಲಿ ದೇಶವನ್ನು ಸುಭದ್ರವನ್ನಾಗಿಸುವ ಕನಸುಗಳ ಕುರಿತು ಜೈಶಂಕರ್ ಹೇಳಿದ್ದಾರೆ.

ಆಯಾ ಕಾಲಘಟ್ಟಕ್ಕೆ ತಕ್ಕಂತೆ ಬದಲಾಗುತ್ತಿದ್ದ ವಿದೇಶಾಂಗ ನೀತಿಗಳನ್ನು ವಿವರವಾಗಿ ಈ ಕೃತಿಯಲ್ಲಿ ಹೇಳಲಾಗಿದೆ. ಬಾಂಗ್ಲಾದೇಶ ವಿಮೋಚನೆಯು ದೇಶದ ದಿಸೆಯನ್ನೇ ಬದಲಿಸಿದ ಕಾಲಘಟ್ಟ, ಶ್ರೀಲಂಕಾದಲ್ಲಿರುವ ತಮಿಳರಿಗೆ ನೆರವಾಗುವ ಭಾರತದ ಉದ್ದೇಶದಿಂದ 1200 ಯೋಧರು ಹುತಾತ್ಮರಾಗುವುದರ ಜತೆಗೆ ಮಾಜಿ ಪ್ರಧಾನಿ ರಾಜೀವ ಗಾಂಧಿ ಅವರ ಹತ್ಯೆಯೂ ನಡೆದ ಪರಿ,ಚೀನಾದೊಂದಿಗಿನ ರಾಜತಾಂತ್ರಿಕ ಸಂಬಂಧ ಇತ್ಯಾದಿಗಳು ವಿದೇಶಾಂಗ ನೀತಿ ಕುರಿತ ಮಾಹಿತಿ ನೀಡುತ್ತದೆ. ಈ ಕೃತಿ ಅಧ್ಯಯನಶೀಲರಿಗೆ ನೆರವಾಗಬಲ್ಲದು.

ಪು: 306 ₹400

ಭಾರತ ಪಥ
ಇಂಗ್ಲಿಷ್ ಮೂಲ: ಎಸ್ ಜೈಶಂಕರ್
ಕನ್ನಡಕ್ಕೆ: ಬಿ.ಎಸ್. ಜಯಪ್ರಕಾಶ ನಾರಾಯಣ
ಪ್ರ: ಅರವಿಂದ ಇಂಡಿಯಾ
ಸಂ: 9902445501

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಅರಣ್ಯಮಯ ಕೋಶ

ಮನುಷ್ಯನ ಪಂಚಕೋಶಗಳು: ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ. ಈ ಸ್ಥೂಲ ಶರೀರವೇ ಅನ್ನ ಪರಿಣಾಮವಾದುದರಿಂದ ಪ್ರತ್ಯಕ್ಷವಾದ ಕೋಶವು ಅನ್ನಮಯ.

ಕುವೆಂಪು ಅವರು ಕಾಡಿನಲ್ಲಿ ಹುಟ್ಟಿ ಬೆಳೆದು ಅದರ ಭವ್ಯಾನುಭವದಲ್ಲಿ ಕವಿಯಾಗಿ ರೂಪುಗೊಂಡಿರುವವರು. ಹಾಗಾಗಿ ಅವರು ತಮಗೊಂದು ‘ಅರಣ್ಯಮಯಕೋಶ’ವಿದೆ ಎಂದು ಹೀಗೆ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಅದು ಅವರ ಅರಣ್ಯಾನುಭವದ ವಿಶಿಷ್ಟ ಪದ ಸೃಷ್ಟಿ.

‘ಅನ್ನಮಯದಾಚೆಯಲಿ
ಪ್ರಾಣಮಯದೀಚೆಯಲಿ
ನನಗಿರುವುದೊಂದಲೆ, ಅರಣ್ಯಮಯ ಕೋಶ?’

ಬರಲುವೋಗು

ಬರಲುವೋಗು (ಕ್ರಿ). ಎಲೆಗಳು ಉದುರಿ ಬೋಳಾಗಿರು

(ಬರಲು + ಪೋಗು)

ಸೀತೆಯನ್ನು ಆಕರ್ಷಿಸುತ್ತ ಸುಳಿದಾಡಿದ ಬಂಗಾರದ ಜಿಂಕೆಯನ್ನು ಕವಿ ಅನನ್ಯವಾಗಿ ವರ್ಣಿಸಿದ್ದಾರೆ. ಅದರ ಕೊಂಬುಗಳನ್ನು ವರ್ಣಿಸುವಾಗ, ಅದು ಮಾಗಿಯ ಕಾಲದಲ್ಲಿ ಎಲೆಗಳು ಉದುರಿ ಬೋಳಾಗಿರುವ ಬೂರುಗ ಮರ ಕವಲುಗಣೆಗಳಿಂದ ಮಲೆ ತಲೆಗೆ ಕೋಡು ಮೂಡಿದಂತೆ ಹೇಗೊಹಾಗೆ ಇದ್ದಿತು ಎಂದು ಅರಣ್ಯಾನುಭವವನ್ನು ಹೊಸ ಪ್ರತಿಮೆಯಲ್ಲಿ ಮೂಡಿಸಿದ್ದಾರೆ. ಇಂದ್ರಿಯಾನುಭವದ ‘ಬರಲುವೋಗು’ ಪದ ಅವರ ಬೌದ್ಧಿಕ ಕಲ್ಪನೆಯಲ್ಲಿ ಹೊಸ ನುಡಿಯಾಗಿ ಜಿಂಕೆಯ ಕೋಡಿನ ಚಿತ್ರಣದಲ್ಲಿ ಕನ್ನಡ ಕಾವ್ಯದಲ್ಲಿ ಸೇರ್ಪಡೆಗೊಂಡಿದೆ.

ಮಾಗಿಗೆ ಬರಲುವೋದ ಬೂರುಗ ಮರಂ
ಕೋಡುಕೋಡಿನ ಕವಲ್ಗಣೆಗಳಿಂ ಮಲೆತಲೆಗೆ
ಕೋಡು ಮೂಡಿದ ತೆರನ ತೋರ್ಪಂತೆ,
ನಿಡುಸೊರ್ಕಿ
ಮಲೆತು ನಿಮಿರಿದುವದರ ಹೇಮರತ್ನ ಪ್ರಭೆಯ
ಚಾರು ಶೃಂಗದ್ವಯಂ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಕಳ್ಳನ ಕೈಚಳಕ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಮನೆಯೊಂದರ ಯಜಮಾನ ಕೆಲವು ದಿನಗಳ ಕಾಲ ಕುಟುಂಬದೊಂದಿಗೆ ಪ್ರವಾಸಕ್ಕೆ ಹೊರಟಿದ್ದ. ಈ ಸಂದರ್ಭದಲ್ಲಿ ಮನೆಗೆ ಕಳ್ಳರು ಬರಬಾರದು ಎಂದು, ಸ್ಪೀಕರ್ ಒಂದರಲ್ಲಿ ನಾಯಿ ಬೊಗಳುವ ಶಬ್ದವನ್ನು ರೆಕಾರ್ಡ್ ಮಾಡಿ ರಾತ್ರಿ ವೇಳೆ ಪ್ರತಿ 10 ನಿಮಿಷಕ್ಕೊಮ್ಮೆ ಬೊಗಳುವ ಶಬ್ದ ಬರುವಂತೆ ಸ್ಪೀಕರ್ ಸೆಟ್ ಮಾಡಿದ. ಜೊತೆಗೆ ಮನೆಯ ಹೊರಗೆ ನಾಯಿ ಇದೆ ಎಚ್ಚರಿಕೆ ಎಂಬ ಬೋರ್ಡ್ ಅಂಟಿಸಿದ. ಒಂದು ದಿನ ಒಬ್ಬ ಕಳ್ಳ ಮನೆಯ ಬಳಿಗೆ ಬಂದ. ನಾಯಿ ಬೊಗಳುತ್ತಿರುವುದನ್ನು ಕೇಳಿ ಅಲ್ಲಿಂದ ಕಾಲ್ಕಿತ್ತ. ಇದಾಗಿ ಕೆಲ ದಿನಗಳ ಬಳಿಕ ಅದೇ ಕಳ್ಳ ಆ ಮನೆಯ ಬಳಿಯೇ ಬಂದ. ದೂರದಿಂದಲೇ ಕೊಂಚ ಹೊತ್ತು ಆ ಮನೆಯನ್ನು ವೀಕ್ಷಿಸಿದ. ನಾಯಿ ಬೊಗಳುತ್ತಲೇ ಇದ್ದಿದ್ದು ಕಂಡು ಆತನಿಗೆ ಸಂಶಯ ಬಂತು. ಮೆಲ್ಲನೆ ಗೋಡೆಯಾಚೆ ಇಣುಕಿ ನೋಡಿದ. ಹೊಸ ಸ್ಪೀಕರ್ ಆತನ ಕಣ್ಣಿಗೆ ಬಿತ್ತು. ಕೈಗೆ ಸಿಕ್ಕ ಸ್ಪೀಕರ್ ಅನ್ನೇ ಹೊತ್ತು ಆತ ಅಲ್ಲಿಂದ ಪರಾರಿಯಾದ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಸುಚೇತ್ ಎ.ಬಿ.
ಹಾವೇರಿ

ವಿಭವ್ ಆರ್.
ಬೆಂಗಳೂರು

ಶ್ರೀನಿಕ ಭೀ. ಸಾಳೆರ್
ಕಲಬುರಗಿ

ಸಂಸ್ಕೃತಿ ಎಂ. ಎಸ್.
ಮೈಸೂರು


ಅಭಿಮನ್ಯು ಚಿನ್ಮಯ್ ಎಸ್. ಜಿ., ಶಿವಮೊಗ್ಗ

ಋತ್ವಿಕ್ ಎಸ್.ಎನ್.
ಉಡುಪಿ

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಕೊ	ಪಂ	ಬೆ	ರ
ವಿ	ಮಾ	ಮುಂ	ಸು
ತಿ	ಸ	ಸಂ	ಕೀ

ಸಂಖ್ಯೆ			
1		ಳ	ಕು
		ಳ	ಕು
2		ಗ	ಡ
		ಗ	ಡ
3		ಹಿ	ತ
		ಹಿ	ತ
4		ಪ	ತ್ತು
		ಪ	ತ್ತು
5		ರು	ಗಿ
		ರು	ಗಿ
6		ರು	ತಿ
		ರು	ತಿ

ಗಣಿತದಲ್ಲಿ ಗರ್ದಿ ಗಮ್ಮತ್ತು

4 ಹಾಗೂ 9ರ ನಡುವೆ ಎಷ್ಟೇ 6 ಗಳು ಬಂದರೂ ಅದು 7ರಿಂದ ಪೂರ್ಣಭಾಗವಾಗುತ್ತದೆ.

ಉದಾ: 7) 469 (67
42
49
49
00

7) 4669 (
7) 46669 (

ಇವುಗಳನ್ನು ನೀವೇ ಭಾಗಿಸಿ ನೋಡಿ ಖಾತ್ರಿ ಮಾಡಿಕೊಳ್ಳಿ...

ಹುಡುಕಾಟ

ಇಲ್ಲಿ ಕೊಟ್ಟಿರುವ ಒಬ್ಬ ರಾಷ್ಟ್ರೀಯ ಪುರುಷನ ಹೆಸರಿನ ಎಲ್ಲ ಅಕ್ಷರಗಳ ಮುಂದೆ ಒಂದೊಂದು ಸಿನಿಮಾ ಹೆಸರು ಹುಡುಕಿ

1. ಬಾ ....
2. ಲ ....
3. ಗಂ ....
4. ಗಾ ....
5. ಧ ....
6. ರ ....
7. ತಿ ....
8. ಲ ....
9. ಕ ....

ಮೋಜಿನ ENGLISH

Parts of Speech

Every name is called a NOUN
As field and fountain, street and town;
In place of noun the PRONOUN stands,
As he and she can clap their hands;
The ADJECTIVE describes a thing
As magic wand or bridal ring
The VERB means action, something done
To read and write, to jump and run
How things are done the ADVERBS tell
As quickly, slowly, badly, well
The PREPOSITION shows relations
As in the street or at the station
CONJUCTIONS join, in many ways
Sentences, words, or phrase and phrase
The INTERJECTION cries out, Hark!
I need an exclamation mark!

Parts of Speech ನೆನಪಿಡಲು ಇದನ್ನು ಕಂಠಪಾಠ ಮಾಡಿದರೆ ಸುಲಭವಾಗುತ್ತದೆ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಜಾಣಪದ ಆಟ

ಇಲ್ಲಿರುವ 'ಅವ' ಅಕ್ಷರಗಳಿಗೆ ಅಕ್ಷರಪಟ್ಟಿಯಿಂದ ಆಯ್ದು ಎರಡಕ್ಷರ ತುಂಬಿ ಪೂರ್ಣಪದ ಮಾಡಿ

ಅಕ್ಷರ ಪಟ್ಟಿ

ಕ್ಕಿ	ರ	ಕಾ	ಧೂ	ಫ
ರಾ	ಶ	ಸ	ಲ	ನ
ರಾ	ತಾ	ದಿ	ತ್ರಿ	ಡ
ಧಾ	ರ	ನಿ	ಮಾ	ತ

1	ಅ	ವ		
2	ಅ	ವ		
3	ಅ	ವ		
4	ಅ	ವ		
5	ಅ	ವ		
6	ಅ	ವ		
7	ಅ	ವ		
8	ಅ	ವ		
9	ಅ	ವ		
10	ಅ	ವ		

ಕಳೆದ ಸಂಚಿಕೆಯ ಸರಿ ಉತ್ತರಗಳು

ಹುಡುಕಾಟ: ಹೆಳವನಕಟ್ಟೆ ಗಿರಿಯಮ್ಮ
ಪ್ರಾಸಪದಬಂಧ: 1.ಗುಮ್ಮಟ–ಕಮ್ಮಟ 2.ವಿಸ್ತಾರ–ಪ್ರಸ್ತಾರ 3.ಗಿಟಾರು–ಗಟಾರು 4.ನಿವೃತ್ತಿ–ಪ್ರವೃತ್ತಿ 5.ಬಗಲು–ಹಗಲು 6.ಬಿಗಿತ–ಜಿಗಿತ
ಜಾಣಪದ ಆಟ: ಪ್ರಕಾರ, ಪ್ರಚಾರ, ಪ್ರವಾಸ, ಪ್ರಮುಖ, ಪ್ರಯತ್ನ, ಪ್ರದೀಪ, ಪ್ರಭಾರ, ಪ್ರಭಾವ, ಪ್ರಧಾನ, ಪ್ರಶಾಂತ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಆರು ವರ್ಷದ ಗರಿಷ್ಠಕ್ಕೆ ಏರಿದ ಧಾರಣೆ • 2018ರ ದಾಖಲೆ ಬೆಲೆಯ ನಿರೀಕ್ಷೆ

ಕೆ.ಜಿ ಕಾಳುಮೆಣಸಿನ ದರ ₹660

• ರವಿ ಕೆಳಂಗಡಿ

ಕಳಸದಲ್ಲಿ ಕಾಳುಮೆಣಸಿನ ಬಳ್ಳಿಗೆ ಎಲೆಗಳ ಮೂಲಕ ಪೋಷಕಾಂಶ ಒದಗಿಸುತ್ತಿರುವುದು

ಕಳಸ (ಚಿಕ್ಕಮಗಳೂರು): ಮಲೆನಾಡಿನಲ್ಲಿ ಕಾಫಿ ನಂತರ ಕಾಳುಮೆಣಸು ಬೆಲೆ ಕೂಡ ಏರಿಕೆಯ ಹಾದಿಯಲ್ಲಿದ್ದು, ಬೆಳೆಗಾರರು ಭಾರಿ ನಿರೀಕ್ಷೆಯಲ್ಲಿದ್ದಾರೆ. ಕೆ.ಜಿ ಕಾಳುಮೆಣಸು ಶನಿವಾರ ₹660ಕ್ಕೆ ಮಾರಾಟ ಆಗಿದ್ದು ಕಳೆದ 6 ವರ್ಷಗಳಲ್ಲಿ ಇದು ಗರಿಷ್ಠ ಧಾರಣೆ. 2018ರಲ್ಲಿ ಕೆ.ಜಿ ಕಾಳುಮೆಣಸಿನ ಬೆಲೆ ₹780ಗೆ ತಲುಪಿತ್ತು.

ಫೆಬ್ರುವರಿಯಲ್ಲಿ ಕಾಳುಮೆಣಸು ಕೊಯ್ಲು ನಡೆಯುತ್ತಿದ್ದಾಗ ಕೆ.ಜಿಗೆ ₹525ರ ಆಸುಪಾಸಿನಲ್ಲಿ ಇದ್ದ ಧಾರಣೆ ಈಚೆಗೆ 2 ವಾರಗಳಿಂದ ಸತತ ಏರುಗತಿಯಲ್ಲಿದೆ. 2018ರ ಹಂತಕ್ಕೆ ಬೆಲೆ ತಲುಪುವುದೇ ಎಂಬ ಕುತೂಹಲದಲ್ಲಿದ್ದಾರೆ ಬೆಳೆಗಾರರು.

ಕಾಫಿ ಮತ್ತು ಅಡಿಕೆ ತೋಟದಲ್ಲಿ ಉಪಬೆಳೆಯಾಗಿ ಬೆಳೆಯುತ್ತಿದ್ದ ಕಾಳುಮೆಣಸಿಗೆ ಈಚೆಗೆ ವಿಶೇಷ ಆರೈಕೆ ಮಾಡಿದ್ದಕ್ಕೆ ಫಲ ಸಿಗುವ ಭರವಸೆಯಲ್ಲಿದ್ದಾರೆ ಅವರು.

ವಿಯೆಟ್ನಾಂನಲ್ಲಿ ಪ್ರತಿಕೂಲ ಹವಾಮಾನದ ಕಾರಣ ರೊಬಸ್ಟಾ ಕಾಫಿ ಹಾಗೂ ಕಾಳುಮೆಣಸಿನ ಇಳುವರಿ ಕಡಿಮೆ ಆಗಿದೆ. ಹೀಗಾಗಿ, ಜಾಗತಿಕ ಮಾರುಕಟ್ಟೆಯಲ್ಲಿ ಕಾಳುಮೆಣಸಿನ ಧಾರಣೆ ಏರುತ್ತಿದೆ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಭಾರತದಲ್ಲಿ ವರ್ಷಕ್ಕೆ 70 ಸಾವಿರ ಟನ್ ಕಾಳುಮೆಣಸಿನ ಬೆಳೆಯುತ್ತಿದ್ದು, ಈ ಪೈಕಿ ಶೇ 50ಕ್ಕೂ ಹೆಚ್ಚು ಕರ್ನಾಟಕದ ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಯ ಕೊಡುಗೆ ಎಂದು ಹೇಳುತ್ತಾರೆ.

ಮುಖ್ಯಾಂಶಗಳು

- ದೇಶದಲ್ಲಿ ವರ್ಷಕ್ಕೆ 70 ಸಾವಿರ ಟನ್ ಕಾಳುಮೆಣಸಿನ ಬೆಳೆ
- ಕಾಳುಮೆಣಸಿಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಟನ್‌ಗೆ 8,000 ಡಾಲರ್ ದರ
- 2018ರಲ್ಲಿ ₹780ಗೆ ತಲುಪಿದ್ದ ಕೆ.ಜಿ ಕಾಳುಮೆಣಸಿನ ಬೆಲೆ

2019ರಲ್ಲಿ 2.8 ಲಕ್ಷ ಟನ್‌ಗೂ ಹೆಚ್ಚು ಕಾಳುಮೆಣಸು ಬೆಳೆದಿದ್ದ ವಿಯೆಟ್ನಾಂನಲ್ಲಿ ಈ ವರ್ಷ ಅಂದಾಜು 1.8 ಲಕ್ಷ ಟನ್ ಇಳುವರಿ ಲಭಿಸಿದೆ. ಭಾರತದ ಕಾಳುಮೆಣಸು ಉತ್ತಮ ಗುಣಮಟ್ಟ ಹೊಂದಿದ್ದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಟನ್‌ಗೆ 8,000 ಡಾಲರ್ ಬೆಲೆ ಇದೆ. ಬ್ರೆಜಿಲ್‌ನಿಂದ ಸಾಗುವ ಕಾಳುಮೆಣಸಿಗೆ 7,700 ಡಾಲರ್ ಸಿಕ್ಕಿದರೆ, ವಿಯೆಟ್ನಾಂ ಮೆಣಸಿಗೆ 6,500 ಡಾಲರ್ ಮತ್ತು ಮಲೇಷ್ಯಾ ಮೆಣಸಿಗೆ 4,900 ಡಾಲರ್ ಬೆಲೆ ಇದೆ.

ಬ್ರಿಟನ್‌ಗೆ ಎಫ್‌ಡಿಐ: ಮಹಾರಾಷ್ಟ್ರಕ್ಕೆ ಮೊದಲ ಸ್ಥಾನ

ಲಂಡನ್ (ಪಿಟಿಐ): ಬ್ರಿಟನ್ನಿಗೆ ಭಾರತದಿಂದ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ತರುವ ರಾಜ್ಯಗಳ ಸಾಲಿನಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೆಯ ಸ್ಥಾನದಲ್ಲಿದೆ. ದೆಹಲಿ ಮೂರನೆಯ ಸ್ಥಾನ ಪಡೆದಿದೆ.

ಭಾರತೀಯ ಕೈಗಾರಿಕಾ ಮಹಾಸಂಘ (ಸಿಐಐ) ಹಾಗೂ ಬ್ರಿಟನ್ನಿನಲ್ಲಿ ಇರುವ ಭಾರತೀಯ ಹೈಕಮಿಷನ್ ಜಂಟಿಯಾಗಿ ಸಿದ್ಧಪಡಿಸಿರುವ ವರದಿಯಲ್ಲಿ ಈ ಮಾಹಿತಿ ಇದೆ. ವರದಿಯನ್ನು ಲಂಡನ್ನಿನಲ್ಲಿ ಈಚೆಗೆ ಬಿಡುಗಡೆ ಮಾಡಲಾಗಿದೆ.

ಭಾರತದಿಂದ ಬ್ರಿಟನ್ನಿಗೆ ಎಫ್‌ಡಿಐ ತರುವ ಟಾಪ್‌–10 ರಾಜ್ಯಗಳ ಹೆಸರನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮಹಾರಾಷ್ಟ್ರದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಕಂಪನಿಗಳು ಭಾರತದಿಂದ ಬ್ರಿಟನ್ನಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಎಫ್‌ಡಿಐ ತಂದಿವೆ. ಇದು 2023ರಲ್ಲಿ ಭಾರತದಿಂದ ಬ್ರಿಟನ್ ಕಡೆ ಹರಿದ ಎಫ್‌ಡಿಐ ಮೊತ್ತದ ಶೇಕಡ 20ರಷ್ಟು.

ಕರ್ನಾಟಕದಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಕಂಪನಿಗಳಿಂದ ಬಂದ ಎಫ್‌ಡಿಐ ಪ್ರಮಾಣ ಶೇ 12ರಷ್ಟಿದೆ. ದೆಹಲಿಯ ಪಾಲು ಶೇ 8.6ರಷ್ಟು.

ಗುಜರಾತ್ (ಶೇ 7.1ರಷ್ಟು), ತಮಿಳುನಾಡು (ಶೇ 6.7), ತೆಲಂಗಾಣ (ಶೇ 6.5), ಉತ್ತರ ಪ್ರದೇಶ (ಶೇ 5.9), ಹರಿಯಾಣ (ಶೇ 4.5) ಪಶ್ಚಿಮ ಬಂಗಾಳ (ಶೇ 3.14), ಕೇರಳ (ಶೇ 3.05) ನಂತರದ ಸ್ಥಾನಗಳಲ್ಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹515
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1470 (1470)
ಸೋಯಾ (ರಿಫೈನ್ಡ್)	₹955 (960)
ಸೂರ್ಯಕಾಂತಿ (ರಿಫೈನ್ಡ್)	₹975 (977)
ಪಾಮೋಲಿನ್	₹913 (917)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹301-483
ದ್ವಿತಳಿ (ಬಿ.ವಿ)	₹395-629

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್‌-4	₹195
ಆರ್‌ಎಸ್‌ಎಸ್‌-5	₹186
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ಏಪ್ರಿಲ್‌ನಲ್ಲಿ ಶೇ 3.87ರಷ್ಟು ದಾಖಲು: ಕಾರ್ಮಿಕ ಸಚಿವಾಲಯ

ಕಾರ್ಮಿಕರ ಚಿಲ್ಲರೆ ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಕೈಗಾರಿಕಾ ಕಾರ್ಮಿಕರ ಚಿಲ್ಲರೆ ಹಣದುಬ್ಬರ ದರವು ಏಪ್ರಿಲ್‌ನಲ್ಲಿ ಶೇ 3.87ಕ್ಕೆ ಇಳಿದಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ಶೇ 5.09ರಷ್ಟಿತ್ತು ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಫೆಬ್ರುವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಗ್ರಾಹಕ ಬೆಲೆ ಸೂಚ್ಯಂಕ–ಕೈಗಾರಿಕಾ ಕಾರ್ಮಿಕರು (ಸಿಪಿಐ–ಐಡಬ್ಲ್ಯು) ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದೆ.

2023ರ ಮಾರ್ಚ್‌ನಲ್ಲಿ ಶೇ 5.79ರಷ್ಟಿದ್ದ ಹಣದುಬ್ಬರ ದರವು ಪ್ರಸಕ್ತ ಮಾರ್ಚ್‌ನಲ್ಲಿ ಶೇ 4.20ರಷ್ಟಕ್ಕೆ ಇಳಿದಿದೆ. ಕಳೆದ ಫೆಬ್ರುವರಿಯಲ್ಲಿ ಶೇ 6.16ರಷ್ಟಿದ್ದ ದರವು ಈ ವರ್ಷದ ಫೆಬ್ರುವರಿಗೆ ಶೇ 4.90ಕ್ಕೆ ಕುಸಿದಿದೆ.

ದೇಶದ 88ಕ್ಕೂ ಹೆಚ್ಚು ಕೈಗಾರಿಕೆಗಳ ಪ್ರಮುಖ ಕೇಂದ್ರದ 317 ಮಾರುಕಟ್ಟೆಗಳಿಂದ ಚಿಲ್ಲರೆ ಬೆಲೆಗಳ ಆಧಾರದ ಮೇಲೆ ಪ್ರತಿ ತಿಂಗಳು ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವನ್ನು ಸಂಗ್ರಹಿಸಲಾಗುತ್ತದೆ.

ಅಖಿಲ ಭಾರತ ಸಿಪಿಐ–ಐಡಬ್ಲ್ಯು ಫೆಬ್ರುವರಿಯಲ್ಲಿ 0.3 ಅಂಶದಷ್ಟು ಏರಿಕೆಯಾಗಿ, 139.2ಕ್ಕೆ ಮುಟ್ಟಿತು. ಆದರೆ, ಮಾರ್ಚ್‌ನಲ್ಲಿ 0.3 ಅಂಶ ಕಡಿಮೆಯಾಗಿ 138.9ಕ್ಕೆ ಇಳಿದಿತ್ತು. ಏಪ್ರಿಲ್‌ನಲ್ಲಿ 0.5 ಅಂಶ ಹೆಚ್ಚಳವಾಗಿ 139.4ಕ್ಕೆ ಮುಟ್ಟಿದೆ ಎಂದು ಸಚಿವಾಲಯ ತಿಳಿಸಿದೆ.

ಸಿಪಿಐ–ಐಡಬ್ಲ್ಯುಯನ್ನು ಉದ್ಯೋಗಿಗಳಿಗೆ ತುಟ್ಟಿ ಭತ್ಯೆ ನಿರ್ಧರಿಸಲು ಮತ್ತು ಪಿಂಚಣಿದಾರರಿಗೆ ಪರಿಹಾರಕ್ಕಾಗಿ ಬಳಸಲಾಗುತ್ತದೆ.

ಇದೇ ವೇಳೆ ಸಚಿವಾಲಯವು ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಅಖಿಲ ಭಾರತ ಗ್ರಾಹಕ ಬೆಲೆ ಸೂಚ್ಯಂಕ ಅಂಕಿ–ಅಂಶಗಳನ್ನೂ ಸಹ ಬಿಡುಗಡೆ ಮಾಡಿದೆ.

2024ರ ಮಾರ್ಚ್‌ನಲ್ಲಿ ಸಿಪಿಐ–ಎಎಲ್ ಮತ್ತು ಸಿಪಿಐ–ಆರ್‌ಎಲ್ ವರ್ಷದ ಹಣದುಬ್ಬರ ದರವು ಕ್ರಮವಾಗಿ ಶೇ 7.15 ಮತ್ತು ಶೇ 7.08ರಷ್ಟಿದೆ. ಏಪ್ರಿಲ್‌ನಲ್ಲಿ ಇದು ಶೇ 7.03 ಮತ್ತು ಶೇ 6.96ರಷ್ಟು ದಾಖಲಾಗಿತ್ತು.

ಸಚಿವಾಲಯವು ಪ್ರತಿ ತಿಂಗಳು ಕೃಷಿ ಕಾರ್ಮಿಕರು (ಸಿಪಿಐ–ಎಎಲ್) ಮತ್ತು ಗ್ರಾಮೀಣ ಕಾರ್ಮಿಕರಿಗಾಗಿ (ಸಿಪಿಐ–ಆರ್‌ಎಲ್) ಚಿಲ್ಲರೆ ಬೆಲೆಯ ಆಧಾರದ ಮೇಲೆ ಅಖಿಲ ಭಾರತ ಗ್ರಾಹಕ ಬೆಲೆ ಸೂಚ್ಯಂಕವನ್ನು 20ಕ್ಕೂ ಹೆಚ್ಚು ರಾಜ್ಯಗಳ 600 ಹಳ್ಳಿಗಳಿಂದ ಸಂಗ್ರಹಿಸುತ್ತದೆ.



ಮುದ್ರಮನೆ ಕಾಫಿ

(50 ಕೆಜಿಗೆ)

ಎಪಿ	₹15600
ಎಸಿ	9380
ಆರ್‌ಪಿ	₹16500
ಆರ್‌ಸಿ	9880

ವಿನಿಮಯ ದರ

$ ಡಾಲರ್	83.50
£ ಪೌಂಡ್	106.07
€ ಯುರೊ	90.23
¥ ಯೆನ್ (100ಕ್ಕೆ)	53

ಸಿಸಿಐ ಕಾರ್ಯದರ್ಶಿಯಾಗಿ ಬಿಂದ್ರಾ

ನವದೆಹಲಿ (ಪಿಟಿಐ): ಭಾರತೀಯ ಕಂದಾಯ ಸೇವೆ ಅಧಿಕಾರಿ ಇಂದರ್ ಪಾಲ್ ಸಿಂಗ್ ಬಿಂದ್ರಾ ಅವರು ಶೀಘ್ರದಲ್ಲೇ ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಐಆರ್‌ಎಸ್ ಅಧಿಕಾರಿ ಅನುಪಮಾ ಆನಂದ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬಿಂದ್ರಾ ನೇಮಕ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ದಿ|| ಕೆ. ಹಿರಣ್ಯಗೌಡರು
ಗಾಂಡ್ಲಹಳ್ಳಿ, ಶ್ರೀನಿವಾಸಪುರ ತಾ|| ಕೋಲಾರ ಜಿಲ್ಲೆ.
ಇಂದಿಗೆ ನೀವು ನಮ್ಮನ್ನಗಲಿ 17 ವರ್ಷಗಳಾದವು
ನಿಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಆಶಿಸುವ,
ತಮ್ಮ ದುಃಖತಪ್ತ ಪತ್ನಿ, ಚೌಡಮ್ಮ ಮತ್ತು ಮಕ್ಕಳು.
ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎನ್.ನಂಜರಾಜ ಅರಸ್
ಮರಣ–28.05.2024
ಸಂಸ್ಥಾಪಕ ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ ವಿವೇಕಾನಂದ ಶಾಲಾ ಕಾಲೇಜುಗಳು ಬೆಂಗಳೂರು-560055

NAME CHANGE ANNOUNCEMENT
Log on to :
dhclassifieds.com

ಭಾವಪೂರ್ಣ ಶ್ರದ್ಧಾಂಜಲಿ

ಜನನ : 14–05–1956
ನಿಧನ : 01–06–2024
ಶ್ರೀಮತಿ ಎಚ್.ಎನ್. ಉಷಾ
(ಶ್ರೀ ಕೆ. ಶೇಷಗಿರಿಯವರ ಪತ್ನಿ)
ಎಕ್ಸಿಕ್ಯೂಟಿವ್ ಪ್ರೆಸಿಡೆಂಟ್ ಟೀಮ್, ಹರ್ಬಲ್‌ಲೈಫ್
ತಾ|| 14–6–2024ನೇ ಶುಕ್ರವಾರ ಬೆಳಿಗ್ಗೆ 9–30 ರಿಂದ 1–00 ಘಂಟೆಗೆ ಪುಣ್ಯಾಹ ಹಾಗೂ ವೈಕುಂಠ ಸಮಾರಾಧನೆಯನ್ನು ಆಯೋಜಿಸಲಾಗಿದೆ.
ಅವರ ದಿವ್ಯ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಕೋರುವ : ಶೇಷಗಿರಿ ಮತ್ತು ಮಕ್ಕಳು
ಶೇಷಗಿರಿ – 9448054666 ದೀಪ – 9611781891

ಮೂರನೇ ವಾರ್ಷಿಕ ಪುಣ್ಯಸ್ಮರಣೆ

ಕೆ.ಎಸ್. ಜಗದೀಶ್ ರೆಡ್ಡಿ
ಕಸವನಹಳ್ಳಿ
“ನಿಮ್ಮ ಜೀವನದ ಸರಳತೆ, ಪ್ರೀತಿ,ಔದಾರ್ಯ ಹಾಗೂ ಮೌಲ್ಯಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆಯುತ್ತಿರುವ”
ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಬೆಂಗಳೂರಿನ ಚಂದ್ರಾಲೇಔಟ್‌ನ ಪಿ.ಜಿ.ಗೆ ಪುರುಷ/ ಮಹಿಳೆ ದಕ್ಷಿಣ ಭಾರತೀಯ ಆಹಾರ ಅಡುಗೆಯವರು ಬೇಕಾಗಿದ್ದಾರೆ. ಉಚಿತ ವಸತಿ ಸೌಲಭ್ಯವಿದೆ. 8892222381, 9071171515

ತಕ್ಷಣ ಬೇಕಾಗಿದ್ದಾರೆ ಬಾಣಸವಾಡಿಯಲ್ಲಿ ಹೊಸ ಹೋಟೆಲ್‌ಗಾಗಿ ಅನುಭವಿ ದಕ್ಷಿಣಭಾರತದ ಬಾಣಸಿಗ. ಉತ್ತಮ ಸಂಬಳ. ಸಂಪರ್ಕ: +917676097134

Drivers

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಲೋಕಲ್ ನಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001/ 9886683188/ 8073697775

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಶಾಲಾ ಬಸ್ ಚಲಾಯಿಸಲು ಹೆವಿ ವೆಹಿಕಲ್ ಲೈಸೆನ್ಸ್ ಮತ್ತು ಬ್ಯಾಡ್ಜ್ ಹೊಂದಿರುವ ಹಾಗೂ ಕನಿಷ್ಠ 3 ವರ್ಷಗಳ ಅನುಭವವಿರುವ ಚಾಲಕರು ಬೇಕಾಗಿದ್ದಾರೆ. ಸಂಪರ್ಕಿಸಿ : +91 9845040804.

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General

REQUIRED BATTERY After Sales Service Field Staff to travel all Karnataka Districts for Checking, Inspection, Material Delivery, Lifting & Booking Batteries. 18k CTC per month. 9330054449, 9330089511

Office Boys/ Peon

ಬೆಂಗಳೂರಿನ ಆರ್‌ಟಿ ನಗರದಲ್ಲಿರುವ ಜಿಆರ್‌ವಿ ಕಾಲೇಜಿನಲ್ಲಿ ಕಚೇರಿ ಸಹಾಯಕ/ಪ್ಯೂನ್ ಅಗತ್ಯವಿದೆ. 9845200540 ಗೆ ಕರೆ ಮಾಡಿ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

Wanted Broken Rice
Farmers, Rice Mills, Brokers, Traders, Mandies, Agencies
We need regular supply of broken rice in large quantity for our Plant in Chennai
Delivery at our Site basis
Contact / Whatsapp 9500875992 or mail ricesilo@yahoo.com

ವಸತಿಗೃಹಕ್ಕೆ ಸ್ವಾಗತಕಾರರು (Receptionist) ಹಾಗೂ ರೂಂ ಬಾಯ್ಸ್ ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10 ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ: ಶ್ರೀಕಮಲ್ ಹೋಟೆಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ, ಅವಿನ್ಯೂರಸ್ತೆ ಕ್ರಾಸ್, ಮೈಸೂರುಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080 - 22215903

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರೆಂಟಲ್ ಪ್ರಾಪರ್ಟೀಸ್

Accommodation Wanted

Commercial

ಬೆಂಗಳೂರಿನ ಎಲ್ಲಾ ಪ್ರದೇಶಗಳಲ್ಲಿ ಕನಿಷ್ಠ 500 ರಿಂದ 5,00,000 ಚದರ ಅಡಿಯ ಯಾವುದೇ ಗಾತ್ರದ ಅಂಗಡಿಯ ಸ್ಥಳಗಳು ಬೇಕಾಗಿದೆ. ಪ್ರೀಮಿಯಂ ಬ್ರ್ಯಾಂಡ್ ಬಾಡಿಗೆಗೆ ನೇರ ಮಾಲೀಕರನ್ನು ಸಂಪರ್ಕಿಸಿ: 9945711666, 40930707 ಮಾಲೀಕರು ದಯವಿಟ್ಟು ವಿವರಗಳನ್ನು ಸಲ್ಲಿಸಿ: www.multicityconsultants.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Bannerghatta Road

SITE FOR sale SIMHAPURI LAYOUT, Near Jigani Industrial area, Bengaluru 6100 sq ft. 9591932764

ವೈವಾಹಿಕ

Brides Wanted

Kannada

ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಾಗಿರುವ ತಂದೆ ತಾಯಿ ಇಲ್ಲದ 42 ವರ್ಷದ ವೀರಶೈವ ಲಿಂಗಾಯಿತ ವರನಿಗೆ 30 ವರ್ಷ ಮೇಲ್ಪಟ್ಟ ವೀರಶೈವ ಲಿಂಗಾಯಿತ ವಧು ಬೇಕಾಗಿದೆ.
9945646919

ಭವಿಷ್ಯ

Astrology

★ಗುರು.ಶ್ರೀದೇವಾನಂದ★ ರವರಿಂದ ಕುಟುಂಬ ಮತ್ತು ದಾಂಪತ್ಯ ಕಲಹ ದುರ್ನಡತೆ,ದುಶ್ಚಟ ರೋಗ,ಸಾಲ, ಶತ್ರು,ಬಂಜೆತನ.ಲೈಂಗಿಕತೆ ಇನ್ನಿತರ ನಿಮ್ಮ ಯಾವುದೇ ಸ್ತ್ರೀಪುರುಷ ಸರ್ವಮನಇಚ್ಛಾ ವಶೀಕರಣ ಮಾಡಿಕೊಳ್ಳಿ.ಕೇಶರಾಶಿಗೆ ಕೇರಳ ತೈಲ ಲಭ್ಯ:9845005009

★||ಸ್ತ್ರೀಪುರುಷ ವಶೀಕರಣ||★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1 ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 25.06.2024 10ದಿನಗಳು:ಉ ಅಯೋಧ್ಯೆ,ಅಖಂಡ ನೇಪಾಳರಾಷ್ಟ್ರ ಪ್ರವಾಸ.05.07.24 07ದಿನಗಳು ಭೂತಾನ್ ರಾಷ್ಟ್ರ ಪ್ರವಾಸ. 20.07.24 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ. (ಅಮರಕಂಠಕಮಯ್ಯಾರ್ ಸಹಿತ) 8073824856/ 9206979202/ 8792319181

7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯಾ. 9 ದಿನಗಳ ಕಾಶಿ, ಅಯೋಧ್ಯಾ. ಭಟ್ ಟ್ರಾವೆಲ್ಸ್ 9844037295 9844166555

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಇಸ್ರೇಲ್ ಸೇನೆ ರಕ್ಷಿಸಿದ ಒತ್ತೆಯಾಳುಗಳಲ್ಲಿ ಒಬ್ಬರಾದ ಅಲ್ಮೊಗ್ ಮಿಯೆರ್ ಅವರು ಸಂತಸ ವ್ಯಕ್ತಪಡಿಸಿದರು —ಎಪಿ ಚಿತ್ರ

ನಾಲ್ವರು ಒತ್ತೆಯಾಳುಗಳ ರಕ್ಷಿಸಿದ ಇಸ್ರೇಲ್

ಜೆರುಸಲೇಂ (ಎಎಫ್‌ಪಿ/ ಎಪಿ): ಗಾಜಾ ಪಟ್ಟಿಯಲ್ಲಿ ಶನಿವಾರ ನಡೆಸಿದ ‘ಅತ್ಯಂತ ಸಂಕೀರ್ಣ ಕಾರ್ಯಾಚರಣೆ’ಯಲ್ಲಿ ನಾಲ್ವರು ಒತ್ತೆಯಾಳುಗಳನ್ನು ರಕ್ಷಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಹಮಾಸ್ ಬಂಡುಕೋರರು ಕಳೆದ ವರ್ಷ ಅಕ್ಟೋಬರ್ 7 ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಇವರನ್ನು ಒತ್ತೆಯಾಳುಗಳನ್ನಾಗಿ ಸಿದ್ದರು ಎಂದು ಸೇನೆಯ ಪ್ರಕಟಣೆ ತಿಳಿಸಿದೆ. ರಕ್ಷಣೆ ಮಾಡಲಾದ ಒತ್ತೆಯಾಳುಗಳನ್ನು ನೋವಾ ಅರ್ಗಮನಿ (26 ವರ್ಷ), ಅಲ್ಮೊಗ್ ಮಿಯೆರ್ ಜಾನ್ (22), ಆ್ಯಂಡ್ರೆ ಕೊಜ್ಲೊವ್ (27) ಮತ್ತು ಶ್ಲೋಮಿ ಜಿವ್ (41) ಎಂದು ಗುರುತಿಸಲಾಗಿದೆ.

ಗಾಜಾದ ಅಲ್ ನುಸ್ಸೆರಾತ್ ಪ್ರದೇಶದಲ್ಲಿ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ ಒತ್ತೆಯಾಳುಗಳನ್ನು ರಕ್ಷಣೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ಡೇನಿಯಲ್ ಹಗರಿ ಹೇಳಿದ್ದಾರೆ.

ಕಾರ್ಯಾಚರಣೆ ವೇಳೆ ಬಂಡುಕೋರರು ಮತ್ತು ಇಸ್ರೇಲ್ ಸೇನೆ ನಡುವೆ ಭಾರಿ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಇಸ್ರೇಲ್ ಸೇನೆಯ ಅಧಿಕಾರಿಯೊಬ್ಬರು ಆ ಬಳಿಕ ಮೃತಪಟ್ಟಿರುವುದಾಗಿ ಸೇನೆಯ ಮೂಲಗಳು ತಿಳಿಸಿವೆ.

ಅ.7 ರಂದು ನಡೆಸಿದ್ದ ದಾಳಿಯ ವೇಳೆ ಹಮಾಸ್ ಬಂಡುಕೋರರು 251 ಮಂದಿಯನ್ನು ಒತ್ತೆಸೆರೆ ಇರಿಸಿಕೊಂಡಿದ್ದರು. ಇಸ್ರೇಲ್ ಪಡೆಗಳ ಪ್ರಕಾರ, ಇನ್ನು ಸುಮಾರು 116 ಒತ್ತೆಯಾಳುಗಳು ಹಮಾಸ್ ವಶದಲ್ಲಿ ಇದ್ದಾರೆ. ಒತ್ತೆಯಾಳಾಗಿದ್ದ ಅವಧಿಯಲ್ಲಿಯೇ ಸುಮಾರು 41 ಜನರು ಮೃತಪಟ್ಟಿದ್ದಾರೆ.

210 ಪ್ಯಾಲೆಸ್ಟೀನಿಯರ ಸಾವು (ಗಾಜಾ ವರದಿ): ಗಾಜಾ ಪಟ್ಟಿಯ ಅಲ್ ನುಸ್ಸೆರಾತ್ ಶಿಬಿರದ ಮೇಲೆ ಇಸ್ರೇಲ್ ಸೇನೆ ನಡೆಸಿದ ದಾಳಿಯಲ್ಲಿ 210 ಮಂದಿ ಮೃತಪಟ್ಟಿದ್ದಾರೆ ಎಂದು ಹಮಾಸ್ ಶನಿವಾರ ಹೇಳಿದೆ.

‘ಇಸ್ರೇಲ್ ಸೇನೆ ದಾಳಿಯಿಂದ ಹುತಾತ್ಮರಾದವರ ಸಂಖ್ಯೆ 210 ತಲುಪಿದೆ. 400ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ’ ಎಂದು ಹಮಾಸ್ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಡೆನ್ಮಾರ್ಕ್ ಪ್ರಧಾನಿ ಮೇಲೆ ಹಲ್ಲೆ

ಕೋಪನ್‌ಹೇಗನ್ (ರಾಯಿಟರ್ಸ್): ಡೆನ್ಮಾರ್ಕ್ ಪ್ರಧಾನಿ ಮೆಟೆ ಫ್ರೆಡೆರಿಕ್ಸನ್ ಮೇಲೆ ಹಲ್ಲೆ ನಡೆದಿದ್ದು, ಸಣ್ಣ ಪ್ರಮಾಣದ ಗಾಯ ಆಗಿದೆ ಎಂದು ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಮೆಟೆ ಫ್ರೆಡೆರಿಕ್ಸನ್

‘ಕುತ್ತಿಗೆ ಸಣ್ಣದಾಗಿ ಉಳುಕಿರುವುದು ಹೊರತುಪಡಿಸಿದರೆ ಪ್ರಧಾನಿ ಆರೋಗ್ಯವಾಗಿಯೇ ಇದ್ದಾರೆ. ಆದರೆ ಘಟನೆಯಿಂದ ಅವರು ಆಘಾತಗೊಂಡಿದ್ದಾರೆ’ ಎಂದು ಹೇಳಿದೆ. ಮೆಟೆ ಅವರು ಶನಿವಾರದ ತಮ್ಮ ಎಲ್ಲ ಕಾರ್ಯಕ್ರಮಗಳನ್ನು ರದ್ದುಗೊಳಿಸಿದ್ದಾರೆ.

ಶುಕ್ರವಾರ ಸಂಜೆ ಕೋಪನ್‌ಹೇಗನ್ ಸ್ಕ್ವೇರ್‌ನಲ್ಲಿ ವ್ಯಕ್ತಿಯೊಬ್ಬ ಪ್ರಧಾನಿ ಅವರನ್ನು ಬಲವಾಗಿ ತಳ್ಳಿದ್ದ. ಹಲ್ಲೆಗೈದ 39 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದ್ದು, ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹಲ್ಲೆ ನಡೆಸಿದ ವ್ಯಕ್ತಿಯ ಉದ್ದೇಶ ಏನು ಮತ್ತು ಆತ ಆಯುಧವನ್ನು ಹೊಂದಿದ್ದನೇ ಎಂಬುದರ ಬಗ್ಗೆ ಪೊಲೀಸರು ಅಥವಾ ಪ್ರಧಾನಿ ಕಚೇರಿ ಯಾವುದೇ ಹೇಳಿಕೆ ನೀಡಿಲ್ಲ.

ಮುಂಬೈ ಧಾರಣೆ

ಶೇಂಗಾ

08-6-2024

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1480)
ಒಂದು ವಾರದ ಡೆಲಿವರಿ	1475 (1475)
ಸೋಯಾ ಕಚ್ಚಾ	928 (928)
ಪಾಮ್ ವಾರದ ಡೆಲಿವರಿ	911 (911)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹70,800 (71,650)
ಬೆಳ್ಳಿ ಕೆ.ಜಿ ₹87,900 (90,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೋದಿ 3.0: ಅಮೆರಿಕದಲ್ಲಿ ಸಂಭ್ರಮಕ್ಕೆ ಸಿದ್ಧತೆ

ವಾಷಿಂಗ್ಟನ್/ನ್ಯೂಯಾರ್ಕ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಅಮೆರಿಕದ 22 ನಗರಗಳಲ್ಲಿ ಸಂಭ್ರಮಾಚರಣೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಅಮೆರಿಕದಲ್ಲಿನ ಬಿಜೆಪಿಯ ಸಾಗರೋತ್ತರ ಗೆಳೆಯರು (ಒಎಫ್‌ಬಿಜೆಪಿ) ಸಂಘಟನೆಯ ನಾಯಕರೊಬ್ಬರು ತಿಳಿಸಿದ್ದಾರೆ.

ನ್ಯೂಯಾರ್ಕ್, ಜೆರ್ಸಿ ಸಿಟಿ, ವಾಷಿಂಗ್ಟನ್, ಬಾಸ್ಟನ್, ತಂಪಾ, ಅಟ್ಲಾಂಟಾ, ಹ್ಯೂಸ್ಟನ್, ಡಲ್ಲಾಸ್, ಷಿಕಾಗೊ, ಲಾಸ್ ಏಂಜಲೀಸ್ ಮತ್ತು ಸ್ಯಾನ್ ಫ್ರಾನ್ಸಿಸ್ಕೋ ಮುಂತಾದ ನಗರಗಳಲ್ಲಿ ಈ ವಾರ ಮತ್ತು ಮುಂದಿನ ವಾರಗಳಲ್ಲಿ ಸಂಭ್ರಮಾಚರಣೆ ನಡೆಯಲಿದೆ.

‘ಅಮೆರಿಕದ 22 ನಗರಗಳಲ್ಲಿ ವಿಜಯದ ಸಂಭ್ರಮಾಚರಣೆಯು ಈ ಶುಕ್ರವಾರದಿಂದ ಮುಂದಿನ ಭಾನುವಾರದವರೆಗೆ ನಡೆಯಲಿದೆ’ ಎಂದು ಒಎಫ್‌ಬಿಜೆಪಿ–ಯುಎಸ್‌ಎ ಅಧ್ಯಕ್ಷ ಅಡಪ ಪ್ರಸಾದ್ ಪಿಟಿಐಗೆ ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಮೋದಿ ನೇತೃತ್ವದ ಬಿಜೆಪಿ ಮತ್ತೆ ಜಯ ಸಾಧಿಸಲಿ ಎಂದು ಪ್ರಾರ್ಥಿಸಿ ಒಎಫ್‌ಬಿಜೆಪಿ ಈ ಹಿಂದೆ ಅಮೆರಿಕದ ವಿವಿಧ ನಗರಗಳಲ್ಲಿ ಹವನ ಆಯೋಜಿಸಿತ್ತು.

ಮೋದಿಗೆ ಮಸ್ಕ್ ಅಭಿನಂದನೆ

ಭಾರತದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ನರೇಂದ್ರ ಮೋದಿ ಅವರನ್ನು ಅಭಿನಂದಿಸಿರುವ ಅಮೆರಿಕದ ಉದ್ಯಮಿ ಇಲಾನ್ ಮಸ್ಕ್, ತಮ್ಮ ಕಂಪನಿಗಳು ಭಾರತದಲ್ಲಿ ಉತ್ತೇಜನಕಾರಿಯಾಗಿ ಕೆಲಸ ಮಾಡಲು ಬಯಸುತ್ತಿರುವುದಾಗಿ ತಿಳಿಸಿದ್ದಾರೆ.

‘ಎಲಾನ್ ಮಸ್ಕ್ ಅವರ ‘ಎಕ್ಸ್’ ಪೋಸ್ಟ್‌ಗೆ ಅದೇ ವೇದಿಕೆಯಲ್ಲೇ ಪ್ರತಿಕ್ರಿಯೆ ನೀಡಿರುವ ನರೇಂದ್ರ ಮೋದಿ ಅವರು, ‘ನಿಮ್ಮ ಶುಭಾಶಯಗಳಿಗೆ ಕೃತಜ್ಞನಾಗಿದ್ದೇನೆ’ ಎಂದು ತಿಳಿಸಿದ್ದಾರೆ. ಭಾರತದ ಪ್ರತಿಭಾವಂತ ಯುವಜನತೆ, ದೇಶದ ಜನಸಂಖ್ಯೆ, ಅನುಕೂಲಕರ ನೀತಿಗಳು ಮತ್ತು ಸ್ಥಿರ ಸರ್ಕಾರವು ತನ್ನ ಎಲ್ಲ ಪಾಲುದಾರರಿಗೆ ಉದ್ದಿಮೆ ಮಾಡಲು ಸೂಕ್ತ ವಾತಾವರಣ ಒದಗಿಸುವುದನ್ನು ಮುಂದುವರೆಸಲಿದೆ ಎಂದು ಮೋದಿ ಹೇಳಿದ್ದಾರೆ.

ಟಿ20 ವಿಶ್ವಕಪ್: ಭಾರತ–ಪಾಕಿಸ್ತಾನ ಮುಖಾಮುಖಿ ಇಂದು • ವಿರಾಟ್, ಬೂಮ್ರಾ ಮೇಲೆ ಕಣ್ಣು

ಅಮೆರಿಕದಲ್ಲಿ ಬದ್ಧ ಪ್ರತಿಸ್ಪರ್ಧಿಗಳ ಹಣಾಹಣಿ

ಭಾರತ ತಂಡದ ವಿರಾಟ್ ಕೊಹ್ಲಿ, ಯಶಸ್ವಿ ಜೈಸ್ವಾಲ್ ತಾಲೀಮು –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ನ್ಯೂಯಾರ್ಕ್: ಅಮೆರಿಕದ ಅಂಗಳದಲ್ಲಿ ಭಾನುವಾರ ಕ್ರಿಕೆಟ್ ಅಂಗಳದ ಕಟ್ಟಾ ಎದುರಾಳಿಗಳ ಹಣಾಹಣಿ ನಡೆಯಲಿದೆ.

ನಾಸೌ ಕೌಂಟಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ 'ವಾರಾಂತ್ಯ ರಜೆ'ಯಂದು ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಹೈವೋಲ್ಟೇಜ್ ಪಂದ್ಯವೆಂದೇ ಇದು ಬಿಂಬಿತವಾಗಿದೆ.

ಕ್ರಿಕೆಟ್ ಕಣದ ಎರಡು ಹಳೆಯ ಪ್ರತಿಸ್ಪರ್ಧಿಗಳ ಪಂದ್ಯವೆಂದರೆ ಇಂದಿಗೂ ಕುತೂಹಲದ ಕಣಜವೇ ಆಗಿದೆ. ಉಭಯ ತಂಡಗಳು ಈ ಹಿಂದೆ ಪೈಪೋಟಿಯಾದಾಗಿನ ರೋಚಕ ಕತೆಗಳೂ ಸಾಕಷ್ಟಿವೆ.

ಆದರೆ ಇಲ್ಲಿ ತಮ್ಮ ಹಳೆಯ ಸಾಧನೆಗಳ ವಿಶ್ವಾಸದಲ್ಲಿಯೇ ಕಣಕ್ಕಿಳಿಯುವುದು ಸೂಕ್ತವಲ್ಲವೆಂಬುದು ಈಗಾಗಲೇ ಸಾಬೀತಾಗಿದೆ. ಇಲ್ಲಿಯ 'ಹೊಸ ಪಿಚ್'ಗಳ ಆಟ ಬಲ್ಲವರು ಕಡಿಮೆ.

ಎ ಗುಂಪಿನಲ್ಲಿ ಪಾಕಿಸ್ತಾನ ತಂಡವು ಆತಿಥೇಯ ಅಮೆರಿಕದ ಎದುರು ಆಘಾತ ಅನುಭವಿಸಿದೆ. ಅದೇ ರೋಹಿತ್ ಶರ್ಮಾ ಬಳಗವು ತನ್ನ ಮೊದಲಪಂದ್ಯದಲ್ಲಿ ಐರ್ಲೆಂಡ್ ಎದುರು ಜಯಿಸಿತ್ತು.

ಪಂದ್ಯದ ಮುನ್ನಾದಿನದ ನೆಟ್ಸ್ ಅಭ್ಯಾಸದಲ್ಲಿ ಭಾರತ ತಂಡದ ಮೂವರು ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಮತ್ತು ಅರ್ಷದೀಪ್ ಸಿಂಗ್ ಅವರು ಹೆಚ್ಚು ಹೊತ್ತು ಅಭ್ಯಾಸ ನಡೆಸಿದರು.

ಹೆಚ್ಚುವರಿ ಬ್ಯಾಟರ್ ಆಗಿ ಯಶಸ್ವಿ ಜೈಸ್ವಾಲ್ ಅವರನ್ನು ಆಡಿಸುವ ಸಾಧ್ಯತೆ ಇದೆ. ಅದಕ್ಕಾಗಿ ಶಿವಂ ದುಬೆ ಅವರನ್ನು ಕೈಬಿಡಬಹುದು. ಇದರಿಂದಾಗಿ ರೋಹಿತ್ ಶರ್ಮಾ ಅವರು ಜೈಸ್ವಾಲ್ ಅವರೊಂದಿಗೆ ಇನಿಂಗ್ಸ್ ಆರಂಭಿಸಿ, ವಿರಾಟ್ ಕೊಹ್ಲಿ ಮೂರನೇ ಕ್ರಮಾಂಕದಲ್ಲಿ ಆಡಬಹುದು. ನಂತರದ ಕ್ರಮಾಂಕಗಳಲ್ಲಿ ರಿಷಭ್ ಪಂತ್, ಸೂರ್ಯಕುಮಾರ್ ಯಾದವ್ ಹಾಗೂ ಹಾರ್ದಿಕ್ ಪಾಂಡ್ಯ ಆಡುವುದು ಬಹುತೇಕ ಖಚಿತ.

ಐರ್ಲೆಂಡ್ ಎದುರಿನ ಪಂದ್ಯದಲ್ಲಿ ಪಾಂಡ್ಯ ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಅದರಿಂದಾಗಿ ಇನ್ನುಳಿದ ಆಲ್‌ರೌಂಡರ್‌ಗಳಾದ ರವೀಂದ್ರ ಜಡೇಜ ಹಾಗೂ ಅಕ್ಷರ್ ಪಟೇಲ್ ಅವರಿಗೂ ಈ ಪಂದ್ಯದಲ್ಲಿ ಅವಕಾಶ ಸಿಗಬಹುದು. ಇದರಿಂದಾಗಿ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ವಿಶ್ರಾಂತಿ ಪಡೆಯುವ ಸಾಧ್ಯತೆ ಇದೆ.

ಈ ಸಂಯೋಜನೆಯಿಂದಾಗಿ 8ನೇ ಕ್ರಮಾಂಕದವರೆಗೂ ತಂಡದ ಬ್ಯಾಟಿಂಗ್ ಬಲ ಹೆಚ್ಚಲಿದೆ. ಆದರೂ ಈ ಪಿಚ್‌ಗಳಲ್ಲಿ ಈ ಸಾಮರ್ಥ್ಯ ಸಾಲದೇನೋ?

ಪಾಕ್ ತಂಡದ ಸಂಯೋಜನೆಯಲ್ಲಿ ಅಂತಹ ಗಂಭೀರ ಚಿಂತೆಯೇನಿಲ್ಲ. ವೇಗದ ಬೌಲಿಂಗ್ ಪಡೆ ಸಶಕ್ತವಾಗಿದೆ. ನಾಯಕ ಬಾಬರ್ ಆಜಂ ಹಾಗೂ ಶಾದಾಬ್ ಖಾನ್ ಉತ್ತಮ ಲಯದಲ್ಲಿದ್ದಾರೆ.

ಇನ್ನುಳಿದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಬೇಕಾದ ಒತ್ತಡವಿದೆ. ನಸೀಂ ಶಾ, ಶಹೀನ್ ಶಹಾ ಆಫ್ರಿದಿ ಹಾಗೂ ಹ್ಯಾರಿಸ್ ರವೂಫ್ ಅವರ ಮುಂದೆ ವಿರಾಟ್, ರೋಹಿತ್ ಅವರ ಅಬ್ಬರಕ್ಕೆ ಕಡಿವಾಣ ಹಾಕುವ ಮಹತ್ವದ ಸವಾಲು ಇದೆ.

ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ಪಾಕ್ ಎದುರಿನ ಪಂದ್ಯಗಳಲ್ಲಿ ಭಾರತ ಮೇಲುಗೈ ಸಾಧಿಸಿದ್ದೇ ಹೆಚ್ಚು. ಆ ಪರಂಪರೆಯನ್ನು ಅಮೆರಿಕದ ನೆಲದಲ್ಲಿಯೂ ಮುಂದುವರಿಸುವ ಛಲದಲ್ಲಿ ರೋಹಿತ್ ಬಳಗವಿದೆ

ಬಲಾಬಲ (ಟಿ20 ಕ್ರಿಕೆಟ್)
ಪಂದ್ಯಗಳು 12

ಭಾರತ ಜಯ	9
ಪಾಕ್ ಜಯ	3

ಬಲಾಬಲ (ಟಿ20 ವಿಶ್ವಕಪ್)
ಪಂದ್ಯಗಳು 7

ಭಾರತ ಜಯ	6
ಪಾಕ್ ಜಯ	1

ವಿರಾಟ್ ಕೊಹ್ಲಿ ಮತ್ತು ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಪಂದ್ಯದ ಜಯವನ್ನು ನಮ್ಮಿಂದ ಕಸಿದು ತಮ್ಮ ತಂಡಕ್ಕೆ ನೀಡಬಲ್ಲ ಸಮರ್ಥರು
ಫವಾದ್ ಆಲಂ, ಪಾಕ್ ತಂಡದ ಆಟಗಾರ

ಇಂದಿನ ಪಂದ್ಯಗಳು
- ವೆಸ್ಟ್‌ಇಂಡೀಸ್–ಯುಗಾಂಡ (ಬೆಳಿಗ್ಗೆ 6)
- ಭಾರತ–ಪಾಕಿಸ್ತಾನ (ರಾತ್ರಿ 8)
- ಒಮಾನ್–ಸ್ಕಾಟ್ಲೆಂಡ್ (ರಾತ್ರಿ 10:30)

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ರೋಹಿತ್ ಶರ್ಮಾ ಮತ್ತು ರಾಹುಲ್ ದ್ರಾವಿಡ್

ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಎಎಫ್‌ಪಿ ಚಿತ್ರ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ, ಯುಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಸಂಜು ಸ್ಯಾಮ್ಸನ್, ಶಿವಂ ದುಬೆ, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್.
ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಅಬ್ರಾರ್ ಅಹಮದ್, ಆಜಂ ಖಾನ್, ಫಕಾರ್ ಜಮಾನ್, ಹ್ಯಾರಿಸ್ ರವೂಫ್, ಇಫ್ತಿಕಾರ್ ಅಹಮದ್, ಇಮಾದ್ ವಾಸೀಂ, ಮೊಹಮ್ಮದ್ ಅಬ್ಬಾಸ್ ಆಫ್ರಿದಿ, ಮೊಹಮ್ಮದ್ ಆಮಿರ್, ಮೊಹಮ್ಮದ್ ರಿಜ್ವಾನ್, ನಸೀಂ ಶಹಾ, ಸೈಮ್ ಆಯೂಬ್, ಶದಾಬ್ ಖಾನ್, ಶಹೀನ್ ಶಾಹ ಆಫ್ರಿದಿ, ಉಸ್ಮಾನ್ ಖಾನ್.

ಆತಿಥೇಯ ಯು ಎಸ್ ಎ ಟಿ20 ವರ್ಲ್ಡ್ ಕಪ್‌ನಲ್ಲಿ ಪಾಕಿಸ್ತಾನಕ್ಕೆ ಆಘಾತ ನೀಡಿದೆ!

ಬಾಂಗ್ಲಾಕ್ಕೆ ಮಣಿದ ಲಂಕಾ

ಡಲ್ಲಾಸ್ (ಎಎಫ್‌ಪಿ): ಬಾಂಗ್ಲಾದೇಶ ತಂಡ ತೀವ್ರ ಹಣಾಹಣಿ ಕಂಡ ಟಿ20 ವಿಶ್ವಕಪ್ ಟೂರ್ನಿಯ 'ಡಿ' ಗುಂಪಿನ ಪಂದ್ಯದಲ್ಲಿ ಶನಿವಾರ 2 ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿ ತನ್ನ ಅಭಿಯಾನವನ್ನು ಯಶಸ್ಸಿನೊಡನೆ ಆರಂಭಿಸಿತು.

ರಿಷದ್ ಹುಸೇನ್ (22ಕ್ಕೆ3) ಅಮೋಘ ಲೆಗ್‌ಸ್ಪಿನ್ ದಾಳಿ ನೆರವಿನಿಂದ ಬಾಂಗ್ಲಾದೇಶ, ಶ್ರೀಲಂಕಾ ತಂಡವನ್ನು 9 ವಿಕೆಟ್‌ಗೆ 124 ರನ್‌ಗಳಿಗೆ ಕಟ್ಟಿಹಾಕಿತು. ಅವರು ಧಜಂಜಯ ಡಿಸಿಲ್ವ, ಚರಿತ್ ಅಸಲಂಕ ಮತ್ತು ವನಿಂದ ಹಸರಂಗ ಅವರ ವಿಕೆಟ್‌ಗಳನ್ನು ಪಡೆದರು. ವೇಗಿ ಮುಸ್ತಫಿಝುರ್ ರೆಹಮಾನ್ 17 ರನ್ನಿಗೆ 3 ವಿಕೆಟ್ ಪಡೆದರು. ಲಂಕಾ ಕಡೆ ಆರಂಭ ಆಟಗಾರ ಪಥುಮ್ ನಿಸಾಂಕ (47, 28ಎ, 4x7, 6x1) ಮಾತ್ರ ಹೋರಾಟ ತೋರಿದರು.

ಉತ್ತರವಾಗಿ ಲಿಟ್ಟನ್ ದಾಸ್ (36) ಮತ್ತು ತೌಹಿಕ್ ಹೃದಯ್ (40, 20ಎ) ಅವರ ಆಟದಿಂದ ಬಾಂಗ್ಲಾ ಒಂದು ಹಂತದಲ್ಲಿ 3 ವಿಕೆಟ್‌ಗೆ 91 ರನ್ ಗಳಿಸಿ ಗೆಲುವಿನತ್ತ ದಾಪುಗಾಲು ಹಾಕಿತ್ತು. ಈ ಸಂದರ್ಭದಲ್ಲಿ ನುವಾನ್ ತುಷಾರ (4–0–18–4) ಅವರು ಅಮೋಘ ಬೌಲಿಂಗ್ ದಾಳಿಯಿಂದ ಶ್ರೀಲಂಕಾ ತಂಡ ತಿರುಗೇಟು ನೀಡಿತು. ಆದರೆ ಅನುಭವಿ ಮಹಮುದುಲ್ಲಾ ರಿಯಾದ್ (ಅಜೇಯ 16, 13ಎ) ತಂಡದ ನೆರವಿಗೆ ಬಂದರು. ಬಾಂಗ್ಲಾ ಒಂದು ಓವರ್ ಇರುವಂತೆ 8 ವಿಕೆಟ್‌ಗೆ 125 ರನ್ ಗಳಿಸಿತು.

ರಿಷದ್ ಹುಸೇನ್ ಎಪಿ ಚಿತ್ರ

ಸ್ಕೋರುಗಳು: ಶ್ರೀಲಂಕಾ: 20 ಓವರುಗಳಲ್ಲಿ 9 ವಿಕೆಟ್‌ಗೆ 124 (ಪಥುಮ್ ನಿಸಾಂಕ 47, ಧನಂಜಯ ಡಿಸಿಲ್ವ 21, ಚರಿತ್ ಅಸಲಂಕ 19, ಆ್ಯಂಜೆಲೊ ಮ್ಯಾಥ್ಯೂಸ್ 16; ತಸ್ಕಿನ್ ಅಹ್ಮದ್ 25ಕ್ಕೆ2, ಮುಸ್ತಫಿಝುರ್ ರೆಹಮಾನ್ 17ಕ್ಕೆ3, ರಿಶದ್ ಹುಸೇನ್ 22ಕ್ಕೆ3); ಬಾಂಗ್ಲಾದೇಶ: 19 ಓವರುಗಳಲ್ಲಿ 8 ವಿಕೆಟ್‌ಗೆ 125 (ಲಿಟ್ಟನ್ ದಾಸ್ 36, ತೌಹಿದ್ ಹೃದಯ್ 40, ನುವಾನ್ ತುಷಾರ 18ಕ್ಕೆ4, ಹಸರಂಗ 32ಕ್ಕೆ2). ಪಂದ್ಯದ ಆಟಗಾರ: ರಿಷದ್ ಹುಸೇನ್.

'ಕಿವೀಸ್' ರೆಕ್ಕೆ ಕತ್ತರಿಸಿದ ಅಫ್ಗಾನಿಸ್ತಾನ

ಜಾರ್ಜ್‌ಟೌನ್ (ಗಯಾನ), (ಪಿಟಿಐ): ಸ್ಫೂರ್ತಿಯುತ ಆಟವಾಡಿದ ಅಫ್ಗಾನಿಸ್ತಾನ ತಂಡ ಲೆಗ್ ಸ್ಪಿನ್ನರ್ ರಶೀದ್ ಖಾನ್ ಮತ್ತು ಎಡಗೈ ವೇಗದ ಬೌಲರ್ ಫಜಲ್ಹಖ್ ಫಾರೂಖಿ ಅವರ ಅಮೋಘ ಬೌಲಿಂಗ್ ನೆರವಿನಿಂದ ಶನಿವಾರ ಟಿ20 ವಿಶ್ವಕಪ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು 84 ರನ್‌ಗಳ ದೊಡ್ಡ ಅಂತರದಿಂದ ಸೋಲಿಸಿ ಅಚ್ಚರಿ ಮೂಡಿಸಿತು.

'ಸಿ' ಗುಂಪಿನಲ್ಲಿ ಈ ಎರಡನೇ ಗೆಲುವಿನೊಡನೆ ಅಫ್ಗನ್ನರ ತಂಡ ಸೂಪರ್ ಎಂಟು ಸ್ಥಾನ ಪಡೆಯುವ ಸಾಧ್ಯತೆ ಬಲಗೊಂಡಿತು.

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಸವಾಲೆನಿಸುವ 160 ರನ್‌ಗಳ ಮೊತ್ತವನ್ನು ಬೆನ್ನಟ್ಟಿದ ಕಿವೀಸ್ ತಂಡ 15.2 ಓವರುಗಳಲ್ಲಿ ಕೇವಲ 75 ರನ್‌ಗಳಿಗೆ ಕುಸಿಯಿತು.

ಟಾಸ್ ಗೆದ್ದ ಮೇಲೆ ಬೌಲಿಂಗ್ ಮಾಡುವ ಕಿವೀಸ್ ನಿರ್ಧಾರ ತಿರುಗುಬಾಣವಾಯಿತು. ಆರಂಭ ಆಟಗಾರ ರಾದ ರಹಮಾನುಲ್ಲಾ ಗುರ್ಬಾಝ್ 56 ಎಸೆತಗಳಲ್ಲಿ 5 ಬೌಂಡರಿ, ಅಷ್ಟೇ ಸಿಕ್ಸರ್‌ಗಳಿದ್ದ 84 ರನ್ ಸಿಡಿಸಿದರೆ, ಜದ್ರಾನ್ 41 ಎಸೆತಗಳಲ್ಲಿ 44 ರನ್ (4x3, 6x2) ಹೊಡೆದು ಅಫ್ಗಾನಿಸ್ತಾನಕ್ಕೆ ಉತ್ತಮ ಆರಂಭ ಒದಗಿಸಿದರು. 14.3 ಓವರುಗಳಲ್ಲಿ 103 ರನ್ ಸೇರಿಸಿದರು. ತಂಡ 6 ವಿಕೆಟ್‌ಗೆ 159 ರನ್ ಹೊಡೆಯಿತು. ಗುರ್ಬಾಝ್ ಆಟಕ್ಕೆ ಪಂದ್ಯ ಶ್ರೇಷ್ಠ ಪ್ರಶಸ್ತಿ ಒಲಿಯಿತು.

2016ರ ವಿಶ್ವಕಪ್‌ನಲ್ಲಿ ಅಫ್ಗನ್ ತಂಡ ನಾಗ್ಪುರದಲ್ಲಿ ನಡೆದ ಪಂದ್ಯದಲ್ಲಿ ಆರು ರನ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸಿದ್ದು ಆಗ ಸುದ್ದಿಯಾಗಿತ್ತು. ಆದರೆ ಕೊನೆಗೇ ವಿಂಡೀಸ್ ತಂಡವೇ ಆಗ ಚಾಂಪಿಯನ್ ಆಗಿತ್ತು.

ಯುಗಾಂಡ ವಿರುದ್ಧ 125 ರನ್ ಗೆಲುವಿನಲ್ಲಿ 9 ರನ್ನಿಗೆ 5 ವಿಕೆಟ್ ಪಡೆದಿದ್ದ ಫರೂಖಿ ಇಲ್ಲಿ 3.2 ಓವರುಗಳಲ್ಲಿ 17 ರನ್ನಿತ್ತು 4 ವಿಕೆಟ್ ಪಡೆದರು. ಅನುಭವಿ ಲೆಗ್ ಸ್ಪಿನ್ನರ್ ರಶೀದ್ ಖಾನ್ ಕೂಡ ಪರಿಣಾಮಕಾರಿಯೆನಿಸಿ 4 ಓವರುಗಳಲ್ಲಿ 17 ರನ್ನಿಗೆ 4 ವಿಕೆಟ್ ಕಿತ್ತರು. ಇದರಲ್ಲಿ ಕೇನ್ ವಿಲಿಯಮ್ಸನ್ (13 ಎಸೆತಗಳಲ್ಲಿ 9) ವಿಕೆಟ್ ಒಳಗೊಂಡಿತ್ತು.

'ಸಿ' ಗುಂಪಿನಲ್ಲಿ ವೆಸ್ಟ್ ಇಂಡೀಸ್ ಮತ್ತು ಯುಗಾಂಡ ನಂತರದ ಸ್ಥಾನದಲ್ಲಿವೆ. ಪಾಪುವಾ ನ್ಯೂಗಿನಿ ಮತ್ತು ನ್ಯೂಜಿಲೆಂಡ್ ಇನ್ನೂ ಖಾತೆ ತೆರೆದಿಲ್ಲ. ಹೊಸ ಚೆಂಡಿನ ದಾಳಿಯಲ್ಲಿ ಫರೂಖಿ ನ್ಯೂಜಿಲೆಂಡ್ ಕುಸಿತಕ್ಕೆ ಕಾರಣರಾದರು. ಫಿನ್ ಅಲೆನ್ ಮೊದಲ ಎಸೆತಕ್ಕೇ ಬೌಲ್ಡ್ ಆದರು. ಮುಂದಿನ ಓವರಿನಲ್ಲಿ ಅಪಾಯಕಾರಿ ಆಟಗಾರ ಡೆವಾನ್ ಕಾನ್ವೆ (8) ವಿಕೆಟ್ ಪಡೆದರು. ವಿಕೆಟ್ ಕೀಪರ್ ಕಾನ್ವೆ ಅವರು ಎಕ್ಸ್‌ಟ್ರಾ ಕವರ್ಸ್‌ನಲ್ಲಿ ಕ್ಯಾಚಿತ್ತರು. ಡೆರಿಲ್ ಮಿಚೆಲ್ (5) ವಿಕೆಟ್ ಕೂಡ ಅವರ ಪಾಲಾಯಿತು.

ರಶೀದ್ ಖಾನ್ ಮೊದಲ ಎಸೆತದಲ್ಲೇ ವಿಲಿಯಮ್ಸನ್ (9) ವಿಕೆಟ್ ಪಡೆದು ಹೊಡೆತ ನೀಡಿದರು. ಗುಲ್ಬದಿನ್ ನೈಬ್ ಸ್ಲಿಪ್‌ನಲ್ಲಿ ಅಮೋಘ ಕ್ಯಾಚ್ ಪಡೆದಿದ್ದರು. ಕೆಳಮಟ್ಟದಲ್ಲಿ ಹೊರಳಿದ ಚೆಂಡಿಗೆ ಚಾಪ್ಮನ್ (4) ಬೌಲ್ಡ್ ಆದರು. ನ್ಯೂಜಿಲೆಂಡ್ ನಂತರ ಚೇತರಿಸಲಿಲ್ಲ.

ಸ್ಕೋರುಗಳು: ಅಫ್ಗಾನಿಸ್ತಾನ: 20 ಓವರುಗಳಲ್ಲಿ 6 ವಿಕೆಟ್‌ಗೆ 159 (ರಹಮಾನುಲ್ಲಾ ಗುರ್ಬಾಝ್ 80, ಇಬ್ರಾಹಿಂ ಜದ್ರಾನ್ 44, ಅಜ್ಮತ್‌ಉಲ್ಲಾ ಒಮರ್‌ಝೈ 22; ಟ್ರೆಂಟ್ ಬೌಲ್ಟ್ 22ಕ್ಕೆ2, ಮ್ಯಾಟ್ ಹೆನ್ರಿ 37ಕ್ಕೆ2, ಲಾಕಿ ಫರ್ಗ್ಯೂಸನ್ 28ಕ್ಕೆ1); ನ್ಯೂಜಿಲೆಂಡ್: 15.2 ಓವರುಗಳಲ್ಲಿ 75 (ಗ್ಲೆನ್ ಫಿಲಿಪ್ಸ್ 18, ಮ್ಯಾಟ್ ಹೆನ್ರಿ 12; ಫಜಲ್ಹಖ್ ಫರೂಕಿ 17ಕ್ಕೆ4, ಮೊಹಮ್ಮದ್ ನಬಿ 16ಕ್ಕೆ2, ರಶೀದ್ ಖಾನ್ 17ಕ್ಕೆ4).

ಅಫ್ಗಾನಿಸ್ತಾನ ಆರಂಭ ಆಟಗಾರ ರಹಮಾನುಲ್ಲಾ ಗುರ್ಬಾಝ್ ಎಪಿ/ಪಿಟಿಐ ಚಿತ್ರ

ಅನ್ನುಗೆ ಬೆಳ್ಳಿ

ಬುಡಾಪೆಸ್ಟ್ (ಪಿಟಿಐ): ಭಾರತದ ಮಹಿಳಾ ಕುಸ್ತಿಪಟು ಅನ್ನು ಮಲಿಕ್, ಬುಡಾಪೆಸ್ಟ್ ರ್‍ಯಾಂಕಿಂಗ್ ಸರಣಿಯ ಫೈನಲ್‌ನಲ್ಲಿ ಚೀನಾದ 21 ವರ್ಷ ವಯಸ್ಸಿನ ಎದುರಾಳಿ ಕೆಶಿನ್ ಹಾಂಗ್ ಅವರ ಕೌಶಲಗಳಿಗೆ ಸಾಟಿಯಾಗಲಿಲ್ಲ. 57 ಕೆ.ಜಿ. ವಿಭಾಗದ ಈ ಸ್ಪರ್ಧೆಯಲ್ಲಿ ಅನ್ನು ಬೆಳ್ಳಿ ಪದಕ ಕೊರಳಿಗೆ ಹಾಕಿಕೊಂಡರು.

ಈ ವಿಭಾಗದ ಅಗ್ರಮಾನ್ಯ ಕುಸ್ತಿಪಟುವಾಗಿರುವ ಕೆಶಿನ್ ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ 12–1 ರಿಂದ ಭಾರತದ ಎದುರಾಳಿಯನ್ನು ಸೋಲಿಸಿದರು. ಅನ್ನು, ಕಳೆದ ವರ್ಷ ನಡೆದ ಹಾಂಗ್‌ಝೌ ಏಷ್ಯನ್ ಕ್ರೀಡೆಗಳ 53 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದರು.

ಎನ್‌ಎಸಿಗೆ ಎರಡು ಗೆಲುವು

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ)ದ ಬಾಲಕರ ತಂಡ ಎನ್‌ಆರ್‌ಜೆ ರಾಜ್ಯ ಜೂನಿಯರ್ ಅಕ್ವಾಟಿಕ್ ಚಾಂಪಿಯನ್‌ಷಿಪ್ ಮೊದಲ ದಿನವಾದ ಶನಿವಾರ ಎರಡು ಜಯ ದಾಖಲಿಸಿದೆ.

ಮೊದಲ ಪಂದ್ಯದಲ್ಲಿ ಎನ್‌ಎಸಿ 15–1ರಿಂದ ವೀನಸ್ ವಿರುದ್ಧ ಹಾಗೂ ಎರಡನೇ ಪಂದ್ಯದಲ್ಲಿ 12–1ರಿಂದ ಸ್ಟಾರ್ ವಿರುದ್ಧ ಜಯ ಸಾಧಿಸಿತು.

ಫಲಿತಾಂಶ: ಬಾಲಕರ ವಿಭಾಗ: ಸ್ಟಾರ್ ಕ್ಲಬ್‌ಗೆ 10–1 ರಿಂದ ವೀನಸ್ ವಿರುದ್ಧ; ಬಿಎಸಿಗೆ 15–5 ರಿಂದ ಎಸ್‌ಎಲ್ ವಿರುದ್ಧ ಜಯ.

ಬಾಲಕಿಯರ ವಿಭಾಗ: ಎನ್‌ಎಸಿಗೆ 13–1ರಿಂದ ಎಸ್‌ಎಲ್ ವಿರುದ್ಧ, ಬಿಎಸಿಗೆ 15–1ರಿಂದ ಎಸ್‌ಎಲ್ ವಿರುದ್ಧ ಗೆಲುವು.

ಫ್ರೆಂಚ್ ಓಪನ್: ಜಾಸ್ಮಿನ್ ಪಾವ್ಲೀನಿ ವಿರುದ್ಧ ಗೆಲುವು

ಶ್ವಾಂಟೆಕ್‌ಗೆ ಸತತ ಮೂರನೇ ಕಿರೀಟ

ಪ್ಯಾರಿಸ್ (ಎಪಿ): ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್, ಶನಿವಾರ ನಡೆದ ಫೈನಲ್‌ನಲ್ಲಿ 6–2, 6–1 ರಿಂದ ಇಟಲಿಯ ಜಾಸ್ಮಿನ್ ಪಾವ್ಲೀನಿ ಅವರನ್ನು ಸುಲಭವಾಗಿ ಸೋಲಿಸಿ ಸತತ ಮೂರನೇ ವರ್ಷ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಕಿರೀಟ ಧರಿಸಿದರು.

ರೋಲೆಂಡ್ ಗ್ಯಾರೋಸ್‌ನಲ್ಲಿ ಇದು ಪೋಲೆಂಡ್‌ನ 23 ವರ್ಷ ವಯಸ್ಸಿನ ಆಟಗಾರ್ತಿಗೆ ಐದು ವರ್ಷಗಳಲ್ಲಿ ನಾಲ್ಕನೇ ಪ್ರಶಸ್ತಿ ಕೂಡ. ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ ನಡೆದ ಪಂದ್ಯದ ಆರಂಭದಲ್ಲಿ ಶ್ವಾಂಟೆಕ್ ಆರಂಭದಲ್ಲಿ 1–2 ಹಿನ್ನಡೆಯಲ್ಲಿದ್ದರು. ಆದರೆ ನಂತರ ಸತತವಾಗಿ ಹತ್ತು ಗೇಮ್‌ಗಳನ್ನು ಗೆದ್ದು ಪೂರ್ಣ ಮೇಲುಗೈ ಸಾಧಿಸಿದರು. ಮೊದಲ ಸೆಟ್ ಗೆದ್ದು ಎರಡನೇ ಸೆಟ್‌ನಲ್ಲಿ 5–0 ಮುನ್ನಡೆ ಪಡೆದು ಬೀಗಿದರು. ರೋಲಂಡ್ ಗ್ಯಾರೋಸ್‌ನಲ್ಲಿ ಅವರು ಸತತ 21 ಪಂದ್ಯಗಳನ್ನು ಗೆದ್ದಂತಾಗಿದೆ. ಈ ಕೆಂಪು ಮಣ್ಣಿನ ಅಂಕಣದಲ್ಲಿ ಅವರ ಗೆಲುವಿನ ದಾಖಲೆ 35–2.

ಬೆಲ್ಜಿಯಮ್‌ನ ಜಸ್ಟಿನ್ ಹೆನಿಸ್ 2005 ರಿಂದ 07ರವರೆಗೆ ಸತತ ಮೂರು ವರ್ಷ ಚಾಂಪಿಯನ್ ಆದ ನಂತರ ಆ ಸಾಧನೆ ಸರಿಗಟ್ಟಿದ ಮೊದಲ ಆಟಗಾರ್ತಿ ಎಂಬ ಶ್ರೇಯವೂ ಅವರದಾಯಿತು. ಅವರು 2020ರಲ್ಲೂ ಈ ಪ್ರಶಸ್ತಿ ಗೆದ್ದಿದ್ದರು. ಜೊತೆಗೆ 2022ರಲ್ಲಿ ಅಮೆರಿಕ ಓಪನ್‌ನಲ್ಲೂ ಚಾಂಪಿಯನ್ ಆಗಿದ್ದರು.

12ನೇ ಶ್ರೇಯಾಂಕದ ಪಾವ್ಲೀನಿ ಅವರಿಗೆ ಇದು ಮೊದಲ ಗ್ರ್ಯಾನ್‌ಸ್ಲಾಮ್ ಫೈನಲ್ ಆಗಿತ್ತು. 28 ವರ್ಷದ ಈ ಆಟಗಾರ್ತಿ ಈ ವರ್ಷದ ಆಸ್ಟ್ರೇಲಿಯನ್ ಓಪನ್‌ನಲ್ಲಿ ನಾಲ್ಕನೇ ಸುತ್ತು ತಲುಪಿದ್ದೇ ಗ್ರ್ಯಾನ್‌ಸ್ಲಾಮ್‌ನಲ್ಲಿ ಈ ಹಿಂದಿನ ಶ್ರೇಷ್ಠ ಸಾಧನೆ. ಪಾವ್ಲೀನಿ ಅವರು ಭಾನುವಾರ ಮಹಿಳಾ ಡಬಲ್ಸ್ ಫೈನಲ್‌ನಲ್ಲಿ ಸಾರಾ ಇರ್ರಾನಿ ಜೊತೆಗೂಡಿ ಐದನೇ ಶ್ರೇಯಾಂಕದ ಕೋಕೊ ಗಾಫ್‌–ಕ್ಯಾಥರಿನಾ ಸಿನಿಕೋವಾ ಜೋಡಿಯನ್ನು ಎದುರಿಸಲಿದ್ದಾರೆ.

ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದ ಪೋಲೆಂಡ್‌ನ ಇಗಾ ಶ್ವಾಂಟೆಕ್ (ಬಲಗಡೆ) ಮತ್ತು ರನ್ನರ್ ಅಪ್ ಇಟಲಿಯ ಜಾಸ್ಮಿನ್ ಪಾವ್ಲೀನಿ. ಎಪಿ/ಪಿಟಿಐ ಚಿತ್ರ

ಫೈನಲ್‌ಗೆ ಅಲ್ಕರಾಜ್– ಜ್ವರೇವ್

ಪ್ಯಾರಿಸ್ (ಎಪಿ): ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿಗಾಗಿ ಭಾನುವಾರ ಫೈನಲ್‌ನಲ್ಲಿ ಮುಖಾಮುಖಿ ಆಗಲಿದ್ದಾರೆ.

ಎರಡು ಗ್ರ್ಯಾನ್‌ಸ್ಲ್ಯಾಮ್ ಟೂರ್ನಿ ಜಯಿಸಿರುವ ಮೂರನೇ ಶ್ರೇಯಾಂಕದ ಅಲ್ಕರಾಜ್ ಮೂರನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ನಾಲ್ಕನೇ ಶ್ರೇಯಾಂಕದ ಜ್ವರೇವ್ ಅವರು ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸುವ ವಿಶ್ವಾಸದಲ್ಲಿದ್ದಾರೆ. ತಡರಾತ್ರಿ ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಅಲೆಕ್ಸಾಂಡರ್ ಜ್ವರೇವ್ ಹಿನ್ನಡೆಯಿಂದ ಚೇತರಿಸಿಕೊಂಡು 2–6, 6–2, 6–4, 6–2 ಅವರು ನಾರ್ವೆಯ ಕ್ಯಾಸ್ಪರ್ ರುಡ್ ಅವರನ್ನು ಸೋಲಿಸಿದರು.

2022ರಲ್ಲಿ ಅಮೆರಿಕ್ ಓಪನ್ ಮತ್ತು 2023 ರಲ್ಲಿ ವಿಂಬಲ್ಡನ್ ಪ್ರಶಸ್ತಿ ಗೆದ್ದಿರುವ ಅಲ್ಕರಾಜ್, ಈಗ ಪ್ಯಾರಿಸ್‌ನ ಕೆಂಪು ಜೇಡಿಮಣ್ಣಿನ ಮೇಲೆ ಟ್ರೋಫಿ ಎತ್ತಿ ಹಿಡಿಯಲು ಒಂದು ಹೆಜ್ಜೆಯಷ್ಟೇ ದೂರದಲ್ಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಜ್ವರೇವ್, 2020ರ ಅಮೆರಿಕ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು. ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಇಲ್ಲಿ 13 ಪ್ರಶಸ್ತಿ ಗೆದ್ದಿರುವ ರಫೆಲ್ ನಡಾಲ್ ಅವರನ್ನು ಮಣಿಸಿದ್ದರು.

ಮಿಲ್ಲರ್ ಅರ್ಧ ಶತಕ: ದಕ್ಷಿಣ ಆಫ್ರಿಕಾಕ್ಕೆ ಜಯ

ನ್ಯೂಯಾರ್ಕ್ (ಪಿಟಿಐ): ವೇಗಿ ಒಟ್ನಿಲ್ ಬಾರ್ಥ್‌ಮ್ಯಾನ್ (11ಕ್ಕೆ4) ಅಮೋಘ ಬೌಲಿಂಗ್ ಹಾಗೂ ಡೇವಿಡ್ ಮಿಲ್ಲರ್ (ಅಜೇಯ 59, 51ಎ) ಅರ್ಧಶತಕದ ನೆರವಿನಿಂದ ಟಿ20 ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾ 'ಡಿ' ಗುಂಪಿನಲ್ಲಿ ನೆದರ್ಲೆಂಡ್ ಮೇಲೆ ನಾಲ್ಕು ವಿಕೆಟ್‌ಗಳಿಂದ ಜಯ ಸಾಧಿಸಿತು.

ನೌಸಾ ಕೌಂಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 103 ರನ್ ಗಳಿಸಿತು. ಈ ಅಲ್ಪ ಮೊತ್ತದ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಏಳು ಎಸೆತಗಳು ಬಾಕಿ ಇರುವಂತೆಯೇ 6 ವಿಕೆಟ್‌ಗೆ 106 ರನ್ ಗಳಿಸಿತು.

ನೆದರ್ಲೆಂಡ್ಸ್ ಸೋಲುವ ಮುನ್ನ ಹೋರಾಟ ತೋರಿತು. ದಕ್ಷಿಣ ಆಫ್ರಿಕಾ ತಂಡ ಒಂದು ಹಂತದಲ್ಲಿ 12 ರನ್‌ಗೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತು. ಟ್ರಿಸ್ಟನ್ ಸ್ಟಬ್ಸ್ (33) ಹಾಗೂ ಡೇವಿಡ್ ಮಿಲ್ಲರ್ (ಅಜೇಯ 59) ಆಸರೆಯಾದರು.

ಇದಕ್ಕೂ ಮುನ್ನ ವೇಗಿ ಒಟ್ನಿಲ್ ಬಾರ್ಥ್‌ಮ್ಯಾನ್ ದಾಳಿಗೆ ನೆದರ್ಲೆಂಡ್ಸ್ ತಂಡವು ಅಲ್ಪ ಮೊತ್ತಕ್ಕೆ ಕುಸಿಯಿತು. ಸೈಬ್ರ್ಯಾಂಡ್ ಇಂಗೆಲ್‌ಬ್ರೆಕ್ಟ್ (40; 45ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಬಾರ್ಥ್‌ಮ್ಯಾನ್ ಮತ್ತು ಮಾರ್ಕೊ ಯಾನ್ಸನ್ ಆರಂಭಿಕ ಹಂತದಲ್ಲಿಯೇ ನೀಡಿದ ಪೆಟ್ಟಿನಿಂದಾಗಿ ನೆದರ್ಲೆಂಡ್ಸ್ ತಂಡವು 48 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 103 (ಸೈಬ್ರ್ಯಾಂಡ್ ಇಂಗೆಲ್‌ಬ್ರೆಕ್ಟ್ 40, ವ್ಯಾನ್ ಬೀಕ್ 23, ಮಾರ್ಕೊ ಯಾನ್ಸನ್ 20ಕ್ಕೆ2, ಒಟ್ನಿಲ್ ಬಾರ್ಥ್ ಮ್ಯಾನ್ 11ಕ್ಕೆ4, ಆ್ಯನ್ರಿಚ್ ನಾಕಿಯಾ 19ಕ್ಕೆ2) ದಕ್ಷಿಣ ಆಫ್ರಿಕಾ: 18.5 ಓವರ್‌ಗಳಲ್ಲಿ 6 ವಿಕೆಟ್‌ಗೆ 106 (ಟ್ರಿಸ್ಟನ್ ಸ್ಟಬ್ಸ್ 33, ಡೇವಿಡ್ ಮಿಲ್ಲರ್ ಅಜೇಯ 59, ವಿವಿಯನ್ ಕಿಂಗ್ಮಾ 12ಕ್ಕೆ2, ವ್ಯಾನ್ ಬೀಕ್ 22ಕ್ಕೆ2)ಪಂದ್ಯ ಶ್ರೇಷ್ಠ: ಡೇವಿಡ್ ಮಿಲ್ಲರ್

ಅಮೆರಿಕ ತಂಡದ ಕನ್ನಡಿಗನ ಯಶೋಗಾಥೆ ಹೇಳಿದ ಅಪ್ಪ

ನಾಸ್ತುಷ್, ಸ್ಕ್ವಾಷ್ ಮತ್ತು ಕ್ರಿಕೆಟ್!

• ಗಿರೀಶ ದೊಡ್ಡಮನಿ

ಬೆಂಗಳೂರು: ಮೂಡಿಗೆರೆ ಮೂಲದ ನಾಸ್ತುಷ್ ಕೆಂಜಿಗೆ ಅವರು ಅಮೆರಿಕದ ಕ್ರಿಕೆಟ್ ತಂಡದಲ್ಲಿ ಆಡಲು ಕಾರಣವಾಗಿದ್ದು ಸ್ಕ್ವಾಷ್ ಆಟವಂತೆ!

ಹೌದು; ಅಮೆರಿಕದಲ್ಲಿ ಜನಿಸಿ ಪೌರತ್ವ ಪಡೆದಿದ್ದ ನಾಸ್ತುಷ್ ಓದಿದ್ದು, ಬೆಳೆದಿದ್ದು ಬೆಂಗಳೂರಿನಲ್ಲಿ. ದಯಾನಂದ ಸಾಗರ ಕಾಲೇಜಿನಲ್ಲಿ ಎಂ.ಟೆಕ್ (ಬಯೋ ಮೆಡಿಕಲ್) ಮಾಡಿದರು. ಈ ಅವಧಿಯಲ್ಲಿ ಅವರು ಕರ್ನಾಟಕದಲ್ಲಿ ಕ್ರಿಕೆಟಿಗನಾಗಿ ಬೆಳೆದಿದ್ದರು. ಆದರೆ ರಾಜ್ಯ ತಂಡದಲ್ಲಿ ಸ್ಥಾನ ಸಿಗದ ಕಾರಣಕ್ಕೆ ನಿರಾಶೆಗೊಂಡು ಕ್ರಿಕೆಟ್ ಆಟವನ್ನು ಬಿಟ್ಟಿದ್ದರು. ಆಗ ಅವರು ಕಲಿತಿದ್ದ ಸ್ಕ್ವಾಷ್ ಅವರ ಜೀವನಕ್ಕೆ ತಿರುವು ನೀಡಿದ್ದು ರೋಚಕ ಕಥೆ.

ಈ ವಿಷಯದ ಕುರಿತು ನಾಸ್ತುಷ್ ಅವರ ತಂದೆ, ಪರಿಸರ, ವಿಜ್ಞಾನ ಲೇಖಕ ಪ್ರದೀಪ್ ಕೆಂಜಿಗೆ 'ಪ್ರಜಾವಾಣಿ'ಯೊಂದಿಗೆ ಅಮೆರಿಕದಿಂದ ದೂರವಾಣಿಯಲ್ಲಿ ನಡೆಸಿದ ಮಾತುಕತೆಯಲ್ಲಿ ಹೇಳಿದರು.

ಕ್ರಿಕೆಟ್ ಬಿಟ್ಟ ನಂತರ ಸ್ಕ್ವಾಷ್ ಆಟದ ಮೇಲೆ ಅಪಾರ ಪ್ರೀತಿ ಬೆಳೆಸಿಕೊಂಡಿದ್ದರು. ಕೇವಲ ಮೂರೇ ತಿಂಗಳಲ್ಲಿ ರಾಜ್ಯ ಚಾಂಪಿಯನ್ ಆಗಿದ್ದರು. ಎಡಗೈ ಆಟಗಾರನಾಗಿದ್ದರು. ಅಂತರರಾಷ್ಟ್ರೀಯ ಆಟಗಾರರಾದ ಸೌರವ್ ಘೋಷಾಲ್ ಮತ್ತು ದೀಪಿಕಾ ಪಳ್ಳಿಕಲ್ ಅವರಿಬ್ಬರೂ ಬೆಂಗಳೂರಿಗೆ ಬಂದಾಗ ಸ್ಪಾರಿಂಗ್ ಪಾರ್ಟನರ್ ಆಗಿ ನಾಸ್ತುಷ್ ಅವರನ್ನೇ ಕರೆಸಿಕೊಳ್ಳುತ್ತಿದ್ದರು. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ನಾಸ್ತುಷ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

'ಅಮೆರಿಕದಲ್ಲಿ ಒಳ್ಳೆಯ ಉದ್ಯೋಗ ಲಭಿಸಿತ್ತು. ಭಾರತದಿಂದ ಬರುವಾಗ ಸ್ಕ್ವಾಷ್ ಕಿಟ್ ತೆಗೆದುಕೊಂಡೇ ಹೋಗಿದ್ದರು. ಅಲ್ಲಿ ಸ್ಕ್ವಾಷ್ ಜನಪ್ರಿಯ ಆಟ. ನಾಸ್ತುಷ್ ಆಟದ ಜೊತೆಗೆ ಸ್ಕ್ವಾಷ್ ಕೋಚಿಂಗ್ ಕೂಡ ಮಾಡಿದರು. ಇದೇ ಸಂದರ್ಭದಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟಿಗರೊಬ್ಬರ ಪರಿಚಯ ನಾಸ್ತುಷ್‌ಗಾಯಿತು. ಅವರು ನಾಸ್ತುಷ್ ಅವರನ್ನು ಭಾನುವಾರದ ಪಂದ್ಯವೊಂದಕ್ಕೆ ಆಹ್ವಾನಿಸಿದ್ದರು. ಆ ಪಂದ್ಯದಲ್ಲಿ ನಾಸ್ತುಷ್ ಬೌಲಿಂಗ್ ನೋಡಿ ಬೆರಗಾಗಿದ್ದರು. ತಂಡಕ್ಕೆ ಆಯ್ಕೆ ಟ್ರಯಲ್ಸ್ ನಡೆಯುತ್ತಿದೆ. ಹಾಜರಾಗು ಎಂದರು. ಆದರೆ ಅಲ್ಲೊಂದು ತಾಂತ್ರಿಕ ಸಮಸ್ಯೆ ಎದುರಾಗಿತ್ತು. ಸ್ಥಳೀಯ ತಂಡದಲ್ಲಿ ಆಡಬೇಕೆಂದರೆ ಮೂರು ವರ್ಷ ಸ್ಥಳೀಯ ಕ್ಲಬ್‌ನಲ್ಲಿ ಆಡಿರಬೇಕು. ಇಲ್ಲವೇ ಒಟ್ಟು 800 ಗಂಟೆಗಳಷ್ಟು ಅವಧಿಯ ಕ್ರಿಕೆಟ್ ಚಟುವಟಿಕೆ ದಾಖಲಿಸಬೇಕು. ಆದರೆ ವಾರದ ಐದು ದಿನ ಉದ್ಯೋಗದಲ್ಲಿದ್ದು ವಾರಾಂತ್ಯದ ಎರಡು ದಿನ ಮಾತ್ರ ಅವಕಾಶ ಸಿಗುತ್ತಿತ್ತು. ದಿನವೊಂದಕ್ಕೆ ಎಂಟು ಗಂಟೆ ಆಡಿದರೆ ವಾರಕ್ಕೆ 16 ತಾಸು ಆಡಬಹುದಿತ್ತು. ಇದು ದೀರ್ಘ ಕಾಲವಾಗುತ್ತಿತ್ತು. ಆದರೆ ನಾಸ್ತುಷ್ ನೌಕರಿ ಬಿಟ್ಟು ಪ್ರತಿದಿನವೂ ಎಂಟು ಗಂಟೆ ಕ್ರಿಕೆಟ್‌ನಲ್ಲಿ ತೊಡಗಿಸಿಕೊಂಡು ಆರು ತಿಂಗಳಿಗೆ 800 ಗಂಟೆಗಳ ನಿಯಮ ಪೂರೈಸಿದರು' ಎಂದು ಪ್ರದೀಪ್ ವಿವರಿಸಿದರು.

ಕೈತುಂಬ ಸಂಬಳ ಬರುವ ಉದ್ಯೋಗವನ್ನು ನಾಸ್ತುಷ್ ಬಿಟ್ಟಿದ್ದು ತಂದೆ, ತಾಯಿಗೆ ಹೇಳಿರಲಿಲ್ಲ. ಆದರೆ ನ್ಯೂಯಾರ್ಕ್‌ನಲ್ಲಿ ಉಪಜೀವನಕ್ಕಾಗಿ ಸಂಜೆ ಹೊತ್ತಿನಲ್ಲಿ ಸ್ಕ್ವಾಷ್ ಕ್ಲಬ್‌ಗಳಲ್ಲಿ ತರಬೇತುದಾರರಾಗಿ ಕೆಲಸ ಮಾಡಿದ್ದರು. ಅದರಿಂದ ಬಂದ ಆದಾಯದಲ್ಲಿ ಜೀವನ ಮಾಡಿದ್ದರು.

'ನಾಸ್ತುಷ್ ಬಹಳ ಪ್ರತಿಭಾವಂತ ಮತ್ತು ಕಠಿಣ ಪರಿಶ್ರಮಿ. ವಿಶ್ವಕಪ್ ಆಡುತ್ತಿರುವುದು ನಮಗೆಲ್ಲ ಹೆಮ್ಮೆ. ಪಾಕಿಸ್ತಾನ ಎದುರು ಮೊದಲ ಓವರ್ ಸ್ಪಿನ್ನರ್ ನಾಸ್ತುಷ್‌ಗೆ ನೀಡಿದಾಗ ನಮಗೆಲ್ಲ ಆತಂಕವಾಗಿತ್ತು. ಆದರೆ ದಿಟ್ಟತನದಿಂದ ಬೌಲಿಂಗ್ ಮಾಡಿ ಅಮೆರಿಕ ತಂಡಕ್ಕೆ ಬಲ ತುಂಬಿದ್ದು ನೋಡಿ ಸಂತಸಪಟ್ಟೆವು. ಸೂಪರ್ ಓವರ್‌ನಲ್ಲಿ ಸೌರಭ್ ನೇತ್ರವಾಳ್ಕರ್ ಆಟ ಅದ್ಭುತವಾಗಿತ್ತು. ಮುಂದಿನ ವಾರ ನಡೆಯುವ ಭಾರತದ ಎದುರಿನ ಪಂದ್ಯದಲ್ಲಿ ನಾಸ್ತುಷ್, ರೋಹಿತ್ ಹಾಗೂ ಕೊಹ್ಲಿ ಎದುರು ಬೌಲಿಂಗ್ ಮಾಡುವುದನ್ನು ನೋಡಲು ಕಾತುರರಾಗಿದ್ದೇವೆ' ಎಂದು ಪ್ರದೀಪ್ ಹೇಳಿದರು.

ಪಾಕಿಸ್ತಾನ ಎದುರಿನ ಪಂದ್ಯದ ನಂತರ ನಾಸ್ತುಷ್ ಕೆಂಜಿಗೆ ಅವರು ತಮ್ಮ ಕುಟುಂಬದೊಂದಿಗೆ ಸಂಭ್ರಮಿಸಿದ್ದು

ನಾರ್ವೆ ಚೆಸ್: ನಕಾಮುರಾ ವಿರುದ್ಧ ಗೆದ್ದ ಪ್ರಜ್ಞಾನಂದ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಭಾರತದ ಆರ್. ಪ್ರಜ್ಞಾನಂದ, ಅಮೆರಿಕದ ಹಿಕಾರು ನಕಾಮುರಾ ವಿರುದ್ಧ ಗೆಲುವಿನ ಮೂಲಕ ನಾರ್ವೆ ಚೆಸ್ ಟೂರ್ನಿಯಲ್ಲಿ ಅಭಿಯಾನ ಅಂತ್ಯಗೊಳಿಸಿದರು. ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ನಿರೀಕ್ಷೆಯಂತೆ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಅಂತಿಮ (10ನೇ) ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರನ್ನು ಸೋಲಿಸಿದ ಕಾರ್ಲ್‌ಸನ್ 17.5 ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಪಡೆದರು. ಸುಮಾರು ₹54 ಲಕ್ಷ ಬಹುಮಾನ ಅವರದಾಯಿತು.

ಈ ವಿಭಿನ್ನ ಟೂರ್ನಿಯಲ್ಲಿ ನಿಗದಿತ ಅವಧಿಯಿರುವ ಕ್ಲಾಸಿಕಲ್ ಮಾದರಿಯ ಪಂದ್ಯ 'ಡ್ರಾ' ಆದಲ್ಲಿ, ಅತ್ಯಲ್ಪ ಅವಧಿಯ ಆರ್ಮ್‌ಗೆಡನ್ ಮೂಲಕ ಫಲಿತಾಂಶ ನಿರ್ಧರಿಸಲಾಗುತ್ತದೆ.

ಬೇಸಿಗೆ ಕಾಲದ ಬ್ರಿಜ್ ಚಾಂಪಿಯನ್‌ಷಿಪ್: ರಾಜೀವ್, ಹಿಮಾನಿ ಜೋಡಿ ರನ್ನರ್ ಅಪ್

ಬಿಂದಿಯಾ ಕೊಹ್ಲಿಗೆ 'ಡಬಲ್' ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂಗಳೂರು: ಎಲಿಮಿನೇಷನ್ ಸುತ್ತಿನಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿದ್ದ ಟಿ.ವಿ.ರಮಣಿ ಮತ್ತು ಬಿಂದಿಯಾ ಕೊಹ್ಲಿ ಇಲ್ಲಿ ನಡೆಯುತ್ತಿರುವ ಬೇಸಿಗೆ ಕಾಲದ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ಮಿಶ್ರ ವಿಭಾಗದ ಡಾ.ಕೆ.ಕೆ.ಭಟ್ನಾಗರ್ ಸ್ಮಾರಕ ಪ್ರಶಸ್ತಿಗೆ ಮುತ್ತಿಟ್ಟರು. ಬಿಂದಿಯಾ, ಮಹಿಳೆಯರ ಪೇರ್‌ನಲ್ಲಿ ಪ್ರಿಯಾ ಬಾಲಸುಬ್ರಹ್ಮಣ್ಯನ್ ಜೊತೆಗೂಡಿ ಪ್ರಶಸ್ತಿ ಗೆದ್ದಿದ್ದರು.

ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಯ ಆಶ್ರಯದಲ್ಲಿ ಕರಾವಳಿ ಬ್ರಿಜ್ ಸಂಸ್ಥೆ, ಮೋತಿ ಮಹಲ್ ಹೋಟೆಲ್‌ನಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಫೈನಲ್ ಲೀಗ್‌ನಲ್ಲಿ ಟಿ.ವಿ.ಆರ್ ಮತ್ತು ಬಿಂದಿಯಾ 87.10 ಸ್ಕೋರು ಗಳಿಸಿದರು. 25 ಸುತ್ತುಗಳ ಸ್ಪರ್ಧೆಯಲ್ಲಿ 83.78 ಸ್ಕೋರು ಕಲೆ ಹಾಕಿದ ರಾಜೀವ್ ಖಂಡೆಲ್ವಾನಿ ಮತ್ತು ಹಿಮಾನಿ ಖಂಡೆಲ್ವಾನಿ ರನ್ನರ್ ಅಪ್ ಆದರು.

ಶುಕ್ರವಾರ ನಡೆದ ಎಲಿಮಿನೇಷನ್ ಸುತ್ತಿನ ಕೊನೆಯಲ್ಲಿ ಮುಂಬೈನ ದಂಪತಿ ಸಂದೀಪ್ ಕರ್ಮಾರ್ಕರ್ ಮತ್ತು ಮರೀನಿ ಕರ್ಮಾರ್ಕರ್ 151.84 ಸ್ಕೋರು ಗಳಿಸಿ ಅಗ್ರಸ್ಥಾನದಲ್ಲಿದ್ದರು. ಟಿ.ವಿ.ಆರ್ ಮತ್ತು ಬಿಂದಿಯಾ, ಫೈನಲ್ ಲೀಗ್ ಹಂತ ಪ್ರವೇಶಿಸಿದ 26 ಜೋಡಿಯ ಪೈಕಿ 16ನೇ ಸ್ಥಾನದಲ್ಲಿದ್ದರು. ಪ್ರಶಸ್ತಿ ಸುತ್ತಿನಲ್ಲಿ ಸಂದೀಪ್ ಮತ್ತು ಮರೀನಿ 8ನೇ ಸ್ಥಾನಕ್ಕೆ ಕುಸಿದರು.

ಶನಿವಾರ ಬೆಳಿಗ್ಗೆಯಿಂದಲೇ ಉತ್ತಮ ಆಟವಾಡುತ್ತ ಸಾಗಿದ ಟಿ.ವಿ.ಆರ್ ಮತ್ತು ಬಿಂದಿಯಾ ಫೈನಲ್ ಲೀಗ್‌ನ 5ನೇ ಸುತ್ತಿನಲ್ಲಿ ಸಂದೀಪ್ ಕರ್ಮಾರ್ಕರ್ ಮತ್ತು ಮರೀನಿ ಕರ್ಮಾರ್ಕರ್ ಎದುರು ಚಾಣಾಕ್ಷ ನಡೆಗಳ ಮೂಲಕ ಸ್ಕೋರು ಕಳೆದುಕೊಳ್ಳದಂತೆ ನೋಡಿಕೊಂಡರು. ಉಳಿದ ಸುತ್ತುಗಳಲ್ಲಿ ಏಳು–ಬೀಳು ಕಂಡರೂ ಚೇತರಿಸಿಕೊಂಡು ಪ್ರಶಸ್ತಿಯತ್ತ ಹೆಜ್ಜೆ ಹಾಕಿದರು.

ಫೈನಲ್ ಲೀಗ್‌ನಲ್ಲಿ ಮೊದಲ 10 ಸ್ಥಾನ ಗಳಿಸಿದವರು: ಟಿ.ವಿ.ರಮಣಿ, ಬಿಂದಿಯಾ ಕೊಹ್ಲಿ–1 (ಸ್ಕೋರು: 87.10), ರಾಜೀವ್ ಖಂಡೇಲ್ವಾಲ್, ಹಿಮಾನಿ ಖಂಡೇಲ್ವಾಲ್–2 (83.78), ಉತ್ತಮ್ ಸ್ವರೂಪ್ ಗುಪ್ತಾ, ಸಾರಿಕಾ ಮಿತ್ತಲ್–3 (49.63), ರಂಗ ಖದ್ಲೋಯ, ಮಿನಿ ಅಗರವಾಲ್–4 (48), ಅಭಿಜಿತ್ ಚಕ್ರವರ್ತಿ, ಆಶಾ ಶರ್ಮಾ–5 (46.78), ಪ್ರಿಯರಂಜನ್ ಸಿನ್ಹಾ, ಬಿಂದಿಯಾ ನಾಯ್ಡು–6 (35.90), ರಂಜನ್ ಭಟ್ಟಾಚಾರ್ಯ, ರಿಚಾ ಶ್ರೀರಾಮ್–7 (25.05), ಸಂದೀಪ್ ಕರ್ಮಾರ್ಕರ್, ಮರೀನಿ ಕರ್ಮಾರ್ಕರ್–8 (25), ಅಂಜಲಿ ಕಾರ್ತಿಕೇಯನ್, ಸಂಭುನಾಥ್ ಘೋಷ್–9 (19.11), ರವಿ ಕೌಲ್, ದೀಪಿಕಾ ಮೆಹ್ತಾ–10 (16.08).

ಪ್ರಶಸ್ತಿಯೊಂದಿಗೆ ಟಿ.ವಿ.ರಮಣಿ ಮತ್ತು ಬಿಂದಿಯಾ ಕೊಹ್ಲಿ ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್

ರಿಟೈರ್‌ಮೆಂಟ್

ಮರೆತುಬಿಡೋದಲ್ಲ, ಪ್ಲಾನ್ ಮಾಡೋದು ಸರಿ ಇದೆ.

ರಿಟೈರ್‌ಮೆಂಟ್ ಪ್ಲಾನಿಂಗ್‌ಗಾಗಿ,
ಮ್ಯೂಚ್ಯುವಲ್ ಫಂಡ್ಸ್‌ನಲ್ಲಿ SIP ಸರಿ ಇದೆ

ಮ್ಯೂಚ್ಯುವಲ್ ಫಂಡ್ಸ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ನಿಮ್ಮ
ಮ್ಯೂಚ್ಯುವಲ್ ಫಂಡ್ ವಿತರಕರನ್ನು ಅಥವಾ ಹೂಡಿಕೆ ಸಲಹೆಗಾರರನ್ನು ಇಂದೇ ಸಂಪರ್ಕಿಸಿರಿ!

mutualfundssahihai.comನ್ನು ಸಂದರ್ಶಿಸಿ | ನಮ್ಮನ್ನು ಇಲ್ಲಿ ಫಾಲೋ ಮಾಡಿ:

MUTUAL FUNDS
ಸರಿ ಇದೆ

ಮ್ಯೂಚುವಲ್ ಫಂಡ್ ಹೂಡಿಕೆಗಳು ಮಾರುಕಟ್ಟೆಯ ಅಪಾಯಗಳಿಗೆ ಅಧೀನವಾಗಿವೆ; ಸ್ಕೀಮ್ ಸಂಬಂಧಿತ ಎಲ್ಲ ದಸ್ತಾವೇಜುಗಳನ್ನು ಗಮನವಿಟ್ಟು ಓದಿಕೊಳ್ಳಿ.